ರಂಜನೆ ಬೋಧನೆ ಪ್ರಬೋಧನೆ


ಲಂಕೇಶ್

ವಿಶೇಷ ಸಂಚಿಕೆ 2013

ಮಾರ್ಚ್ 20, 2013 ಪುಟ 20 ರೂ. 14/-



4 ಪಾರ್ಟಿ ನಾನಾ ಮುಖ



ಸರೋದ್ ಕಲಿಸಿದ ಉಸ್ತಾದ್

ನಾಯಿಗಳಿಗೆ ಆತ್ಮಹತ್ಯೆ ಮಾಡಿಕೊಳ್ಳುವುದು ಗೊತ್ತಿಲ್ಲ

ಟರ್ಕಿಶ್ ಕವಿ ನಾಜಿಮ್ ಹಿಕ್ಮೆತ್

ಸಮಾಜವಾದಕ್ಕೆ ಸಾಣೆ ಬ್ರೆಕ್ಟ್

ನಮ್ಮೂರ ದೆವ್ವಗಳು


ಅನುಭಾವಿ ಪರಂಪರೆ ಹಾಗೂ ಕೆಳ ಸಮುದಾಯಗಳು

ನನ್ನ ಪ್ರೀತಿಯ ಮಲೆನಾಡು

ಪುನೀತ್ ಸಂದರ್ಶನ



ಆತ್ಮಸೌಂದರ್ಯವಿರುವ ಪತ್ರಿಕೆ ಬದುಕುಳಿಯುತ್ತದೆ



ಪಾರ್ವತೀಶ
ಬಿಡಿ ಚಿತ್ರಗಳು
bparvateesha@gmail.com

ಇನ್ನೊಂದು ವರ್ಷ ಕಳೆದರೆ 'ಲಂಕೇಶ್' ಹತ್ತನೇ ವರ್ಷಕ್ಕೆ ಕಾಲಿಡುತ್ತದೆ. ಕೇವಲ ಮೂರೇ ವಾರದ ತಯಾರಿಯಲ್ಲಿ ಲಾಂಚ್ ಆದ 'ಲಂಕೇಶ್' ವಾರ ಪತ್ರಿಕೆ ಜಾಸ್ತಿ ದಿನ ಬದುಕುವುದಿಲ್ಲ ಎಂದು ಅನೇಕರಿಗೆ ಅನುಮಾನವಿತ್ತೇನೊ, ಹಲವರಿಗೆ ಆ ತರದ್ದೊಂದು ಅಪೇಕ್ಷೆಯಂತೂ ಇತ್ತು, ಆದರೆ ಇವೆಲ್ಲವನ್ನೂ ಹುಸಿಗೊಳಿಸಿ ಲಂಕೇಶ್ ಈಗ ಎಂಟನೆ ವರ್ಷ ಪೂರೈಸಿ ಒಂಬತ್ತಕ್ಕೆ ಕಾಲಿಡುತ್ತಿದೆ.

ಲಂಕೇಶ್ ಎಂಬ **Flag ship**ನಡಿ ಸಂಸ್ಥೆಯ ಕೈಲಿ ಈಗ ಗೈಡ್ ಮಾಸಿಕ, ಜಾಬ್ ನ್ಯೂಸ್ ಪಾಕ್ಷಿಕ ಪತ್ರಿಕೆಗಳಿವೆ. ಜೊತೆಗೆ ಲಂಕೇಶ್ ಪ್ರಕಾಶನ, ಗೈಡ್ ಪ್ರಕಾಶನಗಳಿವೆ. ಪಕ್ಕದಲ್ಲಿ ನನ್ನದೊಂದು ಚಾರು ಪ್ರಕಾಶನವೂ ಇದೆ.

ಗೈಡ್ ಹಾಗೂ ಜಾಬ್ ನ್ಯೂಸ್‌ಗಳು ಆಯಾ **segment**ಗಳಲ್ಲಿ ಟಾಪ್‌ನಲ್ಲಿವೆ. ಆದೇ ರೀತಿ ಪ್ರಕಾಶನಗಳು ಎಂದಿನ ಹುಮ್ಮಸ್ಸಿನಲ್ಲಿವೆ. ಒಟ್ಟಿನಲ್ಲಿ ಇವೆಲ್ಲಾ ಯಾವುದೇ ಸ್ಪರ್ಧೆಗೆ ಇಳಿದರೂ ಓದುಗರ ಮೆಚ್ಚುಗೆ, ಒಳ್ಳೆಯ ಮಾರಾಟ, ಸೈದಾಂತಿಕ ಬದ್ಧತೆಯ ತೃಪ್ತಿ- ಹೀಗೆ ಒಂದಾದರೂ ಪದಕ ಗೆಲ್ಲದೆ ಮನೆಗೆ ವಾಪಸ್ ಬಂದ ಉದಾಹರಣೆಯಿಲ್ಲ.

ಬಹಳ ಮುಖ್ಯವಾಗಿ 'ಲಂಕೇಶ್' ಈಗ ಏಕಾಂಗಿಯಲ್ಲ, ಇದು ನಮ್ಮ ಸಂಸ್ಥೆಯ ಅಂಗರಚನೆಗೆ ಸಂಬಂಧಿಸಿದ ಮಾತಾಯಿತು. ನಿರ್ದಿಷ್ಟವಾಗಿ 'ಲಂಕೇಶ್' ವಾರ ಪತ್ರಿಕೆ ಕುರಿತಂತೆ ಹೇಳಬೇಕಾದ್ದು ಇದೆ.

ಒಂದು ಪತ್ರಿಕೆ ಯಾಕಾಗಿ ಓದುಗರನ್ನು ಸೆಳೆಯುತ್ತದೆ. ಹಿಡಿದಿಟ್ಟುಕೊಳ್ಳುತ್ತದೆಂದು ಗ್ರಹಿಸಲು ನಾವು ಸದಾ ಪ್ರಯತ್ನಿಸುತ್ತಿರುತ್ತೇವೆ. ಸೆನ್ಸೇಷನಲ್ ಸುದ್ದಿಯಾ? ಕ್ರೈಮು-ಸೆಕ್ಸು-ಸಿನಿಮಾ ಗಾಸಿಪ್ಪಿನ ಮಸಾಲೆಯಾ? ಕಲೆ-ಸಾಹಿತ್ಯವಾ? ನಿಷ್ಠೂರ ರಾಜಕೀಯ ವರದಿ ಹಾಗೂ ನಿಲುವುಗಳಿಂದಲಾ...? ಆಕರ್ಷಕ ಬರವಣಿಗೆ ಶೈಲಿಯಾ?


- ನನ್ನ ಪ್ರಕಾರ ಇವೆಲ್ಲವೂ ಏಕಕಾಲದಲ್ಲಿ ಹೌದು ಮತ್ತು ಅಲ್ಲ! ಒಂದು ಪತ್ರಿಕೆಯೊಳಗೆ ಹರಡಿಕೊಂಡಿರುವ ರಾಜಕೀಯ ವರದಿ, ಹಗರಣ, ಕ್ರೈಮು, ಅಂಕಣಗಳು, ಸಿನಿಮಾ, ಸಾಹಿತ್ಯ ಹಾಗೂ ಓದುಗರ ಪ್ರತಿಕ್ರಿಯೆಗಳೂ ಸೇರಿದಂತೆ ಏನೆಲ್ಲಾ ಇದ್ದರೂ ಅತೀ ಮುಖ್ಯವಾಗಿ ಒಂದಂಶವಂತೂ ಇರಲೇಬೇಕು. ಅದು...

ಆತ್ಮ ಸೌಂದರ್ಯ!

ನಾವು ನೀಡುವ ಏನೇ ವರದಿ, ತನಿಖೆ, ಕತೆ-ಕವನ, ಸಿನಿಮಾ ಕುರಿತ ಬರಹಗಳಲ್ಲಿ ಸತ್ಯಾಂಶಗಳ ಜೊತೆಗೆ, ನಿಷ್ಠೂರ ನಿಲುವುಗಳೊಂದಿಗೆ ಅದರ ಒಟ್ಟಂದದಲ್ಲಿ ಒಂದು ಆತ್ಮಸೌಂದರ್ಯದ ಪರಿಮಳ ಚಿಮ್ಮದಿದ್ದರೆ ಓದುಗರು ಅಂತಹ ಬರಹದೊಂದಿಗೆ ದೀರ್ಘಕಾಲೀನ ಸಂಬಂಧ ಉಳಿಸಿಕೊಳ್ಳಲಾರರು. ಈ ಆತ್ಮಸೌಂದರ್ಯ ಎನ್ನುವುದು ಪತ್ರಿಕೆಯ ಬಣ್ಣಗಳ ಸಂಯೋಜನೆ, ವಿನ್ಯಾಸ, ಬಳಸುವ ಫೋಟೋಗಳಿಂದ ಮಾತ್ರ ಹೊರಹೊಮ್ಮುವಂತದ್ದಲ್ಲ, ಅದೇ ರೀತಿ ಪತ್ರಿಕೆಯೊಂದರ ಆತ್ಮಸೌಂದರ್ಯವು ಮೇಲ್ನೋಟಕ್ಕೆ ಕಾಣುವಂತದ್ದೋ, ಸಿಗುವಂತದ್ದೋ ಅಲ್ಲ, ಪತ್ರಿಕೆಯೊಂದರ ಪ್ರತಿ ಬರಹ, ಪ್ರತಿ ಪುಟ, ಪ್ರತಿ ಹೆಡ್ಡಿಂಗ್‌ಗಳಲ್ಲೂ, ನಿಲುವುಗಳಲ್ಲೂ ಇದು ಒಂದು ರೀತಿಯ **under current** ನಂತೆ ಪ್ರವಹಿಸುತ್ತಿರಬೇಕು. ಈ ಸೂತ್ರ ಒಮ್ಮೆ ನಮಗರಿವಾಯಿತೆಂದರೆ ಆಮೇಲಿನ ಪ್ರಯಾಣ ಸಲೀಸು. ಆದರೆ ಅದೂ ಸಹ ಖಾತ್ರಿ ಇಡುಗಂಟಲ್ಲ, ಏಕೆಂದರೆ ಏಕತಾನತೆಯ ಅಪಾಯವು ಎಂತಹ ಆತ್ಮಸೌಂದರ್ಯವೇ ಇರುವ ಪ್ರಾಮಾಣಿಕ ಪತ್ರಿಕೆಗಳಿಗೂ ದಿನಕ್ರಮೇಣ ಮಂಕು ಕವಿಸಿಬಿಡಬಹುದು.

ಲಂಕೇಶರಿಗೆ ಇದು ಚೆನ್ನಾಗಿ ಗೊತ್ತಿತ್ತು.

ಕಚೇರಿಯಲ್ಲಿ ನನಗೆ ಬಿಡುವಾದಾಗೆಲ್ಲಾ 'ಲಂಕೇಶ್ ಪತ್ರಿಕೆ'ಯ ಇಪ್ಪತ್ತು ವರ್ಷಗಳ ಹಿಂದಿನ ಸಂಚಿಕೆಗಳತ್ತ ಕಣ್ಣು ಹಾಯಿಸುತ್ತಿರುತ್ತೇನೆ. ಪತ್ರಿಕೆಯನ್ನು ಸದಾ ಲವಲವಿಕೆಯಿಂದ, ಜೀವಂತವಾಗಿಡಲು ಅವರು ಏನೆಲ್ಲಾ ಹೊಸ ಪ್ರಯೋಗಗಳನ್ನು ನಡೆಸಿದರೆಂಬುದಕ್ಕೆ ನಮಗಲ್ಲಿ ಪುರಾವೆಗಳಿವೆ. ಜಾಣೆ ಜಾಣೆ ಪ್ರಬಂಧ, ಜನಾರ್ಧನ ಠಾಕೂರ್ ದೆಹಲಿಯಿಂದ ಬರೆಯುತ್ತಿದ್ದ ರಾಜಧಾನಿ ಕಾಗದ, ಬಾಲಾಜಿಯವರ ಆಟ ಕಾಲಂ, ತುಂಟಾಟ, ಛೀ ಛೀ, ಮರೆಯುವ ಮುನ್ನ, ಬಿ.ಎ. ಶ್ರೀಧರ್ ಬರೆದ ಈ ಶತಮಾನ, ಎನ್.ಎಸ್. ಶಂಕರರ ಚಂಚಲೆ, ಬಾಪು ಚಿಂತನೆ, ಪುಂಡಲೀಕ ಶೇಟರ ಹುಬ್ಬಳ್ಳಿಯಾಂವ, ಚಂದ್ರೇಗೌಡರ ಕಟ್ಟೇ ಪುರಾಣ, ಲೋಕಾವಲೋಕನ...



ಸಿನಿಮಾ ವಿಮರ್ಶೆಗಳು, ಸಿನಿಮಾ ಸ್ಟಿಲ್ ಫೋಟೋಗಳಿಗೂ ಕುಚೋದ್ಯದ ಅಡಿ ಬರಹ ನೀಡಿ ಮುದಗೊಳಿಸುವುದು, ಅಪರೂಪವೆಂಬಂತಹ ಕಪ್ಪು-ಬಿಳುಪಿನ ಫೋಟೋ ಸರಣಿಯೊಂದನ್ನು ಪ್ರಕಟಿಸಿ ಓದುಗರನ್ನು ಮೆಚ್ಚಿಸಿದ್ದು, ಕನ್ನಡ ಸಾಹಿತ್ಯ ಕ್ಷೇತ್ರದ ಪ್ರಮುಖರ ಸಂದರ್ಶನ ಸರಣಿಯೊಂದನ್ನು ಪ್ರಕಟಿಸಿದ್ದು...

- ಹೀಗೆ ಲಂಕೇಶರ ಪ್ರಯೋಗಗಳು ಒಂದಾ... ಎರಡಾ...!

ಇದರೊಂದಿಗೆ ತೇಜಸ್ವಿಯವರ ಪರಿಸರ ಕತೆಗಳು, ಆಂಡರ್‌ಸನ್‌ರ ಶಿಕಾರಿ ಕತೆಗಳು, ಈ ಅದ್ಭುತ ಜಗತ್ತು, ಕನ್ನಡನಾಡಿನ ಹಕ್ಕಿಗಳು, ಈ ಸರಣಿ ಲೇಖನಗಳೆಲ್ಲ ಲಂಕೇಶ್ ಪತ್ರಿಕೆಯ ಕೀರ್ತಿ-ಪ್ರಸಾರ ಹೆಚ್ಚಿಸಿದ್ದವಲ್ಲದೆ ಓದುಗರ ಪ್ರಜ್ಞೆಯ ಪರಿಧಿಯನ್ನು ನಿರಂತರವಾಗಿ ವಿಸ್ತರಿಸುತ್ತಾ ಬಂದವು.

ಇದೆಲ್ಲದರ ಒಂದು ಸಂಯೋಜಿತ ಧಾರೆಯಾಗಿ ಅದಕ್ಕೊಂದು ಅದ್ಭುತ ಆತ್ಮಸೌಂದರ್ಯವಿತ್ತು, ಲಕ್ಷಾಂತರ ಓದುಗರೊಂದಿಗೆ ಸಂವಾದಿಸುವ ಆಪ್ತತೆಯ ಗುಣವಿತ್ತು, ನಾನು ಮಾಲೂರಿನಲ್ಲಿ ಪಿಯುಸಿ ಓದುತ್ತಿದ್ದಾಗ ಕೈಲಿ ಹಣವಿರದಿದ್ದಾಗ ಲೈಬ್ರರಿಗೆ ಹೋಗಿ ಕಾದು ಲಂಕೇಶ್ ಪತ್ರಿಕೆ ಓದುತ್ತಿದ್ದೆ. ನಂತರ ಡಿಗ್ರಿ ಓದಲು ಬೆಂಗಳೂರಿಗೆ ಬಂದಾಗ ನನಗೆ ಸಿಗುತ್ತಿದ್ದ ನೂರು ರೂಪಾಯಿ ತಿಂಗಳ ಭತ್ಯೆದಲ್ಲಿ ಇಪ್ಪತ್ತು ರೂಪಾಯಿಗಳನ್ನು ನಿರ್ಮೋಚನೆಯಿಂದ ಪತ್ರಿಕೆಗಾಗಿ ಖರ್ಚು ಮಾಡುತ್ತಿದ್ದೆ. ಅವತ್ತು ನಾನು ಕಳೆದುಕೊಳ್ಳುತ್ತಿದ್ದುದು ದೊಡ್ಡ ಮೊತ್ತವಾದರೂ ಪಡೆದದ್ದು ಅಗಾಧವಾಗಿತ್ತು, ಹೀಗೆ 'ಲಂಕೇಶ್'ನಿಂದ ನನ್ನ ಉಪಕೃತರಾದವರು ಅಸಂಖ್ಯ ಜನರಿರಬಹುದು.

ಇಪ್ಪತ್ತನೇ ಶತಮಾನದ ದ್ವಿತೀಯಾರ್ಧದ ಕರ್ನಾಟಕದ ಬದುಕನ್ ಪ್ರಭಾವಿಸಿದ, ವೈಚಾರಿಕ ಪ್ರಜ್ಞೆ ರೂಪಿಸಿದ ಲಂಕೇಶ್ ತಮ್ಮ ಓದುಗರ ಭಿನ್ನವಾಗಿ ಯೋಚಿಸುವಂತೆ, ಬದುಕುವಂತೆ ಪ್ರೇರಣೆ ನೀಡಿದರು. ಅವ ಕೈಲಿದ್ದ ಲಂಕೇಶ್ ಪತ್ರಿಕೆಯು ಈ ಉದ್ದೇಶಕ್ಕಾಗಿ ಬಳಕೆಯಾದ ಅದ್ಭು ಸಾಧನವಾಗಿತ್ತು.

ಇವೆಲ್ಲಾ ಏನೇ ಇದ್ದರೂ ಇವತ್ತಿನ ವಾಸ್ತವ ಏನೆಂದರೆ ಈ ಹಳೆಯ ಯಶಸ್ಸಿನ ಅಲೆಯಲ್ಲಿ, ಪರಂಪರೆಯ ವಾರಸುದಾರಿಕೆಯಿಂದಷ್ಟೇ ನಮ್ಮ ಹೊ ತಂಡ ಎಲ್ಲದರಲ್ಲೂ ಗೆದ್ದು ಬಿಡಲಾಗುವುದಿಲ್ಲ ಎಂಬುದು ನಮಗೆ ಚೆನ್ನಾ ಅರ್ಥವಾಗಿದೆ.

ಕರ್ನಾಟಕದ ಇವತ್ತಿನ ರಾಜಕೀಯ ಸಾಮಾಜಿಕ ವಾತಾವರಣ ಈ ಎರಡು ದಶಕಗಳ ಹಿಂದೆ ಇದ್ದದ್ದಕ್ಕಿಂತಾ ಇನ್ನಷ್ಟು ಸಂಕೀರ್ಣಗೊಂಡಿದೆ. ಇ ಸೋತವರೇ ಗೆದ್ದಂತೆ ಓಡಾಡುವುದು, ಸುಳ್ಳೇ ಸತ್ಯವನ್ನು ಸದೆ ಬಡಿದ ಮೆರೆಯುವುದೆಲ್ಲ ಇನ್ನೂ ಢಾಳಾಗಿ ಕಾಣುತ್ತಿದೆ. ಜನಪರ ಕಾಳಜಿ ಇರುವವರ ತಬ್ಬಲಿಗಳಂತೆ ಕಾಣುತ್ತಿದ್ದರೆ ಸಮಾಜ ದ್ರೋಹಿಗಳ ಹಿಂದೆ ನಿರ್ಲಜ್ಜರು ಓಡಾಡುವ ಜನ ಹೆಚ್ಚಿಕೊಂಡಿದ್ದಾರೆ. ಇವತ್ತಿನ ರಾಜಕಾರಣಿಗಳ ಎದಿರ ಕಳ್ಳಕಾಕರೆಲ್ಲ ಅಮಾಯಕರಂತೆ ಕಾಣುತ್ತಿದ್ದಾರೆ. ಕಾರ್ಪೊರೇಟ್ ಖದೀಮರ ಹಾಗೂ ರಾಜಕಾರಣಿಗಳ ಒಂದು ಒಕ್ಕೂಟ ಅಸ್ತಿತ್ವಕ್ಕೆ ಬಂದಿದ್ದು ಸರ್ಕಾರವೆಂಬುದ ಇದರ ಸೆಕ್ಯುರಿಟಿ ಗಾರ್ಡ್‌ನಂತೆ ರೂಪಾಂತರ ಹೊಂದುತ್ತಿದೆ.

ಈ ಕೆಡುಕುಗಳ ವಿರುದ್ಧ ರಾಜಿರಹಿತ ಕದನ ನಡೆಸುವುದೂ ಸೇರಿದಂ ಕರ್ನಾಟಕದ ಜನಜೀವನವನ್ನು ಒಪ್ಪಓರಣಗೊಳಿಸುವ ಒಂದು ದೊಡ್ಡ ಕನಸಿರು ಸಂಘಟನೆಗಳು ಹಾಗೂ ಲಕ್ಷಾಂತರ ಜನರೊಂದಿಗೆ 'ಲಂಕೇಶ್' ಸಹ ಸಾ ಬರುತ್ತಿದೆ. ಈ ರಾಜಕೀಯ ಸಾಮಾಜಿಕ ಕಾಳಜಿಗಳ ಒಲವು-ನಿಲುವುಗ ಭರಾಟೆಯಲ್ಲಿ 'ಲಂಕೇಶ್' ಚೌಕಟ್ಟಿಗೊಂದು ಆತ್ಮಸೌಂದರ್ಯದ ಛಾಪು ನೀಡು ಪ್ರಯತ್ನವನ್ನು ಬಿಡದೆ ನಡೆಸುತ್ತಿದ್ದೇವೆ. **Outer beauty attracts but inner beauty captivates** ಎಂಬ ಮಾತು 'ಲಂಕೇಶ್'ನ ಪ್ರ ಸಂಚಿಕೆಯಲ್ಲೂ ಪ್ರತಿಫಲಿಸುವಂತಿರಬೇಕು ಎಂಬುದು ನಮ್ಮ ಆಸೆ. ನಮಗೆ ಗೆಲ್ಲುವ ಛಲವಿರದೇ ಹೋದರೆ ಜನ ವಿನಾಕಾರಣ ಯಾರನ್ನೂ ಗೆಲ್ಲಿಸಲಾರರೆಂಬುದು ನಮಗೆ ಗೊತ್ತಿದೆ. ನಿರಂತರವಾಗಿ ಬರೆಯುವ ನಮ ತಂಡಕ್ಕೆ ಇನ್ನೊಂದು ತುದಿಯಲ್ಲಿರುವ ಓದುಗರ ನಿರೀಕ್ಷೆ ಏನಾಗಿದೆಯೆಂಬುದ **pulse** ತಿಳಿದಿರಲೇಬೇಕು. ಆ ಕಲ್ಪನೆ ಇರಬೇಕಾದ್ದು ಯಶ ಪತ್ರಿಕೋದ್ಯಮಕ್ಕೊಂದು ಪೂರ್ವ ಷರತ್ತಾಗಿರುತ್ತದೆ. ಈ ಎಂಟು ವರ್ಷಗಳ ನಾನ್ನೂರಿಪ್ಪತ್ತು ಸಂಚಿಕೆಗಳ, ಎಂಟೂವರೆ ಸಾವಿರ ಪುಟಗಳನ್ನು ನಮ್ಮ ತಂ ರೂಪಿಸುತ್ತಾ ಅನೇಕ ಪಾಠ ಕಲಿತಿದೆ. ಬಂಡವಾಳಶಾಹಿಗಳಂತಿಲ್ಲದ ನಮ ತಂಡ ಅನಿವಾರ್ಯವಾಗಿ ಹಣಕಾಸಿನ ದಕ್ಷ ನಿರ್ವಹಣೆ, ಲಾಭ-ನಷ್ಟದ ಸೂಕ್ಷ್ಮಗಳನ್ನು ಅರ್ಥೈಸಿಕೊಳ್ಳಬೇಕಾಗಿಯೂ ಬಂದಿದೆ. ಜೊತೆಗೆ ಓದುಗ ನಿರೀಕ್ಷೆ, ಬರಹಗಾರರ ಆದ್ಯತೆಗಳನ್ನೆಲ್ಲಾ ಪರಿಗಣಿಸುತ್ತಾ ಈಗ ಸಾಗಿ ಬಂದಿರುವ ಹಾದಿ, ಪಟ್ಟ ಶ್ರಮ, ವ್ಯಯಿಸಿದ ಸಮಯ... ಇವೆಲ್ಲಾ ಖುಷಿ ನೀಡುತ್ತಿವ ಮುಂದಿನ ದಿನಗಳಲ್ಲಿ 'ಲಂಕೇಶ್'ಗೆ ಇನ್ನಷ್ಟು ಚೈತನ್ಯ ತುಂಬುವ, ಬಿರುಸ ತರುವ ಯೋಚನೆ ನಮ್ಮ ತಂಡಕ್ಕಿದೆ.

ನಿಮ್ಮ ಸಲಹೆಗಳೇನೇ ಇದ್ದರೂ ತಿಳಿಸಿ.

ಪತ್ರಿಕೆಯೊಂದರ ಅವಸಾನ

ಆರು ತಿಂಗಳು ಕಾರಣವಿಲ್ಲದೆ ಜೈಲಿನಲ್ಲಿದ್ದು ಇದೀಗ ಬಿಡುಗಡೆಗೊಂಡಿರುವ 'ಡೆಕ್ಕನ್ ಹೆರಾಲ್ಡ್'ನ ಪತ್ರಕರ್ತ ಮತಿ ಉರ್ ರಹಮಾನ್ ಸಿದ್ದಿಕಿಯವರ ಪ್ರಕರಣದ ಉದ್ದಕ್ಕೂ 'ಕನ್ನಡ ಪ್ರಭ' ಪತ್ರಿಕೆ ಮಾತ್ರವಲ್ಲ ಈ ನಾಡಿನ ಬಹುತೇಕ ಮಾಧ್ಯಮಗಳು ಅದನ್ನು ವರದಿ ಮಾಡಿದ ರೀತಿ ಅಕ್ಷಮ್ಯ. ಕಳೆದ ವರ್ಷ ಆಗಸ್ಟ್ 29ರಂದು ಪೋಲೀಸರು ಬೆಂಗಳೂರು ಮತ್ತು ಹುಬ್ಬಳ್ಳಿಗಳಲ್ಲಿ ಸಿದ್ದಿಕಿಯವರನ್ನು ಒಳಗೊಂಡು 10 ಜನ ಮುಸ್ಲಿಮ್ ಯುವಕರನ್ನು ಬಂಧಿಸಿದ ಸುದ್ದಿ 'ಕನ್ನಡ ಪ್ರಭ'ದ ಆಗಸ್ಟ್ 31ರ ಸಂಚಿಕೆಯಲ್ಲಿ ಪ್ರಕಟವಾದದ್ದು ಒಂದು ಪತ್ರಿಕಾ ವರದಿಯ ರೂಪದಲ್ಲಿ ಇರದೆ ನ್ಯಾಯಾಲಯದ ತೀರ್ಪಿನಂತೆ ಇತ್ತು, "11 ಉಗ್ರರ ಬಂಧನ- ರಾಜಕಾರಣಿಗಳು, ಪತ್ರಕರ್ತರ ಹತ್ಯೆಗೆ ಸಂಚು" ಎಂಬ ಮುಖಪುಟದ ದೊಡ್ಡಕ್ಷರಗಳ ಶೀರ್ಷಿಕೆಯೇ ಎಲ್ಲವನ್ನೂ ಹೇಳುವಂತಿತ್ತು.

ಬಂಧಿತರಾದ 11 ಜನ ಆಗ ಕೇವಲ ಆಪಾದಿತರಷ್ಟೇ ಆಗಿದ್ದರು. ಆಪಾದಿತರು ಕೊಲೆಗಡುಕರೇ ಆಗಿದ್ದರೂ ನ್ಯಾಯಾಲಯ ಹಾಗೆಂದು ತೀರ್ಮಾನಿಸುವವರೆಗೆ ಅವರನ್ನು ನಿರಪರಾಧಿಗಳು ಎಂದೇ ಭಾವಿಸಬೇಕು. ಇದು ಆಪಾದಿತರಿಗೆ ನಾವು ತೋರಿಸುವ ಔದಾರ್ಯವಲ್ಲ, ಪ್ರಜಾಪ್ರಭುತ್ವದ ನ್ಯಾಯವ್ಯವಸ್ಥೆಯಲ್ಲಿ ಇದು ಆಪಾದಿತರ ಮೂಲಭೂತ ಹಕ್ಕು, ಆದರಿಂದಾಗಿಯೇ ಕರ್ನಾಟಕದ ಹಾಲಿ ಮಂತ್ರಿಮಂಡಳದ ಹೆಚ್ಚಿನ ಮಂತ್ರಿಗಳು ವಿಧವಿಧವಾದ ಆಪಾದನೆ ಹೊತ್ತು ಜಾಮೀನಿನಲ್ಲಿ ಇದ್ದರೂ ನಮ್ಮ ಮಾಧ್ಯಮಗಳು ಅವರಲ್ಲಿ ಯಾರನ್ನೂ ಹೆಸರು ಹೇಳಿ ಕಳ್ಳರು, ಸುಳ್ಳರು, ಅತ್ಯಾಚಾರಿಗಳು ಇತ್ಯಾದಿಯಾಗಿ ಕರೆಯುವುದಿಲ್ಲ, ನ್ಯಾಯಾಲಯ ತೀರ್ಮಾನಿಸುವವರೆಗೆ ಯಡಿಯೂರಪ್ಪ ಜನಾರ್ಧನ ರೆಡ್ಡಿ ಮುಂತಾದವರು ಕೂಡ ಕೇವಲ ಆಪಾದಿತರು; ಆದರೆ ಸಿದ್ದಿಕಿ ಮತ್ತು ಇತರ ಬಂಧಿತರನ್ನು ಮಾತ್ರ 'ಕನ್ನಡ ಪ್ರಭ' ಆಪಾದಿತರು ಎಂದು ಕರೆಯಲಿಲ್ಲ, ಬದಲಿಗೆ ಖಡಾಖಂಡಿತವಾಗಿ ಅವರು ಉಗ್ರರು ಎಂದು ಮುಖಪುಟದಲ್ಲೇ ಸಾರಿಬಿಟ್ಟಿತು!

ಒಂದೆರಡು ಅಪವಾದಗಳನ್ನು ಬಿಟ್ಟರೆ ಇತರ ಪತ್ರಿಕೆ ಮತ್ತು ಟಿ.ವಿ. ಚಾನೆಲ್ಲುಗಳು ಸಹ ಬಂಧಿತರನ್ನು ಉಗ್ರರು ಎಂದೇ ಕರೆದವು. ಬಂಧನಕ್ಕೆ ಒಳಗಾದ ಎಲ್ಲರೂ ಮುಸ್ಲಿಮರಾಗಿದ್ದುದರಿಂದ ಅವರು ಉಗ್ರರು ಎಂಬುದು ಈ ಮಾಧ್ಯಮಗಳಿಗೆ ಶತಸ್ಸಿದ್ಧವಾಗಿಬಿಟ್ಟಿತ್ತು! ಮುಸ್ಲಿಮರು "ಅನ್ಯಮತೀಯರು", ಪೋಲೀಸರು ಅವರನ್ನು ಬಂಧಿಸಿದರೆ ಅವರು ನಿಶ್ಚಯವಾಗಿಯೂ "ಉಗ್ರರು"; ನಮ್ಮ ಊರಿನ ಮುಸ್ಲಿಮ್ ಕೇರಿ "ಪಾಕಿಸ್ತಾನ". ಹೀಗೆ ಭಾವಿಸುವುದು ಈಗ ನಮ್ಮ ಕಾಮನ್ ಸೆನ್ಸ್ ಆಗಿಬಿಟ್ಟಿದೆ. ಮಾಧ್ಯಮಗಳ ಮತೀಯವಾದ ಈ ಬೆಳವಣಿಗೆಗೆ ಒಂದು ಪ್ರಮುಖ ಕಾರಣವಾಗಿದೆ. ಜೈಲಿನಿಂದ ಬಿಡುಗಡೆಯಾದ ನಂತರ 'ತೆಹೆಲ್ಕಾ' ಪತ್ರಿಕೆಗೆ ನೀಡಿದ ಸಂದರ್ಶನದಲ್ಲಿ ಸಿದ್ದಿಕಿ ತನ್ನ ವಿಚಾರಣೆಯ ವೇಳೆ ಪೋಲಿಸರು "ನೀನು ನಿತ್ಯವೂ ತಪ್ಪದೆ ಪ್ರಾರ್ಥನೆ ಮಾಡುತ್ತೀಯಾ?" ಎಂದು ಕೇಳಿದಾಗ ತನಗೆ ಶಾಕ್ ಆಯಿತು ಎಂದಿದ್ದಾರೆ. ಅಂದರೆ ಪೋಲೀಸರು ಕೂಡ ಮುಸ್ಲಿಮರು ಹುಟ್ಟು ಅಪರಾಧಿಗಳು ಎಂದು ತೀರ್ಮಾನಿಸಿಬಿಟ್ಟಿದ್ದಾರೆ! ಪೋಲೀಸರು ಮತ್ತು ಪತ್ರಕರ್ತರು - ಇವರ ನಡುವೆ ಈಗ ಏನಾದರೂ ವ್ಯತ್ಯಾಸ ಉಳಿದಿದೆಯಾ?

ಸಿದ್ದಿಕಿ ಮತ್ತು ಇತರರ ಬಂಧನ ಕುರಿತ 'ಕನ್ನಡ ಪ್ರಭ'ದ 2012 ಸೆಪ್ಟೆಂಬರ್ 1ರ ಮುಖಪುಟದ ವರದಿ ಇನ್ನೊಂದು ರೋಚಕ ಕಟ್ಟುಕತೆ. "ಆಂಧ್ರದಲ್ಲೂ ಸ್ಕೆಚ್- ಸೌದಿಯಲ್ಲೇ ಮಾಸ್ಟರ್ ಪ್ಲಾನ್" ಎಂಬ ಶೀರ್ಷಿಕೆಯೊಂದಿಗೆ ಪ್ರಕಟವಾಗಿರುವ ಈ ವರದಿಯಲ್ಲಿ ಸಿದ್ದಿಕಿಯೇ ಉಗ್ರರು ಹಾಕಿದ ಸ್ಕೆಚ್‌ನ ಮಾಸ್ಟರ್ ಮೈಂಡ್ ಎಂದೂ, ಅವರ ಬಳಿ ವಿದೇಶಿ ಕರೆನ್ಸಿ ದೊರೆತಿದ್ದು ವಿದೇಶಿ ಬ್ಯಾಂಕ್ ಅಕೌಂಟನ್ನೂ ಹೊಂದಿದ್ದಾರೆ ಎಂದು ಕಾಣಿಸಲಾಗಿದೆ! ಅಷ್ಟು ಮಾತ್ರವಲ್ಲ, ಸಿದ್ದಿಕಿ ಬಳಿ ಸಂಪಾದಕ ವಿಶ್ವೇಶ್ವರ ಭಟ್ಟ ಮತ್ತು ಕಾಲಮಿಸ್ಟ್ ಪ್ರತಾಪ ಸಿಂಹರ ಜೊತೆ ನರೇಂದ್ರ ಮೋದಿ ನಿಂತು ಹೊಡೆಸಿಕೊಂಡ ಫೋಟೊ ಸೈತ ಇತ್ತಂತೆ! ಆವತ್ತಿನ ತನ್ನ ಕಾಲಂನಲ್ಲಿ ಪ್ರತಾಪ ಸಿಂಹ ಇನ್ನಷ್ಟು ರೋಚಕ ಮಾಹಿತಿ ಒದಗಿಸಿದ್ದಾನೆ.

ಸಿಂಹನ ಪ್ರಕಾರ ಸಿದ್ದಿಕಿ ಉಗ್ರರ ಒಂದು 'ಲೋಕಲ್ ಮಾಡ್ಯೂಲ್' ರೂಪಿಸಿದ್ದು ಈ ಸಮಾಜದ ಗಣ್ಯರ ಒಂದು ಹಿಟ್ ಲಿಸ್ಟ್ ಸಹ ರೆಡಿ ಮಾಡಿಕೊಂಡಿದ್ದರು. ವಿಶ್ವೇಶ್ವರ ಭಟ್ಟ ಮತ್ತು ಪ್ರತಾಪ ಸಿಂಹ ಹೇಗೂ ಈ ಹಿಟ್ ಲಿಸ್ಟ್‌ನಲ್ಲಿ ಇರುವವರು! ಲಾರಿ ಕಮ್ ಪತ್ರಿಕಾ ಕಂಪನಿ ಮಾಲಕ ವಿಜಯ ಸಂಕೇಶ್ವರ ಮತ್ತು ಬಿಜೆಪಿ ರಾಜಕಾರಣಿ ಪ್ರಹ್ಲಾದ್ ಜೋಷಿ ಕೂಡ ಲಿಸ್ಟ್‌ನಲ್ಲಿ ಇದ್ದಾರಂತೆ; ಪ್ರಮೋದ್ ಮುತಾಲಿಕನೂ ಇದ್ದರೆ ಆಶ್ಚರ್ಯವಿಲ್ಲ, ಅಂದಹಾಗೆ ಈ ಪ್ರಮೋದ್ ಮುತಾಲಿಕ ಮೊನ್ನೆ ಉಡುಪಿಯ ಒಂದು ಸಭೆಯಲ್ಲಿ ಮಾತನಾಡುತ್ತ ಮುಸ್ಲಿಮ್ ಲಾಬಿಯ ಪ್ರಭಾವದಿಂದಾಗಿ ಸಿದ್ದಿಕಿ ಬಿಡುಗಡೆಗೊಂಡಿರುವುದು ಎಂದಿದ್ದಾನೆ!

ಮೊನ್ನೆ ಜೈಲಿನಿಂದ ಹೊರಬಂದ ನಂತರ ಪತ್ರಿಕಾ ಗೋಷ್ಠಿಯಲ್ಲಿ ಮಾತಾಡುತ್ತ ಸಿದ್ದಿಕಿ ತನಗೆ ಈ ದೇಶದ ನ್ಯಾಯ ವ್ಯವಸ್ಥೆಯಲ್ಲಿ ನಂಬಿಕೆ ಇದೆ ಎಂದಿದ್ದಾರೆ. ಅವರು ಆ ಮಾತನ್ನು ಆ ಅರ್ಥದಲ್ಲಿಯೇ ಹೇಳಿರಬಹುದು. ಆದರೆ ದೇಶದ ನ್ಯಾಯವ್ಯವಸ್ಥೆಯಲ್ಲಿ ಸಿದ್ದಿಕಿಯಂತಹವರು ನಂಬಿಕೆ ಇರಿಸಲು ಕಾರಣವೇ ಇಲ್ಲ ಎಂಬ ವಾಸ್ತವವನ್ನು ನಾವು ಗುರುತಿಸಲೇಬೇಕು. ಮಾಧ್ಯಮಗಳು ಇರುವುದೇ ವ್ಯವಸ್ಥೆ ಮುಚ್ಚಿಹಾಕುವ ಇಂತಹ ಕಟುವಾಸ್ತವಗಳನ್ನು ಜನರಿಗೆ ತಿಳಿಸುವುದಕ್ಕೆ. ಆದರೆ ಸಿದ್ದಿಕಿ ಮತ್ತು ಇತರರ ಬಗ್ಗೆ 'ಕನ್ನಡ ಪ್ರಭ' ವರದಿ ಮಾಡಿದ ವೈಖರಿ ಮಾಧ್ಯಮಗಳ ಈ ವೃತ್ತಿ ಧರ್ಮಕ್ಕೆ ದ್ರೋಹ ಬಗೆಯುವಂತದ್ದಾಗಿದೆ. ಪ್ರಾಮಾಣಿಕ ಮತ್ತು ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಸದಾ ಬದ್ಧರಾಗಿದ್ದ ಖಾದ್ರಿ ಶಾಮಣ್ಣ, ವೈ.ಎನ್.ಕೆ. ಯವರಂತಹ ಮಹಾನುಭಾವರು ಸಂಪಾದಕರಾಗಿ ಮುನ್ನಡೆಸಿದ ಈ ಪತ್ರಿಕೆಯ ಸದ್ಯದ ಸ್ಥಿತಿ ಕೇವಲ ಪತ್ರಿಕೆಯೊಂದರ ಅವಸಾನವಲ್ಲ; ಅದು ಭಾಷೆ ಮತ್ತು ಸಂಸ್ಕೃತಿಗಳ ಅವಸಾನವನ್ನೂ ಸಂಕೇತಿಸುತ್ತದೆ.

■ ಜಿ.ರಾಜಶೇಖರ, ಉಡುಪಿ


ಹನ್ನೊಂದು ಉಗ್ರರ ಬಂಧನ
ರಾಜಕಾರಣಿಗಳು, ಪತ್ರಕರ್ತರ ಹತ್ಯೆಗೆ ಸಂಚು

ಕನ್ನಡಪ್ರಭದಲ್ಲಿ ಅಂದು ಪ್ರಕಟವಾದ ವರದಿ

ಶಿವಮೊಗ್ಗೆಯ ಮುದ ನೀಡುವ ನೆನಪಿನಲ್ಲಿ



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

ಶಿವಮೊಗ್ಗ ಅಪ್ಪನ ವ್ಯಕ್ತಿತ್ವದ ಒಂದು ಭಾಗವೇ ತ್ತು. ಆ ಕಾರಣಕ್ಕೇ ಅವರ ಆತ್ಮಕಥನ 'ಹುಳಿಮಾವಿನ ...'ದಲ್ಲಿ ಶಿವಮೊಗ್ಗ ಪ್ರಮುಖ ಸ್ಥಾನ ಪಡೆದಿದೆ. ಅಪ್ಪನ ಕೊನಗವಳ್ಳಿ ಶಿವಮೊಗ್ಗೆಯಿಂದ ಕೇವಲ 14 ...ೋಮೀಟರ್ ದೂರದಲ್ಲಿದ್ದರೂ ಈ ಪಟ್ಟಣ, ಅದರಲ್ಲಿದ್ದ ...ೇಜು, ಹೋಟೆಲ್ಲುಗಳು, ಸಿನಿಮಾ ಮಂದಿರಗಳು, ...ದಿಗಳು ಲಂಕೇಶರಿಂದ ದೂರವೇ ಇದ್ದವು. ಶಿವಮೊಗ್ಗೆ ...ವಾಗಲೂ ಅವರ ಬದುಕನ್ನು ಪ್ರವೇಶಿಸಿದ್ದು ಅವರು ...ನಲ್ ಹೈಸ್ಕೂಲು ಸೇರಿದಾಗ.

...ಮಧ್ಯಮ ವರ್ಗದ ರೈತಾಪಿ ಕುಟುಂಬದಿಂದ ಬಂದ ...ಕೇಶರು ಆರಂಭದಲ್ಲಿ ಅಸಹಾಯಕತೆ ಮತ್ತು ಒಬ್ಬಂಟಿ ...ನಲ್ಲಿ ನರಳಿದರು. ಆದರೆ ಅದನ್ನೆಲ್ಲ ಮೀರಿ ನಿಲ್ಲಲು, ...ತ್ಯದಲ್ಲಿ ಆಸಕ್ತಿ ಹೊಂದಲು, ಎಲ್ಲರಿಂದ 'ಪ್ರಚಂಡ' ...ಮ ಮೆಚ್ಚುಗೆ ಪಡೆಯಲು ಕಾರಣವಾಗಿದ್ದು ಆ ...ಯಲ್ಲಿನ ಮಾಸ್ತರುಗಳು, ಶಿವಮೊಗ್ಗೆಯ ಸಾರ್ವಜನಿಕ ...ಕ ಭಂಡಾರ ಮತ್ತು ಅವರ ಸ್ನೇಹಿತರು. ಅವರು ... ಮೊದಲ ಕವನ ಬರೆದದ್ದು ಕೂಡ ಆ ಶಾಲೆಯ ...ರ್ಥಿ ಆಗಿದ್ದಾಗ.

...ಲಂಕೇಶರ ರಾಜಕೀಯ ದೃಷ್ಟಿಕೋನವನ್ನು ರೂಪಿಸಿದ್ದೂ ... ಶಿವಮೊಗ್ಗ. ಆಗ ಪ್ರಾರಂಭವಾಗಿದ್ದ ಕಾಗೋಡು ...ಗ್ರಹ, ಗೋಪಾಲ ಗೌಡರ ಪ್ರಭಾವ ಮತ್ತು ...ಟಗೊಂಡಿದ್ದ ನಿರಂಜನ ಮತ್ತು ಅ.ನ.ಕೃ. ಅವರ ...ಬರಿಗಳು ಆರಂಭದಲ್ಲಿ ಲಂಕೇಶರಿಗೆ ಜಗಳಗಂಟರ ...ದಂತೆ ಕಾಣಿಸಿದ್ದರೂ ಆನಂತರದಲ್ಲಿ ಅವರು ಎಲ್ಲ ...ದ ಶೋಷಿತರ ಪರ ನಿಲ್ಲುವುದನ್ನು ಕಲಿಸಿತು.

ಶಿವಮೊಗ್ಗೆಯ ಇಂಟರ್ ಮೀಡಿಯಟ್ ಕಾಲೇಜು ...ದೆಡೆ ಅವರನ್ನು 'ಗಲಾಟೆಯ ಹುಡುಗ'ನನ್ನಾಗಿ ...ಸಿದ್ದರೆ ಇನ್ನೊಂದೆಡೆ ಅವರಲ್ಲಿದ್ದ ಸಾಹಿತ್ಯಾಸಕ್ತಿಯನ್ನೂ ...ಸಿತ್ತು. ಎಷ್ಟರ ಮಟ್ಟಿಗೆಂದರೆ ಅವರು ಕಾಲೇಜಿನ ...ತ್ರ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಿ, ಕುವೆಂಪು ಅವರ 'ಶ್ರೀರಾಮಾಯಣ ದರ್ಶನಂ'ನಿಂದ ಸ್ಫೂರ್ತಿ ಪಡೆದು ತನ್ನನ್ನು ಗೆಲ್ಲಿಸಿದರೆ ಸ್ವರ್ಗವನ್ನೇ ಕಾಣುತ್ತೀರಿ ಎಂಬಂತಹ ಕವನವನ್ನು ರಚಿಸಿ, ಕರಪತ್ರದಲ್ಲಿ ಅದನ್ನು ಪ್ರಕಟಿಸಿ, ಅದನ್ನು ಹುಡುಗಿಯರಿಗೆ ಕೊಡುವಾಗ ಭಯಂಕರ ಮುಜುಗರವನ್ನು ಅನುಭವಿಸಿ, ಗೆದ್ದು ಸಂಭ್ರಮಿಸಿದ್ದೂ ಅದೇ ಕಾಲೇಜಿನಲ್ಲಿ.

ನನ್ನ ಅಮ್ಮ ಇಂದಿರಾ ಅವರ ಬದುಕಿನಲ್ಲೂ ಶಿವಮೊಗ್ಗ ಮುಖ್ಯ ಪಾತ್ರ ವಹಿಸಿದೆ. ಇಂತಹ ಶಿವಮೊಗ್ಗೆಯೊಂದಿಗೆ ನನಗಿರುವ ನಂಟು ಭಾವನಾತ್ಮಕವಾದದ್ದು. ನಾನು, ತಂಗಿ ಕವಿತಾ ಮತ್ತು ತಮ್ಮ ಇಂದ್ರಜಿತ್; ನಾವೆಲ್ಲರೂ ಹುಟ್ಟಿದ್ದು ಇದೇ ಶಿವಮೊಗ್ಗೆಯ ಮೆಗ್ಗಾನ್ ಆಸ್ಪತ್ರೆಯಲ್ಲಿ. ನನ್ನ ತಾತ ಸೋಮಸುಂದರ್ ಅವರ ಮನೆ ಇದ್ದದ್ದೂ ಇದೇ ಶಿವಮೊಗ್ಗೆಯಲ್ಲಿ. ನಾವು ಚಿಕ್ಕವರಾಗಿದ್ದಾಗ ಸಂಜೆ ಹೊತ್ತು ನಮ್ಮ ಅಪ್ಪಯ್ಯ ಸೋಮಸುಂದರ್ ಅವರು ನಮ್ಮನ್ನೆಲ್ಲ ಸರ್ಕ್ಯೂಟ್ ಹೌಸಿಗೆ ವಾಕಿಂಗ್‌ಗೆ ಕರೆದುಕೊಂಡು ಹೋಗುತ್ತಿದ್ದರು. ಆಗ ಊರಿನ ಹೊರವಲಯದಲ್ಲಿದ್ದ ಆ ಸರ್ಕ್ಯೂಟ್ ಹೌಸ್ ಮತ್ತು ಅದರ ಸುತ್ತ ಇದ್ದ ಹಸಿರು ಹುಲ್ಲುಹಾಸು ನಮ್ಮ ಆಟದ ಮೈದಾನವಾಗುತ್ತಿತ್ತು. ಅಪ್ಪಯ್ಯನವರು ತಮ್ಮ ಹಣ, ಮುಖ್ಯವಾದ ದಾಖಲೆ ಪತ್ರಗಳು, ಇತ್ಯಾದಿಗಳನ್ನು ಒಂದು ಮರದ ಕಪಾಟಿನಲ್ಲಿಟ್ಟಿರುತ್ತಿದ್ದರು. ಮಕ್ಕಳಾಗಿದ್ದ ನಮ್ಮೆಲ್ಲರ ಕಣ್ಣು ಆ ಕಪಾಟಿನ ಮೇಲೆ. ಯಾಕೆಂದರೆ ಅದೇ ಕಪಾಟಿನಲ್ಲಿ ಅಪ್ಪಯ್ಯ ಬಿಸ್ಕತ್ ಪ್ಯಾಕುಗಳನ್ನಿಟ್ಟಿರುತ್ತಿದ್ದರು. ನಮಗೆ ಬೇಕೆನಿಸಿದಾಗಲ್ಲದೆ ತಮಗೆ ಇಷ್ಟವಾದಾಗ ಅದನ್ನು ತೆರೆದು ಮಕ್ಕಳಿಗೆ ಬಿಸ್ಕತ್‌ಗಳನ್ನು ಹಂಚುತ್ತಿದ್ದರು. ಆ ಕಪಾಟು ಈಗಲೂ ನನ್ನ ಸೋದರಮಾವ ಶಿವಕುಮಾರ್ ಅವರ ಮನೆಯಲ್ಲಿದೆ.



ಅಪ್ಪಯ್ಯನ ಒಂದು ಬಾಡಿಗೆ ಮನೆಯ ಹಿಂದಿದ್ದ ಮಾವಿನ ಮರಕ್ಕೆ ನಾವು ಕೊಟ್ಟ ಹಿಂಸೆ ಅಷ್ಟಿಷ್ಟಲ್ಲ. ನಾವು ಮತ್ತು ಸಂಬಂಧಿಕರ ಮಕ್ಕಳು ಸೇರಿದರಂತೂ ಪೈಪೋಟಿಗೆ ಬಿದ್ದವರಂತೆ ಆ ಮರದಲ್ಲಿದ್ದ ಸಣ್ಣ ಕಾಯಿಗಳನ್ನೂ ಕಿತ್ತು ಹಾಕುತ್ತಿದ್ದೆವು. ಅಪ್ಪಯ್ಯ ಇನ್‌ಶೂರೆನ್ಸ್ ಏಜೆಂಟರಾಗಿದ್ದಾಗ ಖರೀದಿಸಿದ್ದ ಒಂದು ಓಬಿರಾಯನ ಕಾಲದ ಟೈಪ್‌ರೈಟರ್ ಮೇಲೆಯೇ ನಾನು ಮೊದಲು ಟೈಪ್ ಮಾಡಲು ಒಂದು ಬೇಸಿಗೆ ರಜೆಯಲ್ಲಿ ಕಲಿತದ್ದು.

ಶಿವು ಮಾಮನ ಸ್ನೇಹಿತರಾಗಿದ್ದ, ಈಗ ಚೆನ್ನಗಿರಿ ಕ್ಷೇತ್ರದ ಶಾಸಕರಾಗಿರುವ ವಿರುಪಾಕ್ಷಪ್ಪನವರು (ಆಗ ನಾವು ಅವರನ್ನು ಮಾಮ ಎಂದು ಕರೆಯುತ್ತಿದ್ದೆವು), ಚಂದ್ರು ಮಾಮ, ಪ್ರಕಾಶ್ ಮಾಮ ಮತ್ತು ಇತರರು ತಮ್ಮ ಸೈಕಲ್ ಮೇಲೆ ನಮ್ಮನ್ನು ಕೂರಿಸಿಕೊಂಡು ಸುತ್ತಾಡಿಸುತ್ತಿದ್ದರು. ಹಾಗೆಯೇ ಮಾಮನ ಇನ್ನೊಬ್ಬ ಮಿತ್ರರ ಹತ್ತಿರ ಇದ್ದ ಅಮೆರಿಕದ ಕೌಬಾಯ್ ಪುಸ್ತಕಗಳನ್ನೆಲ್ಲ ಒಂದು ರಜೆ ಅವಧಿಯಲ್ಲಿ ಓದಿ ಮುಗಿಸಿದ್ದೆ. ಎಚ್‌ಪಿಸಿ ಚಿತ್ರಮಂದಿರದಲ್ಲಿ ನಾನು ನೋಡಿದ ಸಿನಿಮಾಗಳಿಗೆ ಲೆಕ್ಕವಿಲ್ಲ. ಆಗ ಶಿವಮೊಗ್ಗೆ ಎಷ್ಟು ಸ್ವಚ್ಛವಾಗಿತ್ತೆಂದರೆ ಈಗ ಜೈಲ್ ಗೇಟ್ ಹತ್ತಿರವಿರುವ ಗಲೀಜು ಚರಂಡಿ ಆಗ ಒಂದು ಸಣ್ಣ ಸ್ವಚ್ಛ ತೊರೆಯಾಗಿತ್ತು. ಆಗ ಅಲ್ಲಿ ಜನ ತಮ್ಮ ಜಾನುವಾರುಗಳಿಗೆ ಸ್ನಾನ ಮಾಡಿಸುತ್ತಿದ್ದನ್ನು ನಾನು ನೋಡಿದ್ದೆ.

ಈ ಎಲ್ಲ ಕಾರಣಗಳಿಂದ ಶಿವಮೊಗ್ಗ ಬೆಂಗಳೂರಿನ ನಂತರ ನನ್ನ ಎರಡನೆ ಊರು. ಈಗಲೂ ನನ್ನ ಪಾಲಿಗೆ ಶಿವಮೊಗ್ಗ ನನ್ನ ಮಾವ ಶಿವಕುಮಾರ್ ಮತ್ತು ಅಕ್ಕ ವಿಮಲಾ ಅವರ ಬೆಚ್ಚಗಿನ ಮನೆ ಇರುವ ಊರು.

ಇತ್ತೀಚೆಗೆ ಲಂಕೇಶ್ ಪತ್ರಿಕೆಯ ಹಳೆ ಫೈಲುಗಳನ್ನು ತಿರುವಿಹಾಕುತ್ತಿದ್ದಾಗ ಲಂಕೇಶರು ಶಿವಮೊಗ್ಗೆಯ ಬಗ್ಗೆ 1989ರಲ್ಲಿ ಬರೆದ ಒಂದು ಲೇಖನದ ಹಲವು ಸಾಲುಗಳು ನನ್ನ ಕಣ್ಣಿಗೆ ಬಿದ್ದವು. ಅದರಲ್ಲಿ ಅವರು ಹೀಗೆ ಬರೆದಿದ್ದರು: "ಶಿವಮೊಗ್ಗೆ ನನ್ನ ಹುಟ್ಟು ಜಿಲ್ಲೆ; ನನ್ನಲ್ಲಿ ಏನಾದರೂ ಕ್ರಿಯೆಯ, ವಿಚಾರದ ಶಕ್ತಿ ಇದ್ದರೆ ಅದನ್ನು ನೀಡಿದ್ದು ಈ ನೆಲ. ಹೊನ್ನಾಳಿ, ಭದ್ರಾವತಿ, ಶಿಕಾರಿಪುರ, ತೀರ್ಥಹಳ್ಳಿ ಮುಂತಾದ ಕಡೆಯ ಜನ ನನ್ನ ಒಡಹುಟ್ಟಿದವರು."

ನನ್ನ ಅಪ್ಪನ ಈ ಜಿಲ್ಲೆ ಮತ್ತು ಅವರ 'ಒಡಹುಟ್ಟಿದವರು' ಈಗ ಏನಾಗಿದ್ದಾರೆ ಎಂದು ನೋಡಿದರೆ ಮನಸ್ಸಿಗೆ ಆಘಾತವಾಗುತ್ತದೆ. ಅಂದು ಪ್ರಗತಿಪರ, ಜನಪರವಾಗಿದ್ದ ಖ್ಯಾತ ಸಮಾಜವಾದಿಗಳನ್ನು ರೂಪಿಸಿದ್ದ ಜಿಲ್ಲೆ ಇಂದು "ಗೋವನ್ನು ಕೊಲ್ಲುವವರ ಕೈ ಕತ್ತರಿಸಿ, ಗೋಮಾಂಸ ತಿನ್ನುವವರ ನಾಲಿಗೆ ಕತ್ತರಿಸಿ" ಎನ್ನುವವರನ್ನು ಗೆಲ್ಲಿಸುತ್ತಿದೆ. ಅಂದು ಜನ ನೀಡಿದ್ದ ಹಣದಿಂದಲೇ ಗೆದ್ದು ಬರುತ್ತಿದ್ದ ಗೋಪಾಲ ಗೌಡರು ಎಲ್ಲರ ಆದರ್ಶ ರಾಜಕಾರಣಿ ಆಗಿದ್ದರೆ ಇಂದು ತಮ್ಮ ಕಟ್ಟಡಗಳ ಶೃಂಗಾರಕ್ಕಾಗಿ ರಾತ್ರೋರಾತ್ರಿ ಬಡವರ ಮನೆಗಳನ್ನು ನೆಲಕ್ಕುರುಳಿಸುವ ರಾಜಕಾರಣಿಗಳ ಕರ್ಮ ಭೂಮಿ ಆಗಿದೆ.

ಮಲೆನಾಡಿನ ಹೆಬ್ಬಾಗಿಲಿನಂತಿರುವ ಶಿವಮೊಗ್ಗ ಎಲ್ಲ ರೀತಿಯಲ್ಲೂ ಯಾವಾಗ, ಯಾಕೆ, ಹೇಗೆ ಬದಲಾಯಿತು ಎಂದು ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ನಿಟ್ಟಿನಿಂದ ಅರ್ಥ ಮಾಡಿಕೊಳ್ಳುವುದು ಇವತ್ತಿನ ಜರೂರತ್ತುಗಳಲ್ಲಿ ಒಂದಾಗಿದೆ. ಅದಕ್ಕಾಗಿಯೇ ಈ ವರ್ಷ ಪಿ. ಲಂಕೇಶರ 78ನೇ ಹುಟ್ಟುಹಬ್ಬವನ್ನು ಶಿವಮೊಗ್ಗೆಯಲ್ಲಿ ಆಚರಿಸಲು ನಮ್ಮ ತಂಡ ನಿರ್ಧರಿಸಿದ್ದು.

ನಮ್ಮ ಮಾರ್ಚ್ 10ರ ಕಾರ್ಯಕ್ರಮವನ್ನು ನಾವು ರೂಪಿಸಿರುವುದೂ ಈ ದೃಷ್ಟಿಯನ್ನು ಇಟ್ಟುಕೊಂಡು. ಈ ವಿಚಾರಗೋಷ್ಠಿಯಿಂದಾಗಿ ಮಲೆನಾಡಿನ ನಾಡಿ ಮಿಡಿತ ನಮಗೆ ಅರ್ಥವಾಗುತ್ತದೆ ಮಾತ್ರವಲ್ಲ; ಬರುವ ವಿಧಾನಸಭಾ ಚುನಾವಣೆಯ ಹಿನ್ನೆಲೆಯಲ್ಲಿ ರಾಜ್ಯದ ರಾಜಕೀಯ ಭವಿಷ್ಯದ ಒಳನೋಟವೂ ಸಿಗುತ್ತದೆ ಎಂಬ ನಂಬಿಕೆ ನಮ್ಮದು.

ಈ ವಿಶೇಷ ಸಂಚಿಕೆಯ ಕೆಲಸದಿಂದಾಗಿ ನಮ್ಮ ತಂಡ ಇನ್ನೂ ಬೆಂಗಳೂರಿನಲ್ಲಿರುವಾಗಲೇ ಶಿವಮೊಗ್ಗೆಯಲ್ಲಿರುವ ಶ್ರೀಪಾಲ್, ಸರ್ಜಾ ಶಂಕರ್, ಕೆ.ಎಲ್. ಅಶೋಕ್, ರಮೇಶ್ ಹೆಗ್ಡೆ ಕುಂ.ಸಿ. ಉಮೇಶ್, ಆರ್.ಕೆ. ಫ್ಯಾಷನ್‌ನ ಕುಮಾರ್, ಅನನ್ಯ ಶಿವು, ಎಂ. ಗುರುಮೂರ್ತಿ ತರಹದ ಮಿತ್ರರು ಈ ಕಾರ್ಯಕ್ರಮ ತಮ್ಮದೇ ಎಂದು ಜವಾಬ್ದಾರಿಯನ್ನು ಹೊತ್ತು ಆಗಲೇ ಕೆಲಸಗಳನ್ನು ಪ್ರಾರಂಭಿಸಿದ್ದಾರೆ. ಅವರೆಲ್ಲರಿಗೂ ನಮ್ಮ ಧನ್ಯವಾದಗಳು.

ಪಿ. ಲಂಕೇಶರ ಅಭಿಮಾನಿಗಳು, ಪತ್ರಿಕೆಯ ಓದುಗರು ಮತ್ತು ನಮ್ಮೆಲ್ಲ ಮಿತ್ರರು ಈ ಕಾರ್ಯಕ್ರಮದಲ್ಲಿ ಭಾಗವಹಿಸಬೇಕೆಂಬ ಆಶೆ ನಮ್ಮದು.

ಬನ್ನಿ, ಇದು ನನ್ನ ಪ್ರೀತಿಯ ಆಹ್ವಾನ. ○

ಲಂಕೇಶ್ 78

ಲಂಕೇಶ್ ಬಳಗದ ವಾರ್ಷಿಕೋತ್ಸವ ಕಾರ್ಯಕ್ರಮ
ಮಾರ್ಚ್ 10, 2013ರ ಭಾನುವಾರ ಶಿವಮೊಗ್ಗದಲ್ಲಿ

10.00ಕ್ಕೆ ಉದ್ಘಾಟನಾ ಸಭೆ
ಪ್ರಸ್ತಾವನೆ: ಬಿ.ಚಂದ್ರೇಗೌಡ
ಉದ್ಘಾಟನೆ: ರಹಮತ್ ತರೀಕೆರೆ
ಪುಸ್ತಕಗಳ ಬಿಡುಗಡೆ: ಕಡಿದಾಳು ಶಾಮಣ್ಣ
ವಿಶೇಷ ಅತಿಥಿಗಳು: ಕಿಮ್ಮನೆ ರತ್ನಾಕರ್, ವಿಠಲ ಹೆಗ್ಡೆ, ಎಂ.ಗುರುಮೂರ್ತಿ
ಅಧ್ಯಕ್ಷತೆ: ಗೌರಿ ಲಂಕೇಶ್

11.30ಕ್ಕೆ ಮೊದಲನೆ ಗೋಷ್ಠಿ
ಮಲೆನಾಡು: ನಿನ್ನೆ, ಇಂದು, ನಾಳೆ
ಸಮಾಜವಾದಿಗಳು ಮತ್ತು ಕಮ್ಯೂನಿಸ್ಟರ ಪಾತ್ರ: ಪಾರ್ವತೀಶ
ಆರ್ಥಿಕ ಬಿಕ್ಕಟ್ಟು: ಕೆ.ಎಲ್.ಅಶೋಕ್
ರಾಜಕೀಯ ಸ್ಥಿತ್ಯಂತರಗಳು: ಬಿ.ಎಂ.ಪುಟ್ಟಯ್ಯ
ಅಧ್ಯಕ್ಷತೆ: ಶ್ರೀಕಂಠ ಕೂಡಿಗೆ

2.30ಕ್ಕೆ ಎರಡನೆ ಗೋಷ್ಠಿ:
ಸಮಕಾಲೀನ ಕರ್ನಾಟಕ
ರಾಜಕೀಯ ಸ್ಥಿತ್ಯಂತರಗಳು: ವಾಸು
ಸಾಮಾಜಿಕ ಸಂಕ್ಷೋಭೆ: ಡಾ. ವಿನಯ
ಸಾಹಿತ್ಯ, ಸಂಸ್ಕೃತಿ: ಕೆ.ಫಣಿರಾಜ್
ಅಧ್ಯಕ್ಷತೆ: ಬಂಜಗೆರೆ ಜಯಪ್ರಕಾಶ್

5.00ಕ್ಕೆ ವಿಶೇಷ ಉಪನ್ಯಾಸ
ಲಂಕೇಶ್ ಸಾಹಿತ್ಯದ ಪ್ರಸ್ತುತತೆ: ಜಿ.ರಾಜಶೇಖರ
ವಿಶೇಷ ಅತಿಥಿ: ನಾ.ಡಿಸೋಜ
ಸಮಾರೋಪ ನುಡಿ: ಪಾರ್ವತೀಶ

ಸಂಜೆ 6.30
ಜೆನ್ನಿ ತಂಡದಿಂದ ಸಂಗೀತ ಕಾರ್ಯಕ್ರಮ



ಎಲ್ಲರಿಗೂ ಪ್ರೀತಿಯ ಸ್ವಾಗತ

ಈ ಸಂದರ್ಭದಲ್ಲಿ ಲಂಕೇಶ್ ಪ್ರಕಾಶನದ ಪುಸ್ತಕಗಳು ರಿಯಾಯತಿ ದರದಲ್ಲಿ ಲಭ್ಯವಿರುತ್ತದೆ

ಸ್ಥಳ: ಅಂಬೇಡ್ಕರ್ ಭವನ ಶಿವಮೊಗ್ಗ
ದಿನಾಂಕ: 10-3-2013 ರ ಭಾನುವಾರ
ಸಮಯ: ಬೆಳಗ್ಗೆ 10-00 ರಿಂದ ಸಂಜೆ 8 ರವರೆಗೆ

ಮಲೆನಾಡಿನ ಇನ್ನೊಂದು ಮುಖ

ಮಲೆನಾಡೆಂದರೆ ಅಚ್ಚಹಸಿರು, ತಂಪು, ಸೊಂಪಾದ ಮರಗಿಡ, ನದಿ, ಧುಮುಕುವ ಝರಿಗಳು, ಹಸಿರು ಗದ್ದೆಗಳು, ದಟ್ಟ ಕಾಡುಗಳು, ಕಾಫಿ ತೋಟಗಳು, ಬೀಸುವ ತಂಗಾಳಿ, ಓಡಾಡುವ ಪ್ರಾಣಿಗಳು, ಹಾರಾಡುವ ಹಕ್ಕಿಗಳು- ಹೀಗೆ ಆ ಸೌಂದರ್ಯದ ರೋಮಾಂಚನಕಾರಿ ವಿವರಣೆ ಮುಂದುವರಿಯುತ್ತದೆ. ಮಲೆನಾಡಿನಿಂದ ಹೊರಗಿರುವವರಿಗೆ ಒಮ್ಮೆ ಮಲೆನಾಡಿಗೆ ಹೋಗಿ ಬರೋಣ ಎನಿಸುತ್ತದೆ. ಸುಂದರವಾದ ತಾಣಗಳು, ಯಾತ್ರಾ ಸ್ಥಳಗಳು ಪ್ರವಾಸಿಗರನ್ನು ಕೈಬೀಸಿ ಕರೆಯುತ್ತವೆ. ಒಮ್ಮೆ ಮಲೆನಾಡಿಗೆ ಹೋದರೆ ಮತ್ತೊಮ್ಮೆ ಹೋಗಬೇಕು ಎನಿಸುತ್ತದೆ. ಇತ್ತೀಚಿಗೆ ಮಲೆನಾಡಿನಲ್ಲಿ ನಗರಗಳ ಸ್ಟಾರ್ ಹೋಟೆಲ್‌ಗಳನ್ನು ಮೀರಿಸುವ ಹೋಮ್ ಸ್ಟೇಗಳು ತಲೆ ಎತ್ತಿವೆ. ದುಡ್ಡಿದ್ದವರಿಗೆ ಅಲ್ಲಿಗೆ ಹೋಗಿ ಉಳಿದು ಸುಖ ಅನುಭವಿಸಿ ಬರುವುದು ಅವರು ಮರೆಯಲಾಗದ ಅನುಭವ.

ಮೇಲಿನದು ಮಲೆನಾಡಿನ ಹೊರನೋಟ. ಆದರೆ ಮಲೆನಾಡಿಗೆ ಅದಷ್ಟೆ ಅಲ್ಲದೆ ಇನ್ನೊಂದು ಮುಖ ಕೂಡ ಇದೆ. ಹೊರಗೆ ಸುಂದರವಾಗಿ ಕಾಣುವ ಮಲೆನಾಡಿನಲ್ಲಿ ನಡೆಯುತ್ತಿರುವ ಚಟುವಟಿಕೆಗಳೇನು, ಹಸಿರು ಗದ್ದೆಗಳಲ್ಲಿ, ಕಾಫಿ ತೋಟಗಳಲ್ಲಿ ಕೆಲಸ ಮಾಡುವವರ ಪರಿಸ್ಥಿತಿ ಏನು ಎಂಬುದಕ್ಕೆ ಸಂಬಂಧಿಸಿದ್ದು, ಅಲ್ಲಿ ನಡೆಯುತ್ತಿರುವ ಕೆಲಸ ಕಾರ್ಯಗಳು, ಅದರಿಂದ ಉತ್ಪಾದನೆಯಾಗುವ ಸಂಪತ್ತು, ಆ ಸಂಪತ್ತು ವಿತರಣೆಯಾಗುವ ಬಗೆ, ಸರಕಾರಿ ಯೋಜನೆಗಳು, ಜನರ-ಜನರ ನಡುವಿನ ಸಂಬಂಧಗಳು, ಭಾವನೆಗಳು ಮುಂತಾದುವುಗಳಿಗೆ ಸಂಬಂಧಿಸಿದ್ದು.

ಮಲೆನಾಡಿನ ಅಂತರಂಗ ಗೊತ್ತಾಗಬೇಕಾದರೆ ಪೊಲೀಸ್ ಸ್ಟೇಶನ್‌ಗಳಿಗೆ ಹೋಗಬೇಕು; ಲಂಚ ತಗೊಂಡು ಮುಚ್ಚಿಹಾಕಿರುವ ಕೊಲೆ, ಹಲ್ಲೆ, ಅತ್ಯಾಚಾರ ಮುಂತಾದ ಪ್ರಕರಣಗಳನ್ನು ಗಮನಿಸಬೇಕು. ಕಾಫಿ ತೋಟಗಳ ಲೈನುಗಳಿಗೆ ಹೋಗಬೇಕು; ಅಲ್ಲಿ ವಾಸ ಮಾಡುವ ಕೂಲಿ ಕಾರ್ಮಿಕರ ಬದುಕನ್ನು ಗಮನಿಸಬೇಕು. ಇನ್ನೇನು ಊರು ಊರುಗಳಲ್ಲಿ ಶುರುವಾಗುವ ಸುಗ್ಗಿಹಬ್ಬಗಳಿಗೆ ಹೋಗಬೇಕು; ಜಮೀನುದಾರರ ದರ್ಪವನ್ನೂ, ದಲಿತರ ಕೆರಳುತ್ತಿರುವ ಸ್ವಾಭಿಮಾನವನ್ನೂ ಗಮನಿಸಬೇಕು. ಮಟಮಟ ಮಧ್ಯಾಹ್ನ ಕೇರಿಗಳಿಗೆ ಹೋಗಬೇಕು; ಖಾಲಿ ಹೊಡೆಯುತ್ತಿರುವ ರಣ ಸನ್ನಿವೇಶವನ್ನು ಗಮನಿಸಬೇಕು. ಬೆಳಿಗ್ಗೆ ಸಂಜೆ ಕಾಫಿ ತೋಟಗಳ ನಡುವೆ ಪಿಕ್‌ಅಪ್ ಗಾಡಿಗಳಲ್ಲಿ ನಿಂತುಕೊಂಡು ಹೋಗುವ ದುಡಿಯುವವರನ್ನು ಗಮನಿಸಬೇಕು. ಕಾಫಿ ತೋಟದಲ್ಲೊಂದು ಆಧುನಿಕ ಸೌಲಭ್ಯಗಳಿರುವ ತಣ್ಣನೆಯ ಸುಂದರ ಮನೆ, ನಗರ ಪಟ್ಟಣಗಳಲ್ಲಿ ಐಷಾರಾಮಿ ಮನೆ ಇರುವವರನ್ನು ಗಮನಿಸಬೇಕು.

ಶ್ರೀಮಂತರು ಸರಕಾರದ ಕಾನೂನುಗಳನ್ನು ಗಾಳಿಗೆ ತೂರಿ ಅಥವಾ ತಾವೇ ಸರಕಾರವಾಗಿ, ಅರಣ್ಯ ಭೂಮಿಯನ್ನು ಒತ್ತರಿಸಿಕೊಂಡಿದ್ದಾರೆ. ಕಾಫಿ ತೋಟ ಮಾಡಿಕೊಂಡಿದ್ದಾರೆ. ಗಗನ ಚುಂಬಿ ವಿವಿಧ ಜಾತಿಯ ಮರಗಳನ್ನು ಕಡಿದು ಮಾರಿ ಲೂಟಿ ಮಾಡಲಾಗಿದೆ. ಅದು ತಪ್ಪೂ ಅಲ್ಲ; ಅಪರಾಧವೂ ಅಲ್ಲ ಎಂಬಂತಾಗಿದೆ. ಆದರೆ ಬಡವರು ಒಲೆಗೆ ಸೌದೆ ತರಲು ಹೋದರೆ, ಬಿದಿರಿನ ಕಳಲೆ ತರಲು ಹೋದರೆ ಅದು ಅಪರಾಧವಾಗುತ್ತದೆ; ಅದರಿಂದಲೇ ಕಾಡು ನಾಶವಾಯಿತು ಎಂದು ಹೇಳಲಾಗುತ್ತಿದೆ. ಇತ್ತೀಚಿನ ವರ್ಷಗಳಲ್ಲಿ ಸರಾಸರಿ ಮಳೆ ಕಡಿಮೆಯಾಗುತ್ತಿದೆ; ಅಲ್ಪಸ್ವಲ್ಪ ನೀರಿರುವ ಹಳ್ಳಕೊಳ್ಳಗಳಲ್ಲಿ ಕಾಫಿ ತೋಟಗಳ ಕೆಮಿಕಲ್ ಸೇರಿ ಏಡಿ ಮೀನುಗಳು ನಾಶವಾಗುತ್ತಿವೆ; ಕುಡಿಯುವ ನೀರಿಗೆ ಬರ ಬಂದಿದೆ. ಉಸಿರಾಡುವ ಗಾಳಿಗೆ ನಂಜೇರಿದೆ.

ಸರಕಾರದ ಯೋಜನೆಗಳು, ಕಾರ್ಯಕ್ರಮಗಳು ಕಾಫಿ ತೋಟಗಳ ಮಾಲೀಕರ ಅಂಗಳಕ್ಕೆ ಹೋಗಿವೆ. ಸರಕಾರದ ವಿವಿಧ ಇಲಾಖೆಗಳ ಸವಲತ್ತುಗಳು ಅವರಿಗಾಗಿಯೇ ರೂಪಿತವಾಗುತ್ತಿವೆ. ಬ್ಯಾಂಕುಗಳು ಅವರ ಕಷ್ಟಸುಖಗಳಿಗೆ ಎ.ಟಿ.ಎಂ.ಗಳಂತೆ ಕೆಲಸ ಮಾಡುತ್ತಿವೆ. ಆಡಳಿತ ವಿಕೇಂದ್ರೀಕರಣದ ಹೆಸರಿನ ಗ್ರಾಮ ಪಂಚಾಯತ್, ತಾಲೂಕ್ ಪಂಚಾಯತ್‌ಗಳು ಹಳೆಯ ಗೌಡಿಕೆಯನ್ನು ಹೊಸ ರೂಪದಲ್ಲಿ ಜಾರಿಗೊಳಿಸಿವೆ. ಅಧಿಕಾರಿಗಳು, ಪೊಲೀಸು ಎಲ್ಲರೂ ಅವರ ಸೇವೆಗೆ ಪಣತೊಟ್ಟು ನಿಂತಿದ್ದಾರೆ. ಆಸ್ತಿ ಸಂಪತ್ತು ವಿಕೇಂದ್ರೀಕರಣವಾಗದೆ, ಅಧಿಕಾರ ವಿಕೇಂದ್ರೀಕರಣ ಎನ್ನುವುದು ನಿಷ್ಪ್ರಯೋಜಕ ಎಂಬುದು ಸಾಬೀತಾಗಿದೆ.

ಭತ್ತ ಬೆಳೆಯುತ್ತಿದ್ದ ಭೂಮಿಯಲ್ಲೀಗ ಅಡಿಕೆ, ಬಾಳೆ ಮತ್ತು ಕಾಫಿ ಬೆಳೆಯಲಾಗುತ್ತಿದೆ. ದೊಡ್ಡ ಭೂಮಾಲೀಕರು ಕಾರ್ಪೋರೇಟ್ ದೊರೆಗಳಾಗುತ್ತಿದ್ದಾರೆ. ಸಣ್ಣ ಕೃಷಿ ಹಿಡುವಳಿದಾರರು ಆರ್ಥಿಕ ಸಂಕಟ ಎದುರಿಸುತ್ತಿದ್ದಾರೆ. ದೊಡ್ಡ ಭೂಮಾಲೀಕರು ಇವರನ್ನೇ ಲೂಟಿ ಮಾಡುತ್ತಿದ್ದಾರೆ. ಕೃಷಿ ಕೂಲಿಗಳು ತಮ್ಮ ಊರುಗಳ ಆಚೆಗೂ ಹೋಗಿ ಕೆಲಸ ಮಾಡುತ್ತಿದ್ದಾರೆ. ಭೂಮಾಲೀಕರಿಗೂ ಮತ್ತು ಕೃಷಿ ಕೂಲಿಗಳಿಗೂ ಇದ್ದ ನೇರ ಹಾಗೂ ಪ್ರತ್ಯಕ್ಷ ಸಂಬಂಧವು ಈಗ ಪರೋಕ್ಷ ಸ್ವರೂಪ ಪಡೆದಿದೆ. ಕಾರ್ಮಿಕರನ್ನು ಮಧ್ಯವರ್ತಿಗಳು ನಿಯಂತ್ರಿಸುತ್ತಿದ್ದಾರೆ. ಭೂಮಾಲೀಕರು ಈ ಮಧ್ಯವರ್ತಿಗಳನ್ನು ಅವಲಂಬಿಸಿದ್ದಾರೆ.

ಭೂಮಾಲೀಕ ವರ್ಗ ಮತ್ತು ದುಡಿಯುವ ಸಮೂಹಗಳಲ್ಲಿ ದೊಡ್ಡ ಪ್ರಮಾಣದ ಯುವ ಸಮೂಹ ನಿರ್ಮಾಣವಾಗಿದೆ. ಭೂಮಾಲೀಕ ಯುವ ಜನತೆ ತನ್ನ ಹಳೆಯ ಮಾದರಿಯ ತುಳಿತವನ್ನು ಮುಂದುವರಿಸಲು ಆಗುತ್ತಿಲ್ಲ, ಆದರೆ ದುಡಿಯುವ ಯುವ ಜನತೆ ಎದೆ ಎತ್ತಿರುವುದನ್ನು ಕಂಡು ಅದರ ಶೋಷಕ ಗುಣ ಮತ್ತಷ್ಟು ಕೆರಳಿದೆ; ದುಡಿಯುವ ಯುವ ಜನತೆಯಲ್ಲಿ ಪಾರಂಪರಿಕ ಶೋಷಣಾ ವಿರೋಧಿ ಸ್ವಾಭಿಮಾನ ಮೂಡಿದೆ. ಆದರೆ ಅದು ಸಾಮೂಹಿಕ ಗುಣವನ್ನು ಹಾಗೂ ಸಂಘಟನಾತ್ಮಕ ಶಕ್ತಿಯನ್ನು ಪಡೆದಿಲ್ಲ, ಈ ದೌರ್ಬಲ್ಯವನ್ನು ದುರುಪಯೋಗ ಪಡಿಸಿಕೊಂಡಿರುವ ಭೂಮಾಲೀಕ ವರ್ಗವು ತನ್ನ ಶೋಷಣೆ ಮತ್ತು ದೌರ್ಜನ್ಯವನ್ನು ಸೂಕ್ಷ್ಮಗೊಳಿಸಿಕೊಳ್ಳುತ್ತಿದೆ; ಸಂಘಟನಾತ್ಮಕಗೊಳಿಸಿಕೊಂಡಿದೆ.

ಪಟೇಲರ ಮನೆಯ ಅಂಗಳದಲ್ಲಿ ನಡೆಯುತ್ತಿದ್ದ ಹೊನ್ನಾಳಿ ಹೊಡತಗಳು ಶಕ್ತಿಯನ್ನು ಕಳೆದುಕೊಂಡಿಲ್ಲ, ಆದರೆ ಹೊಸ ದಾರಿಗಳನ್ನು ಹುಡುಕುತ್ತಿವೆ. ಭೂಮಾಲೀಕರ ಹಿಡಿತದಲ್ಲಿರುವ ದೇವಸ್ಥಾನಗಳು, ದೇವರುಗಳು ನ್ಯಾಯ ಪಂಚಾಯತಿಗಳನ್ನು ನಡೆಸುತ್ತಿವೆ. ಚುನಾವಣೆಯ ಫಲಿತಾಂಶವನ್ನೂ ಒಳಗೊಂಡಂತೆ ಕೇರಿಗಳನ್ನು ನಿಯಂತ್ರಣ ಮಾಡುತ್ತಿವೆ. ಭೂಮಾಲೀಕರು ದಲಿತರನ್ನು ಸುಲಿಗೆ ಮಾಡಿದ ದುಡ್ಡಿನಲ್ಲಿ ಕಿವುರು ಕಾಸನ್ನು ಎಲೆಕ್ಶನ್ ಟೈಮಲ್ಲಿ ಕೇರಿಗಳಿಗೆ ಕೊಟ್ಟು ದಾನಶೂರ ಕರ್ಣರಾಗುತ್ತಿದ್ದಾರೆ. ದಲಿತ ಯುವ ಸಮೂಹದಲ್ಲಿ ಕೆರಳುತ್ತಿರುವ ಅಸಹನೆ, ಆಕ್ರೋಶಗಳನ್ನು ಅತ್ಯಂತ ನಯವಾಗಿ ಶಮನಗೊಳಿಸುತ್ತಿದ್ದಾರೆ.

ರೈತ, ದಲಿತ, ಕಾರ್ಮಿಕ ಸಂಘಟನೆಗಳು ತಮ್ಮ ಸಂಘಟನಾತ್ಮಕ ಮತ್ತು ಹೋರಾಟದ ಶಕ್ತಿಯನ್ನು ಕಳೆದುಕೊಂಡು ದುರ್ಬಲಗೊಂಡಿವೆ. ಕ್ರಾಂತಿ ಪ್ರಕ್ರಿಯೆಯ ವರ್ಗ ಹೋರಾಟವನ್ನು ಬದಿಗಿಟ್ಟು, ಸಶಸ್ತ್ರ ಹೋರಾಟವನ್ನೇ ಕ್ರಾಂತಿ ಎಂದು ಹೊರಟ, ಮಾವೋಯಿಸ್ಟ್ ಹೋರಾಟವು ಜನ ಬೆಂಬಲ ಕಳೆದುಕೊಂಡಿದೆ.

ಸಾಮಾಜಿಕ ವಸ್ತುಸ್ಥಿತಿಯ ಈ ಬಿಕ್ಕಟ್ಟುಗಳನ್ನು ಆಳುವ ವರ್ಗದ ರಾಜಕೀಯ ಎನ್‌ಕ್ಯಾಶ್ ಮಾಡಿಕೊಳ್ಳುತ್ತಿದೆ. ಆ ಪಕ್ಷ ಅಲ್ಲ ಈ ಪಕ್ಷ. ಈ ಪಕ್ಷ ಅಲ್ಲ ಆ ಪಕ್ಷ ಎಂಬ ಭ್ರಮೆಯನ್ನು ಮೂಡಿಸಲು ವಿಫಲ ಯತ್ನ ನಡೆಸಿದೆ. ಕಾಂಗ್ರೆಸ್ಸಿಗೆ ಓಟು ಕೊಟ್ಟು, ಆ ಪಕ್ಷ ಏನೂ ಬದಲಾವಣೆ ತರಲಿಲ್ಲ ಎಂದಾದ ಮೇಲೆ ಜನತಾ ಪಕ್ಷಕ್ಕೆ ಓಟು ಕೊಟ್ಟು ನೋಡಿದರು. ಕೊನೆಗೊಮ್ಮೆ ಇರಲಿ ಎಂದು ಬಿ.ಜೆ.ಪಿ.ಗೂ ಓಟು ಕೊಟ್ಟು ಅದರ ಕಹಿ ಉಂಡರು. ಇಲ್ಲಿಗೆ ಸರಿಯಾಗಿ ಒಂದು ಸುತ್ತು ಮುಗಿಯಿತು. ಮುಂದೆ ಖಚಿತವಾಗಿ ಯಾವ ಪಕ್ಷವೂ ಕಾಣುತ್ತಿಲ್ಲ. ಮಲೆನಾಡಿನ ಕೇರಿಗಳು, ಓಣಿಗಳು, ರಸ್ತೆಗಳಿಲ್ಲದ ಪ್ರದೇಶಗಳು, ಆಸ್ಪತ್ರೆ ಸ್ಕೂಲು ಮುಂತಾದುವುಗಳಿಲ್ಲದ ಊರುಗಳು, ಪೌಷ್ಟಿಕ ಆಹಾರವಿಲ್ಲದ ಮಕ್ಕಳು ಮರಿಗಳು, ಹೆಂಡ ಸರಾಯಿಗಳನ್ನೆ ಅವಲಂಬಿಸಿರುವವರು, ದ್ವೇಷ ಅಸೂಯೆಗಳಿಗೆ ಮಾಟ ಮಂತ್ರ ಮಾಡಿಸುವವರು, ಅದರ ಪರಿಹಾರಕ್ಕೆ ದೇವರು ದಿಂಡರು ಮಂತ್ರವಾದಿಗಳನ್ನು ಅವಲಂಬಿಸಿರುವರು, ಈ ಪರಿಸ್ಥಿತಿ ಹೀಗೇ ಮುಂದುವರಿದಿದೆ. ಬಹುರಾಷ್ಟ್ರೀಯ ಕಂಪನಿಗಳ ಬೃಹತ್ ಯೋಜನೆಗಳು ತಮ್ಮ ಲಾಭಕ್ಕಾಗಿ ಮಲೆನಾಡನ್ನು ದುರುಪಯೋಗಮಾಡಿಕೊಳ್ಳುತ್ತಿವೆ. ಅಮೇರಿಕಾದ ಆರ್ಥಿಕ ಲಾಭಕ್ಕಾಗಿ ಮಲೆನಾಡಿನ ಜನರನ್ನೇ ಒಕ್ಕಲೆಬ್ಬಿಸಲು ಆಳುವ ವರ್ಗ ಸಂಚು ಹೂಡಿದೆ. ಈ ಕೆಲಸಕ್ಕೆ ಆಕರ್ಷಕ ಹೆಸರುಗಳನ್ನು ಕೊಡಲಾಗಿದೆ.

ಮಲೆನಾಡು ಹೊರನೋಟಕ್ಕೆ ಶೃಂಗಾರವಾಗಿಯೂ, ಒಳಗಡೆ ರಣಾಂಗಣವಾಗಿಯೂ ಹೀಗೇ ಮುಂದುವರಿಯುತ್ತಿದೆ.



ಡಾ.ಬಿ.ಎಂ.ಪುಟ್ಟಯ್ಯ



ಅಷ್ಟೇನು ಸಂಕಟವಲ್ಲದ ನಮ್ಮ ಊರಿನ ಸಂಗತಿಗಳು

ಬಾಲ್ಯದ ನನ್ನ ನೆನಪುಗಳಿಗೆ ಹೋದರೆ ಗಣಪತಿ ಹಬ್ಬ ತಿಂಗಳಿದೆ ಎನ್ನುವಾಗ ಊರಿನ ಯುವಕರು, ವಯಸ್ಸು ದಾಟಿದ ಆದರೆ ವಯಸ್ಸಾದವರು ಎಂದು ಹೇಳಲಾಗದ ಹಿರಿಯರು ಕೂಡಿ ಗಣಪತಿ ಹಬ್ಬದ ಸಂದರ್ಭದಲ್ಲಿ ಆಡುವ ನಾಟಕದ ಅಭ್ಯಾಸ ಮಾಡುವ ಚಿತ್ರಗಳು ಮೂಡುತ್ತಿವೆ. ಹಾಗೇ ಊರನ್ನು ನೆನಪು ಮಾಡಿಕೊಂಡಾಗ ಊರ ಸಾಹುಕಾರರ ಮನೆ ಮತ್ತು ಅವರು ತಮ್ಮ ಕೆಲಸಗಾರರಿಗೆ ಕಟ್ಟಿಕೊಟ್ಟ ಬಿಡಾರಗಳಿಗೆ ಹೊದಿಸಿದ ಹಂಚುಗಳನ್ನು ಬಿಟ್ಟರೆ ಮತ್ತೆ ಎಲ್ಲರ ಮನೆಗಳು ಹುಲ್ಲು ಅಥವಾ ಅಡಿಕೆ ಸೋಗೆ ಹೊದ್ದಿದ್ದನ್ನು ಮಸುಕು ಮಸುಕಾಗಿ ಕಣ್ಣಮುಂದೆ ತರುತ್ತವೆ. ಈ ಹುಲ್ಲಿನ ಮನೆಗಳನ್ನು ದಾಟಿ, ಕುಡಿದು ಬಂದ ಗಂಡನಿಂದ ಏಟು ತಿಂದು ಅಳುವ ಹೆಂಗಸರ ದನಿಗಳು ಈಗಲೂ ಕೇಳಿದಷ್ಟು ವಿದ್ರಾವಕವಾಗಿವೆ.

ನಾವೆಲ್ಲಾ ಕಾಲೇಜು ಮೆಟ್ಟಿಲು ಹತ್ತಿದ ನಂತರದಲ್ಲಿ ಹಳ್ಳಿಯಿಂದ ಪೇಟೆಗೆ ನಡೆದೇ ಹೋಗುತ್ತಿದ್ದದ್ದೂ ನೆನಪಾಗುತ್ತಿದೆ. ಆದರೆ ಆಗಲೇ ಸಾಕಷ್ಟು ಬಸ್ಸುಗಳು ನಮ್ಮೂರಿಂದ ಪೇಟೆಗೆ ಹೋಗುತ್ತಿದ್ದವು. ಬಸ್ಸಿನವರು ಟಿಕೇಟಿಗೆ ಪಡೆಯುತ್ತಿದ್ದ ಒಂದೋ, ಒಂದೂವರೆ ರೂಪಾಯಿಯೋ ಕೂಡ ನಮಗೆ ದುಬಾರಿಯಾಗಿತ್ತು, ನನ್ನ ಅಪ್ಪಯ್ಯ ಹಳ್ಳಿಯಿಂದ ಪೇಟೆಗೆ ಹತ್ತಾರು ಲೀಟರುಗಳ ಹಾಲಿನ ಕ್ಯಾನ್‌ಗಳನ್ನು ಹೊತ್ತುಕೊಂಡು ಹೋಗಿ ಕೊಟ್ಟು ಬರಬೇಕಾಗಿತ್ತು, ಬಸ್ಸಿಗೆ ಹೋದರೆ ಟಿಕೇಟಿನ ದುಡ್ಡು ತೆತ್ತ ನಂತರ ಉಳಿಯುತ್ತಿದ್ದದ್ದು ಕೇವಲ ಐವತ್ತು ಪೈಸೆ ಅಷ್ಟೆ ಆಗಿತ್ತಂತೆ. ಅದಕ್ಕೆ ನಡೆದೇ ಹೋಗಿ ಬರುವುದು ಅಪ್ಪಯ್ಯನಿಗೆ ಅನಿವಾರ್ಯವಾಗಿತ್ತು,

ನಾನು ಚಿಕ್ಕವನಾಗಿದ್ದಾಗಿನಿಂದಲೂ ನೋಡಿದಂತೆ ರಾಜಕೀಯದಲ್ಲಿ ಗುರುತಿಸಿಕೊಂಡವರೆಂದರೆ ಸಣ್ಣಯ್ಯಗೌಡರು ಮಾತ್ರ. ಅವರು ದೇವೇಗೌಡರ ಜನತಾ ಪಕ್ಷದವರು. ಪ್ರತಿ ಚುನಾವಣೆಯಲ್ಲೂ ಅವರು ಜನತಾ ಪಕ್ಷದ ಪರವಾಗಿ ಒಂದು ಅಡಿಕೆ ಸೋಗೆಯ ಚಪ್ಪರ ಹಾಕುತ್ತಿದ್ದರು. ಅವರು ಗತಿಸಿ ಎಷ್ಟೋ ವರ್ಷಗಳಾಯಿತು.

ಈಗ ಎರಡು ವರ್ಷವಾಯಿತು ನಮ್ಮೂರಲ್ಲಿ ಗಣಪತಿ ಹಬ್ಬದಲ್ಲಿ ನಾಟಕಗಳು ನಡೆಯುತ್ತಿಲ್ಲ, ಒಂದಷ್ಟು ಹುಡುಗರು ಬೆಂಗಳೂರು ಸೇರಿದ್ದಾರೆ. ಊರಲ್ಲಿರುವ ಯುವಕರು ತಮ್ಮ ತಮ್ಮ ಕೆಲಸದಲ್ಲಿ ಬ್ಯುಸಿಯಾಗಿದ್ದಾರೆ. ಇತ್ತ ಗಮನಕೊಡುವಷ್ಟು ಪುರುಸೊತ್ತಿಲ್ಲ, ಈಗ ನಮ್ಮೂರಲ್ಲಿ ಒಂದೇ ಒಂದು ಹುಲ್ಲು ಅಥವಾ ಸೋಗೆ ಹೊದಿಸಿದ ಮನೆಗಳಿಲ್ಲ, ದನ ಮತ್ತು ಕಟ್ಟಿಗೆ ಕೊಟ್ಟಿಗೆಗಳಿಗೂ ಈಗ ಮಂಗಳೂರು ಹಂಚಿನ ಭಾಗ್ಯ ಒದಗಿ ಬಂದಿದೆ. ನಾಲ್ಕೈದು ಆರ್.ಸಿ.ಸಿ. ಮನೆಗಳು ಮುಂದಿನ ದಿನಗಳ ನಮ್ಮ ಹಳ್ಳಿಯ ಸ್ವರೂಪವನ್ನು ಸೂಚಿಸುವಂತಿವೆ.

ಬಸ್ಸುಗಳ ಸಂಖ್ಯೆ ವಿಪರೀತವೇನೂ ಹೆಚ್ಚಿಲ್ಲ, ಆದರೆ ಕನಿಷ್ಠ ಗಂಟೆಗೊಂದು ಬಸ್ಸು ಪೇಟೆಯಿಂದ ಬರುತ್ತವೆ. ಇಲ್ಲವೇ ಊರಿಂದ ಪೇಟೆಗೆ ಹೋಗುತ್ತವೆ. ಹತ್ತರಲ್ಲಿ ಐದು ಮನೆಗಳಿಗಾದರೂ ಈಗ ಬಸ್ಸಿನ ಅಗತ್ಯವಿಲ್ಲ, ಬೈಕಿನಲ್ಲಿ ಯಾವಾಗ ಬೇಕಾದರೂ ಹೋಗಿ ಬರಬಹುದು.

ನಮ್ಮೂರ ಜನ ತಾವು ಮಾಡಿದ ದಿನದ ದುಡಿಮೆಗೆ 4-5 ರೂಪಾಯಿ ಪಡೆಯುತ್ತಿದ್ದದ್ದು ನೆನಪಿದೆ. ಈಗ ಅವರ ಕೂಲಿ ಕನಿಷ್ಠ ನೂರಾಐವತ್ತು ರೂಪಾಯಿಗಳಾಗಿವೆ.

ಕೆಲಸಗಾರರಿಗೆ ಬೈಯ್ಯುತ್ತಿದ್ದ, ಕಿರಿಕಿರಿ ಮಾಡುತ್ತಿದ್ದ ಧಣಿಗಳನ್ನು ನಾನು ಕಂಡಿದ್ದೇನೆ. ಅಪರೂಪಕ್ಕೆ ಅವರು ಕೆಲಸಗಾರರಿಗೆ ದೈಹಿಕವಾಗಿ ಹೊಡೆದಿದ್ದನ್ನು ಕಂಡಿದ್ದೇನೆ. ಆದರೆ ಈಗ ಕಾರ್ಮಿಕರ ಕಾಲ; ಧಣಿಗಳು ಕಾರ್ಮಿಕರ ಮುಂದೆ ಈಗ ತಲೆಬಾಗಿ ನಿಲ್ಲಬೇಕಾಗಿಲ್ಲ ವಾದರೂ ಅವರ ದನಿ ಚೂರು ದಪ್ಪವಾದರೆ ಅವರು ಮರುದಿನವೇ ಪಶ್ಚಾತ್ತಾಪ ಪಡಬೇಕಾಗುತ್ತದೆ.

ಚಿಕ್ಕವನಿದ್ದಾಗ ಶಾಲೆಗೆ ಹೋಗುವಾಗ ಹಳ್ಳವೊಂದು ಅಡ್ಡ ಬರುತ್ತಿತ್ತು. ಮಳೆ ಬಂದರೆ ಆ ಹಳ್ಳ ತುಂಬಿ ಅದನ್ನು ದಾಟಿ ಶಾಲೆಗೆ ಹೋಗಲಾಗುತ್ತಿರಲಿಲ್ಲ, ಆಗ ಸಾರಾಯಿ ಅಂಗಡಿ ವೆಂಕಟೇಶಣ್ಣ ದೊಡ್ಡದೊಂದು ಚಪ್ಪಡಿಕಲ್ಲು ತಂದು ಸಾರ ಹಾಕಿಸಿದರು. ಆ ಸಾರ ಹಾಕಿಸಲು ಸರ್ಕಾರಕ್ಕೆ ಊರವರು ಅರ್ಜಿ ಸಲ್ಲಿಸಿ ಬಸವಳಿದಿದ್ದರು. ಮೊನ್ನೆ ಊರಿಗೆ ಹೋದಾಗ ರಸ್ತೆಯ ಪಕ್ಕದ ಕಾಲುವೆ ಜರಿದಿತ್ತು ಅದನ್ನು ಸರಿಮಾಡಲು ಗುತ್ತಿಗೆದಾರರೊಬ್ಬರು ಐದು ಲಕ್ಷವನ್ನು ಸರ್ಕಾರದಿಂದ ಕಂಟ್ರಾಕ್ಟ್ ಹಿಡಿದು ಬಂದಿದ್ದರು. ಒಳ್ಳೆಯ ಗುಣಮಟ್ಟದಲ್ಲಿ ಮಾಡಿದರೆ ಅದಕ್ಕೆ ಎರಡು ಲಕ್ಷ ಖರ್ಚಾಗುವುದಿಲ್ಲ, ಈ ಕಂಟ್ರಾಕ್ಟ್‌ದಾರ ಮಾಡಿದ ಕೆಲಸ ನೋಡಿದರೆ ಒಂದು ಲಕ್ಷವೂ ಖರ್ಚು ಮಾಡಿದಂತೆ ಕಾಣುತ್ತಿಲ್ಲ, ಎಲ್ಲರೂ ಸರ್ಕಾರದ ಹಣವನ್ನು ಲೂಟಿ ಹೊಡೆಯುತ್ತಿದ್ದಾರೆ ಎಂದು ಊರಿನ ಹಿರಿಯಗೆಳೆಯ ರಮಾನಂದ ಆಕ್ರೋಶದಿಂದ ನುಡಿಯುತ್ತಿದ್ದರು.

ಶಾಂತವೇರಿ ಗೋಪಾಲಗೌಡರು, ಕಡಿದಾಳು ಮಂಜಪ್ಪನವರಂತಹ ರಾಜಕಾರಣಿಗಳು ಶಿವಮೊಗ್ಗ ಜಿಲ್ಲೆಯಲ್ಲಿ ಹುಟ್ಟಿ ನಾಡಿನ ರಾಜಕಾರಣಕ್ಕೆ ನೈತಿಕ ತಳಹದಿ ರೂಪಿಸಿದವರು. ಇಂದು ಅವರ ಹುಟ್ಟಿದ ದಿನವನ್ನು ಮಾತ್ರ ಆಚರಿಸಲಾಗುತ್ತದೆ. ಸದಾಶಿವರಾಯರಂತಹ ಅನೇಕರು ತಮ್ಮ ನೂರಾರು ಎಕರೆ ಜಮೀನುಗಳನ್ನು ಸಮಾಜವಾದಿ ಚಳವಳಿ ಸಂದರ್ಭದಲ್ಲಿ ಭೂರಹಿತರಿಗೆ ದಾನ ಮಾಡಿದರು. ಇವತ್ತು ಶಿವಮೊಗ್ಗ ಜಿಲ್ಲೆಯ ಸಾವಿರಾರು ಎಕರೆ ಜಮೀನುಗಳನ್ನು ಕೆಲವೇ ಅಧಿಕಾರಸ್ಥ ರಾಜಕಾರಣಿಗಳು ಲೂಟಿ ಹೊಡೆಯುತ್ತಿದ್ದಾರೆ.

ಕಾಗೋಡು ಭೂ ಹೋರಾಟ ಉಳುವವನೇ ಹೊಲದೊಡೆಯ ಕಾನೂನು ಜಾರಿಗೆ ಪ್ರೇರಣೆ ನೀಡಿತು. ಆದರೆ ಈಗ ಭೂಮಿ ಹೊರೆಯಾಗುತ್ತಿದೆ. ಬೆಂಗಳೂರಿನಲ್ಲಿ ಕೈ ತುಂಬ ಎಣಿಸುವುದು ಆರಾಮವೆನಿಸುತ್ತಿದೆ.

ಶಿವಮೊಗ್ಗ ಜಿಲ್ಲೆ ಒಂದು ತರಹ ತ್ಯಾಗಮಯಿ ಜಿಲ್ಲೆ, ನಾಡಿಗೆ ಬೆಳಕು ನೀಡಲು ತನ್ನ ಬಹುಪಾಲನ್ನು ನೀರಿನೊಳಗೆ ಮುಳುಗಿಸಿಕೊಂಡಿತು. ಹೊಸ ಜಿಲ್ಲೆಗಳು ಹುಟ್ಟಿಕೊಂಡಾಗ ತನ್ನ ತಾಲ್ಲೂಕುಗಳನ್ನು ಕೈ ಎತ್ತಿ ನೀಡಿತು. ಇದರಿಂದ ಆರ್ಥಿಕವಾಗಿ ದೊಡ್ಡ ಪೆಟ್ಟನ್ನೇ ತಿಂದಿತು. ಇಂದು ಜಿಲ್ಲೆಯ ಬಹುತೇಕ ಹೆಮ್ಮೆಯ ಕೈಗಾರಿಕೆಗಳು ಮುಚ್ಚಿವೆ. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ, ಎಂ.ಪಿ.ಎಂ. ಅವಸಾನದ ಅಂಚಿನಲ್ಲಿವೆ. ಆದರೆ ಶಿವಮೊಗ್ಗದ ನಿವೇಶನದ ಬೆಲೆ, ಮನೆ ಬಾಡಿಗೆ ಗಗನಕ್ಕೇರಿದೆ. ಒಂದು ಕಪ್ ಚಹಕ್ಕೂ 65 ರೂಪಾಯಿ ಬಿಲ್ ಮಾಡುವ ಹೋಟೆಲುಗಳು ಆರಂಭವಾಗಿವೆ. ಎಲ್ಲವೂ ಅಯೋಮಯವಾಗಿವೆ.

ಸಮಾಜವಾದಿ ಹೋರಾಟದ ನೆಲದಲ್ಲಿ ನಕ್ಸಲೀಯ ಹೋರಾಟವೂ ಒಂದಷ್ಟು ಕಾಲ ಸದ್ದು ಮಾಡಿ ನೇಪಥ್ಯಕ್ಕೆ ಸರಿದಿದೆ. ಹೋರಾಟಗಳೂ ಅಪರೂಪವಾಗುತ್ತಿವೆ.

ಪರಿವರ್ತನೆ ಜಗದ ನಿಯಮ.

ನಮ್ಮೂರಲ್ಲಿ ಈಗ ಸಾರಾಯಿ ಕುಡಿದು ಬಂದು ಹೆಂಡತಿಗೆ ಹೊಡೆಯುವಂತ ಗಂಡಸರಿಲ್ಲ, ಹಸಿವಿನಿಂದ ಯಾರೂ ನರಳುತ್ತಿಲ್ಲ, ಇವುಗಳ ಮುಂದೆ ಗಣಪತಿ ಹಬ್ಬದ ಸಂದರ್ಭದಲ್ಲಿ ಜನ ನಾಟಕ ಕಲಿತು ಆಡುವುದಿಲ್ಲ ಎಂಬುದು ಅಷ್ಟೇನೂ ಸಂಕಟದ ಸಂಗತಿಯಲ್ಲ.



- ಸರ್ಜಾಶಂಕರ್ ಹರಳಿಮಠ

ಮಲೆನಾಡಿನ ಒಡನಾಡಿಗಳು

ಚುಮು ಚುಮು ಚಳಿಯಲ್ಲಿ ಕಣ್ಣುಜ್ಜಿಕೊಂಡು ಮನೆಯಂಗಳಕ್ಕೆ ಬಂದು ಕಣ್ ಬಿಟ್ಟು ನೋಡಿದರೆ ದೂರದಲ್ಲಿ ಸದಾ ಗಗನ ಚುಂಬಿಯಾಗಿ ನಿಂತ ದೊಡ್ಡದೊಂದು ಬೆಟ್ಟ. ಸದಾ ಮೋಡಗಳಿಂದ ಆವೃತ್ತವಾಗಿ ಇದ್ದಕ್ಕಿದ್ದಂತೆ ಹೋ ಎಂದು ಮಳೆ ಸುರಿದ ನಂತರ ತೊಳೆದಿಟ್ಟ ಶಿಲೆಯಂತೆ ಕಾಣುವ ಆ ಬೆಟ್ಟ, ಮೋಡಗಳನ್ನು ಬಿತ್ತರಿಸಿ ಮಳೆ ಸುರಿಸುವ ಒಂದು ಕಾರ್ಖಾನೆಯೇ ಇರಬೇಕೆಂದು ನಾನು ಭಾವಿಸಿಕೊಂಡಿದ್ದೆ.

ಅದುವೇ ಕುಂದಾದ್ರಿ ಬೆಟ್ಟ.

ಈ ಬೆಟ್ಟದ ಪಾದದಂತೆ ಹರಡಿಕೊಂಡಿರುವ ಗದ್ದೆ ಬಯಲಿನ ಅಂಚಿನಲ್ಲಿರುವ ಹುಲ್ಲಿನ ಮನೆಯಲ್ಲಿ ನಮ್ಮ ವಾಸ. ಮನೆ ತುಂಬ ಜನ, ಕೊಟ್ಟಿಗೆ ತುಂಬ ಜಾನುವಾರು, ಗದ್ದೆ ತುಂಬ ಪೈರು... ಇಲ್ಲಿ ಕಳೆದ ಬಾಲ್ಯದ ದಿನಗಳು ಎಂದಾದರೂ ಮರೆಯಲುಂಟೆ? ಬರೀ ಮನುಷ್ಯರು ಮಾತ್ರವಲ್ಲ ಮಲೆನಾಡಿನ ಮಕ್ಕಳೆಂದರೆ ಅವರು ಪ್ರಾಣಿ-ಪಕ್ಷಿ, ಗಿಡ, ಮರ, ಸಕಲ ಜೀವರಾಶಿಗಳ ಮಾತುಗಳನ್ನು ಬಲ್ಲ ವಿಶಾರದರು. ಮನುಷ್ಯರೊಂದಿಗೆ ಎಷ್ಟು ಪ್ರೀತಿಯಿಂದ ಮಾತನಾಡಬಲ್ಲರೋ ತಮ್ಮ ಕೊಟ್ಟಿಗೆಯ ಜಾನುವಾರುಗಳೊಂದಿಗೂ ಅಷ್ಟೇ ಆದರದಿಂದ ಮಾತನಾಡಬಲ್ಲರು. ಮಲೆನಾಡಿನ ಮಕ್ಕಳ ಮೂಗು, ಕಣ್ಣು, ಕಿವಿ, ಎಲ್ಲವೂ ಬಹಳ ಚುರುಕು. ಇಲ್ಲೆಲ್ಲೋ ಜೇನಿದೆ. ಇಲ್ಲೆಲ್ಲೋ ಹಲಸು ಹಣ್ಣಾಗಿದೆ. ಇಲ್ಲೆಲ್ಲೋ ಇಪ್ಪೆ ಹೂ ಬಿಟ್ಟಿದೆ ಎಂದೆಲ್ಲ ಅವುಗಳಿಗೆ ಗೊತ್ತಾಗುತ್ತದೆ. "ಯಾಕೊ ಉಡಿ ಅಲ್ಲಾಡಿದಂಗ್ ಆತದಲ್ಲ" ಎಂದು ಗುಮಾನಿಯಿಟ್ಟರೆ ಕರಾರುವಕ್ಕಾಗಿ ಅಲ್ಲಿ ಹಾಗೇ ಆಗಿರುತ್ತದೆ. ಗಾಳಿ, ಬೆಳಕು ಮುತ್ತಿಟ್ಟು ಸಾಕಿದ ಮಕ್ಕಳು ನಾವು.

ಆ ದಿನಗಳಲ್ಲಿ ನಮ್ಮ ಅಲಾರಾಂ ಎಂದರೆ ಕೋಳಿಯ ಕೂಗು ಮಾತ್ರ. ನಮ್ಮ ಗಡಿಯಾರವೆಂದರೆ ಸೂರ್ಯನ ಬೆಳಕಿಗೆ ಅಂಗಳದಲ್ಲಿ ಅಥವಾ ಮನೆಯ ಗೋಡೆಯ ಮೇಲೆ ಬೀಳುತ್ತಿದ್ದ ನೆರಳು ಮಾತ್ರ. ನೆರಳು ಎಷ್ಟು ಮುಂದೆ ಬಂದಿದೆ ಎಂಬುದರ ಮೇಲೆ ಈಗ ಎಷ್ಟು ಗಂಟೆಯಾಯಿತು ಎಂದು ಹೇಳುವ ಕಾಲಜ್ಞಾನಿಗಳು ನಾವಾಗಿದ್ದೆವು. ಇದು ಬಿಟ್ಟರೆ ನಮ್ಮ ಮನೆಗೆ ಶಬ್ದ ಕೇಳುವಷ್ಟು ದೂರದಲ್ಲಿ ಹಾದು ಹೋಗುತ್ತಿದ್ದ ಟಾರು ರಸ್ತೆಯಲ್ಲಿ ಸಂಚರಿಸುವ ಅವು ಬಸ್ಸುಗಳ ಹಾರನ್ ಕೂಡ ಗಡಿಯಾರದ ಗಂಟೆಯ ನಾದದಂತೆ ಮನೆಗೆ ಸಮಯ ಹೇಳುತ್ತಿದ್ದವು. ಇಂತ ಹಾರನ್ ಇದೇ ಬಸ್ಸಿನದು ಎಂದು ಹೇಳಬಲ್ಲ ಶಬ್ದವೇದಿಗಳು ನಾವಾಗಿದ್ದೆವು.

ಬೆಳಗ್ಗೆ ಎದ್ದು ಗದ್ದೆಯ ಹಿತ್ತಲಿಗೆ ನೀರು ಹಾಕಿ ಸ್ನಾನಕ್ಕೆ ಹೋಗಬೇಕೆನ್ನುವಾಗ ಪಪ್ಪರೆ ಪಪ್ಪ ಪಾಂಯ್ ಪಾಂಯ್ ಎಂಬ ಶಬ್ದ ಕಿವಿಗೆ ಬಿದ್ದರೆ ಓಹ್ಹೊ... ಕಣ್ಣನ ಬಸ್ಸು ಬಂತು ಗಂಟೆ ಏಳಾಯ್ತು, ಹೊತ್ತಾಯ್ತು ಅಂತ ನಮ್ಮ ಗಡಿಬಿಡಿ ಶುರುವಾಗುತ್ತಿತ್ತು.

ಇನ್ನು ತಿಂಡಿ ತಿಂದು ಶಾಲೆಗೆ ಹೋಗುವ ಗಡಿಬಿಡಿಯಲ್ಲಿ ಗದ್ದೆ ಬಯಲಿನಲ್ಲಿ ಓಡುವಾಗ ಗದ್ದೆ ಬದುಗಳಲ್ಲಿ ಬೆಳೆದ ಹಿಡಿ ಹುಲ್ಲಿನ ಹೂಗಳು, ಅದರ ಮೇಲೆ ಪೋಣಿಸಿದ ಮಂಜಿನ ಮುತ್ತುಗಳು ನಮ್ಮ ಬಟ್ಟೆಗೆಲ್ಲಾ ಮೆತ್ತಿಕೊಂಡು ಮುತ್ತಿಕ್ಕುತ್ತಿದ್ದವು. ಹೀಗೆ ಹೊಸರೊಡ್ಡು ಗದ್ದೆ ಬಯಲಿನಲ್ಲಿ ಓಡುವಾಗ ನಮ್ಮ ಮೈಯ್ಯೆಲ್ಲ ಕಿವಿ. ಸುಮಾರು ಒಂದು ಕಿ.ಮೀ. ದೂರದ ಬ್ರಹ್ಮನ ಉಬ್ಬಿನಲ್ಲಿ ಆ ಬಸ್ಸು ಏದುಸಿರು ಬಿಡುವ ಶಬ್ದ ನಮ್ಮ ಕಿವಿಗೆ ಕೇಳಿಸಿದರೆ ಇವತ್ತು ಬಸ್ಸು ಗ್ಯಾರಂಟಿ ಸಿಗುತ್ತದೆ ಎಂದು ಅರ್ಥ. ಇಲ್ಲವಾದರೆ ಏಳು ಕಿಲೋಮೀಟರ್ ನಡೆದೇ ಶಾಲೆಗೆ ಹೋಗಬೇಕಲ್ಲ!

ಈ ಬಸ್ಸಿನ ಡ್ರೈವರ್ ವೆಂಕಟ್ರಮಣ ಸ್ವಲ್ಪ ಕುಳ್ಳನೆಯ ವ್ಯಕ್ತಿ, ಅವರಿಗೆ ಕ್ಲಚ್ಚು, ಬ್ರೇಕು ಸರಿಯಾಗಿ ಕಾಲಿಗೆ ಸಿಗ್ತಿರಲಿಲ್ಲವಂತೆ. ಆದ್ದರಿಂದ ಆ ಬಸ್ಸಿನ ಶಬ್ದ ಯಾವಾಗಲೂ ಸ್ವಲ್ಪ ಬಿಟ್ಟು ಬಿಟ್ಟು ಉಸಿರಾಡುವ ದಮ್ಮು ರೋಗಿಯ ಉಬ್ಬಸದ ಹಾಗೆ ಇರುತ್ತಿತ್ತು.


ನಮ್ಮೂರಿನಿಂದ ಹಾದು ಹೋಗುವ ಎಲ್ಲಾ ಬಸ್ಸುಗಳಿಗೂ ನಮ್ಮದೇ ನಾಮಕರಣ. ಕಣ್ಣನಗಾಡಿ, ಬೀರೂರ್ ಮಂಜಣ್ಣಗಾಡಿ, ನಾಗಪ್ಪ ಹೆಗ್ಡೇರ್ ಬಸ್, ಗಜಾನನ, ಮಮಿ ಬಸ್ಸು, ಹರಿಶ್ಚಂದ್ರಣ್ಣ ಬಸ್ ಸಿಎಂಟಿ ಮುಂತಾಗಿ ಇಟ್ಟಿದ್ದೆವು. ಒಂದೊಂದು ಬಸ್ಸು ಕೂಡ ನಮ್ಮ ನಿತ್ಯದ ಒಡನಾಡಿಗಳಾಗಿ ಅವುಗಳಿಗೂ ಒಂದೊಂದು ವ್ಯಕ್ತಿತ್ವದ ಆರೋಪಣವಿತ್ತು. ಶಾಲೆಗೆ ಬೇಕಾದ ಪುಸ್ತಕಗಳನ್ನು ತಂದು ಕೊಡುವ ತಿಪ್ಪೇಸ್ವಾಮಿ ಕಂಡೆಕ್ಟರ್, ಅಜ್ಜಿಯ ಬಿ.ಪಿ. ಮಾತ್ರೆಗಳನ್ನು ತಂದುಕೊಡುವ ಕಣ್ಣನ್ ಡ್ರೈವರ್, ಮಕ್ಕಳನ್ನು ಜಾಗ್ರತೆಯಿಂದ ಊರಿಂದೂರಿಗೆ ಕರೆದೊಯ್ಯುವ ಜವಾಬ್ದಾರಿ ಹೊತ್ತ ಡ್ರೈವರ್ ಮಂಜಣ್ಣ, ಏನಾದರೂ ಪಾರ್ಸೆಲ್ ಕೊಟ್ಟರೆ ಬಸ್ಸನ್ನು ಮನೆಯೆದುರೇ ನಿಲ್ಲಿಸಿ ಹಾರನ್ ಮಾಡಿ ಮನೆಯೊಳಗೇ ತಲುಪಿಸುತ್ತಾರೆಂದು ಖ್ಯಾತಿ ಪಡೆದ ನಾಗಪ್ಪ ಹೆಗ್ಡೇರು. ಎಲ್ಲಾ ನಮ್ಮವರೇ. ಕೊನೆಗೆ ಲಾಸ್ಟ್‌ಗಾಡಿ ಹರಿಶ್ಚಂದ್ರಣ್ಣ ಬಸ್ ಬಂದ್ರೆ ಒಂಭತ್ತು ಗಂಟೆಯಾಯ್ತು ಇನ್ನು ಮಲಗುವ ಸಮಯ ಎಂದೇ ಅರ್ಥ. ಆಕಸ್ಮಾತ್ ನಾವು ಎಚ್ಚರವಿದ್ದರೂ 'ಸಾಕ್ ಸಾಕ್ ಓದಿದ ಸಾಕ್ ಹರಿಶ್ಚಂದ್ರ ಬಸ್ ಬಂತು. ಚಿಮಿಣಿ ಕೆಡ್ಸಿ ಮಲ್ಕಳಿ, ಸೊಸೈಟಿಲಿ ಸರಿಯಾಗಿ ಸೀಮೆಎಣ್ಣೆನೂ ಕೊಡಲ್ಲ' ಎಂದು ದೊಡ್ಡವರು ಗದರಿಸುತ್ತಿದ್ದರು. ನಾವೂ ಏನ್ ಅರ್ಧರಾತ್ರಿವರೆಗೆ ನಿದ್ದೆಗೆಟ್ಟು ಓದಿ ರಾಜ್ಯ ಆಳ್ಬೇಕಾ ಎಂದು ಹಾಯಾಗಿ ಕಂಬಳಿ ಹೊದ್ದು ಮಲಗುತ್ತಿದ್ದೆವು. ಹೀಗೆ ಅಂದಿನ ಗಡಿಯಾರಗಳು ಕಮ್ ನಮ್ಮ ಒಡನಾಡಿಗಳೂ ಆಗಿದ್ದ ಬಸ್ಸುಗಳ ಬಗ್ಗೆ ಹೇಳುತ್ತಾ ಹೋದರೆ ಅದೇ ಒಂದು ಕಥಾನಕವಾದೀತು.

ಮೊದಲೆಲ್ಲ ಊರಿಗೆ ಬಸ್ಸು ಬಂದು ಹೋಗುವುದೇ ಒಂದು ಸಂಭ್ರಮ ಮತ್ತು ಅಚ್ಚರಿಯಾದ್ದರಿಂದ ಎಲ್ಲರಿಗೂ ಅವರವರ ಮನೆಯೆದುರೇ ಬಸ್ಸು ನಿಂತರೆ ಏನೋ ಒಂದು ಹೆಮ್ಮೆ! ಹಾಗಾಗಿ ಬಸ್ಸು ಮಾರು ಮಾರಿಗೂ ನಿಲ್ಲುತ್ತಿತ್ತು. ಆದರೆ ಬಸ್ಸಿನ ಸಮಯ ಪಾಲನೆಯಲ್ಲಿ ತುಂಬಾ ಸ್ಟ್ರಿಕ್ಟ್ ಆಗಿದ್ದ ಕಣ್ಣನ್ ಡ್ರೈವರ್ ಮಾತ್ರ ಜನ ಒಂದೇ ಸ್ಟಾಪಿನಲ್ಲಿ ನಿಲ್ಲದೇ ಮಾರು ಮಾರಿಗೂ ನಿಂತು ಕೈ ಅಡ್ಡ ಹಾಕುತ್ತಿದ್ದನ್ನು ಕಂಡು ಬಹಳ ಸಿಟ್ಟು ಮಾಡಿಕೊಳ್ಳುತ್ತಿದ್ದರು. "ಏನು ನೀನು ಕೊಡುವ ಐವತ್ತು ಪೈಸೆಗೆ ನನ್ನ ಐದುನೂರು ರೂಪಾಯಿ ಬ್ರೇಕು ಹಾಳು ಮಾಡಬೇಕೆನ" ಎಂದು ತಮ್ಮ ಮಲೆಯಾಳಿ ಕನ್ನಡದಲ್ಲಿ ಅಬ್ಬರಿಸುತ್ತಿದ್ದರು. ಒಮ್ಮೊಮ್ಮೆ ತುಂಬಾ ಸಿಟ್ಟು ಬಂದರೆ ಸ್ಟಾಪಿನಲ್ಲಿ ನಿಲ್ಲದೆ ಕಂಡಲ್ಲಿ ಕೈ ಅಡ್ಡ ಹಾಕುವವರನ್ನು ಬಿಟ್ಟು ಬರುವುದೂ ಉಂಟು. ಬಸ್ಸು ಬಸ್ಟಾಂಡ್ ಬಿಟ್ಟು ಊರ ಹೊರಗೆ ದಾಟುವವರೆಗೂ ಕಂಡೆಕ್ಟರ್ ಫುಟ್ ಬೋರ್ಡಿನಲ್ಲಿ ನಿಂತು ಆಗಾಗ ಹಿಂದೆ ನೋಡುತ್ತಿರಬೇಕು. ಇಲ್ಲದಿದ್ದರೆ ಕಣ್ಣನ್‌ನ ಬೈಗುಳ ಗ್ಯಾರಂಟಿ. 'ಯಾರಾದರೂ ಬಸ್ಸಿಗಂತ ಓಡಿ ಬರ್ತಿರ್ತಾರೆ. ಸ್ವಲ್ಪ ತಲೆ ಹೊರ್ಗೆ ಹಾಕಿ ನೋಡ' ಎನ್ನದೇ ಬಿಡುತ್ತಿರಲಿಲ್ಲ. ಆದರೆ ಅಂತಹ ಕಣ್ಣನ ಬಸ್ಸು ಶಿವಮೊಗ್ಗ ಸಿಟಿಯಿಂದ ನಮ್ಮೂರ ಬಸ್ಟಾಂಡಿಗೆ ಬಂದು ನಿಂತ ಕ್ಷಣ ನೀವು ನೋಡಬೇಕು. ಅವರ ಅಂಗಿ ತುಂಬ ಜೇಬುಗಳು ಮೇಲೆರಡು, ಕೆಳಗೆರಡು, ಪ್ಯಾಂಟು ಜೇಬು ಎಲ್ಲವೂ ಭರ್ತಿ ಭರ್ತಿ. ಬಸ್ಸು ನಿಂತ ತಕ್ಷಣ ಅವರನ್ನು ಮುತ್ತಿಕೊಳ್ಳುವ ಜನ. "ತೆಗ ಇದು ನಿನ್ನದು, ಇದು ಅವನದು, ಇದು ಅವನಿಗೆ ಕೊಡು, ಇದು ಶ್ಯಾಮನ ಅಂಗಡೀದು, ಇದು ಖಾದ್ರಿಸಾಬ್ರು ಅಂಗಡೀಗೆ" ಎಂದು ಅವರ ಅಂಚೆ ಬಡವಾಡೆ ಶುರುವಾಗುತ್ತಿತ್ತು, ಆತ ತುಂಬಾ ಕಟ್ಟುನಿಟ್ಟಿನ ಮನುಷ್ಯ. ಹಣೆಗೆ ವಿಭೂತಿ, ಮಧ್ಯದಲ್ಲೊಂದು ಗಂಧದ ಬೊಟ್ಟು, ದಪ್ಪಕ್ಕೆ ಹುರಿಗಟ್ಟಿದ ಬಿಳಿ ಮೀಸೆ. ಅವರ ಖಡಕ್ ಇಸ್ತ್ರಿ ಮಾಡಿದ ಖಾಕಿ ಯೂನಿಫಾರಂ ಅದರ ಮೇಲೊಂದು ದೊಡ್ಡ ಮೆಡೆಲ್‌ನಂತಿದ್ದ ಬ್ಯಾಡ್ಜ್, ಅದರಲ್ಲಿ ಏನು ಬರೆದಿತ್ತೋ ಕಡೆಗೂ ಓದಲಾಗಲೇ ಇಲ್ಲ, ಅವರ ಮೇಲಿನ ಭಯಕ್ಕೆ.

ಇನ್ನು ನಾಗಪ್ಪ ಹೆಗ್ಡೇರ್ ಬಸ್ಸೇ ಒಂದು ಮಜ. ಅದಕ್ಕೆ ಸಮಯದ ಹಂಗೇ ಇರಲಿಲ್ಲ, ಬದುಕು ಜಟಕಾ ಬಂಡಿ ಎಂದು ಡಿವಿಜಿಯವರು ಇದೇ ಬಸ್ಸನ್ನು ನೋಡಿ ಬರೆದಿರಬೇಕು! ಅವರಿಗೆ ಜನ ಮಾರು ಮಾರಿಗೆ ಕೈ ಅಡ್ಡ ಹಾಕಿ ನಿಲ್ಲಿಸಿದರೂ ಏನೂ ಬೇಜಾರಿಲ್ಲ, ಸದಾ ಹಸನ್ಮುಖಿಯಾಗಿ ಬಸ್ಸಿಗೆ ಹತ್ತಿದವರೆಲ್ಲರ ಉಭಯ ಕುಶಲೋಪರಿ ವಿಚಾರಿಸುವುದರಲ್ಲಿ ಅವರಿಗೆ ಅತೀವ ಆಸಕ್ತಿ, ಈ ಸಾರಿ ಅಡಿಕೆ ರೇಟು ಏರುತ್ತಾ? ಇಳಿಯುತ್ತಾ? ಭತ್ತ ಯಾವಾಗ ಕೊಟ್ರೆ ಒಳ್ಳೇದು? ಅವರ ಲೈಸೆನ್ಸಿನಲ್ಲಿ ಬರುವ ಮನೆಗಳಲ್ಲಿ ಯಾರ್‍ಯಾರಿಗೆ ಮದುವೆ ಆಗಿದೆಯಾ, ಆಗಿಲ್ಲ? ಮಕ್ಕಳ ಸಮಾಚಾರವೇನು? ಯಾವ ಖಾಯಿಲೆಗೆ ಯಾವ ಡಾಕ್ಟರ್ ಆಗಬಹುದು, ಯಾರ್‍ಯಾರು ಮದುವೆಗೆ ರೆಡಿ ಇದಾರೆ? ಫುಲ್ ಡೀಟೆಲ್ಸ್ ಅವರ ಬಳಿ! ಇಂತಹ ಜನಾನುರಾಗಿ ಹೆಗ್ಡೇರ್ ಒಂದು ದಿನ ಹಾಗೇ ನಸು ನಗುತ್ತಾ ಡ್ರೈವ್ ಮಾಡುತ್ತಿದ್ದವರು ಗಾಡಿಯನ್ನು ಸೈಡಿಗೆ ನಿಲ್ಲಿಸಿ ಸ್ಟೇರಿಂಗ್ ಮೇಲೆ ತಲೆಯಿಟ್ಟು ಕಣ್ಣು ಮುಚ್ಚಿದರೆಂಬ ಸುದ್ದಿ ನನ್ನನ್ನು ಬಹಳ ದಿನಗಳವರೆಗೆ ಕಾಡದೇ ಬಿಡಲಿಲ್ಲ, ನಮ್ಮಜ್ಜಿಯಂತೂ "ಎಂತಾ ಪುಣ್ಯಾತ್ಮ ನೋಡು, ಯಾರಿಗೂ ತೊಂದ್ರೆ ಮಾಡ್ದೆ ಹಾಗೇ ಹೋಗ್ಬಿಟ್ಟ" ಎಂದು. ಊರಿಗೆ ಹೋದಾಗ ಹೇಳಿದ ಮಾತು ಇನ್ನೂ ನೆನಪಿದೆ.

ಅಂದಿನ ಕಾಲದ ಡ್ರೈವರುಗಳಿಗೆ ಮಲೆನಾಡಿನಲ್ಲಿ ಸಿಗುತ್ತಿದ್ದ ರಾಜಮರ್ಯಾದೆಯನ್ನು ಸ್ವತಃ ಓರ್ವ ಡ್ರೈವರ್‌ರ ಮಗನಾಗಿ ನಾನೂ ಕಣ್ಣಾರೆ ಕಂಡಿದ್ದೇನೆ. ಸ್ವಲ್ಪ ಮಟ್ಟಿಗೆ ದ್ರಾವಿಡ ಬಣ್ಣದ ಆಫ್ರಿಕನ್ ಗುಂಗುರು ಕೂದಲಿನ ನನ್ನ ತಂದೆಗೆ ತನ್ನ ಸಹಪಾಠಿಗಳಿಂದ "ಮಿನುಗುತಾರೆ ಕಲ್ಪನಾ" ಎಂದೇ ಕರೆಸಿಕೊಳ್ಳುತ್ತಿದ್ದ ನನ್ನಮ್ಮನನ್ನು ಡ್ರೈವರ್ ಎಂಬ ಒಂದೇ ಕಾರಣಕ್ಕೆ (ಏರೋಪ್ಲೇನ್ ಪೈಲಟ್ ತರ!) ನಮ್ಮಜ್ಜ ಮದುವೆ ಮಾಡಿಕೊಟ್ಟರಂತೆ! (ಅಮ್ಮನ ಮನೆಯ ಹೆಂಗಸರೆಲ್ಲರ ತೀವ್ರ ವಿರೋಧದ ನಡುವೆ) ತಮ್ಮ ಬಸ್ಸಿನಲ್ಲಿ ಓಡಾಡುತ್ತಿದ್ದ ಶಾಲಾ ಮಕ್ಕಳಿಗೆ, ದೂರದೂರಿನಲ್ಲಿ ವ್ಯಾಸಂಗ ಮಾಡುತ್ತಿದ್ದವರಿಗೆ, ಉದ್ಯೋಗದಲ್ಲಿದ್ದವರಿಗೆ ಎಲ್ಲರಿಗೂ ಪರಮಾಪ್ತರಾಗಿ ಬಾಳಿದ್ದ ನನ್ನ ತಂದೆ ತಮ್ಮ ಇಳಿ ವಯಸ್ಸಿನ ದಿನಗಳಲ್ಲಿ "ಈಗ ಯಾರೂ ಡಿಮ್ ಡಿಪ್ ಮಾಡುವುದೇ ಇಲ್ಲ, ಯಾವ ತರ ಡ್ರೈವಿಂಗ್ ಮಾಡ್ತಾರೋ ಏನೋ, ರಾತ್ರಿ ಹೊತ್ತು ಡ್ರೈವಿಂಗ್ ಮಾಡುವಾಗ ಎದುರುಗಡೆ ಗಾಡಿಯ ಹೆಡ್‌ಲೈಟ್ ಕಣ್ಣಿಗೆ ಚುಚ್ಚಿದ ಹಾಗಾಗುತ್ತೆ, ಕಣ್ಣು ಬಿಡುವುದಕ್ಕೇ ಆಗಲ್ಲ" ಎನ್ನುತ್ತಿದ್ದರು. "ನನ್ನಂತವರಿಗೆ ಇನ್ಮುಂದೆ ಡ್ರೈವಿಂಗ್ ಕಷ್ಟ?' ಎಂದು ಒಲ್ಲದ ಮನಸ್ಸಿನಿಂದಲೇ ತಮ್ಮ ಪ್ರೀತಿಯ ಕೆಲಸವನ್ನು ಬಿಟ್ಟುಬಿಟ್ಟರು.

ಮಲೆನಾಡಿನಲ್ಲಿ ಹುಟ್ಟಿ ಬೆಳೆದು ನಾಲ್ಕೈದು ದಶಕಗಳನ್ನು ಕಳೆದಿರುವ ನನಗೆ ಮಲೆನಾಡಿನ ಇಂದಿನ ವಿದ್ಯಮಾನಗಳು ಯುಕ್ತಾಯುಕ್ತ ವಿವೇಚನೆಯಿಲ್ಲದ ಡಿಮ್ ಡಿಪ್ ಮಾಡದ ಹೆಡ್ ಲೈಟಿನ ಬೆಳಕಿನಂತೆಯೇ ಕಣ್ಣು ಚುಚ್ಚುತ್ತಿದೆ. ಕೃಷಿಯಿಂದ ವಿಮುಖರಾಗಿ, ಸಂಬಂಧಗಳೇ ಕಣ್ಮರೆಯಾಗಿ, ಮಲೆನಾಡು ಬರಿದಾಗುತ್ತಿರುವ ಈ ಹೊತ್ತಲ್ಲಿ ನಮ್ಮೆಲ್ಲರ ಆತಂಕವನ್ನು ಅರಿತು ಡಿಮ್ ಡಿಪ್ ಮಾಡುವ ಡ್ರೈವರ್ ಯಾರು ಎಂದು ಹುಡುಕುತ್ತಿದ್ದೇನೆ.




- ಸುಂದರ್, ಶಿವಮೊಗ್ಗ

ಕಂಬಳಿ ಹುಳುಗಳು ಯಾವ ಊರನ್ನು ಹುಡುಕಿಕೊಂಡು ಹೋದವು?

ಅತ್ತ ಪೂರ್ವದಲ್ಲಿ ಬಯಲು ಸೀಮೆ, ಇತ್ತ ಪಶ್ಚಿಮಕ್ಕೆ ಮಲೆನಾಡಿನ ಸೆರಗನ್ನು ಹೊದ್ದ ಹಾಸನ ನನ್ನೂರು. ಆದ್ದರಿಂದ ನಾನು ಮಲೆನಾಡು, ಬಯಲು ಸೀಮೆಗಳೆರಡಕ್ಕೂ ಆನಂದದಿಂದ ಹಂಚಿಹೋಗಿದ್ದೇನೆ.

ಮಲೆನಾಡು ಅಂದ ಕೂಡಲೆ ಬರೆಯುವವರಿಗೆ, ಓದುಗರಿಗೆ ತಟ್ಟನೆ ನೆನಪಿಗೆ ಬರುವುದೇ ಅಲ್ಲಿನ ಕಾಡು, ಮಳೆ, ಬೆಟ್ಟಗುಡ್ಡ ಹಾಗೂ ಅವಕ್ಕೆ ಅಂಟಿಕೊಂಡ ಇತರ ವಿಚಾರಗಳು. ನನಗೆ ಮಲೆನಾಡೆಂದರೆ ನೆನಪಾಗುವುದು ನನ್ನೂರಿನ ವಿಪರೀತ ವೈಪರೀತ್ಯದ ಋತುಗಾಲ.

ನಾನು ಈ ಪ್ರಪಂಚಕ್ಕೆ ಮಗುವಾಗಿ ಕಣ್ಣು ಬಿಟ್ಟದ್ದೇ ಮಲೆನಾಡಿನ ಊರಿನ ಒಂದು ಚಳಿಗಾಲದಲ್ಲಿ, ನನ್ನೂರಿನ ಋತುಮಾನಗಳೂ ಸಂಥಿಂಗ್ ಸ್ಪೆಷಲ್ ಅಂತಾರಲ್ಲ ಹಾಗೆ. ನನ್ನ ಬಾಲ್ಯದ ಚಳಿಗಾಲವನ್ನು ವರ್ಣಿಸಿದರೆ ಅದನ್ನು ಮತ್ತೊಮ್ಮೆ ಅನುಭವಿಸಿದಂತೆ. ಅತ್ಯಂತ ಚಳಿಯ ಜೊತೆಗೆ ಕೊರೆವ ಥಂಡಿ! ಇಂತಹ ಕ್ರೂರ ಚಳಿಗಾಲದಲ್ಲಿ ಬೆಳಗ್ಗೆ ಬೇಗ ಏಳಬೇಕು, ಏಳೂವರೆ ಗಂಟೆಗೆ ಶಾಲೆಗೆ ಓಡಬೇಕು. ಟಾರಿಲ್ಲದ ಧೂಳುಮಯ ಮಣ್ಣಿನ ರಸ್ತೆಯಲ್ಲಿ ಓಡಾಡಿ ಮಕ್ಕಳು, ಮುದುಕರು ಎಲ್ಲರಿಗೂ ಕೈಕಾಲು ಬಿರಿದು, ರಕ್ತ ಒಸರಿ, ಉರಿ ತಡೆದು... ಅದ್ಹೇಗೆ ಅಂತಹ ಅನೇಕ ಚಳಿಗಾಲಗಳನ್ನು ಕಳೆದೆವು? ಆಗ ಹಿರಿಯರು ಹೇಳುತ್ತಿದ್ದರು ಚಳಿಗಾಲದಲ್ಲಿ ಕಾಗೆಯ ರೂಪು ನಮಗಂತೆ, ನಮ್ಮ ರೂಪು ಕಾಗೆಗೆ ಅಂತೆ! ನಾವು ಮಕ್ಕಳು ನಮ್ಮ ಬಾಲ್ಯ ಸಹಜ ಚೇಷ್ಟೆಗಳಿಂದ ಚಳಿಗಾಲದ ಕಿರಿಕಿರಿಗಳನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುತ್ತಿದ್ದೆವು. ಬೇಕು ಬೇಕೂಂತ ತುಟಿಯನ್ನು ಕಿತ್ತು ರಕ್ತ ಬರಿಸಿಕೊಳ್ಳುವುದು, ಉರಿ ತಡೆಯಲಾರದೆ ಮೇಲಿನ ತುಟಿಯನ್ನು ನಾಲಿಗೆಯಿಂದ ಆಗಾಗ್ಗೆ ಸವರಿಕೊಳ್ಳುತ್ತಿದ್ದೆವು. ಚಳಿಗಾಲ ಮುಗಿಯುವಷ್ಟರಲ್ಲಿ ತುಟಿಯ ಮೇಲೊಂದು ಮೀಸೆ ಮೂಡಿರುತ್ತಿತ್ತು! ಗಂಡು



ಹುಡುಗರಿಂದ ಅವಳ ಮೀಸೆ ನೋಡು ಎಂದು ಛೇಡಿಸಿಕೊಳ್ಳಬೇಕಿತ್ತು.

ನನ್ನೂರಿನ ಚಳಿಗಾಲದ ಮತ್ತೊಂದು ಸ್ಪೆಷಲ್ ಎಂದರೆ ಜಾತ್ರೆ, ಸಂತೆಗಳು. ಚಳಿಯಲ್ಲಿ ನಡುಗುತ್ತ ಮಧ್ಯರಾತ್ರಿ ಮೂರು ಘಂಟೆಯವರೆಗೆ ಜಾತ್ರೆಯಲ್ಲಿ ಕ್ಯಾಂಪ್ ಹಾಕಿದ್ದ ನಾಟಕಗಳನ್ನು ನೋಡುತ್ತಿದ್ದುದ್ದೇ ಒಂದು ಅನುಭವ. ಕನ್ನಡದ ರಂಗಭೂಮಿಯ ಸುಪ್ರಸಿದ್ಧ ನಟನಟಿಯರನ್ನು ನಾನು ನೋಡಿದ್ದೇ ನನ್ನೂರಿನ ಚಳಿಗಾಲದಲ್ಲಿ. ಇನ್ನು ಚಳಿಗಾಲದ ಬೆಳಸುಗಳು, ಮುಖ್ಯವಾಗಿ ಕಡ್ಲೆಗಿಡ (ಸೊಪ್ಪಿನ ಕಡಲೆ) ಒಂದಾಣೆಗೆ (6 ಪೈಸೆ) ನಾಲ್ಕು ಕಂತೆಗಳು! ಸುಳ್ಳು ಹೇಳುತ್ತಿರುವೆನೆ? ಇಲ್ಲಾ ಇಲ್ಲಾ, ಕಡ್ಲೆಗಿಡ ತಿನ್ನುತ್ತ ಸ್ನೇಹಿತೆಯ ಜೊತೆ ನಡೆಸಿದ ಬಿಡುಬೀಸು ಬಾಲ್ಯವನ್ನು ನೆನೆಯುತ್ತೇನೆ. ಜೊತೆಗೆ ಇಂದಿಗೂ ನನ್ನೂರಿನ ಚಳಿಗಾಲದ ಸ್ಪೆಷಲ್ ಅವರೆಕಾಯಿ, ಸೊಪ್ಪಿನ ಕಡಲೆ ಜೊತೆಗೆ ರುಚಿಯಲ್ಲಿ ಯಾರೂ ಟಾಂಗ್ ಕೊಡದಂತೆ ಇಂದಿಗೂ ಮೆರೆಯುತ್ತಿರುವುದು ನನ್ನೂರಿನ ರುಚಿರುಚಿಯಾದ ಸೌತೆಕಾಯಿ!

ನನ್ನ ಪ್ರೀತಿಯ ಊರಲ್ಲಿ ಚಳಿಗಾಲ ಕಳೆದು ಬೇಸಿಗೆ ಬಂದಿತು ಎಂದರೆ ತಂಗಾಳಿಯ ಕಾಲ. ಬೇಸಿಗೆಯ ರಾತ್ರಿಗಳಲ್ಲಿ ಹಿತ್ತಲಿನ ಹಟ್ಟಿಯಲ್ಲಿ ಕುಳಿತು ನಕ್ಷತ್ರ ಖಚಿತ ಆಗಸದಡಿಯಲ್ಲಿ ತಾಯಿಯವರೊಡನೆ ಊಟ ಮಾಡುವಾಗ ಬೀಸುವ ತಂಗಾಳಿ. ಎತ್ತರದ ಮಾಡಿನ ಹೆಂಚಿನ ನಮ್ಮ ಮನೆಗೆ ಫ್ಯಾನ್ ಗೊತ್ತಿರಲೇ ಇಲ್ಲ, ತಣ್ಣನೆಯ ರಾತ್ರಿಯಲ್ಲಿ ಸುಖವಾಗಿ ನಿದ್ರಿಸುತ್ತಿದ್ದೆವು. ಆಗ ನಮ್ಮೂರನ್ನು ಬಡವರ ಊಟಿ ಎಂದು ಕರೆಯುತ್ತಿದ್ದರು.

ಬೇಸಿಗೆ ಕಳೆಯುತ್ತಿದ್ದಂತೆ ಮಳೆಗಾಲದ ಪ್ರಾರಂಭ. ಮೊದಲು ಅಡ್ಡ ಮಳೆಗಳು. ಸಿಡಿಲು ಗುಡುಗು, ಕಾರ್ಮೋಡಗಳ ಆರ್ಭಟ. ನಿಧಾನಕ್ಕೆ ಮಳೆಗಾಲ ಕಾಲೂರುತ್ತಿತ್ತು, ಅದರಲ್ಲೂ ಬಗೆ ಬಗೆ, ಪಿರಿಪಿರಿ ಮಳೆ, ಜಿಟಿಜಿಟಿ ಮಳೆ, ಜೊರ್ರೊ ಎಂದು ಸುರಿವ ಮಳೆ, ಕೊಟ್ಟಕೊಟ್ಟ ಎಂದು ಕುಟ್ಟುವ ಮಳೆ, ಕೊನೆಗೆ ಸೋನೆ ಮಳೆ!

ಚಳಿಗಾಲದಂತೆ ಮಳೆಗಾಲವೂ ನಮ್ಮೂರಿನ ಸ್ಪೆಷಲ್. ಮೇಲೆ ಹೇಳಿದ ತರಾವರಿ ಮಳೆಗಳ ಹೊಡೆತದಲ್ಲಿ ಎಲ್ಲ ತರದ ಕೆಲಸಗಳೂ ಸಾಗಬೇಕಿತ್ತು; ಹಳ್ಳಿಗರು ಮಳೆಯಲ್ಲೇ ಪೇಟೆಗೆ ಬರಬೇಕು, ಪಿಚಪಿಚ ಕೆಸರಿನಲ್ಲಿ ನಡೆದಾಡಬೇಕು. ವಾರವಾದರೂ ಒಗೆದ ಬಟ್ಟೆ ಒಣಗಲೊಲ್ಲದು. ಕೆಂಡವಿರುವ ಬಾಂಡಲಿ ಮೇಲೆ ದೊಡ್ಡ ಕುಕ್ಕೆ ದಬ್ಬಾಕಿ ಅದರ ಮೇಲೆ ಬಟ್ಟೆ ಹಾಕಿ ಒಣಗಿಸಬೇಕಿತ್ತು, ಇನ್ನು ಸೌದೆ ಒಲೆ ಹತ್ತಿಸುವುದೊಂದು ಮಹಾಸಾಹಸ! ಇಂತಹ ಶೀತಲ ವಾತಾವರಣದಲ್ಲೂ ಮಕ್ಕಳಾದ ನಮಗೆ ಏನೋ ಹುಮ್ಮಸ್ಸು. ಮಳೆಗಾಲಕ್ಕೆ ಹೊಸ ಸ್ವೆಟರ್, ಛತ್ರಿ, ಬ್ಯಾಗುಗಳನ್ನು ಖರೀದಿಸುವ ತವಕ. ಮಳೆ ಶೀತಗಳಲ್ಲಿ ಸೌದೆ ಒಲೆ ಮುಂದೆ ಕುಳಿತು ಬೆಂಕಿ ಕಾಯಿಸುತ್ತ ಕಾಫಿ ಕುಡಿವ ಮಜಾ. ನಮ್ಮ ಕಾಲದ ಮಳೆಗಾಲದ ಮತ್ತೊಂದು ಪೀಡೆ ಎಂದರೆ ಕಂಬಳಿ ಹುಳುಗಳು. ಹೆಂಚುಗಳ ಸಂದಿಗೊಂದಿಗಳಲ್ಲಿ ಚಿಟ್ಟೆಗಳು ಅದ್ಯಾವಾಗ ಮೊಟ್ಟೆಯಿಟ್ಟುರುತಿದ್ದವೋ! ಮಳೆಗಾಲದಲ್ಲಿ ಯಾವಾಗೆಂದರೆ ಅವಾಗ ನಮ್ಮರಿವಿಲ್ಲದೆ ಬೆನ್ನಿನ ಮೇಲೆ ಬಿದ್ದಿರುತ್ತಿದ್ದ ಬಿಳಿ ಸುಂಕಂಬಳಿ ಹುಳುಗಳು! ಇವುಗಳನ್ನು ರಾಶಿರಾಶಿ ಗುಡಿಸಿ ಹಾಕುತ್ತಿದ್ದರು. ಅವುಗಳ ಬಿರುಗೂದಲುಗಳು ಚರ್ಮಕ್ಕೆ ಅಂಟಿಬಿಟ್ಟರೆ ಸಹಿಸಲಸಾಧ್ಯವಾದ ಉರಿ, ಕಂಬಳಿಯಿಂದ ಉಜ್ಜುವ ಟ್ರೀಟ್‌ಮೆಂಟ್.

ನನ್ನೂರಿನ ಋತುಗಳ ವಿಪರೀತ ಆಟಾಟೋಪಕ್ಕೆ ಹೆದರಿ ನಮ್ಮ ಕೆಲವು ನೆಂಟರು ನಮ್ಮೂರಿಗೆ ಬರಲು ಹಿಂಜರಿಯುತ್ತಿದ್ದರು. ಒಮ್ಮೆ ಮಳೆಗಾಲದಲ್ಲಿ ನನ್ನ ಅಜ್ಜಿ ಒಬ್ಬರು ಬೆಳಗಿನ ರೈಲಿನಲ್ಲಿ ನಮ್ಮನೆಗೆ ಬಂದರು. ಮಳೆಥಂಡಿಗಳ ಹೊಡೆತ ತಾಳಲಾರದೆ ಅಡಿಗೆಮನೆ ಒಲೆ ಮುಂದೆ ಕುಳಿತೇ ಕಾಲ ಹಾಕಿದರು. ಇನ್ನು 'ಇಲ್ಲಿ ನನಾಗಲ್ಲ ಕಣವ್ವಾ' ಎಂದದ್ದೇ ಸಂಜೆ ನಾಲ್ಕು ಗಂಟೆಯ ರೈಲಿಗೆ ಮೈಸೂರಿಗೆ ಹೊರಟೇ ಹೋದರು.

ದಶಕಗಳ ಹಿಂದೆ ಋತುಮಾನಗಳ ಚಕ್ರದಲ್ಲಿ ಹೀಗೆಲ್ಲಾ ವೈವಿಧ್ಯಮಯವಾಗಿ ಕಾಣುತ್ತಿದ್ದ ಮಲೆನಾಡಿನ ನನ್ನೂರಿನ ಚಿತ್ರ ಇಂದು ಎಲ್ಲ ಊರುಗಳೊಡನೆ ಒಂದಾಗಿ ಅರೆಬರೆ ಮಾಸಿದ ಬಣ್ಣದ ಚಿತ್ರದಂತಿದೆ. ಅಂದು ಕಣ್ಣಿಗೆ, ಬಾಯಿಗೆ ಸೊಂಪಾಗಿ ಕಾಣುತ್ತಿದ್ದ ಅತ್ತಿ ನೇರಳೆ ಮರಗಳ ಸಾಲು ಇಂದು ಹುಡುಕಿದರೆ ಅಲ್ಲೊಂದು ಇಲ್ಲೊಂದು ಕಂಡ್ಯಾವು. ನನ್ನೂರಿನ ತಂಗಾಳಿ ಇರಲಿ, ಹುಟ್ಟಿ ಕಪ್ಪು ಕಂಬಳಿ. ಹುಳುಗಳು ಅದ್ಯಾವ ಊರನ್ನು ಹುಡುಕಿಕೊಂಡು ಹೋದವೋ?



-ಪದ್ಮ ಶ್ರೀರಾಮ್

ಮಲೆನಾಡ ಹೆಣ್ಣ ಮೈ ಬಣ್ಣ ಓಕೆ, ಆದರೆ ನಡು ತುಸು ದಪ್ಪ!

'ಮಲೆನಾಡ ಹೆಣ್ಣ ಮೈ ಬಣ್ಣ... ' ಬಣ್ಣವೇನೋ ಸರಿ. ಆದರೆ 'ಆ ನಡು ಸಣ್ಣ' ಎಂಬ ಸಿನಿಮಾ ಹಾಡಿನ ಪಲ್ಲವಿಗೆ ಅಪವಾದವೆಂಬಂತೆ ನನ್ನ ಪ್ರೀತಿಯ ಮಲೆನಾಡು ಶಿವಮೊಗ್ಗದಲ್ಲಿ ನನ್ನ ಕಣ್ಣಿಗೆ ಬರೀ ದಪ್ಪ ಸೊಂಟದವರೇ ಕಂಡಿದ್ದನ್ನು ಕಂಡಹಾಗೇ ಹೇಳುತ್ತಿದ್ದೇನೆ. ಬಹುಶಃ ನನಗೆ ದೃಷ್ಟಿ ದೋಷವಿದೆಯೆಂದು ನನ್ನವಳ ಅಂಬೋಣ. ಇರಲಿ, ಬರಗೆಟ್ಟ ಬಯಲುಸೀಮೆಯವರಾದ ನಮಗೆ ಮಲೆನಾಡು, ಅಲ್ಲಿನ ಗಿರಿ-ಕಂದರಗಳ ರಮಣೀಯತೆ, ಸೃಷ್ಟಿ-ಸೌಂದರ್ಯದ ಸೊಬಗುಗಳ ಬಗ್ಗೆ ಆಂತರ್ಯದಲ್ಲಿ ಹೊಟ್ಟೆಯುರಿ ಇದ್ದರೂ ಅವಕಾಶ ಸಿಕ್ಕಾಗಲೆಲ್ಲಾ ಮಲೆನಾಡಿನ ಆತಿಥ್ಯ ಸವಿದವರೇ. ಕವಿ ನಿಸಾರ್ ಅಹಮದ್‌ರ ಜೋಗದ ಸಿರಿ ಬೆಳಕಿನಿಂದ ಹಿಡಿದು ಸಾಗರ್, ತೀರ್ಥಹಳ್ಳಿ, ಶೃಂಗೇರಿ, ಕಳಸ, ಹೊರನಾಡು, ಕುದುರೆಮುಖ, ಕೆಮ್ಮಣ್ಣುಗುಂಡಿ, ಚಿಕ್ಕಮಗಳೂರಿನ ಬಾಬಾಬುಡನ್‌ಗಿರಿ ಮತ್ತು ಶಿವಮೊಗ್ಗದವರೆಗಷ್ಟೇ ನನ್ನ ಮಲೆನಾಡಿನ ಪಯಣ ಈವರೆಗೆ ನಡೆದಿದೆ.

ಮಲೆನಾಡಿನ ಮಳೆಯ ಸಿಂಚನ-ಸೆಳಕು ನಮಗೆ ಅಪರೂಪದ್ದಾದರೂ, ಆ ಸೊಬಗನ್ನು ಸವಿಯಲು ಹಲವಾರು ಬಾರಿ ನಮ್ಮ ಪಟಾಲಂನೊಂದಿಗೆ ಮಲೆನಾಡಿಗೆ ಲಗ್ಗೆ ಇಟ್ಟದ್ದು, ಜಿಗಣೆಗಳಿಂದ ಕಚ್ಚಿಸಿಕೊಂಡಿದ್ದು ನಮ್ಮ ಚರಿತ್ರೆಯ ಭಾಗವಾಗಿದೆ.

ಚಳವಳಿಗಳ ತವರೂರು. ಸಮಾಜವಾದಿಗಳ ನೆಲೆವೀಡಾಗಿದ್ದ ಮಲೆನಾಡು ಇತ್ತೀಚೆಗೆ ಚೆಡ್ಡಿ-ಚತುರರ ಕೈವಶವಾಗಿದ್ದು ಈ ಕಾಲಘಟ್ಟದ ದುರಂತದಂತೆ ಭಾಸವಾಗುತ್ತಿದೆ. ಕುವೆಂಪು, ಲಂಕೇಶ್, ಗೋಪಾಲಗೌಡರು, ಅನಂತಮೂರ್ತಿ, ಗಣಪತಿಯಪ್ಪ ಮತ್ತು ತಮ್ಮೆಲ್ಲ ಇತಿಮಿತಿಗಳ ನಡುವೆಯೂ ಜನಪರವಾಗಿದ್ದ ಜೆ.ಎಚ್. ಪಟೇಲ್, ಬಂಗಾರಪ್ಪ ರುದ್ರಪ್ಪ, ಕಡಿದಾಳು ಶಾಮಣ್ಣ ಮತ್ತು ಕಾಗೋಡು ತಿಮ್ಮಪ್ಪರಂತಹ ಜನನಾಯಕರ ಛಾಪು ಮರೆ-ಮಾಸುವಂತೆ ಇತ್ತೀಚಿಗಿನ ಕೆಲ ಕಚ್ಚೆ ಹರುಕ, ಶೋಕೀಲಾಲ, ರೆಸಾರ್ಟ್ ರಸಿಕ, ನೆಲಗಳ್ಳ ಗೂಂಡಾ ಶಾಸಕ, ಮಂತ್ರಿಗಳು ಮಾತೆತ್ತಿದರೆ ಕೈ ಕಟ್, ಕಾಲ್ ಕಡಿ ಎಂದು ಸೀಟಿ ಊದುವ ಅಪ್ಪಗಳು ನನ್ನ ಪ್ರೀತಿಯ ಮಲೆನಾಡನ್ನು ಗಬ್ಬೆಬ್ಬಿಸಿದ್ದಾರೆ ಎಂದು ವಿಷಾದದಿಂದ ಹೇಳುತ್ತಿದ್ದೇನೆ.

ಉಡುತಡಿಯ ಶಿವಶರಣೆ ಅಕ್ಕ ಮಹಾದೇವಿ, ಕೆಳದಿ ಚೆನ್ನಮ್ಮನಂತವರ ಚರಿತ್ರೆಗೂ ಕಳಂಕ ತರುವ ರೀತಿಯಲ್ಲಿ ಹಿಂದೂ-ಮುಂದೂ ಗೊತ್ತಿಲ್ಲದ, ಹಿಂದೂ ಧರ್ಮ ಸಂರಕ್ಷಣೆಯ ಗುತ್ತಿಗೆ ಹಿಡಿದಿರುವಂತೆ ಮಂಗಾಟವಾಡುತ್ತಿರುವ ಚೆಡ್ಡಿ-ಮಂಗಗಳು ಮಲೆನಾಡನ್ನು ತಮ್ಮ ಆಡೊಂಬಲವಾಗಿಸಿದ್ದಾರೆ. ಭಜರಂಗಿ, ಹಿಂಜಾವೇ ಮತ್ತಿತರ ರಾಮ-ಕಪಿ ಸೇನೆಗಳ ಅಟ್ಟಹಾಸಗಳನ್ನು ಕರ್ನಾಟಕ ಕೋಮು ಸೌಹಾರ್ದ ವೇದಿಕೆ ಮತ್ತು ಲಂಕೇಶ್ ಬಳಗ ಸಮರ್ಥವಾಗಿ ವಿರೋಧಿಸುವ ಮೂಲಕ ನನ್ನ ಪ್ರೀತಿಯ ಮಲೆನಾಡನ್ನು ರಕ್ಷಿಸುತ್ತಿವೆ ಎಂದು ಹೆಮ್ಮೆಯಿಂದ ದಾಖಲಿಸುತ್ತಿದ್ದೇನೆ.

ಇಷ್ಟೆಲ್ಲಾ ಸಂಭ್ರಮ-ವಿಷಾದಗಳ ನಡುವೆ ಒಂದು ತಮಾಷೆಯ ಸಂಗತಿ ಕತ್ತೆ ಮತ್ತು ಹಂದಿಗಳಿಗೆ ಸಂಬಂಧಪಟ್ಟಿದ್ದು. "ನಿಮ್ಮೂರಿಗಿಂತ ನಮ್ಮೂರು ಸ್ವಚ್ಛ, ಸುಂದರ. ಕತ್ತೆ ಎಂಬ ಪ್ರಾಮಾಣಿಕ ಪ್ರಾಣಿಯ ಪರಿಚಯವೇ ನಮಗಿಲ್ಲ" ಎಂದೇ ಮಲೆನಾಡಿನ ಮದುಮಕ್ಕಳು ನನ್ನನ್ನು ನಂಬಿಸಿದ್ದರು. ಕಾಕತಾಳೀಯವ್ರೋ ಅಥವಾ ಮಲೆನಾಡಿನ ಮಿಥ್ಯೆಗಳ ಮುಂದುವರೆದ ಭಾಗವ್ರೋ ಎಂಬಂತೆ ನಾನು ಮದುವೆಯಾದ ಹೊಸತರಲ್ಲಿ ಶಿವಮೊಗ್ಗಕ್ಕೆ ಬಂದಿಳಿದಾಗ ಬೆಳ್ಳಂಬೆಳಗ್ಗೆ ನನ್ನನ್ನು ಸ್ವಾಗತಿಸಿದ್ದು ತಮ್ಮ ಸುಮಧುರ ಕಂಠ ಮಾಧುರ್ಯದ ಗಾರ್ಧವ ತಂಡ ಮತ್ತು ರೇಲ್ವೆ ಸ್ಟೇಷನ್‌ನ ಎದುರಿನ ಸರೋವರದಲ್ಲಿ ವಿಹರಿಸುತ್ತಿದ್ದ ವರಾಹ-ಮಿಹಿರಗಳು!

ಕೊನೆಯದಾಗಿ ಶಿವಮೊಗ್ಗದವಳಾದ ನನ್ನವಳ ಬಣ್ಣ ಓ.ಕೆ, ಆದರೆ ನಡು ತುಸು ದಪ್ಪಾನೇ ಎನ್ನುತ್ತಾ ಮಲೆನಾಡು ನಿತ್ಯ ಹರಿದ್ವರ್ಣ ಕಾಡುಗಳಿಂದ ಕಂಗೊಳಿಸುತ್ತ ಮಾನವತೆಗೆ, ಕೋಮು-ಸೌಹಾರ್ದತೆಗೆ ಸ್ಫೂರ್ತಿ ಸೆಲೆಯಾಗಿರಲಿ, ಸಕಲ ಜೀವರಾಶಿಗಳ ಬದುಕನ್ನು ಹಸನಾಗಿಸುತ್ತಿರಲಿ ಎಂದು ಆಶಿಸುವೆ.

- ಬಸವರಾಜ್ ಎಸ್.ಹೆಚ್, ಬೆಂಗಳೂರು

ಸಗ್ಗದ ಬಾಗಿಲು ಇಲ್ಲಿಹುದಣ್ಣಾ

ಮಲೆನಾಡಿನ ಹೃದಯ ಭಾಗವಾದ ತೀರ್ಥಹಳ್ಳಿ ತಾಲ್ಲೂಕಿನ ಕುಪ್ಪಳ್ಳಿ ಸಮೀಪದ ಪುಟ್ಟ ಊರಾದ ಹೇರಂಭಾಪುರ ನನ್ನೂರು. ಸದಾ ಸಮೃದ್ಧಿಯ ತವರೂರು, ಹಚ್ಚ ಹಸಿರಿನ ಕಾಡು, ಮುಗಿಲೆತ್ತರದ ಮರ, ಅಡಿಕೆ, ತೆಂಗು, ಬಾಳೆ, ಏಲಕ್ಕಿ, ಮಾವು, ಮಲ್ಲಿಗೆ, ಪಕ್ಷಿ ಸಂಕುಲ, ಪ್ರಾಣಿ ಸಮೂಹ, ಮುಗ್ಧ ಮನಸ್ಸಿನ ಜನರೇ ಜೀವಿಸಿರುವ ಮಲೆನಾಡನ್ನು ಪ್ರೀತಿಸದವರು ಯಾರು?

ಕರಾವಳಿಯಲ್ಲಿ ನೆಲೆನಿಂತ ನನ್ನನ್ನು ಸದಾ ಕಾಡುವುದು ಮಲೆನಾಡಿನ ಮಳೆಗಾಲ. ಹಾಗಾಗಿ ನಾನು ಮಲೆನಾಡನ್ನು ಮಳೆನಾಡೆಂದು ಕರೆಯಲು ಇಚ್ಛಿಸುತ್ತೇನೆ. ಮಳೆಗಾಲ ಆರಂಭವಾಗುವ ಮೊದಲೇ ಮಲೆನಾಡಿಗರು ಕಟ್ಟಿಗೆ, ಹುಲ್ಲು, ದರಗು, ಸಾಂಬಾರು ಪದಾರ್ಥಗಳಾದ ವಾಟೆಹುಳಿ, ಕಾಳುಮೆಣಸು, ಕಾಡುಜೀರಿಗೆ, ಒಣಗಿಸಿದ ಜೀರಿಗೆ, ಮೆಣಸು, ಇತ್ಯಾದಿ ವಸ್ತುಗಳ ಸಂಗ್ರಹ ಕಾರ್ಯದಲ್ಲಿ ನಿರತರಾಗುತ್ತಾರೆ. ಈ ಸಂಭ್ರಮವೇ ರೋಮಾಂಚಕ.

ಸದಾ ಜಿನುಗುವ ಮಳೆ, ಕೊರೆಯುವ ಚಳಿಯಲ್ಲಿ ವಿದ್ಯುತ್ ಬೆಳಕು ಇಲ್ಲದ ರಾತ್ರಿಗಳೇ ಹೆಚ್ಚು, ಆ ಕರಾಳ ಕತ್ತಲು ರಾತ್ರಿಯಲ್ಲಿ ದೀಪದ ಬೆಳಕಿನಲ್ಲಿ ಪ್ರಕೃತಿ ನೋಡಲು ಹಾತೊರೆಯುವರಿಗೆ ಆ ದೃಶ್ಯಗಳು ಭಯಂಕರ ಮತ್ತು ವಿಸ್ಮಯ. 'ಕಾರೇಡಿಯ ಸಾರಿನ' ಊಟ ಮಾಡಿ ರಾತ್ರಿ ಮಲಗಿದವರಿಗೆ ಆಗೊಮ್ಮೆ ಈಗೊಮ್ಮೆ ಮಿಂಚಿನ ಬೆಳಕು, ಗುಡುಗಿನ ಆರ್ಭಟ, ಮನೆಯ ಹಿಂದೆ ಮುಂದೆ ಮರಗಳ ರೆಂಬೆ ಕೊಂಬೆಗಳು ಮುರಿದು ಬೀಳುವ ಖಟ್‌ಖಡಿಲ್ ಎಂಬ ಶಬ್ದ, ಮಂಡೂಕರಾಯನ ಗಾಯನ, ಜೀರುಂಡೆಯ ಝೇಂಕಾರಗಳೊಂದಿಗೆ ಕಳೆಯುವ ರಾತ್ರಿಯಲ್ಲಿ ಎಂತಹ ಚಿಂತಾಕ್ರಾಂತವಾದ ಮನಸ್ಸನ್ನೂ ನಿದ್ರಾದೇವಿ ಬರಸೆಳೆದು ಅಪ್ಪಿಕೊಳ್ಳುತ್ತಾಳೆ.

ಮುಂಜಾನೆ ಮನೆಯಿಂದ ಹೊರ ಬಂದರೆ ಅದೇ ತುಂತುರು ಮಳೆ, ಸುಳಿಗಾಳಿ, ನೆಲದ ಕಮ್ಮನೆ ಘಾಟು ಸುವಾಸನೆ, ಪಕ್ಷಿಗಳ ಗಾನ ಗಂಧರ್ವ, ಅಲ್ಲಲ್ಲಿ ಕಿಚಿಪಚಿ ಕೆಸರು... ಸೂರ್ಯದೇವನು ತನ್ನ ಸೋಮಾರಿತನದಿಂದ ನಿಧಾನಕ್ಕೆ ಎದ್ದು ತಡವಾಗಿ ತನ್ನ ದರ್ಶನ ಕೊಡುತ್ತಾನೆ. ಆ ಮಳೆ ಚಳಿಯಿಂದ ತಪ್ಪಿಸಿಕೊಳ್ಳಲು ಹಂಡೆ ಒಲೆಯ ಮುಂದೆ ಮೈ ಕಾಯಿಸುತ್ತ ಕುಳಿತರೆ ಸಮಯ ಸರಿದದ್ದೆ ತಿಳಿಯುವುದಿಲ್ಲ. ಹಾಗಾಗಿ ಮಲೆನಾಡೆಂದರೆ ನನಗೆ ಪ್ರಿಯವಾದದ್ದು ಮಳೆಗಾಲ.

ಇನ್ನು ಚಳಿಗಾಲ ಬಂತೆಂದರೆ ವಿಪರೀತ ಕೊರೆಯುವ ಚಳಿ ಮತ್ತು ದಟ್ಟವಾದ ಹಿಮ. ಈ ಸಮಯದಲ್ಲಿ ಆಗುಂಬೆಯಲ್ಲಿ ಪ್ರಯಾಣಿಸುವವರಿಗೆ ಹಿಮಾಲಯದಲ್ಲಿದ್ದ ಅನುಭವ ಉಂಟಾಗುತ್ತದೆ. ಮುಂಜಾನೆ ರಸ್ತೆಯಲ್ಲಿ ಪಯಣಿಸಲು ಹೊರಟವರ ತಲೆಯ ಮುಂಗುರುಳು, ಕಣ್ಣರೆಪ್ಪೆಯ ಮೇಲೆಲ್ಲ ಪ್ರಕೃತಿಯೇ ಮುತ್ತಿನ ಹನಿಗಳನ್ನು ಪೋಣಿಸಿ ಕಳುಹಿಸುವ ಚಿತ್ತಾರವೇ ಅದ್ಭುತ. ಉರಿ ಬಿಸಿಲಿನ ಬೇಸಿಗೆಯಲ್ಲಿ ಬಂದವರಿಗೆ ತಂಪನ್ನು ನೀಡುವ ಮಲೆನಾಡು ಸಗ್ಗದ ಬೀಡು.

ಇಂತಹ ಮಲೆನಾಡಿನ ಜನರ ಭಾಷೆ ಮತ್ತು ಸಂಸ್ಕೃತಿ ವಿಭಿನ್ನ. ಇಲ್ಲಿಯ ಆಡುಭಾಷೆಗೆ ತನ್ನದೆ ಆದ ಸೊಗಡಿದೆ. ಪ್ರತಿ ಪದವನ್ನು ಎಳೆದು ದೀರ್ಘವಾಗಿ ಹೇಳುವ ಶೈಲಿ ಮಗುವಿನ ಜೋಗುಳದಂತೆ ಇಂಪಾಗಿ ಕೇಳಿಸುತ್ತದೆ. ಮಾತಿಗೆ ಮೊದಲೇ 'ಹೊಯ್ ಬಂದು ಕಥೆ ಗೊತ್ತಾ?' ಎಂಬ ಪ್ರಶ್ನೆಯೊಂದಿಗೆ ನಡೆದ ಚಿಕ್ಕ ಘಟನೆಯನ್ನೋ, ಕಾಲ್ಪನಿಕ ಸಂಗತಿಗಳನ್ನೋ ಕಣ್ಣಿಗೆ ಕಟ್ಟುವಂತೆ ಸಹಜವಾಗಿ ಹೇಳುತ್ತಾರೆ ಇಲ್ಲಿನ ಜನ. ಬಹುಶಃ ಕವಿರಾಜಮಾರ್ಗಕಾರನ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್' ಎಂಬುದು ಮಲೆನಾಡಿಗರನ್ನು ಕುರಿತೇ ಹೇಳಿದಂತಿದೆ.

ಮಲೆನಾಡಿನ ಬೆಟ್ಟ-ಗುಡ್ಡ, ಪ್ರಕೃತಿ ಸೌಂದರ್ಯದ ರಮಣೀಯ ಪ್ರವಾಸಿ ತಾಣಗಳು, ಭಾಷೆ, ಉಡುಗೆ, ತೊಡುಗೆ, ಕಲೆ, ಸಂಸ್ಕೃತಿ, ಆಹಾರ, ಪಾನೀಯ ಪ್ರತಿಯೊಂದೂ ವೈವಿಧ್ಯವೇ. ಮಲೆನಾಡ ಕಡಬು, ಗೆಡ್ಡೆಗೆಣಸುಗಳ ತಿನಿಸು, ಕಾಡು ಪ್ರಾಣಿಯ ವಿವಿಧ ಬಗೆಯ ಭಕ್ಷ್ಯ ಭೋಜನ 'ಬಲ್ಲವನೆ ಬಲ್ಲ ಬೆಲ್ಲದ ರುಚಿಯ' ಎಂಬ ಗಾದೆಯಂತೆ ಮಲೆನಾಡ ಸುಗ್ರಾಸ ಭೋಜನ ಸವಿದವರಿಗೆ ಇದರ ಅರ್ಥ ವೇದ್ಯವಾಗುವುದು.

ಜಾಗತೀಕರಣದ ಈ ದಿನಗಳಲ್ಲಿ ಮಲೆನಾಡ ಪ್ರಾಂತ್ಯದಲ್ಲಿ ವಿಶೇಷವಾಗಿ ದೀಪಾವಳಿ, ಭೂಮಿಹುಣ್ಣಿಮೆ, ಹುತ್ತರಿಹಬ್ಬ ಅಂಟಗಿ-ಪಿಂಟಗಿ, ಕೋಲಾಟ ವಿವಿಧ ರೀತಿಯ ವೇಷಧಾರಿಗಳ ನೃತ್ಯ ವೈವಿಧ್ಯತೆಗಳು ಇಂದಿಗೂ ನಡೆದುಕೊಂಡು ಬರುತ್ತಿರುವುದು ಮಲೆನಾಡಿಗರ ಸಂಸ್ಕೃತಿಯ ಪ್ರತಿಬಿಂಬವಾಗಿದೆ.


ಕನ್ನಡನಾಡು ನುಡಿಗೆ ಅನೇಕ ಕವಿ, ಕಲಾವಿದರು, ವಿಚಾರವಾದಿಗಳು, ರಾಜಕಾರಣಿ, ಮಹಾನೀಯರನ್ನು ಕೊಡುಗೆಯಾಗಿ ನೀಡಿದ ಮಲೆನಾಡು ಸದಾ ನೆಮ್ಮದಿಯ ತಾಣವಾಗಿದೆ ಎಂದರೆ ಅತಿಶಯೋಕ್ತಿಯಲ್ಲ, ಕುವೆಂಪು 'ಸಗ್ಗದ ಬಾಗಿಲು' ಎಂಬ ಕಾವ್ಯದಲ್ಲಿ ಸಗ್ಗದ ಬಾಗಿಲು ಎಲ್ಲಿಹುದಣ್ಣಾ? ಎಂಬ ಪ್ರಶ್ನೆಗೆ ಉತ್ತರಿಸುತ್ತ ಹಕ್ಕಿಯ ಟುವ್ವಿ, ರೈತನ ನೇಗಿಲು, ಅರಳುವ ಹೂವುಗಳಲ್ಲಿದೆ ಎನ್ನುತ್ತಾರೆ. ಅದನ್ನು ನಾನು ಹೀಗೆ ಹೇಳುತ್ತೇನೆ. ಸಗ್ಗದ ಬಾಗಿಲು ಇಲ್ಲಿಹುದಣ್ಣಾ ಬಂದವರಿಗೆಲ್ಲ ಹಸಿರಿನ ಕಣ್ಣು, ಶಾಂತಿಯ ನಾಡಿದು, ಮಮತೆಯ ಬೀಡಿದು, ಈ ಮಲೆನಾಡಿದು ಸಗ್ಗದ ಬಾಗಿಲು. ಹಾಗಾಗಿ ನನ್ನ ಪ್ರೀತಿಯ ಮಲೆನಾಡು ಭೂಮಿಯ ಮೇಲಿನ ಸ್ವರ್ಗ.



ಇನ್ನೊಂದು ಜನುಮವಿದ್ದರೆ ನಾನು ಜನಿಸಲಿ ಈ ಮಲೆನಾಡಿನಲ್ಲಿ, ಇದೇ ಗಾಳಿ, ಮಳೆ, ಉರಿಬಿಸಿಲ ಚಳಿಯಲಿ ಬೈರ, ನಾಗಿಯಂತೆ ವನ ಬನಗಳಲ್ಲಿ ನನ್ನ ಬಾಲ್ಯ ಕಳೆಯಲಿ, ಪ್ರಕೃತಿಯ ಮಗುವಾಗಿ ಪ್ರಕೃತಿಯದೇ ಈ ದೇಹ ಲೀನವಾಗಲಿ.

ಪೂರ್ಣಿಮ ಹೆಚ್.ಪಿ, ತೀರ್ಥಹಳ್ಳಿ

ಬೇಟೆಗಳು ಮಾಯವಾಗಿ ಫಾರಂ ಕೋಳಿಗಳು ಬಂದಿವೆ



ಮಲೆನಾಡು ಎಂದೊಡನೆ ನೆನಪಾಗುವುದು ಮಳೆ ಮತ್ತು ಕಾಡು. ದಟ್ಟವಾಗಿರುವ ಕಾಡಿನಿಂದಲೇ ಇಲ್ಲಿ ಹೆಚ್ಚು ಮಳೆಯಾಗುತ್ತಿತ್ತು, ಕಾಡಿನಲ್ಲಿರುವ ನಂದಿ, ನೇರಲು, ಹುನಾಲು, ಮತ್ತಿ, ದೇವದಾರು, ಬೀಟೆ, ಹೊನ್ನೆ, ಕರಿ ಬಸರಿ, ಬಿಳಿ ಬಸರಿ, ಮುತ್ತುಗ, ಮಾವು, ಹುಣಸೆ, ಹಲಸು ಒಂದೆ ಎರಡೇ, ಮುಳ್ಳಿನ ಮರಗಳಂತೂ ನೋಡಿದರೆ ಭಯವಾಗಬೇಕು. ಕಾರೆ, ಮಲ್ಡಿ ಮುಳ್ಳು, ಕವಳಿ ಮುಳ್ಳು ಹಾಗೆಯೇ ಕವಳಿ, ನೇರಲ, ಮುಳ್ಳು, ಸಂಪೆ, ನುರುಕಲು, ಹುಳಿ ಮಾವು. ಕಾಡಿನಲ್ಲಿ ಸುತ್ತಿ ಸುಳಿದು ಬಂದರೆ ಸಾವಿರ ಜಾತಿಯ ಮರಗಳು, ನೂರಾರು ಹಣ್ಣುಗಳು, ನಾನಾ ಬಗೆಯ ಹೂಗಳು. ಅದು ಕಾಡಲ್ಲ ವನದೇವಿಯ ಒಡಲಲ್ಲಿ ಪಡಿಮೂಡಿದ ಸೃಷ್ಟಿಯ ವೈಚಿತ್ರ್ಯಗಳು.

ಮನುಷ್ಯನ ಪಾದದಂತೆ ಕಂಡು ಬರುವ ಜಂಬೆ ಕಾಯಿ ಮತ್ತು ಅದರ ರುಚಿ ತಿಂದವರಿಗೆ ಮಾತ್ರ ಗೊತ್ತು, ಕಾಡಲ್ಲಿ ಸಿಗುವ ಗೆಡ್ಡೆ ಗೆಣಸು, ಮುತ್ತುಗ, ಬೂರಲ, ಮದುವಣಗಿತಿಯಂತೆ ಹೂ ಮುಡಿದು ನಿಲ್ಲುವ ಮಾವಿನ ಮರಗಳು, ಇವು ಕೇವಲ ಮರಗಳಾಗಿರದೆ ಸಾವಿರಾರು ಪ್ರಾಣಿ ಪಕ್ಷಿಗಳ ತಾಣವೂ ಆಶ್ರಯದಾತವೂ ಆಗಿದ್ದ ಮರಗಿಡಗಳಿಂದಲೇ ಇದಕ್ಕೆ ಮಲೆನಾಡು ಎನ್ನುತ್ತಿದ್ದರು. ಇಂತಹ ತಪೋಭೂಮಿಯಲ್ಲಿ ಹುಟ್ಟಿದ್ದರಿಂದಲೇ ಇರಬೇಕು ಕವಿ ಕುವೆಂಪುರವರು "ಹೋಗುವೆನು ನಾ, ಹೋಗುವೆನು ನಾ ಮಲೆಯ ನಾಡಿಗೆ" ಎಂದು ಕಾತುರದಿಂದಲೇ ಹೇಳಿದ್ದು.



ದಟ್ಟವಾದ ಕಾಡು ಇದ್ದಮೇಲೆ ಕಾಡನ್ನು ಆಶ್ರಯಿಸಿದ ಪ್ರಾಣಿಗಳು ಇರಲೇಬೇಕಲ್ಲ, ಜಿಂಕೆ, ಕಾಡುಕೋಣ, ಹಂದಿ, ವೊಲ, ಬಗೆ ಬಗೆಯ ಹಾವುಗಳು ಕೋಲ್ಜೇನು, ಹೆಜ್ಜೇನು, ನಸ್ರಿ, ತುಡುವೆ ಜೇನು ನನ್ನ ಪ್ರೀತಿಯ ಮಲೆನಾಡಿನ ಮಡಿಲಲ್ಲಿ ಏನೆಲ್ಲ ವೈವಿಧ್ಯಮಯ ಸರಕಿತ್ತು. ಮಾಂಸಕ್ಕಾಗಿ ಸೋಬ್ಯಾಟೆ ಆಡುವುದು, ರಾತ್ರಿ ಹೊತ್ತು ಹಣೆ ಬ್ಯಾಟೆ, ಹತ್ತು ಮೀನು ಹೊಡೆಯುವುದು, ನೆರೆ ಬೇಟೆ, ತಡಗ್ಯೆ ಹಾಕಿ ಮೀನು ಹಿಡಿಯುವುದು, ಗುಂಡಿ ಸೋಯುವುದು, ಕಡ ಹಾಕುವುದು. ಕಟ್ಟು ಕಟ್ಟಿ ಮೀನು ಹಿಡಿಯುವುದು, ಅಂಡೆ ಹಾಕುವುದು.

ಕೃಷಿಯನ್ನು ಪ್ರಧಾನವಾದ ವೃತ್ತಿಯಾಗಿಟ್ಟುಕೊಂಡರೂ ಅದು ಕೇವಲ ಆರು ತಿಂಗಳು ಮಾತ್ರ. ಬೇಸಿಗೆ ಬರುತ್ತಲೇ ಹಬ್ಬಗಳ ಸುಗ್ಗಿ. ಯಾವುದೇ ಭಿನ್ನ ಬೇಧವಿಲ್ಲದೆ ನಾಡಿನ ಮೇಲಿರುವ ದೇವರುಗಳಿಗೆಲ್ಲ ಪೂಜೆ ಪುನಸ್ಕಾರಗಳನ್ನು ಮಾಡಿ ಬಿಡುವ ಮಲೆನಾಡಿಗರಿಗೆ ದೇವರ ಆರಾಧನೆಯೆಂದರೆ ಅವರ ಬದುಕಿನಷ್ಟೇ ಸರಳ.

ದೊಡ್ಡಾಟ, ಯಕ್ಷಗಾನ, ಸಾಮಾಜಿಕ ನಾಟಕಗಳು, ಪೌರಾಣಿಕ ನಾಟಕಗಳು ಮಲೆನಾಡಿನ ಮತ್ತೊಂದು ಮುಖ. ಮದುವೆ ಮನೆಯಲ್ಲಿ ಕೇಳಿ ಬರುತ್ತಿದ್ದ ಸೋಬಾನೆ ಪದಗಳು ದೂರದರ್ಶನ ಮತ್ತು ಕಂಪ್ಯೂಟರ್‌ನ ಹಾವಳಿಯಲ್ಲಿ ಕಳೆದು ಹೋಗಿದ್ದರೂ ಕೂಡ ಅಲ್ಲಲ್ಲಿ ಕೇಳಿ ಬರುತ್ತಿರುವುದು ಇನ್ನು ನಮ್ಮ ಸಂಸತಿ ಜೀವಂತವಾಗಿದೆ ಎಂಬುದಕ್ಕೆ ಸಾಕ್ಷಿ. ಮೇಲಿನ ಎಲ್ಲಾ ಸಂಗತಿಗಳು ಮಲೆನಾಡಿನ ಬಗ್ಗೆ ಪ್ರೀತಿ ಮೂಡಿಸುತ್ತಲೇ ಇದ್ದವು.


ಆದರೆ ಈಗಿನ ಮಲೆನಾಡು ಮೊದಲಿನ ಹಾಗಿಲ್ಲ, ಮದುವೆ ಮುಂಜಿಗಳೆಲ್ಲ ತಮ್ಮ ಮೂಲ ಕಲ್ಪನೆಯಿಂದ ಹೊರ ಬರುತ್ತಿದ್ದು ಆಧುನಿಕತೆಯ ಬಡಿವಾರವನ್ನು ರೂಢಿಸಿಕೊಳ್ಳುತ್ತಿದೆ. ಯಂತ್ರಗಳೆಲ್ಲ ಪ್ರವೇಶ ಪಡೆದು ಮಲೆನಾಡಿನ ಜೀವನಾಡಿಯಾದ ಕಾಡು ಕಣ್ಮರೆಯಾಗುತ್ತಿದೆ. ಮಳೆಯೋ ಆಗಾಗ ಬಂದು ಹೋಗುವ ಅತಿಥಿಯಂತಾಗಿದೆ. ಭತ್ತವೇ ಪ್ರಧಾನವಾದ ಬೆಳೆಯಾದ ನಾಡಿನಲ್ಲಿ ಗೊಂಜಾಳವನ್ನು ಬೆಳೆದು ಬದುಕಬೇಕಾಗಿದೆ. ಮಲೆನಾಡಿನಿಂದ ಮಹಾನಗರಗಳಿಗೆ ವಲಸೆ ಹೋಗಲೇ ಬೇಕಾಗಿದೆ. ಮಲೆನಾಡಿಗರ ಪ್ರೀತಿಯ ಆಹಾರವಾದ ಕೋಳಿ ಕಜ್ಜಾಯ ಕಣ್ಮರೆಯಾಗುತ್ತಿವೆ. ಮೊಬೈಲುಗಳು ಎಲ್ಲರ ಕೈಯ್ಯಲ್ಲಿ ಸಿಕ್ಕು ಜನರಿಗೆ ಸಂಪರ್ಕ ಕ್ರಾಂತಿಯನ್ನು ಹುಟ್ಟು ಹಾಕುತ್ತಿದೆ. ಹಳ್ಳಿಗೊಂದೊಂದು ಶಾಲೆ ಬಂದರೂ ನಿರೀಕ್ಷಿತ ಪ್ರಮಾಣದಲ್ಲಿ ಕಲಿಕೆ ಉಂಟಾಗುತ್ತಿಲ್ಲ.

ರಾಜಕೀಯ ಇಚ್ಛಾಶಕ್ತಿಯ ಕೊರತೆಯಿಂದಾಗಿ ಮಲೆನಾಡಿನ ಧ್ವನಿಗಳು ಮೊಳಗದೆ ಅರಣ್ಯರೋದನವಾಗುತ್ತಿದೆ. ಕಾಡನ್ನು ಉಳಿಸಿಕೊಳ್ಳುವುದು ಮತ್ತು ಬದುಕನ್ನು ಕಟ್ಟಿಕೊಳ್ಳುವ ಅನಿವಾರ್ಯತೆಯಲ್ಲಿ ನಮ್ಮ ಮಲೆನಾಡಿನ ಜನ ಮತ್ತೊಮ್ಮೆ ಆತಂಕಕ್ಕೆ ಒಳಗಾಗುತ್ತಿದ್ದಾರೆ. ಕೆರೆಗಳು ಬತ್ತುತ್ತಿವೆ, ಅಪ್ಪ ಕೂಣಿ ಕಟ್ಟಲು ಹಗ್ಗ ಹೊಸೆಯುತ್ತಿದ್ದಾನೆ. ಅವ್ವಾ ಮಳೆಗಾಲಕ್ಕೆ ಕಟ್ಟಿಗೆ ಒಟ್ಟುತ್ತಿದ್ದಾಳೆ. ಕಳ್ಳಭಟ್ಟಿಗಳು ಮಾಯವಾಗಿ ಹಳ್ಳಿಗಳು ಬಾರ್ ಅಂಡ್ ರೆಸ್ಟೋರೆಂಟ್‌ಗಳಾಗಿ ಪರಿವರ್ತನೆ ಆಗುತ್ತಿವೆ. ಎಲ್ಲಾ ಬಗೆಯ ಬೇಟೆಗಳು ಹೋಗಿ ಪೇಟೆಯ ಫಾರಂ ಕೋಳಿಗಳೇ ಗತಿಯಾಗಿವೆ.

- ಮಂಜಪ್ಪ ಹುಲ್ತಿಕೊಪ್ಪ, ಸೊರಬ

ನನ್ನ ಪ್ರೀತಿಯ ಮಲೆನಾಡಿನಲ್ಲಿ ANF ಭಯೋತ್ಪಾದನೆ

ನನ್ನ ಪ್ರೀತಿಯ ಮಲೆನಾಡು ಯತೇಚ್ಛವಾದ ವನಸಿರಿ ಇರುವ ನಾಡು. ಉತ್ತಮವಾದ ಜನಸಂಪನ್ಮೂಲ ಇರುವ ನಾಡು. ಆದರೆ ಉತ್ತಮವಾದ ಆಡಳಿತದಿಂದ ವಂಚಿತವಾಗಿರುವ ನಾಡು. ಇಲ್ಲಿನ ಜನತೆಗೆ ಮೂಲಭೂತ ಸೌಕರ್ಯಗಳ ಕೊರತೆಯಿಂದ ಉತ್ತಮ ಜೀವನ ನಡೆಸುವುದು ತುಂಬಾ ಕಷ್ಟಕರವಾಗಿದೆ. ಆದರೆ ಎಲ್ಲಾ ಚುನಾಯಿತ ಸರ್ಕಾರಗಳು ಮೂಲಭೂತ ಸೌಕಯಗಳನ್ನು ಒದಗಿಸುವುದರಲ್ಲಿ ವಿಫಲಗೊಂಡಿದೆ. ಆದ್ದರಿಂದ ಇಲ್ಲಿ ಜನತೆ ಎಚ್ಚೆತ್ತುಕೊಂಡಿದ್ದಾರೆ. ಶಾಂತಿಯುತ ಹೋರಾಟಕ್ಕೆ ಬೆಲೆಕೊಡದ ಸರ್ಕಾರದ ವಿರುದ್ಧ ನಕ್ಸಲೀಯರು ಪ್ರಾರಂಭಿಸಿರುವ ಶಸಸ್ತ್ರ ಹೋರಾಟಕ್ಕೆ ಹಲವರು ಸೇರ್ಪಡೆಯಾಗುತ್ತಿದ್ದಾರೆ. ಮೂಲಭೂತ ಹಕ್ಕುಗಳಿಗೆ ಹೋರಾಡುತ್ತಿರುವ ಜನಸಾಮಾನ್ಯರ ಹೋರಾಟವನ್ನು ಹತ್ತಿಕ್ಕಲು, ಮುಂದೆಂದೂ ಹೋರಾಡದಂತೆ ಜನ ಸಾಮಾನ್ಯರಲ್ಲಿ ಭಯ ಭೀತಿ ಹುಟ್ಟಿಸಲು ANF ಎಂಬ ನರಹಂತಕ ಪಡೆಗಳನ್ನು ಸರ್ಕಾರ ರಚಿಸಿಕೊಂಡಿದೆ. ಇವರ ಜೊತೆಗೆ ಪೊಲೀಸ್ ವ್ಯವಸ್ಥೆಯೂ ಸೇರಿಕೊಂಡು ಮಲೆನಾಡಿನ ಜನತೆ ನೆಮ್ಮದಿಯ ಜೀವನ ನಡೆಸಲು ಆಗದಂತಹ ಪರಿಸ್ಥಿತಿಯನ್ನು ನಿರ್ಮಿಸಲಾಗಿದೆ. ಇಲ್ಲಿನ ಹೋರಾಟಗಾರರನ್ನು ನಕ್ಸಲೀಯರೆಂದು, ಸರ್ಕಾರವನ್ನು ಕೆಡವಲು ಸಂಚು ರೂಪಿಸುತ್ತಿದ್ದಾರೆ ಎಂದು, ದೇಶ ದ್ರೋಹಿಗಳೆಂದು, ಆಂತರಿಕ ಭದ್ರತೆಗೆ ಸಮಸ್ಯೆ ಆಗುತ್ತಿದ್ದಾರೆ ಎಂದು ಮೂಲಭೂತ ಸೌಕರ್ಯಗಳಿಗಾಗಿ ಹೋರಾಡುತ್ತಿರುವ ಜನಪರ ಹೋರಾಟಗಾರರನ್ನು ಅಕ್ರಮವಾಗಿ ಬಂಧಿಸಿ ಸೆರೆಮನೆಯಲ್ಲಿಟ್ಟು ಹಿಂಸಿಸುತ್ತಿದ್ದಾರೆ. ಇಂದಿಗೂ ಸಹ ಮಲೆನಾಡಿನ ಜನತೆ ರಾಜ್ಯದ ಕಾರಾಗೃಹದಲ್ಲಿ ಶಿಕ್ಷೆ ಅನುಭವಿಸುತ್ತಿದ್ದಾರೆ. ಇನ್ನೂ ಕೆಲವರನ್ನು ನಾಟಕೀಯ ಎನ್‌ಕೌಂಟರ್‌ನಲ್ಲಿ ಕೊಂದು ಹಾಕಲಾಗಿದೆ.



ಬಡಜನಸಾಮಾನ್ಯರನ್ನು ನಕ್ಸಲೀಯರೆಂದು ಕೊಲ್ಲುವುದೇ ANFನ ಮುಖ್ಯ ಗುರಿಯಾಗಿದೆ. ಮಲೆನಾಡಿನ ಜನತೆ ನೆಮ್ಮದಿಯ ಜೀವನ ನಡೆಸಬೇಕೆಂದರೆ ANF ಪಡೆಯನ್ನು ವಿಸರ್ಜಿಸಬೇಕು. ಜನಸಾಮಾನ್ಯರ ಸಮಸ್ಯೆಗಳಿಗೆ ಸ್ಪಂದಿಸಿ ಅವುಗಳನ್ನು ಪರಿಸ್ಕರಿಸುವುದು ಸರ್ಕಾರದ ಮೊದಲ ಕೆಲಸವಾಗಬೇಕಿದೆ. ಇದು ನನ್ನ ಪ್ರೀತಿಯ ಮಲೆನಾಡಿನ ಜನತೆಯ ಬಯಕೆ.

ತಿಮ್ಮರಾಜು

ನನ್ನ ಪ್ರೀತಿಯ ಮಲೆನಾಡು

ಮಲೆನಾಡನ್ನು ರಕ್ಷಿಸಬೇಕಿದೆ

ಮಲೆನಾಡು ಎಂಬ ಹೆಸರು ಕೇಳಿದಾಕ್ಷಣ ಜನರ ಮನದಲ್ಲಿ ಮೂಡುವುದು ಬಾನಂಗಳದಲ್ಲಿ ಹಾರಾಡುವ ಬಗೆ ಬಗೆಯ ಪಕ್ಷಿಗಳು, ಹಸಿರು ಸೀರೆಯುಟ್ಟಂತಿರುವ ಬೆಟ್ಟಗಳು, ರಂಗು ರಂಗಿನ ಹೂಗಳು, ಅವುಗಳ ಮಕರಂದವನ್ನು ಹೀರಲು ಹಪಹಪಿಸುವ ಬಗೆಬಗೆಯ ಬಣ್ಣಗಳ ಚಿಟ್ಟೆ ದುಂಬಿಗಳು, ನಿರಂತರ ತುಂಬಿ ಹರಿಯುತ್ತಿದ್ದ ನದಿ ಕೆರೆಗಳು.



ಆದರೆ ಇಂತಹ ಅಪೂರ್ವ ಚಿತ್ರಣಗಳು ಇವತ್ತು ಮೂಡುವುದು ತಮ್ಮ ಕಡೇ ದಿನಗಳನ್ನು ಎಣಿಸುತ್ತಿರುವ ವೃದ್ಧರ ಮನಸ್ಸಲ್ಲಿ ಮಾತ್ರ. ಬಾಲ್ಯ ಮತ್ತು ಯೌವ್ವನಕ್ಕೆ ಲಗ್ಗೆ ಹಾಕುತ್ತಿರುವ ಯುವಕರಿಗೆ ಈ ಚಿತ್ರಣ ಕೇವಲ ಅಂತರ್ಜಾಲ (ಇಂಟರ್ ನೆಟ್) ತಾಣಗಳಲ್ಲಿರುವ ಮತ್ತು ಹಿರಿಯ ಛಾಯಚಿತ್ರಗಾರರ ಕ್ಯಾಮೆರಾ ಕಣ್ಣು ಸೆರೆಹಿಡಿದಿರುವ ಚಿತ್ರಗಳಲ್ಲಿ ಮಾತ್ರ.


ಎಲ್ಲಿ, ಹೇಗೆ ಮಾಯವಾಯಿತು ನಮ್ಮ ಮಲೆನಾಡು? ಇದಕ್ಕೆ ಕೆಲವು ಮೂಲಕಾರಣಗಳಿವೆ.

ಹಲವು ದಶಕಗಳಿಂದ ರಾರಾಜಿಸುತ್ತಿದ್ದ ಬೃಹತ್ ಮರಗಳನ್ನು ರಸ್ತೆ ಅಗಲೀಕರಣ ನೆಪದಲ್ಲಿ ಕತ್ತರಿಸಿಹಾಕಿದ್ದು, ಇತಿಮಿತಿಯಿಲ್ಲದೆ ರಾಸಾಯನಿಕ, ಕ್ರಿಮಿನಾಶಕ, ರಸಗೊಬ್ಬರ, ಇನ್ನಿತ್ಯಾದಿಗಳನ್ನು ಬಳಸಿದ್ದರಿಂದ ವಿವಿಧ ಬಗೆಯ ಪ್ರಾಣಿ, ಪಕ್ಷಿಗಳು ವಿನಾಶದ ಅಂಚಿನಲ್ಲಿವೆ. ಬೆಟ್ಟ ಗುಡ್ಡ ಸಂದಿ ಕಣಿವೆಗಳಲ್ಲಿ ಅರಣ್ಯವನ್ನು ಬೋಳುಮಾಡಿ ಅಕ್ರಮವಾಗಿ ಉಳುಮೆ ಮಾಡುತ್ತಿರುವುದು. ವಾಯು ಮಾಲಿನ್ಯ ಜಲಮಾಲಿನ್ಯ ಮತ್ತು ಶಬ್ದಮಾಲಿನ್ಯ ಕೂಡ ಇಲ್ಲಿನ ಪರಿಸರವನ್ನು ನಾಶಮಾಡಿವೆ.

ನಾವೆಲ್ಲ ಮಲೆನಾಡನ್ನು ರಕ್ಷಿಸಬೇಕಿದೆ. ಮನೆಗೊಂದು ಮರವನ್ನು ಬೆಳೆಸಬೇಕಿದೆ. ವಿನಾಶದ ಅಂಚಿನಲ್ಲಿರುವ ಪ್ರಾಣಿ ಪಕ್ಷಿಗಳನ್ನು ಉಳಿಸಬೇಕಿದೆ. ಮನೆ ಮನ ಊರು ಕೇರಿಗಳ ಜಲ, ವಾಯುವಿನ ಶುಚಿತ್ವವನ್ನು ಕಾಪಾಡಬೇಕಿದೆ. ಸಮೃದ್ಧವಾಗಿದ್ದ ಮಲೆನಾಡನ್ನು ಹಸಿರಾಗಿಸಬೇಕಿದೆ.

- ನೂರ್ ಸಮದ್ ಅಬ್ಬಲಗೆರೆ, ಶಿವಮೊಗ್ಗ

ಸ್ಪಷ್ಟೀಕರಣ




ನಮ್ಮ ಪತ್ರಿಕೆಯ ಫೆಬ್ರವರಿ 6, 2013 ರ ಸಂಚಿಕೆಯಲ್ಲಿ ಮೀಸಲು ಕ್ಷೇತ್ರವಾದ ಮುಧೋಳನ್ನು ಪ್ರತಿನಿಧಿಸುತ್ತಿರುವ ಕನ್ನಡ ಮತ್ತು ಸಂಸ್ಕೃತಿ ಹಾಗೂ ಸಣ್ಣ ನೀರಾವರಿ ಮಂತ್ರಿ ಗೋವಿಂದ ಕಾರಜೋಳ ಮತ್ತು ಅವರ ಪುತ್ರ ಅರುಣ್ ಕಾರಜೋಳರನ್ನು ಕುರಿತು 'ಕಾರಜೋಳನ ಮಗ ಹುಡುಗಿ ಜೊತೆ ಪರಾರಿ?' ಎಂಬ ಆಧಾರರಹಿತ ವರದಿ ಪ್ರಕಟಗೊಂಡಿತ್ತು.

ಕಾರಜೋಳರಿಗಾಗಲಿ ಅವರ ಪುತ್ರರಿಗಾಗಲಿ ಮಾನಹಾನಿ ಮಾಡುವ ಉದ್ದೇಶ ನಮಗಿರಲಿಲ್ಲ; ಅದರಲ್ಲೂ ಹಿಂದುಳಿದ ಪರಿಶಿಷ್ಟ ಜಾತಿಗೆ ಸೇರಿರುವ ಅವರಿಗೆ ಜಾತಿ ನಿಂದನೆ ಮಾಡುವ ಉದ್ದೇಶವಂತೂ ನಮಗೆ ಖಂಡಿತವಾಗಿಯೂ ಇಲ್ಲ.

ಕಾರಜೋಳರಿಗೆ ಮತ್ತು ಅವರ ಪುತ್ರ ಅರುಣ್ ಅವರ ಮನಸ್ಸಿಗೆ ನಮ್ಮ ವರದಿಯಿಂದ ನೋವಾಗಿದ್ದರೆ ನಾವು ಈ ಮೂಲಕ ವಿಷಾದವ್ಯಕ್ತಪಡಿಸುತ್ತೇವೆ.

-ಸಂ



ನನ್ನ ಅಪ್ಪ

ಕಥೆ

ನಾನು ನನ್ನಪ್ಪನ ಕಾಲುಗಳನ್ನು ಬಿಗಿಯಾಗಿ ಹಿಡಿದು ಹೋಗಬೇಡಪ್ಪಾ ಎಂದು ಬೇಡಿಕೊಂಡೆ. ಆದರೆ ಅಪ್ಪ ನನ್ನನ್ನು ತನ್ನ ಕಾಲಿನಿಂದ ಒದ್ದ. ನನ್ನ ತಮ್ಮ ಕೂಡ ಅಪ್ಪನ ಕಾಲಿಗೆ ಬಿದ್ದು "ಬಾಬಾ, ಹೋಗಬೇಡ ಬಾಬಾ" ಎಂದು ಬೇಡಿಕೊಂಡ. ಆದರೆ ಅವನೊಬ್ಬ ಚೆಕ್ಕು ಎಂಬಂತೆ ಆತನನ್ನೂ ಅಪ್ಪ ಪಕ್ಕಕ್ಕೆ ದೂಡಿದ. ಅಮ್ಮ ಕೂಡ ಓಡೋಡಿ ಬಂದು "ಇಬ್ಬರು ಮಕ್ಕಳ ಬಗ್ಗೆಯಾದರೂ ಕರುಣೆ ತೋರಿ, ದಯವಿಟ್ಟು ಹೋಗಬೇಡಿ" ಎಂದು ಅಂಗಲಾಚಿದಳು. ಅಪ್ಪ ಆಕೆಯನ್ನೂ ಪಕ್ಕಕ್ಕೆ ದೂಡಿದ. ಫಶ್ತೂನ್ ಸಮುದಾಯದ ಅಪ್ಪನಲ್ಲಿ ಒಣ ಜಂಬ ತುಂಬಿ ತುಳುಕುತ್ತಿತ್ತು. ಕೋಪದಿಂದ ತತ್ತರಿಸುತ್ತಿದ್ದ ಅಪ್ಪ ಯಾರ ಮಾತನ್ನೂ ಕೇಳುವ ಸ್ಥಿತಿಯಲ್ಲಿರಲಿಲ್ಲ. ತಲೆಗೆ ಪೇಟ ಸುತ್ತುಕೊಂಡ ಅಪ್ಪ ಬಂದೂಕು ಎತ್ತಿಕೊಂಡು ಹೊರಟ. ನಾವು ಆತನ ಹಿಂದೆ ಓಡಿದೆವು. ಆದರೆ ನಾವು ಹೊಸ್ತಿಲನ್ನು ತಲುಪುವ ಹೊತ್ತಿಗೆ ಆತ ರಸ್ತೆಯ ಕೊನೆಯಲ್ಲಿದ್ದ ತಿರುವನ್ನು ತೆಗೆದುಕೊಂಡು ಮಾಯವಾದ.

ನನಗಾಗ ಹನ್ನೆರಡು ವರ್ಷ ವಯಸ್ಸು. ನನ್ನ ತಮ್ಮ ಅಖ್ತರ್ ಎಂಟು ವರ್ಷದವ ನಾಗಿದ್ದ. ದಿನವಿಡೀ ಅತ್ತ ಅಖ್ತರ್ ಸಂಜೆ ಆಗುತ್ತಿದ್ದಂತೆ ನಿದ್ರೆಗೆ ಜಾರಿದ. ಆದರೆ ನಾನು ಇವತ್ತಿನವರೆಗೂ ಅಳುತ್ತಲೇ ಇದ್ದೇನೆ. ನಾನು ಕಣ್ಣು ತೆರೆದಿರುವ ತನಕ ಅವುಗಳಿಂದ ಕಣ್ಣೀರು ಸುರಿಯುತ್ತಲೇ ಇರುತ್ತದೆ.

ನನ್ನ ಅಪ್ಪನ ಗುರಿ ಅವತ್ತು ಗುಲ್ ಮೀರ್ ಆಗಿದ್ದ. ಅವತ್ತು ಮಸೀದಿಯಲ್ಲಿ ಅಪ್ಪ ಮತ್ತು ಆತನ ನಡುವೆ ಮಾತಿನ ಜಟಾಪಟಿ ನಡೆದಿತ್ತಂತೆ. ನನ್ನ ದೊಡ್ಡಪ್ಪ ಅವರಿಬ್ಬರ ಜಗಳ ಇತ್ಯರ್ಥ ಆಗುವವರೆಗೂ ಏನನ್ನೂ ಮಾಡಬೇಡ ಎಂದು ನನ್ನ ಅಪ್ಪನಿಗೆ ಉಪದೇಶ ನೀಡಿದ್ದರು. ಆದರೂ ನನ್ನ ಅಪ್ಪನ ಕೋಪ ಶಮನಗೊಂಡಿರಲಿಲ್ಲ. "ಭೂಮಿ ನನ್ನದು ಆದರೂ ಆತ ನನಗೆ ಆಜ್ಞೆಗಳನ್ನು ಕೊಡಬೇಕಾ" ಎಂದು ಅಪ್ಪ ಗುಡುಗಿದ್ದ. ಗುಲ್ ಮೀರ್ ದುರುಗುಟ್ಟಿ ಅಪ್ಪನಿಗೆ ಸವಾಲು ಹಾಕಿದ್ದು ಅಪ್ಪನ ಕೋಪ ನೆತ್ತಿಗೇರುವಂತೆ ಮಾಡಿತ್ತು. ಆ ಕಾರಣಕ್ಕೇ ನನ್ನ ಅಪ್ಪ ಅವತ್ತು ಬಂದೂಕನ್ನು ಎತ್ತಿಕೊಂಡದ್ದು. ನಾವು ಎಷ್ಟೇ ಪ್ರಯತ್ನಿಸಿದರೂ ನಮ್ಮಿಂದ ಆತನನ್ನು ತಡೆಯಲಾಗಲಿಲ್ಲ.

'ಗುಲ್ ಮೀರ್‌ನ ಇಬ್ಬರು ಪುತ್ರರು ಅವತ್ತು ಮನೆ ಮುಂದೆ ಹೊಟ್ಟನ್ನು ಒಟ್ಟೆ ಮಾಡಿ ಗೋಡೆಗೆ ಮೆತ್ತುತ್ತಿದ್ದರು. ಅವರಿಬ್ಬರನ್ನು ಅಪ್ಪ ಕ್ಷಣಾರ್ಧದಲ್ಲಿ ಕೊಂದು ಹಾಕಿದ.

ಆಗ ನಮ್ಮ ಮನೆಯಲ್ಲಿ ನಿದ್ರಿಸುತ್ತಿದ್ದ ಅಖ್ತರ್ ಎದ್ದು ಜೋರಾಗಿ ಚೀರಲಾರಂಭಿಸಿದ. ಸದ್ಯದಲ್ಲೇ ಸಂಭವಿಸಲಿರುವ ವಿಪತ್ತಿನ ಬಗ್ಗೆ ಯಾವುದೋ ಅಗೋಚರ ಶಕ್ತಿ ಅವನಿಗೆ ಸಂದೇಶ ರವಾನಿಸಿದಂತಿತ್ತು. ಅಮ್ಮ ಅಖ್ತರ್ ಇದ್ದಲ್ಲಿಗೆ ಓಡಿ, ಆತನನ್ನು ತನ್ನ ತೋಳಿನಲ್ಲಿ ಎತ್ತಿಕೊಂಡು, ಎದೆಗೆ ಅಪ್ಪಿಕೊಂಡಳು. ಆತನ ಬೆನ್ನನ್ನು ಮೆಲ್ಲಗೆ ತಟ್ಟುತ್ತಾ ಆತ ಮತ್ತೆ ನಿದ್ರಿಸುವಂತೆ ಮಾಡಿದಳು. ಆದರೆ ನಾವಿಬ್ಬರು ಮಾತ್ರ ಇಡೀ ರಾತ್ರಿ ನಿದ್ದೆ ಮಾಡದೆ ಬೆಳಕು ಹರಿಯುವವರೆಗೆ ಕೂತಿದ್ದೆವು. ರಾತ್ರಿಯ ಕತ್ತಲಲ್ಲಿ ನಾಯಿಗಳು ಬೊಗಳುವುದನ್ನು ಕೇಳಿದಾಗ ನಮ್ಮ ಎದೆ ನಡುಗುತ್ತಿತ್ತು. ಇಬ್ಬರು ಯುವಕರನ್ನು ಕೊಲ್ಲುವ ಮೂಲಕ ತನ್ನ ಕೈಗಳಿಗೆ ರಕ್ತವನ್ನು ಅಂಟಿಸಿಕೊಂಡಿದ್ದ ಅಪ್ಪ ತಲೆತಪ್ಪಿಸಿಕೊಂಡಿದ್ದ.

ಕಾಲ ಮತ್ತು ಜನ ನಮ್ಮ ಕಣ್ಣ ಮುಂದೆಯೇ ಬದಲಾದರು. ಗುಲ್ ಮೀರ್ ಮನೆಗೆ ಹೋಗಿ ತಮ್ಮ ಸಂತಾಪ ಸೂಚಿಸಿ "ನಿಮಗೆಂತ ಘೋರ ಅನ್ಯಾಯ ವಾಯಿತು" ಎಂದು ಹೇಳುತ್ತಿದ್ದರು. ಆದರೆ ಅದೇ ಜನ ನಮ್ಮ ಮನೆಗೂ ಬಂದು "ಎಂತಹ ದುರಂತವಾಯಿತು" ಎಂದು ಲೊಚಗುಡುತ್ತಿದ್ದರು.

ಎರಡೂ ಒಂದೇ, ಆದರೆ ಪದಗಳು ಬೇರೆಯಷ್ಟೇ. ಆ ಮಾತನ್ನು ಇಲ್ಲಿ, ಈ ಮಾತನ್ನು ಅಲ್ಲಿ ಹೇಳಿದ್ದರೂ ಅವುಗಳ ಅರ್ಥ ಬೇರೆ ಆಗುತ್ತಿರಲಿಲ್ಲ.

ನನಗಾಗಲಿ, ನನ್ನ ಅಮ್ಮನಿಗಾಗಲಿ ಅಪ್ಪ ಎಲ್ಲಿದ್ದಾನೆ ಎಂದು ಗೊತ್ತಿರಲಿಲ್ಲ. ಆದರೆ ಆತ ಎಲ್ಲೇ ಇದ್ದರೂ ಇಷ್ಟು ಹೊತ್ತಿಗೆ ಅವನ ಕೋಪ ಇಳಿದು ತಾನು ಮಾಡಿದ ಕೃತ್ಯದ ಬಗ್ಗೆ ವ್ಯಥೆ ಪಡುತ್ತಿರುತ್ತಾನೆ ಎಂದು ನನಗೆ ಗೊತ್ತಿತ್ತು. ಆತನ ಅಂತಸ್ಸಾಕ್ಷಿ ಆತನನ್ನು ಚುಚ್ಚುತ್ತಿರಬೇಕು, ಬೆಟ್ಟದಷ್ಟು ದೊಡ್ಡದಾಗಿದ್ದ ಆತನ ಅಹಂ ಸಮಾಧಾನಗೊಂಡಿರಬೇಕು, ಆತನ ಫಶ್ತೂನ್ ಜಂಬ ಮತ್ತು ಸೊಕ್ಕು ಈಗ ವಿಮರ್ಶಾತ್ಮಕ ಚಿಂತನೆಯಾಗಿ ಪರಿವರ್ತನೆಗೊಂಡಿರಬೇಕು ಎಂದೆಲ್ಲಾ ಯೋಚಿಸಿದೆ.

ನಮ್ಮ ಹಳ್ಳಿಯನ್ನು ಗೆಳೆಯರ ಹಳ್ಳಿ ಎಂದೇ ಕರೆಯುತ್ತಾರೆ. ಯಾಕೆಂದರೆ ಇಲ್ಲಿ ದೊಡ್ಡ ಮತ್ತು ಚಿಕ್ಕ ಸಮಸ್ಯೆಗಳಿಗೆಲ್ಲ ಗೆಳೆಯರೇ ಪರಿಹಾರವನ್ನು ಕಂಡುಕೊಳ್ಳುತ್ತಾರೆ. ಹಾಗೆಯೇ ಈಬಾರಿಯೂ ನಮ್ಮ ಹಳ್ಳಿಯ ಜನ ಸೇರಿ ಚರ್ಚಿಸಲಾರಂಭಿಸಿದರು. ಎಲ್ಲರ ದೊಡ್ಡ ಸಭೆ ಕರೆಯುವ ಮುನ್ನ ಚಿಕ್ಕಚಿಕ್ಕ ಸಭೆ ಮಾಡಿದರು. ಹೀಗೆ ಸಭೆ ನಡೆಸುತ್ತಲೇ ಒಂದು ತಿಂಗಳಲ್ಲಿ ನನ್ನ ಅಪ್ಪ ಎಲ್ಲಿದ್ದಾನೆ ಎಂದು ಪತ್ತೆ ಹಚ್ಚಿದರು. ಆಗಲೇ ರಾಜಿ ಸಂಧಾನಗಳು ನಿಜವಾಗಲು ಪ್ರಾರಂಭವಾಗಿದ್ದು.

ಅದೇ ಹೊತ್ತಿಗೆ ನನ್ನನ್ನು ಕುರಿತ ಅಮ್ಮನ ವರ್ತನೆಯಲ್ಲೂ ಬದಲಾವಣೆಗಳು ಕಂಡುಬಂದವು. ಆಕೆಯ ಮನಸ್ಸಿನಲ್ಲಿದ್ದ ಭಯ ಹೆಚ್ಚಾದಂತೆ ನನ್ನ ಮೇಲಿನ ಆಕೆಯ ಪ್ರೀತಿಯೂ ಹೆಚ್ಚಾಯಿತು. ನನ್ನತ್ತ ಹೆಚ್ಚು ಗಮನ ಕೊಡಲಾರಂಭಿಸಿದ ಅಮ್ಮ ನನ್ನ ಅಗತ್ಯಗಳ ಬಗ್ಗೆ ಸದಾ ಚಿಂತಿಸುತ್ತಿದ್ದಳು. ಅಷ್ಟೇ ಅಲ್ಲ, ವಿಧಿಲೀಲೆಯ ಬಗ್ಗೆ, ಸಂದರ್ಭದೊಂದಿಗೆ ಹೊಂದುಕೊಂಡು ಹೋಗುವ ಬಗ್ಗೆ ಆಕೆ ವಿಚಿತ್ರವಾಗಿ ಮಾತನಾಡಲಾರಂಭಿಸಿದಳು. ಅಸ್ಪಷ್ಟವಾಗಿ ಮತ್ತು ಅಸಂಬದ್ಧವಾಗಿ ನನಗೆ ಸಲಹೆಗಳನ್ನು ಕೊಡುತ್ತಿದ್ದಳು: ಕೆಲವೊಮ್ಮೆ ಆಕೆ ನನ್ನತ್ತ ಹೇಗೆ ನೋಡುತ್ತಿದ್ದಳೆಂದರೆ ನಾನು ಸಮುದ್ರದಲ್ಲಿ ಮುಳುಗುತ್ತಿರುವಾಗ ಆಕೆ ದಡದಲ್ಲಿ ಅಸಹಾಯಕಳಾಗಿ ನಿಂತು ನೋಡುತ್ತಿರುವವಳಂತೆ ಕಾಣಿಸುತ್ತಿದ್ದಳು.

ಅವತ್ತು ನಮ್ಮ ಮನೆಗೆ ಹಲವಾರು ಸಂಬಂಧಿಕರು ಬಂದಿದ್ದರು. ಆದರೆ ಅದ್ಯಾಕೋ ಅವರಲ್ಲಿ ಯಾರೂ ನನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡಲಿಲ್ಲ. ಎಲ್ಲರ ಮುಖಗಳನ್ನು ಅದೆಂತಹದ್ದೋ ಆತಂಕ ಆವರಿಸಿತ್ತು. ಅವತ್ತು ನಡೆಯಲಿದ್ದ ದೊಡ್ಡ ಸಭೆಯಲ್ಲಿ ಎರಡು ಸಂಸಾರಗಳ ನಡುವೆ ರಾಜಿ ಏರ್ಪಡುತ್ತಿದ್ದರೂ ಯಾಕೆ ಇವರೆಲ್ಲ ಆತಂಕಗೊಂಡಿದ್ದಾರೆ? ಬದಲಾಗಿ ಇದು ಸಂಭ್ರಮಿಸುವ ಬೆಳವಣಿಗೆಯಲ್ಲವೇ? ಎಂದೆಲ್ಲಾ ನಾನು ಯೋಚಿಸಿದೆ.

ವಿಶೇಷಾಂಕ 2013



ಮೂಲ: ಪಾಕಿಸ್ತಾನದ ಲೇಖಕ ಇಸ್ಮಾಯಿಲ್ ಗೌಹಾರ್

■ ಕನ್ನಡಕ್ಕೆ: ಗೌರಿ ಲಂಕೇಶ್

ಆಮೇಲೆಯೇ ನನಗೆ ಗೊತ್ತಾಗಿದ್ದು ನಾನೆಂತಹ ಗುಗ್ಗೂ ಎಂದು. ಅವರೆಲ್ಲರ ಆತಂಕಕ್ಕೆ ಏನು ಕಾರಣವಾಗಿತ್ತು ಎಂದು ನನಗೆ ಗೊತ್ತಾಗಿದ್ದು ದೊಡ್ಡ ಸಭೆ ತನ್ನ ತೀರ್ಪನ್ನು ಘೋಷಿಸಿದಾಗ...

ತೀರ್ಪು ಹೀಗಿತ್ತು: "ಒಂದು ಲಕ್ಷ ರೂಪಾಯಿಗಳು ಮತ್ತು ಮಗಳು."

ಆಗ ಯಾರೋ ಒಬ್ಬರು "ಗುಲ್ ಮೀರ್‌ನ ಇಬ್ಬರು ಪುತ್ರರೂ ಕೊಲೆಯಾಗಿದ್ದಾರೆ. ಆದರೆ ಈ ಹುಡುಗಿ..." ಎಂದು ಧನಿ ಎತ್ತಿದರು.

ಆತ ಮಾತು ಮುಗಿಸುವ ಮುನ್ನ ಇನ್ನೊಬ್ಬ "ಇದು ಸಭೆಯ ನಿರ್ಧಾರ. ಒಂದು ಲಕ್ಷ ರೂಪಾಯಿ ಮತ್ತು ಮಗಳನ್ನು ಕೊಡಬೇಕು ಅಷ್ಟೇ. ಅದನ್ನು ಕಟ್ಟಿಕೊಂಡು ಅವನೇನು ಮಾಡುತ್ತಾನೆ ಎಂಬುದು ಗುಲ್ ಮೀರ್‌ಗೆ ಬಿಟ್ಟದ್ದು" ಎಂದು ಹೇಳಿದರು.

ಮೂರನೆಯವನು "ಗುಲ್ ಮೀರ್ ಕೂಡ ಹೆಂಡತಿಯನ್ನು ಕಳೆದುಕೊಂಡಿರುವವನು..." ಎಂದು ದನಿಗೂಡಿಸಿದ.

ನಾನು ನನ್ನ ಗಂಟಲಿನಿಂದ ಉಕ್ಕಿ ಬರುತ್ತಿದ್ದ ಆಕ್ರಂದನವನ್ನು ಒತ್ತಿ ಹಿಡಿದೆ. ಆದರೆ ನನ್ನ ಅಮ್ಮ ನನ್ನನ್ನು ತನ್ನ ಎದೆಗೆ ಅಪ್ಪಿಕೊಂಡು ತನ್ನ ಹೃದಯವೇ ಕಿತ್ತುಹೋಗುವಂತೆ ಕಿರುಚಿಕೊಳ್ಳಲಾರಂಭಿಸಿದಳು. ○

ಸರೋದ್ ಕಲಿಸಿದ ಗುರು ಖಾನ್ ಸಾಹೇಬರು

■ ಕಡಿದಾಳು ಶಾಮಣ್ಣ



1959ರ ನವೆಂಬರ್ 11 ತಾರೀಖು ನನ್ನ ಜೀವನದಲ್ಲಿ ಅತೀ ಮುಖ್ಯವಾದ ದಿನ. ಏಕೆಂದರೆ ಖ್ಯಾತ ಸರೋದ್ ವಾದಕ ಉಸ್ತಾದ್ ಅಲಿ ಅಕ್ಬರ್ ಖಾನ್ ಅವರು ನನಗೆ ಸರೋದ್ ವಾದನದ ಪ್ರಥಮ ಪಾಠ ಬಿಲಾವಲ್ ರಾಗದಲ್ಲಿ ಸರಿಗಮಪದನಿಸ ಕಲಿಸಿದ ದಿನ ಅದು.

ಅದಕ್ಕೆ ಒಂದೆರೆಡು ತಿಂಗಳ ಹಿಂದೆ ಮೈಸೂರಿನ ಕ್ರಾಫರ್ಡ್ ಹಾಲ್‌ನಲ್ಲಿ ಉಸ್ತಾದ್ ಹಲೀಂ ಜಫರ್ ಖಾನ್ ಅವರ ಸಿತಾರ್ ವಾದನ ಕಾರ್ಯಕ್ರಮವಿದ್ದಾಗ ನಾನು ಅವರಿಂದ ಸರೋದ್ ಕಲಿಯುವ ಇಷ್ಟವನ್ನು ವ್ಯಕ್ತಪಡಿಸಿದ್ದೆ. ಆಗ ಅವರು "ನೀನು ಸರೋದ್ ಕಲಿಯುವುದಾದರೆ ಕೋಲ್ಕತ್ತಾದ ಉಸ್ತಾದ್ ಅಲ್ಲಾಉದ್ದೀನ್ ಖಾನ್ ಅವರ ಮಗ ಪ್ರಸಿದ್ಧ ಸರೋದ್ ವಾದಕರಾದ ಉಸ್ತಾದ್ ಅಲಿ ಅಕ್ಬರ್ ಖಾನ್ ಅವರಿಂದಲೇ ಕಲಿಯಬೇಕು" ಎಂದು ಹೇಳಿದ್ದರು. ಅಷ್ಟೇ ಅಲ್ಲ ಸರೋದ್ ವಾದನವನ್ನು ತಯಾರಿಸುವ ದೆಹಲಿಯ ರತಿರಾಮ್ ಮತ್ತು ಸನ್ಸ್ ಸಂಸ್ಥೆಯಿಂದಲೇ ಸರೋದನ್ನು ತರಿಸಿಕೊಳ್ಳಬೇಕೆಂದು ಹೇಳಿ ಒಂದು ಶಿಫಾರಸ್ಸಿನ ಪತ್ರವನ್ನೂ ಕೊಟ್ಟಿದ್ದರು. ತಕ್ಷಣ ಆ ಪತ್ರವನ್ನು ದೆಹಲಿಗೆ ಕಳಿಸಿದ ನಾನು ಒಂದೇ ತಿಂಗಳಲ್ಲಿ ಸರೋದನ್ನು ತರಿಸಿಕೊಂಡಿದ್ದೆ. ಉಸ್ತಾದ್ ಹಲೀಂ ಜಫರ್ ಖಾನ್ ಅವರೂ ಅದ್ವಿತೀಯ ಸಿತಾರ್ ವಾದಕರಾಗಿದ್ದರು. ಮುಂಬೈವಾಸಿಗಳಾಗಿದ್ದ ಅವರು ನನ್ನ ಮಿತ್ರ ತೇಜಸ್ವಿಯವರ ಸಿತಾರ್ ಗುರುಗಳೂ ಆಗಿದ್ದರು. ಅವರು ಸಿತಾರನಲ್ಲಿ ಸಪಾಟ್ ತಾನ್ ಭಾರಿಸಿ "ನಿಮ್ಮ ಸ್ಪುಟ್ನಿಕ್ ಇಷ್ಟು ವೇಗದಲ್ಲಿ ಚಲಿಸುತ್ತದಾ" ಎಂದು ತಮಾಷೆಗೆ ಕೇಳುತಿದ್ದರು.

ಇದಾದ ಕೆಲವೇ ಸಮಯದಲ್ಲಿ ಅದೇ ಕ್ರಾಫರ್ಡ್ ಹಾಲಿನಲ್ಲಿ ಸಿತಾರ್ ವಾದಕ ಪಂಡಿತ್ ರವಿಶಂಕರ್ ಮತ್ತು ಸರೋದ್ ವಾದಕ ಉಸ್ತಾದ್ ಅಲಿ ಅಕ್ಬರ್ ಖಾನ್ ಅವರ ನಡುವೆ ಜುಗಲ್‌ಬಂಧಿ ಕಾರ್ಯಕ್ರಮವಿತ್ತು. ಮೂರು ತಾಸುಗಳ ಕಾಲ ನಡೆದ ಆ ಕಾರ್ಯಕ್ರಮದ ನಂತರ ವಿಶ್ರಾಂತಿ ಕೊಠಡಿಯಲ್ಲಿ ಅವರು ಮತ್ತು ಇತರೆ ಸಂಗೀತ ಕಲಾವಿದರು ಟೀ ಕುಡಿಯುತ್ತಾ ವಿಶ್ರಮಿಸುತ್ತಿದ್ದರು. ಮೈಸೂರಿಗೆ ಉತ್ತರಾದಿ ಸಂಗೀತಗಾರರನ್ನು ಕರೆಸಿ ಕಛೇರಿ ನಡೆಸುತ್ತಿದ್ದವರು ನಮ್ಮ ಗೆಳೆಯರಾಗಿದ್ದ ದೊರೆಸ್ವಾಮಿಯವರು. ಅವರು ಖ್ಯಾತ ಭರತನಾಟ್ಯ ಕಲಾವಿದೆ ವಸುಂದರ ಅವರನ್ನು ಮದುವೆಯಾಗಿದ್ದರು, ವಸುಂದರಾ ಅವರು ಹಿಂದೂಸ್ತಾನಿ ಸಂಗೀತದ ವಿಮರ್ಶಕರೂ ಆಗಿದ್ದರು. ನನ್ನನ್ನು ದೊರೆಸ್ವಾಮಿಯವರು ರವಿಶಂಕರ್ ಮತ್ತು ಅಲಿ ಅಕ್ಬರ್ ಖಾನ್ ಅವರಿಗೆ ಪರಿಚಯಿಸಿದರು. ಆಗ ನಾನು ಅಲಿ ಅಕ್ಬರ್ ಖಾನ್ ಅವರಿಗೆ "ದೆಹಲಿಯಿಂದ ನಾನು ಸರೋದ್ ತರಿಸಿಕೊಂಡಿದ್ದೇನೆ. ಅದನ್ನು ನಿಮ್ಮಿಂದ ಕಲಿಯಬೇಕೆಂದು ಬಯಸಿದ್ದೇನೆ" ಎಂದು ಹೇಳಿದೆ. ತುಂಬಾ ಕಡಿಮೆ ಮಾತನಾಡುತ್ತಿದ್ದ ಅವರು ನನ್ನ ವಿನಂತಿಗೆ ಏನನ್ನೂ ಹೇಳಲಿಲ್ಲ. ಆದರೆ ವ್ಯವಹಾರ ಚತುರರಾಗಿದ್ದ ರವಿಶಂಕರ್ ಅವರು ಅಲಿ ಅಕ್ಬರ್ ಖಾನ್ ಜೊತೆ ಮಾತನಾಡಿ "ನಾಳೆ ಬೆಂಗಳೂರಿನ ಟೌನ್ ಹಾಲಿನಲ್ಲಿ ನಮ್ಮಿಬ್ಬರ ಜುಗಲ್ ಬಂದಿ ಕಾರ್ಯಕ್ರಮವಿದೆ. ಅದರ ಮಾರನೆ ದಿನ ನಾವಿಬ್ಬರೂ ಬೆಂಗಳೂರಿನಲ್ಲಿರುತ್ತೇವೆ. ನೀನು ಬೆಂಗಳೂರಿಗೆ ಬಂದರೆ ಹನ್ನೊಂದನೆ ತಾರೀಖು ಖಾನ್ ಸಾಹೇಬರು ನಿನಗೆ ಪಾಠ ಶುರುಮಾಡುತ್ತಾರೆ. ನೀನು ಬೊಂಬಾಯಿಗೆ ಯಾವಾಗ ಬಂದು ಕಲಿಯಲಾರಂಭಿಸಬೇಕೆಂದೂ ತಿಳಿಸುತ್ತಾರೆ" ಎಂದು ಹೇಳಿದರು.

ಅದನ್ನು ಕೇಳಿ ಉತ್ಸಾಹಭರಿತನಾದ ನಾನು ನನ್ನ ಸರೋದ್ ಹೊತ್ತುಕೊಂಡು ರೈಲಿನಲ್ಲಿ ಬೆಂಗಳೂರು ತಲುಪಿದೆ. ಬೆಂಗಳೂರಿನಲ್ಲಿ ನನ್ನ ಅಣ್ಣ ಡಾ. ಹಾಲಪ್ಪನವರು ಸರ್ಕಾರಿ ಆಸ್ಪತ್ರೆಯಲ್ಲಿ ಕೆಲಸದಲ್ಲಿದ್ದರು. ಅವರ ಮನೆ ಜಯನಗರದಲ್ಲಿತ್ತು.


ಶಾಮಣ್ಣ

ಅವರ ಮನೆಯಲ್ಲಿ ಸರೋದನ್ನು ಇಟ್ಟು ಸಂಜೆ ಬೆಂಗಳೂರು ಟೌನ್ ಹಾಲಿಗೆ ಬಂದು ನೋಡಿದರೆ ಪ್ರವೇಶ ಧನ 100 ರೂ.ಗಳಿಂದ 500 ರೂ..ಎಂದು ಬರೆಯಲಾಗಿತ್ತು. ಅಷ್ಟೊಂದು ದುಬಾರಿ ಹಣ ಕೊಟ್ಟು ಒಳಹೋಗುವ ಸ್ಥಿತಿಯಲ್ಲಿ ನಾನಿರಲಿಲ್ಲ. ನನ್ನ ಅದೃಷ್ಟಕ್ಕೆ ಈ ಕಾರ್ಯಕ್ರಮ ಏರ್ಪಡಿಸಿದ್ದ ವಿಮಲಾ ರಂಗಾಚಾರ್ ಅವರು ನಾನು ಕಾಯುತ್ತಿದ್ದ ಬಾಗಿಲನ್ನು ತೆಗೆದು "ಸದ್ಯದಲ್ಲೇ ಕಾರ್ಯಕ್ರಮ ಪ್ರಾರಂಭವಾಗುತ್ತದೆ. ಟಿಕೆಟ್ ತೋರಿಸಿ ಒಳಗೆ ಹೋಗಿ" ಎಂದರು. ತಕ್ಷಣ ನಾನು "ನಿನ್ನೆ ಮೈಸೂರಿನಲ್ಲಿ ರವಿಶಂಕರ್‌ಜೀ ಅವರನ್ನು ಭೇಟಿ ಆದಾಗ ಈ ಕಾರ್ಯಕ್ರಮಕ್ಕೆ ಬರಲು ಹೇಳಿದ್ದರಲ್ಲದೆ ವೇದಿಕೆ ಹತ್ತಿರ ಬಾ ಎಂದಿದ್ದರು" ಎಂದೆ. "ನೀನು ಅವರು ಶಿಷ್ಯನಾ?" ಎಂದು ಕೇಳಿದ ವಿಮಲಾರಂಗಚಾರ್ "ಬಾ ಒಳಕ್ಕೆ" ಎಂದು ಕರೆದು ನೇರವಾಗಿ ಪಂಡಿತ್ ಜೀ ಮತ್ತು ಖಾನ್ ಸಾಹೇಬರು ಕೂತಿದ್ದ ವೇದಿಕೆ ಹತ್ತಿರ ಕರೆದುಕೊಂಡು ಹೋದರು. ವೇದಿಕೆಯ ಮೇಲೆ ಎರಡು ತಂಬೂರಿಗಳಿದ್ದು ಒಂದನ್ನು ರವಿಶಂಕರ್ ಅವರು ಶಿಷ್ಯ ರಾಮರಾವ್ ನುಡಿಸುತ್ತಿದ್ದರು. ಇನ್ನೊಂದನ್ನು ನನಗೆ ನೀಡಿದ ರವಿಶಂಕರ್ ಅದನ್ನು ನುಡಿಸಲು ಹೇಳಿದರು. ತಂಬೂರಿಯ ಶ್ರುತಿಯನ್ನು ಅವರೇ ಮಾಡಿಟ್ಟಿದ್ದರು. ನಾನು ಕಾರ್ಯಕ್ರಮದ ಪೂರ್ತಿ ಹುಷಾರಾಗಿ ತಂಬೂರಿಯನ್ನು ನುಡಿಸಿದೆ. ಹೀಗೆ ಅಂತಹ ಮಹಾನ್ ಕಲಾವಿದರೊಂದಿಗೆ ವೇದಿಕೆಯನ್ನು ಹಂಚಿಕೊಳ್ಳುವ ಅವಕಾಶ ನನಗೆ ಸಿಕ್ಕಿತ್ತು.

ಕಾರ್ಯಕ್ರಮ ಮುಗಿದ ನಂತರ ಗುರುಗಳಿಬ್ಬರು ಮಾರನೆಯ ಬೆಳಗ್ಗೆ ತಾವು ಮಲ್ಲೇಶ್ವರಂನಲ್ಲಿ ಉಳಿದುಕೊಂಡಿದ್ದ ಲಲಿತಾಶಿವರಾಂ ಉಬಯಕರ್ ಎಂಬುವವರ ಮನೆಗೆ ಬರಲು ಹೇಳಿದರು. ಗೆಳೆಯರೊಬ್ಬರ ಸೈಕಲು ಪಡೆದು ಜಯನಗರದಿಂದ ಉಬಯಕರ್ ಅವರ ಮನೆಗೆ ಹೊರಟೆ. ಆ ದಿನಗಳಲ್ಲಿ ಈಗಿನಂತೆ ಆಟೋರಿಕ್ಷಾ ಸವಲತ್ತು ಇರಲಿಲ್ಲವಾದ್ದರಿಂದ ತುಂಬಾ ತೊಂದರೆ ಆದರೂ ಸೈಕಲ್ಲಿನಲ್ಲೇ ಸರೋದ್ ಹೊತ್ತುಕೊಂಡು ಉಬಯಕರ್ ಅವರ ಮನೆಯನ್ನು ಸಕಾಲಕ್ಕೆ ಸೇರಿದೆ.

ಅಲಿ ಅಕ್ಬರ್ ಖಾನ್ ಅವರಿದ್ದ ಕೊಠಡಿಗೆ ನನ್ನನ್ನು ಕರೆದೊಯ್ದು ರವಿಶಂಕರರು ನನಗೆ ಪಾಠ ಪ್ರಾರಂಭಿಸಲು ಅವರಿಗೆ ಹೇಳಿ ಹೊರಟು ಹೋದರು. ನಾನು ಖಾನ್ ಸಾಬ್ ಅವರ ಕಾಲಿಗೆ ನಮಸ್ಕರಿಸಿ ನನ್ನ ಸರೋದ್‌ನ ಕವರ್ ತೆಗೆದು ಶ್ರುತಿ ಮಾಡಿ ಅದನ್ನು ಗುರುಗಳ ಮುಂದಿಟ್ಟೆ. ಖಾನ್ ಸಾಹೇಬರು ನನ್ನ ಸರೋದ್‌ನ್ನು ನೋಡಿ ನಗುತ್ತ "ಇದು ನಮ್ಮ ಘರಾನಾದ ಸರೋದ್ ಅಲ್ಲ, ನಮ್ಮ ಘರಾನಾದ ಸರೋದ್‌ಗೆ ಹಿತ್ತಾಳೆ ಬುರುಡೆ ಇರುತ್ತದೆ, ತಂತಿಗಳು ಜಾಸ್ತಿ ಇರುತ್ತವೆ. ತುಂಬಾ ರಿಫೈನ್ಡ್ ಆಗಿರುತ್ತದೆ" ಎಂದು ಹೇಳಿ ತಮ್ಮ ಸರೋದನ್ನು ನನ್ನ ಸರೋದ್ ಪಕ್ಕ ಇಟ್ಟು ವ್ಯತ್ಯಾಸಗಳನ್ನು ತೋರಿಸಿದರು.


ಅದನ್ನು ಕೇಳಿ ನನ್ನ ಎದೆ ಧಸಕ್ಕೆಂದಿತು. ಆದರೆ ಅವರು ಅದೆಷ್ಟು ವಿಶಾಲ ಮನಸ್ಸಿನವರೆಂದರೆ "ಪ್ರಾರಂಭದಲ್ಲಿ ಕಲಿಯಲು ಇದು ಸಾಕು. ನಂತರ ಕೋಲ್ಕತ್ತಾದ ಹೆಮೆನ್‌ಸೇನ್ ಅವರಿಂದ ಚೆನ್ನಾಗಿರುವ ಸರೋದನ್ನು ಮಾಡಿಸಿಕೊಡುವೆನು. ಈಗ ಇದರಲ್ಲೇ ಪಾಠ ಪ್ರಾರಂಭಿಸೋಣ" ಎಂದು ಹೇಳಿದರು.

ನನ್ನ ಸರೋದನ್ನು ಎತ್ತಿ ತಮ್ಮ ತೊಡೆಯ ಮೇಲಿಟ್ಟುಕೊಂಡು ಸರಿಗಮಪದನಿಸ ಬಾರಿಸಿ ತೋರಿಸಿದರು. ಯಾವ ಯಾವ ಬೆರಳು ಯಾವ ಯಾವ ಸ್ವರ ನುಡಿಸಬೇಕೆಂದು ಫಿಂಗರಿಂಗ್ ತೋರಿಸಿಕೊಟ್ಟರು. ಸರೋದನ್ನು ಯಾವರೀತಿ ಕಾಲ ಮೇಲೆ ಇಟ್ಟು ಕುಳಿತುಕೊಳ್ಳಬೇಕೆಂಬುದನ್ನೂ ಹೇಳಿದರು. ಆನಂತರ ಶುದ್ಧ ಬಿಲಾವಲ್ ರಾಗದಲ್ಲಿ ಸರಿಗಮಪದನಿಸ ಸನಿದಪಮಗರಿಸ ಬಾರಿಸಿ ತೋರಿಸಿ "ಹೀಗೆ ಮುಂದುವರಿಸು" ಎಂದ ಹೇಳಿ ಹೊರಗಡೆ ಹೋದರು.

ನಾನು 15-20 ನಿಮಿಷಗಳ ಕಾಲ ಅವರು ಹೇಳಿದ್ದಂತೆ ಕೂತು ಬಾರಿಸಿದೆ. ಸ್ವಲ್ಪ ಹೊತ್ತಿನಲ್ಲೇ ಕಾಲು ನೋವಾದ್ದರಿಂದ ಸರೋದನ್ನು ಕೆಳಗಿಟ್ಟು ಸ್ವಲ್ಪ ಸುಧಾರಿಸಿಕೊಂಡು ಮತ್ತೆ ಶುರುಮಾಡಿದೆ. ನಾನು ನುಡಿಸುವುದನ್ನು ಹೊರಗಡೆ ನಿಂತು ಕೇಳಿಸಿಕೊಳ್ಳುತ್ತಿದ್ದ ಗುರುಗಳು ಒಳಗಡೆ ಬಂದು "ನಿನ್ನ ಕೈ ಚೆನ್ನಾಗಿದೆ. ಈಗ ಸಾಕು ನಿಲ್ಲಿಸು. ನಾನು ಮುಂಬೈಯಿಂದ ನಿನಗೆ ಪತ್ರ ಬರೆದು ಯಾವಾಗ ಬರಬೇಕೆಂದು ತಿಳಿಸುತ್ತೇನೆ. ನೀನು ತಪ್ಪದೆ ಬಂದು ಬಿಡು" ಎಂದು ಹೇಳಿದರು. ಅಷ್ಟೇ ಅಲ್ಲ, ಅವತ್ತು ಗುರುಗಳು ನನಗೆ 'ಸರಿಗಮ' ಎಂದು ನಾಮಕರಣ ಮಾಡಿದರು. ಯಾಕೆಂದರೆ ಮೂಲತಃ ಬೆಂಗಾಳಿ ಆಗಿದ್ದ ಅವರಿಗೆ 'ಶಕಾರ' ಉಚ್ಛಾರಣೆ ಬರುತ್ತಿರಲಿಲ್ಲವಾದ್ದರಿಂದ ನನ್ನನ್ನು ಶಾಮಣ್ಣ ಎಂದು ಕರೆಯಲು ಅವರಿಗೆ ಬರುತ್ತಿರಲಿಲ್ಲ!

ಹೀಗೆ ಅವತ್ತಿನ ಪ್ರಥಮ ಪಾಠ ಮುಗಿಯಿತು. ಆದರೂ ಅವತ್ತು ನನ್ನನ್ನು ಉಬಯಕರ್ ಅವರ ಮನೆಯಲ್ಲೇ ಉಳಿಸಿಕೊಂಡರು. ಕಾರಣ ಅಂದು ರಾತ್ರಿ ಆ ಮನೆಯಲ್ಲಿ ಒಂದು ಪ್ರಯೋಗ ನಡೆಯುವುದಿತ್ತು. ಕರ್ನಾಟಕ ಸಂಗೀತ ವಿದ್ವಾಂಸ ಶ್ರೀ ದೊರೆಸ್ವಾಮಿ ಅಯ್ಯಂಗಾರ್ ಅವರ ವೀಣೆ ಮತ್ತು ಉಸ್ತಾದ್ ಅಲಿ ಅಕ್ಬರ್ ಖಾನ್ ಅವರ ಸರೋದ್ ನಡುವೆ ಒಂದು ಜುಗಲ್‌ಬಂದಿ ಕಾರ್ಯಕ್ರಮ ನಡೆಯಿತು. ರಾತ್ರಿ ಹತ್ತು ಗಂಟೆಗೆ ಪ್ರಾರಂಭವಾದ ಈ ಸಂಗೀತ ಗೋಷ್ಠಿ ಮಧ್ಯರಾತ್ರಿ ಒಂದು ಗಂಟೆಯವರೆಗೂ ನಡೆಯಿತು. ನನ್ನ ಪಾಲಿಗೆ ಅದೊಂದು ಅವಿಸ್ಮರಣೀಯ ರಾತ್ರಿ ಆಗಿತ್ತು.

ಬೆಳಗ್ಗೆ ಗುರುಗಳಿಗೆ ನಮಸ್ಕಾರಗಳನ್ನು ಹೇಳಿ ಸೈಕಲ್ ಮೇಲೆ ಸರೋದ್ ಹೊತ್ತುಗೊಂಡು ಅಣ್ಣನ ಮನೆ ತಲುಪಿದೆ. ಅಲ್ಲಿಂದ ನನ್ನ ಸರೋದ್ ಜೊತೆಗೆ ಮತ್ತೆ ರೈಲಿನಲ್ಲಿ ಮೈಸೂರಿಗೆ ವಾಪಸ್ ಬಂದೆ. ಮೈಸೂರಿನಲ್ಲಿ ಬಿ.ಎ ಪರೀಕ್ಷೆ ಬರೆದು ನನ್ನೂರು ಕಡಿದಾಳಿಗೆ ಹಿಂದಿರುಗಿದಾಗ ಮುಂಬೈನಿಂದ ಅಲಿ ಅಕ್ಬರ್ ಖಾನ್ ಅವರು ಕಳುಹಿಸಿದ್ದ ಪತ್ರ ಸಿಕ್ಕಿತು. ಆ ಪತ್ರದಲ್ಲಿ ಮುಂಬೈಯಿನ ಮಾಹಿಂ ಪ್ರದೇಶದಲ್ಲಿರುವ ತಮ್ಮ ಮನೆಗೆ ಕೂಡಲೇ ಬರಬೇಕೆಂದು ನನಗೆ ಹೇಳಿದ್ದರು.



ಅದನ್ನು ಓದಿ ಸಂತೋಷಗೊಂಡ ನಾನು ಮೈಸೂರಿಗೆ ಹೋಗಿ ಗೆಳೆಯರಿಗೆಲ್ಲ ವಿಷಯ ತಿಳಿಸಿದೆ. ಹಾ.ಮಾ. ನಾಯಕ್ ಅವರ ಮನೆಗೆ ಹೋಗಿ ಶ್ರೀದೇವಿಗೂ ವಿಷಯ ತಿಳಿಸಿದೆ. "ಮುಂಬೈ ತಲುಪಿದ ನಂತರ ಒಂದು ರೂಮ್ [illegible] ತಿಳಿಸಿ" ಎಂದು ತೇಜಸ್ವಿಯವರು ಹೇಳಿದರು. ತೇಜಸ್ವಿ ಅವರೂ ಮುಂಬೈಗೆ ಬಂದು ತಮ್ಮ ಗುರುಗಳಾಗಿದ್ದ ಹಲೀಂ ಜಾಫರ್ ಖಾನ್ ಅವರಿಂದ ಸಿತಾರ್ ಕಲಿಯಲು ಆಶಿಸಿದ್ದರು. ಆದರೆ ಅದು ಕಾರಣಾಂತರದಿಂದ ಸಾಧ್ಯವಾಗಲಿಲ್ಲ.

ನಾನು ಮುಂಬೈನಲ್ಲಿದ್ದ ನನ್ನ ಗುರುಗಳ ಮನೆ ತಲುಪಿದಾಗ ಅವರ ಪತ್ನಿ ರಾಜ ದುಲಾರಿಯವರು ತಮ್ಮ ಮನೆಯಲ್ಲೇ ನಾನು ಉಳಿದುಕೊಳ್ಳಲು ಅವಕಾಶ ಮಾಡಿಕೊಟ್ಟರು. ಅವರಿಗೆ ಇಬ್ಬರು ಸಣ್ಣ ಮಕ್ಕಳಿದ್ದರು. ಅವರೆಲ್ಲರೂ ನನ್ನನ್ನು ನನ್ನ ಗುರುಗಳಂತೆ 'ಸರಿಗಮ' ಎಂದೇ ಕರೆಯಲಾರಂಭಿಸಿದರು. ನಾನು ಗುರುಗಳ ಪತ್ನಿಯನ್ನು ಮಾತಾಜಿ ಎಂದು ಕರೆಯುತ್ತಿದ್ದೆ.

ರವಿಶಂಕರ್ ಅವರು ಅಮೆರಿಕಕ್ಕೆ ಹೋಗುವಾಗ ಹಲವೊಮ್ಮೆ ಅವರೊಂದಿಗೆ ಉಸ್ತಾದ್ ಅಲಿ ಅಕ್ಬರ್ ಖಾನ್ ಅವರೂ ಹೋಗುತ್ತಿದ್ದರು. ಒಮ್ಮೆ ಅವರಿಬ್ಬರೂ


ಉಸ್ತಾದ್ ಅಲಿ ಅಕ್ಬರ್ ಖಾನ್

ಅಮೆರಿಕಕ್ಕೆ ಹೊರಟು ನಿಂತಿದ್ದರು. ಆಗ ಖಾನ್ ಸಾಹೇಬರ ಹತ್ತಿರ ಸ್ಟುಡಿಬೇಕರ್ ಕಮಾಂಡರ್ ಎಂಬ ಉದ್ದನೆಯ ಕಾರಿತ್ತು. ಅವತ್ತು ಅವರ ಡ್ರೈವರ್ ಬಂದಿರಲಿಲ್ಲ. ಆಗ ರವಿಶಂಕರ್ ಅವರು "ನಿನಗೆ ಕಾರ್ ಬಿಡಲು ಬರುತ್ತದೆಯಾ?" ಎಂದು ನನ್ನನ್ನು ಕೇಳಿದರು. ನಾನು ಬರುತ್ತೆ ಎಂದೆ. "ನಾವು ಆ ಡ್ರೈವರ್ ಬರುವವರೆಗೆ ಕಾದು ಕುಳಿತರೆ ವಿಮಾನ ಹಿಡಿಯುವುದಕ್ಕೆ ತಡವಾಗುತ್ತದೆ. ನೀನೆ ನಮ್ಮನ್ನು ಏರೋಡ್ರೋಮ್‌ಗೆ ಬಿಟ್ಟು ವಾಪಸ್ ಕಾರ್‌ಅನ್ನು ಇಲ್ಲಿಗೆ ತಂದು ಬಿಡು" ಎಂದು ನನಗೆ ಹೇಳಿದರು.

ಅವರಿಬ್ಬರೂ ತಮ್ಮ ಸಿತಾರ್, ಸರೋದ್ ಮತ್ತು ಇತರೆ ಸಾಮಾನುಗಳನ್ನು ಮನೆಯ ಹೊರಗಿಟ್ಟು ಹೊರಟೇ ಬಿಟ್ಟರು. ನಾನು ಅವುಗಳನ್ನೆಲ್ಲ ಫ್ಲಾಟಿನಿಂದ ಕೆಳಗಿಳಿಸಿ ಕಾರಿನೊಳಗಿಟ್ಟೆ. ರವಿಶಂಕರ್ ಅವರು ಮುಂದಿನ ಸೀಟಿನಲ್ಲಿ ಕೂರುವುದಾಗಿ ಹೇಳಿದರು. ಖಾನ್ ಸಾಹೇಬರು ಹಿಂದಿನ ಸೀಟಿನಲ್ಲಿ ಕೂರುವಾಗ ಕಾರಿನ ಮೇಲ್ಭಾಗವನ್ನು ತಮ್ಮ ಬಲಗೈಯಲ್ಲಿ ಹಿಡಿದುಕೊಂಡಿದ್ದರು. ಅವರಿಬ್ಬರನ್ನು ವಿಮಾನ ನಿಲ್ದಾಣಕ್ಕೆ ಸರಿಯಾದ ಸಮಯಕ್ಕೆ ತಲುಪಿಸುವ ಗಡಿಬಿಡಿಯಲ್ಲಿದ್ದ ನಾನು ಖಾನ್ ಸಾಹೇಬರ ಕೈ ಇರುವುದನ್ನು ಗಮನಿಸದೆ ಕಾರಿನ ಹಿಂಭಾಗದ ಬಾಗಿಲನ್ನು ದೂಡಿದೆ. ಇನ್ನೇನು ಖಾನ್ ಸಾಹೇಬರ ಬೆರಳುಗಳು ಬಾಗಿಲಿಗೆ ಸಿಕ್ಕಿಹಾಕಿಕೊಳ್ಳಬೇಕು, ಆಗ ರವಿಶಂಕರ್ ಅವರು ನಾನು ದೂಡಿದ್ದ ಬಾಗಿಲನ್ನು ಸರಕ್ಕನೆ ಹಿಡಿದುಕೊಂಡರು. ಆ ಮೂಲಕ ಕ್ಷಣಾರ್ಧದಲ್ಲಿ ಖಾನ್ ಸಾಹೇಬರ ಬೆರಳುಗಳು ಜಜ್ಜಿ ಹೋಗುವ ಅಪಾಯವನ್ನು ರವಿಶಂಕರ್ ಅವರು ತಪ್ಪಿಸಿದರು.

ಸ್ವಲ್ಪದರಲ್ಲೇ ಸಂಭವಿಸಲಿದ್ದ ಅನಾಹುತ ಖಾನ್ ಸಾಹೇಬರಿಗೆ ಅರ್ಥವಾಗಿ ಅವರು ತಮ್ಮ ಹಸ್ತವನ್ನು ಬೇಗನೆ ಎಳೆದುಕೊಂಡರು. ರವಿಶಂಕರ್ ಅವರು "ಸದ್ಯ ಏನೂ ಅನಾಹುತ ಆಗಲಿಲ್ಲ" ಎಂದು ನನ್ನತ್ತ ನೋಡಿದರು. ನಾನು ಬೆವೆತು ಹೋದೆ. ಅದನ್ನು ನೋಡಿ ಅವರಿಬ್ಬರು "ಸದ್ಯ ಏನೂ ಆಗಲಿಲ್ಲ, ಈಗ ಹೊರಡು" ಎಂದರು.

ಕಾರು ಮುಂದೆ ಹೋಗುತ್ತಿದ್ದಾಗ ಖಾನ್ ಸಾಹೇಬರು ತಾವು ಚಿಕ್ಕವರಾಗಿದ್ದಾಗ ಹುಡುಗಾಟ ಮಾಡಿಕೊಂಡು ತಮ್ಮ ಬಲಗೈನ ಬೆರಳೊಂದು ಉಗುರಿನವರೆಗೆ ತುಂಡಾದದ್ದನ್ನು ರವಿಶಂಕರ್ ಅವರಿಗೆ ತೋರಿಸುತ್ತಾ "ಈಗ ನೀವು ಈ ಕಾರಿನ ಬಾಗಿಲನ್ನು ಹಿಡಿದುಕೊಳ್ಳದಿದ್ದರೆ ಅಮೆರಿಕಾದಲ್ಲಿ ನಿಮ್ಮ ಜೊತೆ ಜುಗಲ್‌ಬಂದಿಯನ್ನು ಬಾರಿಸದಂತೆ ಆಗುತ್ತಿತ್ತು" ಎಂದು ಹೇಳಿದಾಗ ನನಗಾದ ತಳಮಳ ಅಂತಿಂತಹದ್ದಲ್ಲ.

ಇಷ್ಟಾದರೂ ಧೈರ್ಯ ಕಳೆದುಕೊಳ್ಳದೆ ನಾನು ಸರಿಯಾಗಿ ಕಾರನ್ನು ಚಲಾಯಿಸುತ್ತಾ ಏರೋಡ್ರೋಮ್ ತಲುಪಿ, ಅವರಿಬ್ಬರನ್ನು ಮತ್ತು ಅವರ

▶▶ 16

ಏಕೆಂದರೆ ನಾಯಿಗಳಿಗೆ ಆತ್ಮಹತ್ಯೆ ಮಾಡಿಕೊಳ್ಳುವುದು ಗೊತ್ತಿಲ್ಲ!

'ಲಂಕೇಶ್' ಬಳಗದ ಹಿರಿಯ ವರದಿಗಾರ ರಾ. ಸೋಮನಾಥ್ ಬೀದಿ ನಾಯಿಗಳ ಬಗ್ಗೆ ವಹಿಸುತ್ತಿರುವ ಕಾಳಜಿಯು ಈಗ ಬೆಂಗಳೂರಿನಲ್ಲಿ ದೊಡ್ಡ ವಿವಾದಕ್ಕೆ ಕಾರಣವಾಗಿದೆ. ನಗರ ಪಾಲಿಕೆ, ನಾಗರಿಕರು ಹಾಗೂ ಪೊಲೀಸರು ಸೋಮನಾಥರನ್ನು ಬೀದಿ ನಾಯಿಗಳ ಆರೈಕೆ ಮಾಡದಂತೆ ನಿರ್ಬಂಧಿಸಲು ಯತ್ನಿಸುತ್ತಿದ್ದಾರೆ. ಈ ಕುರಿತಂತೆ ಸೋಮನಾಥರ ಒಂದು ಬರಹ ಇಲ್ಲಿ ಪ್ರಕಟಿಸಿದೆ.



ಯಾವುದೇ ಒಂದು ಜೀವಿಗೆ ಆಗುವ ದುಃಖ ದುಮ್ಮಾನವು ಆ ಪರಿಸರದಲ್ಲಿ ಉಸಿರಾಡುತ್ತಿರುವ ಎಲ್ಲಾ ಜೀವಿಗಳಲ್ಲೂ ಕಂಪನ ಉಂಟು ಮಾಡುತ್ತಿರುತ್ತದೇನೊ. ಈ ಅನುಕಂಪನ ನಿಜವು ಇಡೀ ಜೀವಸಂಕುಲವನ್ನೇ ಒಂದು ಎಂದು ಹೇಳುತ್ತದೆ. ಬುದ್ಧನ ಕಾರುಣ್ಯ ಇಲ್ಲಿಂದಲೇ ಮೂಡಿರಬಹುದು.

ದೇವನೂರು ಮಹಾದೇವ ಏದೆಗೆ ಬಿದ್ದ ಅಕ್ಷರದಲ್ಲಿ.

ಕಾರಣವಿಷ್ಟೆ; ನನಗೊಂದು ಹುಚ್ಚಿದೆ. ಹಾಡುಹಗಲಲ್ಲೇ ಜನನಿಬಿಡ ರಸ್ತೆಯೊಂದರ ಮೋರಿಯೊಳಗೋ, ಕಸದ ತೊಟ್ಟಿಯ ಬದಿಗೋ ಕಜ್ಜಿ ನಾಯಿಯೊಂದು ಕಣ್ಣಿಗೆ ಸಿಕ್ಕಿತ್ತೆಂದರೆ ಸಾವಕಾಶವಾಗಿ ಅದನ್ನು ಸಮೀಪಿಸಿ ಮುಟ್ಟಲೆತ್ನಿಸುತ್ತೇನೆ. ಒಂದೆರಡು ಬಿಸ್ಕತ್ತೋ, ಗರಟೆ ಚಿಪ್ಪೊಂದರಲ್ಲಿ ಗುಟುಕು ನೀರೋ ಕೊಟ್ಟಾಕ್ಷಣ ಥೇಟು ಶಾಪಗ್ರಸ್ಥನಂತೆ ಅದೊಮ್ಮೆ ಲಜ್ಜೆಯಿಂದ ನನ್ನತ್ತ ದಿಟ್ಟಿಸುತ್ತದೆ. ಅದೇ ಸಲಿಗೆಯೆಂಬಂತೆ ಅದರ ತಲೆ ನೇವರಿಸುತ್ತೇನೆ. ಅವಕಾಶವಾಯಿತೆಂದರೆ ನನ್ನ ವ್ಯಾನಿನಲ್ಲಿ ಸದಾ ಕಾಲಕ್ಕೂ ಲಭ್ಯವಿರುವ ಬೇವಿನೆಣ್ಣೆ, ಪಚ್ಚ ಕರ್ಪೂರದ ಮಿಶ್ರಣವನ್ನು ಅದರ ಗಾಯಗಳಿಗೆ ಹಾಕಿ ಬರುತ್ತೇನೆ. ನಾಲ್ಕೈದು ಬಾರಿ ಈ ರೀತಿ ಬೇವಿನೆಣ್ಣೆ ಹಚ್ಚಿ ಬಿಡಿಬಿಟ್ಟರೆ ಆ ಜೀವಿಯ ಶಾಪ ವಿಮೋಚನೆಯಾದಂತೆಯೆ.

ಬದುಕಿನ ಪ್ರತಿ ಕ್ಷಣವನ್ನೂ ರೊಕ್ಕದ ಲೆಕ್ಕದಲ್ಲೇ ನೋಡುವ ಅನುಕೂಲಸ್ಥರಿಂದಲೇ ತುಂಬಿರುವ ವಿಜಯನಗರ, ಆರ್‌ಪಿಸಿ ಲೇಔಟ್, ಚಂದ್ರಾಲೇಔಟ್, ನಾಗರಬಾವಿ ಮುಂತಾದಿ ಏರಿಯಾಗಳ ಜನಕ್ಕಿದು ವಿಚಿತ್ರವಾಗಿ ಕಾಣುತ್ತದೆ. ಹಾಡುಹಗಲಲ್ಲೇ ಕೆಲಸ ಕಾರ್ಯ ಬಿಟ್ಟು ಫುಟ್‌ಫಾತಿನಲ್ಲೋ, ಕಸದ ತೊಟ್ಟಿಯ ಬಳಿಯೋ ಕೂತು ಬೀದಿಯ ನಾಯಿಗಳ ಮೈಗೆ ಔಷಧಿ ತಿಕ್ಕುತ್ತಾ ಕೂರುವ ನಾನು ಅವರ ಪಾಲಿಗೊಬ್ಬ ಹುಚ್ಚ!

ಇಂಥದೊಂದು ವ್ಯಸನಕ್ಕೆ ನಾನು ಬಲಿಯಾಗಿ 20 ವರ್ಷಗಳೇ ಕಳೆದವು. ಮೊದಲು ನನ್ನ ಮನೆಯ ಆಕ್ಕಪಕ್ಕದ ಮೂರು ಬೀದಿ ನಾಯಿಗಳಿಗೆ ಅನ್ನ ಹಾಕುತ್ತಿದ್ದೆ. ಪ್ರತಿ ಹೊತ್ತೂ ಯಾವರೆ ಋಥಿಗತವೆಂಬಂತೆ ಅವು ನನ್ನ ಮನೆಯನ್ನೇ ದಿಟ್ಟಿಸುತ್ತಾ ಕೂರುತ್ತಿದ್ದವು. ಇವಕ್ಕೆ ಅನ್ನವಿಟ್ಟರೆ ಆನತಿ ದೂರದಿಂದ ಇದನ್ನು ನೋಡಿದ ಇನ್ನೂ ಕೆಲ ನಾಯಿಗಳು 'ನಾವು ಮಾಡಿದ ತಪ್ಪಾದರೂ ಏನು' ಎಂಬಂತೆ ದೀನವದನ ಹೊತ್ತು ಗೋಳಿಡುತ್ತಿದ್ದವು. ಮನಸ್ಸು ಚುರ್ರೆನ್ನುತ್ತಿತ್ತು.

ಹಾಳಾಗಲಿ ಎಂದು ಆ ನಾಯಿಗಳಿಗೂ ಚೂರು ಪಾರು ಬಿಸ್ಕತ್ತೋ, ಅನ್ನವೋ ಹಾಕತೊಡಗಿದೆ. ಇದು ಹಾಗೇ ಮುಂದುವರೆದು ವಿಜಯನಗರದ ಮೂರ್ನಾಲ್ಕು ರಸ್ತೆಗಳಿಗೆ ವಿಸ್ತರಿಸಿದ್ದು ಕ್ರಮೇಣ ಬೀದಿನಾಯಿಗಳ ದುರ್ಗತಿಯ ಜಾಲದೊಳಕ್ಕೇ ನಾನು ಸಿಲುಕಿ ಬಿಟ್ಟೆ!


ಇವತ್ತು ಪ್ರತಿನಿತ್ಯ ಬೆಂಗಳೂರಿನ ಐದು ಪೊಲೀಸ್ ಠಾಣೆಗಳ ವ್ಯಾಪ್ತಿಯ ನಾಲ್ಕು ವಿಧಾನಸಭಾ ಕ್ಷೇತ್ರಗಳ ಕೆಲ ಭಾಗಗಳ ಬಡೂವರೆ ಸಾವಿರದಷ್ಟು ಬೀದಿ ನಾಯಿಗಳಿಗೆ ಯಾವುದೇ ಎನ್‌ಜಿಓ ಮಾಡದ, ಯಾವುದೇ ಆರ್ಥಿಕ ನೆರವಿಲ್ಲದೆ ಪ್ರತಿನಿತ್ಯ ಆಹಾರ ಕಲ್ಪಿಸುವ ವ್ಯವಸ್ಥೆಯಿದೆ. ಸರಿಸುಮಾರು ಸಾವಿರಕ್ಕೂ ಅಧಿಕ ಬೀದಿ ನಾಯಿಗಳನ್ನು ನಾನೇ ಪಾಲಿಕೆಗೆ ಹಿಡಿದು ಕೊಟ್ಟು ಸಂತಾನಹರಣ ಶಸ್ತ್ರಚಿಕಿತ್ಸೆಗೊಳಪಡಿಸಿದ್ದೇನೆ.

ಏಕೆಂದರೆ ಹಸಿದು ಸಾಯುವುದೊಂದೇ ಹುಟ್ಟಿನ ಉದ್ದೇಶದಂತಿರುವ ಈ ಶಾಪಗ್ರಸ್ಥ ನಾಯಿಗಳ ಮಧ್ಯೆ ಮತ್ತಷ್ಟು ಜೀವಗಳು ಹುಟ್ಟಕೂಡದು!

ಇದನ್ನೇ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಂಖ್ಯಾ ನಿಯಂತ್ರಣವೆನ್ನುತ್ತದೆ. ಹಿಂದಾದರೆ ಬಿಬಿಎಂಪಿ ನವರು ಬೀದಿಯ ನಾಯಿಗಳನ್ನು ಹಿಡಿದೊಯ್ದು ಕೊಂದು ಹಾಕುತ್ತಿದ್ದರು. ಹಾಗೊಮ್ಮೆ ಬದುಕುಳಿದರೂ ಪ್ರತಿ ರಸ್ತೆಯಲ್ಲೂ ಕಸದ ತೊಟ್ಟಿಗಳಿದ್ದವು. ಜನ ಎಸೆದ ಆಹಾರವಾದರೂ ಸಿಗುತ್ತಿತ್ತು, ಆದರೆ ಪ್ರಾಣಿ ದಯಾವಂತರ ಹೋರಾಟದ ಫಲವಾಗಿ ಬೀದಿನಾಯಿಗಳನ್ನು ಕೊಲ್ಲದೆ ಅವುಗಳ ಸಂತಾನಹರಣ ಮಾಡುವ ಮೂಲಕವೇ ನಿಯಂತ್ರಿಸಬೇಕೆಂಬುದು ಇಲ್ಲಿಗೆ ಹತ್ತು ವರ್ಷದ ಹಿಂದೆಯೇ ಕಾನೂನಾಯಿತು. ದುರಂತವೆಂದರೆ ಅದೇ ಹೊತ್ತಿಗೆ 'ಸ್ವಚ್ಛ ಬೆಂಗಳೂರು' ಕಾರ್ಯಕ್ರಮ ಜಾರಿಗೆ ಬಂತು. ಅಂದರೆ ಕಸವನ್ನು ಮನೆ ಮನೆಯಿಂದ ಸಂಗ್ರಹಿಸುವ ಪದ್ಧತಿ.

ಬೆಂಗಳೂರೇನೋ ಕಸದಿಂದ ಮುಕ್ತವಾಯಿತಾದರೂ ಅದರ ಅಡ್ಡ ಪರಿಣಾಮಕ್ಕೆ ಬೀದಿನಾಯಿಗಳು ಬಲಿಯಾದವು. ಹಿಂದಿನಂತೆ ಒಮ್ಮೆಗೇ ಸತ್ತಂತಲ್ಲ, ಬದುಕ ಬೇಕೆಂದರೆ

ವಿಶೇಷಾಂಕ 2013



■ ರಾ. ಸೋಮನಾಥ್

ಕಸದ ತೊಟ್ಟಿಗಳಿಲ್ಲ, ಇದಕ್ಕಿಂತಲೂ ದೌರ್ಭಾಗ್ಯದ ಪರಮಾವಧಿಯೆಂದರೆ ಬೀದಿನಾಯಿಗಳು ಬೇರೆಲ್ಲ ಪಶುಪಕ್ಷಿಗಳಂತೆ ಮನುಷ್ಯನ ಹಂಗಿಲ್ಲದೆ ಬದುಕಲು ಸಾಧ್ಯವೇ ಇಲ್ಲ, ಸಸ್ಯಾಹಾರಿ ಪ್ರಾಣಿಗಳಾದ ಹಸು, ಮೇಕೆಗಳಂತೆ ಹುಲ್ಲನ್ನೋ, ಸೊಪ್ಪನ್ನೋ ತಿಂದು ಬದುಕುವಂತಿಲ್ಲ, ಕಾಡಿಗೆ ಹೋಗಿ ಬೇಟೆಯಾಡಿ ಬದುಕುವುದೂ ಸಾಧ್ಯವಿಲ್ಲ, ಹುಟ್ಟಿಸಿದ ದೇವರು ಹುಲ್ಲು ಮೇಯಿಸದೇ ಇರುತ್ತಾನಾ?

ಆದರೆ ನಾಯಿಯೊಂದೇ ಈ ಮಾತಿಗೆ ಅಪವಾದ. ಮನುಷ್ಯ ಕೊಟ್ಟರೆ ಮಾತ್ರವೇ ಉಂಟು ಇಲ್ಲದಿದ್ದರೆ ಇಲ್ಲ ಎಂಬ ದುರ್ಗತಿಗೀಡಾದ ಈ ಭೂಮಿಯ ಏಕೈಕ ಜೀವಿಯೇ ನಾಯಿ. ಮನುಷ್ಯನಿಗಾದರೆ ನಾಗರಿಕ ವ್ಯವಸ್ಥೆಯಿದೆ. ಮಾತನಾಡಲು ಬಲ್ಲ, ತನ್ನ ಹಸಿವನ್ನು ಭಿಕ್ಷೆ ಬೇಡಿಯಾದರೂ ನಿವಾರಿಸಿಕೊಳ್ಳಬಲ್ಲ. ನೈಸರ್ಗಿಕ ಆಹಾರ ಮೂಲವೇ ಇಲ್ಲದೆ, ತನ್ನ ಹಸಿವನ್ನೂ ಹೇಳಿಕೊಳ್ಳಲಾಗದೆ, ಕೇವಲ ಮನುಷ್ಯನ ದಯೆ-ಕರುಣೆಯೊಂದನ್ನೇ ಆಧರಿಸಿ ಬದುಕಬೇಕಾದ ದುರ್ಗತಿಯಿಂದಾಗಿಯೇ ನಾಯಿಗಳಲ್ಲಿ ನಿಯತ್ತೆಂಬುದು ರಕ್ತಗತವಾಯಿತೆ?

ನನ್ನ ಪ್ರಕಾರ ಈ ಭೂಮಿಯ ಮೇಲಿನ ಅತೀ ದೊಡ್ಡ ಅಸಹಾಯಕತೆ ಅಂತಿದ್ದರೆ ಅದು ನಾಯಿ ಪಾಡೆ!

ಏಕೆಂದರೆ ಬೀದಿಯ ನಾಯಿಗಳಿಗೆ ಆತ್ಮಹತ್ಯೆ ಮಾಡಿಕೊಳ್ಳುವುದು ಕೂಡ ಗೊತ್ತಿಲ್ಲ, ಹಸಿದು ಸಾಯುವುದರ ಹೊರತಾಗಿ ಬೇರೆ ವಿಧಿಯೇ ಅವುಗಳಿಗಿಲ್ಲ!





ಇಷ್ಟೆಲ್ಲ ಏಕೆ ಹೇಳಬೇಕಾಯಿತೆಂದರೆ, ಇತ್ತೀಚೆಗೆ ಇದ್ದಕ್ಕಿದ್ದಂತೆ ವಿಜಯನಗರ ಪೊಲೀಸರು ನನ್ನ ಮನೆ ಮೇಲೆ ನಡುರಾತ್ರಿ ದಾಳಿಯಿಟ್ಟು, ನನ್ನ ವ್ಯಾನನ್ನು ಶೋಧಿಸ ತೊಡಗಿದರು. ಮನೆಯಿಂದ ಯಾರೂ ಹೊರಹೋಗದಂತೆ ಬೆಳಗಾನ ನನ್ನನ್ನು ಗೃಹಬಂಧನಕ್ಕೊಳಪಡಿಸಲಾಯ್ತು. ಪೊಲೀಸರನ್ನು ಪ್ರಶ್ನಿಸಲಾಗಿ ಅವರು ಹೇಳಿದ್ದು 'ನೀವು ಪೊಲೀಸ್ ಠಾಣೆಗೆ ಬಂದು ಸಾಹೇಬರನ್ನು ಕಾಣಬೇಕು' ಎಂದು. ಅಲ್ಲಿಗೆ ನನಗದು ಅರ್ಥವಾಗಿತ್ತು, ನನ್ನ ವಿರುದ್ಧ ನಾನಿರುವ ರಸ್ತೆಯ ಕೆಲ ಶ್ರೀಮಂತ ನಿವಾಸಿಗಳೆಲ್ಲ ಸೇರಿ ಪೊಲೀಸ್ ಆಯುಕ್ತರಾದ ಮಿರ್ಜಿಯವರ ಬಳಿ ವಿಚಿತ್ರ ದೂರೊಂದನ್ನು ಸಲ್ಲಿಸಿದ್ದರು.

ದೂರಿನ ಸಾರಾಂಶವಿಷ್ಟೆ. ನಾನು ಮನೆಯಲ್ಲಿ 8 ರಿಂದ 10 ಬೀದಿ ನಾಯಿಗಳನ್ನು ಸಾಕಿಕೊಂಡಿದ್ದೇನಂತೆ. ಸಾಲದ್ದಕ್ಕೆ ಎಲ್ಲೆಲ್ಲಿಂದಲೋ ಬೀದಿ ನಾಯಿಗಳನ್ನು ಹಿಡಿದು ನನ್ನ ವ್ಯಾನಿಗೆ ತುಂಬಿಸಿಕೊಂಡು ಬರುತ್ತೇನಂತೆ. ರಾತ್ರಿ ಹೊತ್ತು ನಾನು ಸತ್ತ ಪ್ರಾಣಿಗಳ ಮಾಂಸವನ್ನು ವ್ಯಾನಿಗೆ ತುಂಬಿಸಿಕೊಂಡು ಬೀದಿಯ ನಾಯಿಗಳಿಗೆ ಹಾಕುತ್ತೇನಾದ್ದರಿಂದ ಅವುಗಳನ್ನು ತಿಂದ ನಾಯಿಗಳು ರಾತ್ರಿ ಇಡೀ ಚೀರಾಡುವುದರಿಂದಾಗಿ ಸುತ್ತಮುತ್ತಲ ನಾಗರಿಕ ಮಹಾಶಯರಿಗೆಲ್ಲ ನಿದ್ದೆಗೆ ಭಂಗವಂತೆ!

ಇದು ನನ್ನ ವಿರುದ್ಧ ನನ್ನ ಅಕ್ಕಪಕ್ಕದ ನಿವಾಸಿಗಳು ಕೊಟ್ಟ ದೂರು. ನನ್ನ ಮನೆಯಲ್ಲಿರುವುದು ಕೇವಲ ನಾಲ್ಕು ನಾಯಿಗಳು ಮಾತ್ರ. ಈ ಪೈಕಿ ಒಂದಕ್ಕೆ ವಯಸ್ಸಾಗಿ ಕಣ್ಣೇ ಕಾಣಿಸುವುದಿಲ್ಲ, ಇನ್ನೆರಡಕ್ಕೂ ಮುಪ್ಪಿನ ಕಾರಣದಿಂದಾಗಿ ನಡೆಯಲಾಗದ, ಬೊಗಳಲಾಗದ, ಓಡಲಾಗದ ದುರ್ಗತಿ. ಉಳಿಕೆ ಒಂದಷ್ಟೇ ಆರೋಗ್ಯವಾಗಿದೆ ಯಾದರೂ ಅದು ಮಳೆಗಾಲವೊಂದರ ಮೋರಿ ಪ್ರವಾಹದಲ್ಲಿ ಕೊಚ್ಚಿ ಬಂದಿತ್ತು, ಇಲಿ ಮರಿಯಂತಿದ್ದ ನೆಟ್ಟಗಿನ್ನೂ ಕಣ್ಣೇ ಬಿಡದಿದ್ದ, ಸತತ ಮೂರು ದಿನಗಳ ಕಾಲ ಹೊಟ್ಟೆಗೇನೂ ಇಲ್ಲದೆ ಕುಂಯ್‌ಗುಡುತ್ತಿದ್ದ ಅದಕ್ಕೆ ಯಾರೊಬ್ಬರೂ ತುತ್ತು ಅನ್ನ ಹಾಕದ್ದನ್ನು ಕಂಡ ನಾನು ಬಟ್ಟಲೊಂದರಲ್ಲಿ ಹಾಲಿಕ್ಕಿದ್ದೇ ತಪ್ಪಾಯಿತು. ಅದು ನನ್ನ ಮನೆ ಬಿಟ್ಟು ಹೋಗಲೇ ಇಲ್ಲ.

ಹೀಗೆ ನಾಲ್ಕು ನಾಯಿಗಳು ನನ್ನ ಆಸರೆಗೆ ಬಂದಿದ್ದರ ಪರಿಣಾಮ ಎಷ್ಟು ಭೀಕರವೆಂಬುದು ಕ್ರಮೇಣ ಒಂದೊಂದಾಗಿ ನನ್ನ ಅರಿವಿಗೆ ಬರಲಾರಂಭಿಸಿತು. ನಾನಿರುವ ಮನೆಯನ್ನು ಅಗದೀ ಕಮ್ಮಿ ರೇಟಿಗೆ ಹೊಡೆಯಲು ಹೊಂಚಿ ಕೂತ ಲೋಕಲ್ ರೌಡಿಯೊಬ್ಬ ಇದನ್ನೇ ನೆಪ ಮಾಡಿಕೊಂಡು ಅಕ್ಕಪಕ್ಕದ ನಿವಾಸಿಗಳನ್ನು ಎತ್ತಿಕಟ್ಟತೊಡಗಿದ. ಹಾಗೆ ನೋಡಿದರೆ ನಾನು ಬೀದಿನಾಯಿಗಳಿಗೆ ಆಹಾರ ನೀಡುವುದು ರಾತ್ರಿ ಹೊತ್ತು, ಆದೂ ನಾನಿರುವ ಮನೆಯಿಂದ ಎಷ್ಟೋ ದೂರದ ಬೇರೆಯದೇ ಪ್ರದೇಶದಲ್ಲಿ.

ನನಗೆ ತಿಳಿದಂತೆ ಹಗಲು ಹೊತ್ತು ಯಾರ ಕಣ್ಣಿಗೂ ಬೀಳದ ಬೀದಿ ನಾಯಿಗಳು ಹೊರಗೆ ಬರುವುದೇ ರಾತ್ರಿ ಹೊತ್ತು. ಆದೂ ಹಸಿವಿನಿಂದ ಆಹಾರಕ್ಕಾಗಿ ಮಾತ್ರ. ಇಂಥ ಸಮಯದಲ್ಲಿ ಅವಕ್ಕೆ ಆಹಾರ ಸಿಕ್ಕಿತೆಂದರೆ ಸಮಸ್ಯೆಯೇ ಇಲ್ಲ. ಹಸಿವಿನಿಂದ ಆಹಾರ ಹುಡುಕುತ್ತಾ ಒಂದು ರಸ್ತೆಯಿಂದ ಮತ್ತೊಂದು ರಸ್ತೆಗೆ ದಾಳಿಯಿಡುವ ನಾಯಿಗಳನ್ನು ಅಲ್ಲಿಯ ನಾಯಿಗಳು ಪ್ರತಿದಾಳಿಯಿಡುತ್ತವೆ. ಇಂಥ ಕಚ್ಚಾಟ, ಚೀರಾಟದ ಹಿಂದಿರುವ ಕಾರಣವನ್ನು ಅರ್ಥ ಮಾಡಿಕೊಳ್ಳುವವರ್‍ಯಾರು?

ಇದನ್ನು ನನ್ನ ಮನೆ ಮೇಲೆ ದಾಳಿಯಿಟ್ಟ ಪೊಲೀಸ್ ಅಧಿಕಾರಿಗೆ ಬಿಡಿಸಿ ಹೇಳಲು ಹೋದರೆ ಆತನಿಗೆ ಕೇಳುವಷ್ಟೂ ಸಹನೆಯಿಲ್ಲ, ಸತತ ಎರಡು ದಿನಗಳ ಕಾಲ ನನ್ನನ್ನು ಗೃಹಬಂಧನಕ್ಕೊಳಪಡಿಸಲಾಯ್ತು. ಹಾಳಾಗಲಿ ಎಂದು ಸುಮ್ಮನಾದರೆ ಮನೆಗೇ ನುಗ್ಗಿದ ಪೊಲೀಸರು 'ಸಾಹೇಬರು ನಿಮ್ಮನ್ನು ಈಗಿಂದೀಗಲೇ ಬಂಧಿಸಿ ತರುವಂತೆ ಹೇಳಿದ್ದಾರೆ' ಎಂದು ಬೆದರಿಸಿದರು. ಒಂದಲ್ಲ ಮೂರು ಬಾರಿ ರಾತ್ರಿ ಹೊತ್ತು ಬೀದಿ ನಾಯಿಗಳಿಗೆ ಆಹಾರ ನೀಡುತ್ತಿದ್ದಾರೆಂದು ನಮ್ಮ ಹುಡುಗರನ್ನು ವ್ಯಾನಿನ ಸಮೇತ ಬಂಧಿಸಲಾಯ್ತು. ಪ್ರತಿ ಬಾರಿಯೂ 200 ರೂಪಾಯಿಗಳು ದಂಡ ಕಟ್ಟಿದ ನಂತರವೇ ಬಂಧಿತರನ್ನು ಪೊಲೀಸರು ಬಿಟ್ಟದ್ದು.

ವಿಜಯನಗರದ ಇನ್ಸ್‌ಪೆಕ್ಟರ್ ನನಗೆ ನೀಡಿರುವ ನೋಟೀಸಿನ ಪ್ರಕಾರ ಬೀದಿ ನಾಯಿಗಳಿಗೆ ನಾನು ಆಹಾರ ನೀಡುವುದೇ ಅಪರಾಧವಂತೆ!

ಇದು ಕಳೆದ ಎರಡು ತಿಂಗಳಿನಿಂದ ವಿಜಯನಗರದ ದಯಾವಂತರಿಗೂ ಪೊಲೀಸರಿಗೂ ನಡುವಿನ ಶೀತಲ ಸಮರದ ಕೆಲ ಘಟನೆಗಳಷ್ಟೆ. ಸೂಕ್ಷ್ಮವಾಗಿ ಪರಿಶೀಲಿಸಲಾಗಿ ಒಂದಿಬ್ಬರು ಆರೆಸ್ಸೆಸ್ ಕಾರ್ಯಕರ್ತರು ಮತ್ತು ಲೋಕಲ್ ಪುಡಿರೌಡಿಯೊಬ್ಬ ಸೇರಿಕೊಂಡು ಅನಾಥ ನಾಯಿಗಳ ಬಗ್ಗೆ ನನಗಿರುವ ಕರುಣೆಯನ್ನೇ ತಮ್ಮ ಅಸ್ತ್ರವಾಗಿಸಿಕೊಂಡಿದ್ದರು.

ಸಂವಿಧಾನದ ಪ್ರಕಾರ ಪ್ರತಿಯೊಂದು ಜೀವಿಯ ಬಗೆಗೂ ಕರುಣೆ ತೋರುವುದು ಈ ದೇಶದ ಪ್ರತಿಯೊಬ್ಬ ನಾಗರಿಕನ ಆದ್ಯ ಕರ್ತವ್ಯವಂತೆ. ಬೆಂಗಳೂರಿನ ಸುಖ ಪುರುಷರೇ ತುಂಬಿರುವ ಐಷಾರಾಮೀ ಬಡಾವಣೆಗಳ 'ಸೋಕಾಲ್ಡ್ ಇಮಾಂದಾರ್' ನಾಗರಿಕರಿಗೆ ತಮ್ಮದೇ ಮನೆಯೆದುರು ಹಸಿದು ಕಂಗೆಟ್ಟ ನಾಯಿಯ ಹೊಟ್ಟೆ ಸಂಕಟ ಹೇಗೆ ತಾನೇ ಅರ್ಥವಾಗಲು ಸಾಧ್ಯ?

ನಡುರಾತ್ರಿ ಬೀದಿ ನಾಯಿಗಳಿಗೆ ಆಹಾರ ನೀಡುತ್ತಿದ್ದ ನಮ್ಮ ಹುಡುಗರ ಮೇಲೆ ಮಾರಕ ದಾಳಿಗಳಾಗಿವೆ. ಅವರ ತಕರಾರೆಂದರೆ ಬೀದಿಯ ನಾಯಿಗಳಿಗೆ ಆಹಾರ ನೀಡುವುದೇ ಮಹಾಪರಾಧವಂತೆ. ನಾವೇನೋ ಊಟ ಹಾಕುವುದು ಅಪರಾಧ ಸರಿ. ಹಾಗಂಥ ಇವುಗಳಿಗೆ ಅನ್ನ ಹಾಕುವವರ್‍ಯಾರು? ಅವಕ್ಕೂ ಹೊಟ್ಟೆಯಿದೆಯಲ್ಲವೆ? ಹೊಟ್ಟೆಗೇನು ತಿನ್ನುತ್ತವೆ ಎಂದು ಪ್ರಶ್ನಿಸಿದರೆ ಅವರಲ್ಲಿ ಉತ್ತರವಿಲ್ಲ, ತಮ್ಮ ಮನೆ, ತಮ್ಮ ಸಂಬಂಧಿಕರು, ತಮ್ಮ ಆರೋಗ್ಯ, ತಮ್ಮ ಊಟ, ತಮ್ಮ ಬ್ಯಾಂಕ್ ಬ್ಯಾಲೆನ್ಸ್‌ನ ಹೊರತಾಗಿ ದೇಶದ ಯಾವೊಂದು ಆಗುಹೋಗುಗಳೂ ಅವರಿಗೆ ಮುಖ್ಯವಲ್ಲ, ಯಾರೋ ಮರುಕಪಟ್ಟು ಬೀದಿಯ ನಾಯಿಯೊಂದಕ್ಕೆ ಅನ್ನವಿಕ್ಕುತ್ತಿದ್ದರೆ ಏಕಾಏಕಿ ಪೌರುಷ ಉಕ್ಕಿ ಬಂದಂತೆ ಅವರ ಮೇಲೆ ಜಗಳಕ್ಕಿಳಿಯುತ್ತಾರೆ. ಅದೇ ಅವರ ಮನೆ ಹೆಂಗಸನ್ನು ಯಾರೋ ಪುಂಡರು ಕಿಚಾಯಿಸುತ್ತಿದ್ದರೆ ಅದನ್ನು ಪ್ರಶ್ನಿಸುವಷ್ಟೂ ಧೈರ್ಯವಿಲ್ಲದ ಪುಕ್ಕಲರು.

ಇದನ್ನೇ **philistinism** ಅನ್ನುವುದು. ಅಂದರೆ ಸಂಸ್ಕೃತಿ ವಿರೋಧಿ ಪ್ರವೃತ್ತಿ. ಸ್ವಾರ್ಥದ ಹೊರತಾಗಿ ಬೇರೇನೂ ಈ ನಗರವಾಸಿ ಅನುಕೂಲಸ್ಥರಿಗೆ ಮುಖ್ಯವಲ್ಲ, ಕಾರ್ಗಿಲ್ ಯುದ್ಧದಲ್ಲಿ ದೇಶಕ್ಕಾಗಿ ಪ್ರಾಣಕೊಟ್ಟವರ ಸಂಬಂಧಿಕರೂ ಬೀದಿನಾಯಿಗಳನ್ನು ಕೊಂದು ತಮಗೆ ನೆಮ್ಮದಿಯಿಂದ ನಿದ್ರಿಸುವಂತೆ ಮಾಡಿ ಎಂಬ ಬೇಡಿಕೆಯಿಡಲಾರರು. ದೇಶದ ಯಾವೊಂದು ಸಮಸ್ಯೆಗೂ ಇವರು ಸ್ಪಂದಿಸಲಾರರು. ತಮ್ಮ ಸುಖವೊಂದರ ಹೊರತಾಗಿ ಬೇರೇನೂ ಕಾಣದ ಈ ಮಂದಿಯೇ ತಮ್ಮ ಮುಪ್ಪಿನ ತಂದೆ ತಾಯಿಗಳನ್ನು ವೃದ್ಧಾಶ್ರಮಕ್ಕೆ ಸಾಗಹಾಕುವಷ್ಟು ಕರುಣಾಶಾಲಿಗಳು!

ಇತ್ತೀಚೆಗೆ ಸಂಸ್ಥೆಯೊಂದು ನಡೆಸಿದ ಸಮೀಕ್ಷೆಯ ಪ್ರಕಾರ ನಗರವಾಸಿ ಜನಗಳು ದಿನೇದಿನೇ ಹೆಚ್ಚು ಹೆಚ್ಚು ಸ್ವಾರ್ಥಿಗಳೂ ನಿರ್ದಯಿಗಳೂ ಆಗುತ್ತಿದ್ದಾರಂತೆ. ಸಾಂಸ್ಕೃತಿಕವಾಗಿ ಅದನ್ನೇ ಫಿಲಿಸ್ಟಿನಿಸಮ್ ಎನ್ನುತ್ತಾರೆ. ಅದೀಗ ಸರಣಿ ಅತ್ಯಾಚಾರಗಳ ಮೂಲಕ ವ್ಯಕ್ತವಾಗುತ್ತಿದೆ. ಹಾಲುಗಲ್ಲದ ಹಸುಳೆಗಳನ್ನೂ ಬಿಡದೆ ಅತ್ಯಾಚಾರವೆಸಗುವ ಮನುಷ್ಯ ಕ್ರೌರ್ಯದ ಒಂದು ತುದಿಯಲ್ಲಿ ಐಷಾರಾಮವೂ ಮತ್ತೊಂದು ತುದಿಯಲ್ಲಿ ಹಸಿದ ನಾಯಿಗಳ ಆಕ್ರಂದನವೂ ಕೇಕೆ ಹಾಕುತ್ತಿವೆ.

ಇನ್ನು ಹಸಿವಿನ ಧೂರ್ತರಂತೆ ಅನ್ನಕ್ಕಾಗಿ ಅಲೆದಾಡುವ ಬಾಯಿಲ್ಲದ ಈ ಮೂಲಕ ಜೀವಿಗಳಿಗೆ ಅನ್ನಕೊಟ್ಟ ತಪ್ಪಿಗಾಗಿ ನಾನು ಅಪರಾಧಿಯಾಗಲೇ ಬೇಕಲ್ಲವೆ? ○

ನಾಲ್ಕು ಪಾರ್ಟಿ

ಗಾಂಧಿಯ ಕಾಲಕ್ಕೂ ಬಿರ್ಲಾರಂಥ ಉದ್ದಿಮೆಪತಿಗಳು ರಾಜಕೀಯ ಅಧಿಕಾರಕ್ಕಾಗಿ ಹಾತೊರೆದದ್ದುಂಟು. ಆದರೆ ಗಾಂಧಿ ಕಾಂಗ್ರೆಸ್ಸಿಗೆ ಫಂಡು ಕೊಡುವುದಕ್ಕಷ್ಟೇ ಬಿರ್ಲಾರನ್ನು ಸೀಮಿತಗೊಳಿಸಿದರೇ ಹೊರತು ಯಾವತ್ತಿಗೂ ರಾಜಕೀಯದೊಳಕ್ಕೆ ಬಿಟ್ಟುಕೊಳ್ಳಲಿಲ್ಲ. ಒಡೆಯರಂಥ ಲಿಕ್ಕರ್ ದೊರೆಯನ್ನು ಜೆ.ಹೆಚ್. ಪಟೇಲರು ಕೊನೆತನಕವೂ ಪಕ್ಷ ರಾಜಕಾರಣದೊಳಕ್ಕೆ ಬರಗೊಡಲಿಲ್ಲ. ಉದ್ದಿಮೆಪತಿಗಳು, ಲಿಕ್ಕರ್ ದೊರೆಗಳು, ಕ್ಯಾಪಿಟೇಶನ್ ಕುಳಗಳು, ಕಂಟ್ರಾಕ್ಟರ್‌ಗಳೆಲ್ಲ ರಾಜಕೀಯವನ್ನು ನಿಯಂತ್ರಿಸುವಂತಾದರೆ ಪ್ರಜಾತಂತ್ರದ ತಳಪಾಯವೇ ದುರ್ಬಲಗೊಳ್ಳುತ್ತದೆಯೆಂಬ ಆದರ್ಶವನ್ನು ಇನ್ನಿಲ್ಲದಂತೆ ಗಾಳಿಗೆ ತೂರಿದ್ದು ಬಿಜೆಪಿ.

ಒಂದೆಡೆ ಬಳ್ಳಾರಿಯ ಗಣಿಧಣಿಗಳು, ಮತ್ತೊಂದೆಡೆ ಕಟ್ಟಾ, ಅಶೋಕ್, ವಿಶ್ವನಾಥ್, ನಂದೀಶ್ ರೆಡ್ಡಿಯಂಥ ರಿಯಲ್ ಎಸ್ಟೇಟ್ ನೆಲಗಳ್ಳರನ್ನು ಕಟ್ಟಿಕೊಂಡು ಅಡ್ಡದಾರಿಯಲ್ಲಿ ಅಧಿಕಾರ ಹಿಡಿದ ಬಿಜೆಪಿ ಈಗ ಅದರ ಪಾಪದ ಫಲ ಉಣ್ಣುತ್ತಿದೆ.

ಬಿಜೆಪಿ: ಕೆಸರಲ್ಲೇ ಹುಟ್ಟಿತು ಕೆಸರಲ್ಲೇ ಮುಳುಗಿತು

ಪಾಲೇಮಾರ್‌ರಿಂದ ಹಿಡಿದು ಜೈಲಲ್ಲಿರುವ ಜನಾರ್ಧನ ರೆಡ್ಡಿ, ಅಣ್ಣ ಕರುಣಾಕರ ರೆಡ್ಡಿ, ಸೋಮಶೇಖರ್ ರೆಡ್ಡಿ, ಬಂಟ ಶ್ರೀರಾಮುಲು, ಕೂಡ್ಲಿಗಿಯ ನಾಗೇಂದ್ರ, ಕಂಪ್ಲಿಯ ಸುರೇಶ್ ಬಾಬು; ಇತ್ಯಾದಿಯಾಗಿ ಬರೋಬ್ಬರಿ ಒಂದು ಡಜನ್ ಬಿಜೆಪಿ ಶಾಸಕರೆಲ್ಲ ನೇರವಾಗಿ ಗಣಿ ಲೂಟಿಯಿಂದಲೇ ಬಿಜೆಪಿ ಟಿಕೆಟ್ ಗಿಟ್ಟಿಸಿ ಶಾಸಕರಾದವರು.

ಇತ್ತ ರಿಯಲ್ ಎಸ್ಟೇಟ್ ಮತ್ತು ನೆಲಗಳ್ಳತನದ ದಂಧೆಯಲ್ಲಿದ್ದು ಹೊಡೆದ ಕೊಳ್ಳೆಯನ್ನು ಬಳಸಿಯೇ



ಶಾಸಕರಾದ ಯಲಹಂಕ ವಿಶ್ವನಾಥ್, ನಂದೀಶ್ ರೆಡ್ಡಿ, ಸತೀಶ್ ರೆಡ್ಡಿ, ಕಟ್ಟಾ ನಾಯ್ಡು, ಮುನಿರಾಜು ಇತ್ಯಾದಿಗಳಲ್ಲದೆ ಎರಡು ಡಜನ್ ಬಿಜೆಪಿ ಶಾಸಕರಿಗೆಲ್ಲ ಭೂಕಬಳಿಕೆಯೇ ಮೂಲ ಕಸುಬು. ಈ ಎರಡು ದಂಧೆಗಳ ಲೂಟಿಯ ಫಲದಲ್ಲೇ ಅಧಿಕಾರ ಹಿಡಿದ ಬಿಜೆಪಿ ಮಾಡಿದ ಮತ್ತೊಂದು ಸಾಂಸ್ಕೃತಿಕ ಅನಾಹುತವೆಂದರೆ ಲಿಂಗಾಯತ ಓಟ್ ಬ್ಯಾಂಕ್ ಹುಟ್ಟು ಹಾಕಿದ್ದು. ಪರಸ್ಪರ ವಿರೋಧಾಭಾಸದ ಈ ಮೂರೂ ಪ್ರವೃತ್ತಿಗಳ ಅಂತರ್ ಘರ್ಷಣೆಯಿಂದಾಗಿ ಕನಿಷ್ಠ ಸ್ಥಿರ ಸರ್ಕಾರವನ್ನು ನೀಡುವುದಕ್ಕೂ ಆಗದೆ ಬಿಜೆಪಿ ನಲುಗಿಹೋಯಿತು. ಮುಖ್ಯಮಂತ್ರಿಯೇ ಜೈಲು ಪಾಲಾದರೆ, ಅರ್ಧ ಡಜನ್ ಮಂತ್ರಿಗಳು ಸೆಕ್ಸು, ರೇಪು, ಬ್ಲೂಫಿಲ್ಮ್ ಕಾರಣದಿಂದಾಗಿ ಮಂತ್ರಿಗಿರಿ ಕಳಕೊಂಡರು.

ಗಣಿಲೂಟಿಯ ಪಾಪದ ಫಲವಾಗೇ ಬಿಜೆಪಿ ಈಗ ಮೂರು ಹೋಳುಗಳಾಗಿ ಛಿದ್ರಗೊಂಡಿದೆ. ಬಳ್ಳಾರಿ, ಕೊಪ್ಪಳ, ಗದಗ, ರಾಯಚೂರು ಮತ್ತು ಚಿತ್ರದುರ್ಗದ ಕೆಲ ಭಾಗಗಳಲ್ಲಿ ಬಿಜೆಪಿ ತಲೆ ಎತ್ತುವುದು ಸಾಧ್ಯವೇ ಇಲ್ಲದಂತೆ ಗಣಿಚೋರರ ಪಕ್ಷವಾದ ಬಿಎಸ್‌ಆರ್ ಕಾಂಗ್ರೆಸ್ ಅಡ್ಡಗಾಲಿಡುತ್ತಿದೆ. ಮಿಕ್ಕಂತೆ ಬಿಜೆಪಿ ಪಾಲಿನ ಅಭೇದ್ಯ ಲಿಂಗಾಯತ ಓಟ್ ಬ್ಯಾಂಕ್‌ಗೆ ಅದರ ನಾಭಿಯೊಳಗಿನಿಂದಲೇ ಸೀಳಿಬಂದ ಯಡ್ಡಿಯ ಕೆಜೆಪಿ ಜಬರ್‌ದಸ್ತಾಗೇ ಲಗ್ಗೆಯಿಟ್ಟಿದೆ.

ಹೆಚ್ಚೆಂದರೆ ಇನ್ನೆರಡು ತಿಂಗಳುಗಳ ಕಾಲ ಯಡ್ಡಿ ಸಿಪ್ಪರೆಲ್ಲ ಬಿಜೆಪಿ ಸರ್ಕಾರದ ಭಾಗವಾಗಿ ಗುರುತಿಸಿಕೊಳ್ಳಬಹುದು. ಉಮೇಶ್ ಕತ್ತಿ, ಸವದಿ, ಸಿ.ಸಿ. ಪಾಟೀಲ್, ಬಸವರಾಜ ಬೊಮ್ಮಾಯಿ, ನಿರಾಣಿಯಂಥ ಉತ್ತರ ಕರ್ನಾಟಕದ ಲಿಂಗಾಯತ ಶಾಸಕ, ಮಂತ್ರಿಗಳೆಲ್ಲ ಚುನಾವಣೆ ಸಮೀಪಿಸುತ್ತಿದ್ದಂತೆಯೇ ಕೆಜೆಪಿಗೆ ನೆಗೆಯುವುದು ನಿಶ್ಚಿತ. ಅಲ್ಲಿಗೆ ಬಿಜೆಪಿ ಪಾಲಿನ ಲಿಂಗಾಯತ ಓಟ್ ಬ್ಯಾಂಕಿಗೆ ಶೆಟ್ಟರ್ ಒಬ್ಬರೇ ಉತ್ಸವಮೂರ್ತಿ!

ಕಳೆದ ವಿಧಾನಸಭಾ ಚುನಾವಣೆಯ ಲೆಕ್ಕಾಚಾರಕ್ಕೇ ಹೋದರೆ ಬಿಜೆಪಿ ಗಿಟ್ಟಿಸಿದ ಒಟ್ಟು ಮತಗಳ ಶೇಕಡಾವಾರು 33.7 ರಷ್ಟಿತ್ತು. ಕುಮಾರಸ್ವಾಮಿ ವಚನ ಭ್ರಷ್ಟರೆಂದೋ, ಲಿಂಗಾಯತರಿಗೆ ಅನ್ಯಾಯವಾಯಿತೆಂದೋ ಹುಯಿಲೆಬ್ಬಿಸಿ ಅಧಿಕಾರ ಹಿಡಿದ ನಂತರ ನಡೆದದ್ದಾದರೂ ಏನು?

ಆಯಕಟ್ಟಿನ ಜಾಗಗಳನ್ನೆಲ್ಲ ಆರೆಸ್ಸೆಸ್ ಆಕ್ರಮಿಸಿಕೊಂಡಿತು. ಲಿಂಗಾಯತ ಮಠಗಳಿಗೆ ಬೇಕಾಬಿಟ್ಟಿ ದುಡ್ಡು ಬಂತಾದರೂ ಯಡ್ಡಿಯನ್ನು ಬಿಜೆಪಿ ನಡೆಸಿಕೊಂಡ ರೀತಿ, ಆರೆಸ್ಸೆಸ್ ಪಿತೂರಿ, ಗಣಿಕಳ್ಳರ ಅಟ್ಟಹಾಸ ಮತ್ತು ಲೈಂಗಿಕ ಹಗರಣಗಳಿಂದಾಗಿ ಕರ್ನಾಟಕದ ಚರಿತ್ರೆಯಲ್ಲೇ ಅತ್ಯಂತ ಕೆಟ್ಟ ಸರ್ಕಾರವೆಂಬ ಕುಖ್ಯಾತಿ ಬಿಜೆಪಿ ತಲೆಗಂಟಿತು. ಇದೆಲ್ಲದರ ಪರಿಣಾಮವೀಗ ಯಡಿಯೂರಪ್ಪನವರ ಹೊಸ ಪಕ್ಷದ ಮೂಲಕ ವ್ಯಕ್ತವಾಗುತ್ತಿದೆ. ಶೇಕಡ 33.7 ರಷ್ಟಿದ್ದ ಬಿಜೆಪಿಯ ಒಟ್ಟೂ ಮತಗಳ ಪೈಕಿ ಕೆಜೆಪಿ ಶೇ. 7 ರಿಂದ 8 ರಷ್ಟು ಕಿತ್ತರೂ ಬಿಜೆಪಿ ಗೆಲ್ಲಬಹುದಾದ ಒಟ್ಟೂ ಸೀಟುಗಳ ಪ್ರಮಾಣದಲ್ಲಿ ಅಜಗಜಾಂತರ ವ್ಯತ್ಯಾಸವಾಗುತ್ತದೆ.

ಬಿಜೆಪಿಯ ಒಟ್ಟೂವರಿ ಮತಗಳನ್ನು ಬದಿಗಿಟ್ಟು ನೋಡಿದಾಗಲೂ ಸದ್ಯದ ಪರಿಸ್ಥಿತಿಯಲ್ಲಿ ಲಿಂಗಾಯತ ಸಮೂಹದಲ್ಲಿ ಯಡ್ಡಿಯ ಪ್ರಾಬಲ್ಯದ ಪ್ರಮಾಣ ಶೆ.70 ರಷ್ಟಾದರೆ ಬಿಜೆಪಿಯದ್ದು ಕೇವಲ 30 ರಷ್ಟು ಮಾತ್ರ. ಚುನಾವಣೆ ಸಮೀಪಿಸುತ್ತಿದ್ದಂತೆ ಈ ಅನುಪಾತ 75:25 ಆದರೂ ಅಚ್ಚರಿಯಿಲ್ಲ.

ಇನ್ನು ಗಣಿರೆಡ್ಡಿಗಳ ಪಕ್ಷವಾದ ಬಿಎಸ್‌ಆರ್ ಕಾಂಗ್ರೆಸ್‌ನ ಕಾರಣಕ್ಕಾಗಿಯೇ ಕನಿಷ್ಠ ಹತ್ತು ಸ್ಥಾನಗಳನ್ನು ಹೈದರಾಬಾದ್ ಕರ್ನಾಟಕ ಪ್ರಾಂತ್ಯದಲ್ಲಿ ಬಿಜೆಪಿ ಕಳೆದುಕೊಳ್ಳುವುದು ಶತಸ್ಸಿದ್ಧ. ಇದು ಬಿಎಸ್‌ಆರ್ ಕಾಂಗ್ರೆಸ್ ಗೆಲ್ಲಬಹುದಾದ ಶಾಸಕ ಸ್ಥಾನಗಳ ಅಂದಾಜು ಸಂಖ್ಯೆಯಾದರೆ ಉಳಿದಂತೆ ಕನಿಷ್ಠ 30 ಕ್ಷೇತ್ರಗಳಲ್ಲಿ ಬಿಎಸ್‌ಆರ್ ಕಾಂಗ್ರೆಸ್ ಅಭ್ಯರ್ಥಿಗಳು ತಲಾ ಐದು ಸಾವಿರದಂತೆ ಓಟು ಕಿತ್ತರೂ ಇದೊಂದೇ ಕಾರಣದಿಂದಾಗಿ ಬಿಜೆಪಿಗೆ ಕನಿಷ್ಠವೆಂದರೂ 25 ಸ್ಥಾನಗಳು ಕೈತಪ್ಪುತ್ತವೆ.

ಇತ್ತ ಕರಾವಳಿಯಲ್ಲೂ ಹಿಂದಿನ ಪರಿಸ್ಥಿತಿಯಿಲ್ಲ. ಹಾಲಾಡಿ ಶ್ರೀನಿವಾಸ ಶೆಟ್ಟರಿಂದ ಶುರುವಾದ ಬಿಜೆಪಿಯ ಪಾಪ ಪ್ರಾರಬ್ಧ ಕಾರವಾರದಿಂದ ಹಿಡಿದು ಪುತ್ತೂರಿನ ತನಕ ವಿಸ್ತರಿಸುತ್ತಿದೆ. ಈ ಬಾರಿ ಕಾಂಗ್ರೆಸ್ಸಿನ ಗೋಪಾಲ ಪೂಜಾರಿಯತ್ತ ಇಡೀ ಬೈಂದೂರು ಆಸಕ್ತಿ ವಹಿಸಿರುವಂತಿದೆ. ಉಡುಪಿಯಲ್ಲಿ ರಘುಪತಿ ಭಟ್ಟನನ್ನು ಆತನ ಪತ್ನಿ ಹಂತಕ ಪಾಪವೇ ನುಂಗಿಹಾಕಲಿದೆ. ಕಾಂಗ್ರೆಸ್ಸಿನ ಪ್ರಮೋದ್ ಮಧ್ವರಾಜ್ ಅಲ್ಲೀಗ ಭರವಸೆ ಮೂಡಿಸುತ್ತಿದ್ದಾರೆ. ಬೆಳ್ತಂಗಡಿಯಲ್ಲಿ ಬಂಗೇರ, ಬಂಟ್ವಾಳದಲ್ಲಿ ರಮಾನಾಥ್ ರೈ, ಕಾರ್ಕಳದಲ್ಲಿ ಗೋಪಾಲ ಭಂಡಾರಿಯಂಥ ಕಾಂಗ್ರೆಸ್ ನಾಯಕರು ಬಿಜೆಪಿಯ ಪ್ರಾಬಲ್ಯಕ್ಕೆ ಕುತ್ತಾಗಿ ಪರಿಣಮಿಸಿದ್ದಾರೆ.

ಸುಳ್ಯದಲ್ಲಿ ಅಂಗಾರ, ಸುರತ್ಕಲ್‌ನಲ್ಲಿ ಪಾಲೇಮಾರ್ ಹೆಚ್ಚೆಂದರೆ ಮೂಡುಬಿದರೆಯಲ್ಲಿ ಅಭಯಚಂದ್ರ ಜೈನ್ ಬಿಟ್ಟರೆ ಕರಾವಳಿಯಲ್ಲೆಲ್ಲೂ ಬಿಜೆಪಿಗೆ ಹಿಂದಿನ ಅನುಕೂಲವಿಲ್ಲ.

ಇತ್ತೀಚೆಗೆ ಖಾಸಗಿ ಸಂಸ್ಥೆಯೊಂದು ನಡೆಸಿದ ಸಮೀಕ್ಷೆಯ ಪ್ರಕಾರ ಮುಂದಿನ ಚುನಾವಣೆಯಲ್ಲಿ ಬಿಜೆಪಿ ಹೆಚ್ಚೆಂದರೆ 60 ರಿಂದ 70 ಸ್ಥಾನವನ್ನಷ್ಟೇ ಗಳಿಸಬಹುದಂತೆ!

ಇದು ಈಗಿನ ಲೆಕ್ಕಾಚಾರವಷ್ಟೆ. ಕೆಜೆಪಿಗೆ ಎಷ್ಟು ಸ್ಥಾನ ಲಭಿಸುತ್ತೋ ಅದು ಮುಖ್ಯವಲ್ಲ, ಅದಕ್ಕಿಂತಲೂ ಮಿಗಿಲಾಗಿ ಕನಿಷ್ಠ 60 ಕ್ಷೇತ್ರಗಳಲ್ಲಾದರೂ ಬಿಜೆಪಿಯನ್ನು ಸೋಲಿಸುವ ಶಕ್ತಿ ಯಡಿಯೂರಪ್ಪನವರಿಗಿದೆ. ಚುನಾವಣೆಯ ಹೊತ್ತಿಗೆ ಬಿಜೆಪಿ ಗಳಿಸುವ ಸ್ಥಾನಗಳ ಸಂಖ್ಯೆ 40ಕ್ಕೆ ಕುಸಿಯಬಹುದು. ಗಣಿಕಳ್ಳರ ಮೂಲಕ ಅಧಿಕಾರಕ್ಕೆ ಬಂದರೆ ಈಗ ಗಣಿಕಳ್ಳರೇ ತಿರುಗಿಬಿದ್ದಿದ್ದಾರೆ. ನೆಲಗಳ್ಳರ ಮೂಲಕ ರಾಜಧಾನಿ ಬೆಂಗಳೂರನ್ನು ಆಕ್ರಮಿಸಿಕೊಂಡರೆ ಈಗ ಅದೇ ನೆಲಗಳ್ಳ ಶಾಸಕರೆಲ್ಲ ಬೇರೆ-ಬೇರೆ ಪಕ್ಷಗಳತ್ತ ಕೈಚಾಚುತ್ತಿದ್ದಾರೆ. ಹುಟ್ಟಿ ಹಾಕಿದ ಲಿಂಗಾಯತ ಓಟ್ ಬ್ಯಾಂಕ್ ಬಿಜೆಪಿಯನ್ನೇ ಕ್ಯಾನ್ಸರ್‌ನಂತೆ ನುಂಗತೊಡಗಿದೆ.

ಬಿಜೆಪಿ ಈಗ ಲಿಂಗಾಯತರ ಪಕ್ಷವಲ್ಲ, ಬ್ರಾಹ್ಮಣ, ಮಾರ್ವಾಡಿಗಳು ಮತ್ತು ಶೆಟ್ಟರ ಪಕ್ಷವೆಂಬ ಯಾವ ಮೂಲ ಸ್ವಭಾವದಿಂದ ಗುರುತಿಸಲ್ಪಟ್ಟಿತ್ತೋ ಕೊನೆಗೆ ಅದೇ ಅಂತಿಮವಾಗಿ ನಿಜವಾಗಿದೆ. ಹಾಲಿನದ್ದು ಹಾಲಿಗೆ ನೀರಿನದ್ದು ನೀರಿಗೆ ಎನ್ನುವಂತೆ ಯಾವ ವಾಮಮಾರ್ಗಗಳನ್ನು ಬಳಸಿ ಬಿಜೆಪಿ ಅಧಿಕಾರ ಹಿಡಿಯಿತೋ ಈಗ ಅದೇ ರೋಗಕ್ಕೆ ಬಿಜೆಪಿ ಬಲಿಯಾಗುತ್ತಿದೆ.

ವಿನಾಶ ಕಾಲದ ವಿಪರೀತವೋ ಎಂಬಂತೆ ಜೆಡಿಎಸ್ ಜೊತೆ ಕೈಜೋಡಿಸಿ ಮತ್ತೆ ಅಧಿಕಾರ ಹಿಡಿಯಲು ಆರೆಸ್ಸೆಸ್ ಷಡ್ಯಂತ್ರ ಹೆಣೆಯುತ್ತಿದೆ. ಅದು ಹಿಟ್ಟು ಹಳಸಿತ್ತು ನಾಯಿಯೂ ಹಸಿದಿತ್ತು ಎಂಬಂತೆ. ○

ಜೆಡಿಎಸ್: ಆಲಸ್ಯದ ಅಡ್ಡರೋಗ

ಮದ್ದೂರಿನ ಧೈತ್ಯ ಡಿ.ಸಿ. ತಮ್ಮಣ್ಣ ಕಾಂಗ್ರೆಸ್ ತೊರೆದು ಬಂದಾಯ್ತು, ಮೈಸೂರಿನ ಪಾಳೇಗಾರ ಜಿ.ಟಿ. ದೇವೇಗೌಡರು ಬಿಜೆಪಿಯಿಂದ ನೆಗೆದು ಗೌಡರ ಪಾಳಯ ಹೊಕ್ಕಾಯ್ತು. ಮೈಸೂರಿನ ಹಳೇ ಹುಲಿ ಶಂಕರಲಿಂಗೇಗೌಡರನ್ನೂ ಸೆಳೆದದ್ದಾಯ್ತು; ಮುಸ್ಲಿಂ ನಾಯಕ ಅಬ್ಬಾಸ್ ಅಲಿ ಬೊಹ್ರಾರನ್ನು ಕರೆತಂದಿದ್ದೂ ಆಯ್ತು. ಹಾಗಂಥ ಜೆಡಿಎಸ್ ಪರಿಸ್ಥಿತಿ ಸುಧಾರಿಸಿತೆ?

ಎತ್ತಿಂದೆತ್ತ ನೋಡಿದರೂ ಮೂರಕ್ಕೇರಿಯದ ಆರಕ್ಕೇರದ ತಟಸ್ಥ ಗತಿಯಲ್ಲೇ ಜೆಡಿಎಸ್ ಉಳಿದುಬಿಟ್ಟಿದೆ.

ದೇವೇಗೌಡರಿಗೀಗ ಇಳಿ ಹುಮ್ಮಸ್ಸು ಜೊತೆಗೆ ಅನಾರೋಗ್ಯ. ಹಿಂದಿನಂತೆ ದಿನದ ಇಪ್ಪತ್ನಾಲ್ಕು ಗಂಟೆಯೂ ಸಂಘಟನೆಗೆಂದು ಸುತ್ತಲಾರರು. ಹಿರಿಮಗ ರೇವಣ್ಣನಿಗೆ ಹಾಸನವನ್ನು ಸಂಭಾಳಿಸುವುದರಲ್ಲೇ ಸುಸ್ತೋ ಸುಸ್ತು. ಹೆಚ್ಚೆಂದರೆ ಹೊಳೆನರಸಿಪುರದಲ್ಲಿ ತಾನು ಗೆಲ್ಲುವುದಕ್ಕೇ ಹೆಣಗಾಡಬೇಕಾದ ಸಮಸ್ಯೆ. ಇನ್ನು ಏಕಮೇವಾದ್ವಿತೀಯ ನಾಯಕನಂತಿರುವ ಕುಮಾರಸ್ವಾಮಿ ಎಷ್ಟಂತ, ಏನಂತ ಬೇವರು ಹರಿಸಲು ಸಾಧ್ಯ? ಬಿಜೆಪಿ ದುರಾಡಳಿತದ ವಿರುದ್ಧ ಬೀದಿಗಿಳಿಯುವುದೆಲ್ಲಿ? ಸರ್ಕಾರದ ಭ್ರಷ್ಟಾಚಾರದ ವಿರುದ್ಧ ದಾಖಲೆ ಇಡುವುದೆಲ್ಲಿ? ಕಾಂಗ್ರೆಸ್ ಕಚ್ಚಾಟದ ಲಾಭ ಪಡೆಯುವುದೆಲ್ಲಿ? ಕೆಜೆಪಿಯ ಆಕರ್ಷಣೆಯಿಂದ ತನ್ನದೇ ಪಕ್ಷವನ್ನು ಕಾಪಾಡಿಕೊಳ್ಳುವುದೆಲ್ಲಿ?

ಹೇಗೆ ಯಡಿಯೂರಪ್ಪನವರ ಕೆಜೆಪಿ ಲಿಂಗಾಯತರ ಓಟ್‌ಬ್ಯಾಂಕ್ ಅನ್ನೇ ನಂಬಿ ಕೂತಿದೆಯೋ ಹಾಗೆ ಜೆಡಿಎಸ್ ಸದ್ದಿಲ್ಲದೆ ಒಕ್ಕಲಿಗರ ಓಟ್‌ಬ್ಯಾಂಕ್ ಸುತ್ತಲೇ ಗಿರಕಿ ಹೊಡೆಯುತ್ತಿದೆ. ಕಾಂಗ್ರೆಸ್ ನಿಷ್ಕ್ರಿಯತೆ ಮತ್ತು ಬಿಜೆಪಿಯ ಲೈಂಗಿಕ ಹಗರಣಗಳ ಕಾಮಕಾಂಡದ ವಿರುದ್ಧ ದಿನಕ್ಕೊಂದು ಜನಾಂದೋಲನವನ್ನು ರೂಪಿಸುವ ಎಲ್ಲಾ ಅವಕಾಶಗಳೂ ಜೆಡಿಎಸ್‌ಗಿದ್ದವು. ಕನ್ನಡಿಗರ ಎಲ್ಲಾ ಆಶೋತ್ತರಗಳನ್ನೂ ಪ್ರತಿನಿಧಿಸಬಹುದಾದ ಶಕ್ತಿ ಸಾಮರ್ಥ್ಯವಿತ್ತು. ಗಣಿಲೂಟಿ, ಭೂಕಬಳಿಕೆ ಮತ್ತು ರೈತಾಪಿ ಸಮೂಹದ ಭೂಸ್ವಾಧೀನದ ವಿರುದ್ಧ ಹೋರಾಟಗಳನ್ನು ಸಂಘಟಿಸಿದ್ದರೂ ಜನಕ್ಕೆ ಮಣ್ಣಿನ ವಾಸನೆಯ ಪರ್ಯಾಯ ಸಾಧ್ಯತೆಯಾಗಿ ಜೆಡಿಎಸ್ ಕಂಗೊಳಿಸುತ್ತಿತ್ತು.

ಕನಿಷ್ಠ ಬಿಜೆಪಿ ಸರ್ಕಾರದ ಭ್ರಷ್ಟಾಚಾರದ ವಿರುದ್ಧ ಪ್ರಾಮಾಣಿಕವಾಗೇ ಧನಿಯೆತ್ತುತ್ತ ಬಂದಿದ್ದರೂ ಕಾಂಗ್ರೆಸ್ಸನ್ನು ಮೀರಿಸಿ ಪರ್ಯಾಯ ಸಾಧ್ಯತೆಯೊಂದನ್ನು ಕಲ್ಪಿಸುವ ವಿಪುಲ ಅವಕಾಶಗಳು ಜೆಡಿಎಸ್ ಪಾಲಿಗಿದ್ದವು. ದೇವೇಗೌಡರು ಅಪರೂಪಕ್ಕೆಂಬಂತೆ ಅಲ್ಲಲ್ಲಿ ಕಾಣಿಸಿಕೊಂಡಿದ್ದು ಬಿಟ್ಟರೆ ಒಬ್ಬ ಕುಮಾರಸ್ವಾಮಿಯನ್ನೇ ಇಡೀ ಜೆಡಿಎಸ್ ಅವಲಂಭಿಸಬೇಕು, ಅನುಸರಿಸಬೇಕು. ಇಡೀ ಜೆಡಿಎಸ್ ಪಾಲಿನ ಥಿಂಕ್‌ಟ್ಯಾಂಕ್ ಆದ ದತ್ತಾ ಇತ್ತೀಚೆಗೆ ಕಡೂರಿಗಷ್ಟೇ ಸೀಮಿತಗೊಂಡದ್ದು, ನಾರಾಯಣಸ್ವಾಮಿಯವರಂಥ ಸಜ್ಜನರು ಬಲಹೊಕ್ಕಂತೆ ಕೂತಿರುವುದು, ಚಲುವರಾಯಸ್ವಾಮಿ, ಜಮೀರ್, ಮಾಗಡಿ ಬಾಲಕೃಷ್ಣರಂಥ ಒರಟರೇ ಅಧಿಕೃತ ವಕ್ತಾರಿಕೆಗಿಳಿದಿರುವುದು ಜೆಡಿಎಸ್ ಪಾಲಿನ ಅಸದೃಶ ಕೊರತೆಯಂತೆ ಕಾಣುತ್ತದೆ.

ಕಾಂಗ್ರೆಸ್ಸಿಗೆ ಪರ್ಯಾಯವಾಗಿದ್ದ, ಬಿಜೆಪಿಗೂ ಪರ್ಯಾಯ ಆಗಬಹುದಾದ ಎಲ್ಲಾ ಸಾಧ್ಯತೆಗಳಿದ್ದೂ ಜೆಡಿಎಸ್ ಅದನ್ನು ಬಳಸಿಕೊಳ್ಳದೇ ಹೋಯಿತು. ದೌರ್ಭಾಗ್ಯವೆಂದರೆ ಈಗ ಮೂರನೇ ಸ್ಥಾನಕ್ಕಾಗಿ ಕೆಜೆಪಿ ಜೊತೆ ಜೆಡಿಎಸ್ ಹೆಣಗಾಡಬೇಕು! ಲೇಟೆಸ್ಟ್ ಸಮೀಕ್ಷೆಯೊಂದರ ಪ್ರಕಾರ ಜೆಡಿಎಸ್ ಈ ಬಾರಿ 19 ರಿಂದ 25 ಸ್ಥಾನಗಳಿಗಷ್ಟೇ ತೃಪ್ತಿ ಪಡಬೇಕಾದ ಪರಿಸ್ಥಿತಿಯಂತೆ. ಆದರೆ ವಾಸ್ತವ ಇದಕ್ಕಿಂತಲೂ ಹೀನಾಯವಾಗಿದೆ. ಮಂಡ್ಯ ಜಿಲ್ಲೆಯ ಏಳು ಕ್ಷೇತ್ರಗಳ ಪೈಕಿ ಜೆಡಿಎಸ್ ಐದರಲ್ಲೂ ಕಾಂಗ್ರೆಸ್ ಎರಡರಲ್ಲೂ ಗೆದ್ದಿದ್ದು ಈ ಬಾರಿ ತಿರುಗುಮುರುಗಾಗುವ ಸಾಧ್ಯತೆಯೇ ಹೆಚ್ಚಿದೆ. ಡಿ.ಸಿ. ತಮ್ಮಣ್ಣರ ಆಗಮನದಿಂದಾಗಿ ಮದ್ದೂರಿನ ಶಾಸಕಿ ಕಲ್ಪನಾ ಸಿದ್ಧರಾಜು ಕಂಗಾಲಾದ ಹಾಗಿದೆ. ಮಂಡ್ಯ ಶಾಸಕ ಶ್ರೀನಿವಾಸ್ ವಿರುದ್ಧ ಅಂಬಿ ನಿಂತರಂತೂ ಸಾಧ್ಯತೆ 50:50 ಗೆ ಕುಸಿಯಲಿದೆ. ನಾಗಮಂಗಲದಲ್ಲೂ ವಿಪರೀತ ಹೆಣಗಾಡಿದರಷ್ಟೆ ಜಯ ಸಿಗುತ್ತದೆ.

ಎಸ್.ಎಂ. ಕೃಷ್ಣರಿಂದ ಹಿಡಿದು ಅಂಬಿ ತನಕ ಈ ಬಾರಿ ಕಾಂಗ್ರೆಸ್ ಗೆಲುವಿಗೆ ಒಗ್ಗಟ್ಟಾಗಿ ಟೊಂಕಕಟ್ಟಿರುವುದೇ ಜೆಡಿಎಸ್‌ಗೆ ಮಂಡ್ಯದಲ್ಲಿ ನಡುಕ ಹುಟ್ಟಿಸಿದೆ. ಬೆಂಗಳೂರಿನ ವಿಷಯಕ್ಕೆ ಬಂದರೆ ಜೆಡಿಎಸ್‌ನ ಏಕೈಕ ವಾರಸುದಾರನಾಗಿದ್ದ ಜಮೀರ್‌ಗೆ ಈ ಬಾರಿ ಚಾಮರಾಜಪೇಟೆ ಸಲೀಸಾಗಿಲ್ಲ. ಕಾರಣ ಜಮೀರ್‌ನಷ್ಟೇ ಜನಪ್ರಿಯ ಯುವ ನಾಯಕ ಅಲ್ತಾಫ್ ಖಾನ್ ಈ ಬಾರಿ ಕಾಂಗ್ರೆಸ್ ಅಭ್ಯರ್ಥಿ!

ಜಫ್ರುಲ್ಲಾ ಖಾನ್ ಎಂಬ ಮಂಡ್ಯದ ಕೊಡುಗೈ ದಾನಿಯನ್ನು ಕರೆತಂದು ಚಿಕ್ಕಪೇಟೆಗೆ ನಿಲ್ಲಿಸಿದರೆ ಮಾರ್ಕೆಟ್ ದೇವಿಯನ್ನು ಮಣಿಸಬಹುದೆಂಬುದು ಜಮೀರ್ ಲೆಕ್ಕಾಚಾರ. ಹಾಗೇ ಈತನಕ ಬಿಜೆಪಿಯಲ್ಲಿದ್ದ ಅಬ್ಬಾಸ್ ಅಲಿ ಬೊಹ್ರಾರನ್ನು ಜೆಡಿಎಸ್‌ಗೆ ಕರೆತಂದು ಶಿವಾಜಿನಗರದಲ್ಲಿ ರೋಷನ್ ಬೇಗ್ ವಿರುದ್ಧ ಛೂ ಬಿಡುವ ಸಾಧ್ಯತೆಯೂ ಇದೆ. ಜೊತೆಗೆ ಖುದ್ದು ಜಮೀರ್‌ರೇ ಮುಸ್ಲಿಂ ಬಹುಸಂಖ್ಯೆಯ ಸರ್ವಜ್ಞ ನಗರಕ್ಕೆ ವಲಸೆ ಹೋಗುವ ಸೂಚನೆಯಿದೆ.

ಇದೆಲ್ಲ ಏನೇ ಆದರೂ ಕಾಂಗ್ರೆಸ್ಸಿಗೆ ಹಾನಿಯಷ್ಟೇ ಹೊರತು ಜೆಡಿಎಸ್‌ಗೆ ನಿರೀಕ್ಷಿತ ಲಾಭ ಕಷ್ಟವೇ. ಬೆಂಗಳೂರು ಗ್ರಾಮಾಂತರದ ರಾಮನಗರ, ಚನ್ನಪಟ್ಟಣ, ಮಾಗಡಿ ಮತ್ತು ಕನಕಪುರಗಳಲ್ಲಿ ಈ ಬಾರಿ ಜೆಡಿಎಸ್ ಮಂಚೂಣಿಯಲ್ಲಿರುವುದೇ ನಿಶ್ಚಿತವಾದರೂ ಕೊನೇಗಳಿಗೆಯಲ್ಲಿ ಮಾಗಡಿ ಶಾಸಕ ಬಾಲಕೃಷ್ಣರಿಗೆ ತಾಪತ್ರಯ ತಪ್ಪಿದ್ದಲ್ಲ. ಕಾಂಗ್ರೆಸ್ ನಾಯಕ ರೇವಣ್ಣ ಸದ್ಯದ ಮಟ್ಟಿಗೆ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಗಳಾದ ಜೇಡರಹಳ್ಳಿ ಕೃಷ್ಣಪ್ಪ ಮತ್ತು ಯುವ ಕಾಂಗ್ರೆಸ್ ಮುಖಂಡ ಮಂಜು ಪೈಕಿ ಯಾರಿಗೆ ಟಿಕೆಟ್ ಕೊಡಿಸಿದರೂ ಮತ್ತೊಬ್ಬರು ಕಾಲೆಯುತ್ತಾರೆ. ಹಾಗೊಮ್ಮೆ ಜೇಕೆ ಮತ್ತು ಮಂಜು ಒಂದಾದರೆಂದರೆ ಜೆಡಿಎಸ್ ನಾಯಕ ಬಾಲಕೃಷ್ಣ ನೀರು ಕುಡಿಯಲೇಬೇಕು.

ಯಡ್ಡಿ ಮೂಲಕ ಬಿಜೆಪಿ ಲಿಂಗಾಯತ ಓಟ್‌ಬ್ಯಾಂಕ್ ಹುಟ್ಟುಹಾಕಿದ್ದರ ವ್ಯತಿರಿಕ್ತ ಪರಿಣಾಮವನ್ನು ಒಳಗಿಂದೊಳಗೇ ಒಕ್ಕಲಿಗರನ್ನು ಒಗ್ಗೂಡಿಸುವ ಮೂಲಕ ಜೆಡಿಎಸ್ ಪ್ರತಿತಂತ್ರವನ್ನೇನೋ ಹೊಸೆಯಿತು. ಅದೀಗ ಒಕ್ಕಲಿಗ ಓಟ್‌ಬ್ಯಾಂಕ್ ಎಂಬ ಕೆಜೆಪಿಯ ವ್ಯತಿರಿಕ್ತ ಸಾಧ್ಯತೆಯೊಂದನ್ನು ಸೃಷ್ಟಿಸುತ್ತಿದೆ. ಸದಾನಂದ ಗೌಡ ಮುಖ್ಯಮಂತ್ರಿ ಆದಮೇಲಂತೂ ಅದು ಮತ್ತಷ್ಟು ಉಲ್ಬಣಿಸಿ, ಆದಿಚುಂಚನಗಿರಿ ಬಾಲಗಂಗಾಧರನಾಥರ ನಿಧನದ ಸಿಂಪಥಿಯ ಅಲೆಯ ಮೂಲಕ ತನ್ನ ಪರಮಾವಧಿಯನ್ನು ತಲುಪಿದೆ. ಇದೇ ಈ ಬಾರಿಯ ಜೆಡಿಎಸ್‌ಗಿರುವ ಅನುಕೂಲ ಮತ್ತು ಸುಪ್ತ ಮತ ಶಕ್ತಿ ಕೂಡ.

ಹಾಸನದಲ್ಲಿ ಈ ಬಾರಿ ಜೆಡಿಎಸ್‌ಗೆ ಹಿನ್ನಡೆಯಾದರೂ ಕೋಲಾರ ಮತ್ತು ಚಿಕ್ಕಬಳ್ಳಾಪುರದಲ್ಲಿ ಅನಿರೀಕ್ಷಿತ ಲಾಭವಾಗುವ ಸಾಧ್ಯತೆಯೇ ಹೆಚ್ಚು. ಮೈಸೂರಿನಲ್ಲಿ ತಕ್ಕಮಟ್ಟಿಗೆ ಜೆಡಿಎಸ್ ಚೇತರಿಸಿಕೊಳ್ಳಲಿದೆ. ಕೆಆರ್‌ನಗರ, ಚಾಮುಂಡೇಶ್ವರಿ, ಚಾಮರಾಜ, ಹುಣಸೂರು ಮತ್ತು ಪಿರಿಯಾಪಟ್ಟಣದಲ್ಲಿ ಜೆಡಿಎಸ್‌ಗೆ ಅನಿರೀಕ್ಷಿತ ಲಾಭವಾಗುವ ಎಲ್ಲಾ ಲಕ್ಷಣಗಳಿವೆ. ಕೋಲಾರದ ಕೆಜಿಎಫ್‌ನ ಮಾಜಿ



ಶಾಸಕ ಭಕ್ತವತ್ಸಲಂ, ಬಂಗಾರಪೇಟೆಯಲ್ಲಿ ಮುನಿನಾರಾಯಣ, ಮುಳಬಾಗಿಲಿನಲ್ಲಿ ಮುನ್ನಂಜಪ್ಪ (ಕಳೆದ ಬಾರಿ ಕೇವಲ 700 ಮತಗಳಿಂದ ಸೋತಿದ್ದರು), ಶ್ರೀನಿವಾಸಪುರದಲ್ಲಿ ವೆಂಕಟಶಿವಾ ರೆಡ್ಡಿ, ಗೌರಿಬಿದನೂರಿನಲ್ಲಿ ಜ್ಯೋತಿ ರೆಡ್ಡಿ, ಕೋಲಾರದ ಶ್ರೀನಿವಾಸಗೌಡ ಮುಂತಾದವರಿಗೆ ಈ ಬಾರಿ ಗೆಲುವು ಕಷ್ಟವೇನಲ್ಲ.

ಉತ್ತರ ಕರ್ನಾಟಕದಲ್ಲಿ ಕಮ್ಮಿಯೆಂದರೂ ಒಂದು ಡಜನ್ ಕ್ಷೇತ್ರಗಳಲ್ಲಿ ಜೆಡಿಎಸ್ ಗೆಲುವಿನ ಅಂಚಿನಲ್ಲಿದೆ. ಬಹುಶಃ ಇದೆಲ್ಲ ಲೆಕ್ಕ ಹಾಕಿಯೇ ಬಿಜೆಪಿ ಹೊಸ ಷಡ್ಯಂತ್ರವೊಂದನ್ನು ಸದಾನಂದ ಗೌಡರ ಮೂಲಕ ಹೆಣೆಯತೊಡಗಿದೆ. ಆ ಪ್ರಕಾರ ಚುನಾವಣೆಗೂ ಮೊದಲೇ ಜೆಡಿಎಸ್ ಮತ್ತು ಬಿಜೆಪಿ ಮಧ್ಯೆ ರಹಸ್ಯ ಒಡಂಬಡಿಕೆಯಾಗಬಹುದು. ಈಗಾಗಲೇ ಬಿಎಸ್‌ಆರ್ ಕಾಂಗ್ರೆಸ್ ಮತ್ತು ಜೆಡಿಎಸ್ ಮಧ್ಯೆ ಒಳಗೊಳಗೇ ನೆಂಟಸ್ತಿಕೆಯೇರ್ಪಟ್ಟಿದೆ. ಗಣಿಕಳ್ಳರ ಪಕ್ಷ ಮತ್ತು ಬಿಜೆಪಿ ಮಧ್ಯೆ ಜೆಡಿಎಸ್ ಸಂಧಾನಕ್ಕಿಳಿಯಿತೆಂದರೆ ಕುಮಾರಸ್ವಾಮಿ ಮತ್ತೊಮ್ಮೆ ಮುಖ್ಯಮಂತ್ರಿಯಾಗುವ ವಿಪರ್ಯಾಸವನ್ನೂ ಕಡೆಗಣಿಸುವಂತಿಲ್ಲ.

ಜಾತ್ಯತೀತ ಜನತಾದಳ ಎಂಬ ಹೆಸರು ಹೊತ್ತು ನಂಬಿದ ಮುಸ್ಲಿಂಮರಿಗೂ ಕೈಕೊಟ್ಟು ಬಿಜೆಪಿಯ ಗೆಳೆತನಕ್ಕಾಗಿ ಕೈಚಾಚಬೇಕಾದ ಕರ್ಮಕ್ಕೆ ಏನೆನ್ನಬೇಕು? ○

ನಾನಾ ಮುಖ

ಕೆಜೆಪಿ: ಹಳೆ ಪುಢಾರಿ, ಹೊಸ ಬಸ್ಸು

ಸೀಟು ಸಿಗದವರು, ಇದ್ದ ಬಸ್ಸಿನಲ್ಲೇ ಅತೃಪ್ತರು, ಅವಕಾಶ ...ತರು ಹೊಸ ಬಸ್ಸು ಕಂಡಾಕ್ಷಣವೇ ಎದ್ದೂ ಬಿದ್ದು ...ಳ್ಳುತ್ತಾರೆ. ಯಡಿಯೂರಪ್ಪನವರ ಕರ್ನಾಟಕ ಜನತಾ ...ಬುದು ಕರ್ನಾಟಕದ ರಾಜಕೀಯದಲ್ಲೀಗ ಹೊಸ ಬಸ್ಸು. ...ಪಿಗೆ ಭವಿಷ್ಯವಿಲ್ಲ ಎನ್ನಿಸಿ ಅದರೊಳಗಿದ್ದೇ ...ಗಾಡಿಕೊಂಡಿದ್ದವರು, ಕಾಂಗ್ರೆಸ್ಸಿನಲ್ಲಿದ್ದೂ ಕಡೆಗಣಿಸಲ್ಪ ...ು, ಜೆಡಿಎಸ್‌ನೊಳಗಿದ್ದೂ ದೇವೇಗೌಡರಿಗೂ ಸಲ್ಲದೆ ...ರಣ್ಣನ ಸಾಂತ್ವನವೂ ದಕ್ಕದೆ ತಿರಸ್ಕೃತರಗೊಂಡವರು, ...ಟ್ಟ ಪಾರ್ಟಿಗಳಲ್ಲಿದ್ದ ಅವಕಾಶವಾದಿಗಳು, ಲೆಟರ್‌ಹೆಡ್ ...ಟನೆಗಳ ಪುಡಾರಿಗಳು, ಸ್ವಯಂಘೋಷಿತ ನಾಯಕರು, ...ು ನಟನಟಿಯರಿಗೆಲ್ಲ ಕೆಜೆಪಿ ಎಂಬುದು ಹೊಸ ಬಸ್ಸು! ...ಲ್ಲಿಗೆ ಮುಟ್ಟುತ್ತೋ, ಎಲ್ಲಿ ಕೆಟ್ಟು ನಿಲ್ಲುತ್ತೋ, ಮಧ್ಯೆ ...ುತ್ತೋ ಗೊತ್ತಿಲ್ಲ. ಆದರೂ ಹತ್ತಿಕೊಳ್ಳುವವರ ಸಂಖ್ಯೆ ...ದಿದೆ. ಗೊತ್ತು ಗುರಿಯಿಲ್ಲ, ತತ್ವ ಸಿದ್ಧಾಂತಗಳ ಹಂಗಿಲ್ಲ, ನೀತಿ, ನಿಯಮಗಳಂತೂ ಗೊತ್ತೇ ಇಲ್ಲ. ಏನೇನೋ ...ದುರಾಶೆ, ಕನಸು ಹೊತ್ತು ಹತ್ತಿಕೊಂಡವರೆಲ್ಲ ನಾಳೆ ... ಇರುತ್ತಾರೆಂಬುದಕ್ಕಾಗಲಿ, ಕೊನೆತನಕ ...ಮುತ್ತಾರೆಂದಾಗಲಿ ಯಾವ ಗ್ಯಾರಂಟಿಯೂ ಇಲ್ಲ. ...ತೂ ಸತ್ಯ ಕೆಜೆಪಿಯಿಂದಾಗಿ ಕರ್ನಾಟಕದ ಅನೇಕ 'ಅತೃಪ್ತ' ...ಗಳ ಕನಸಂತೂ ಚಿಗುರಿದೆ. ಯಡ್ಡಿಯೇ ಇದರ ಡ್ರೈವರ್, ...ಾಜಿ ಕಂಡಕ್ಟರ್!

...ಹುಟ್ಟಿದ ಕೆಲವೇ ದಿನಗಳೊಳಗೆ ಕೆಜೆಪಿ ಸೃಷ್ಟಿಸಿದ ...ಿಯಂತೂ ಹಿಂದಿನ ಎಲ್ಲಾ ಪ್ರಾದೇಶಿಕ ಪಕ್ಷಗಳಿಗಿಂತಲೂ ... ರೇಣುಕಾಚಾರ್ಯನಿಂದ ಹಿಡಿದು ನಿರಾಣಿಯ ತನಕ ...ಯ ಸರಿಸುಮಾರು ನಲವತ್ತಕ್ಕೂ ಅಧಿಕ ಶಾಸಕರು ...ಲ್ಲೇ ಬಸ್ಸು ಹತ್ತಲಿದ್ದಾರೆ. ಇತ್ತೀಚಿನ ಸರ್ವೆಯೊಂದರ ... ಮುಂಬರುವ ಚುನಾವಣೆಯಲ್ಲಿ ಕೆಜೆಪಿ ಹೆಚ್ಚೆಂದರೆ 8 ... 10 ಸ್ಥಾನಗಳನ್ನಷ್ಟೇ ಗೆಲ್ಲಬಹುದೆಂಬ ಲೆಕ್ಕಾಚಾರವಿದೆ. ... ಕರ್ನಾಟಕದ ಬೇರೆ ಬೇರೆ ಪ್ರಾಂತ್ಯಗಳ ಪರಿಸ್ಥಿತಿ ಮತ್ತು ...ಶವಾದಿ ಗುಂಪುಗೂಡುವಿಕೆಯನ್ನು ನೋಡಿದರೆ ...ಮುದೇ ಸಾಧ್ಯತೆಯೊಂದು ಗೋಚರಿಸುತ್ತಿದೆ.

...ೇವೇಗೌಡರ ಭದ್ರಕೋಟೆಯಾದ ಹಾಸನವನ್ನೇ ...ಕೊಂಡರೆ ಅಲ್ಲಿ ಸಕಲೇಶಪುರ, ಅರಸಿಕೆರೆ ಮತ್ತು ಬೇಲೂರು ...ಳಲ್ಲಿ ಕೆಜೆಪಿಗೇ ನೂಕುನುಗ್ಗಲು. ಇತ್ತ ಅರಕಲಗೂಡಿಗೆ ... ಅಲ್ಲಿ ಜೆಡಿಎಸ್‌ನ ಎ.ಟಿ. ರಾಮಸ್ವಾಮಿಯವರೇ ಈ



...ಗೆಲ್ಲುತ್ತಾರೆಂಬ ನಿರೀಕ್ಷೆಯಿತ್ತು, ಹಾಲಿ ಶಾಸಕ ವಾಲೆ ... ಕಾಂಗ್ರೆಸ್ಸಿನಿಂದ ಕಣಕ್ಕಿಳಿದರೆ ತೀವ್ರ ಸೆಣಸಾಟವೇ ...ತ್ತಿತ್ತು. ಇಂಥದೊಂದು ತಥಾಗತ ಲೆಕ್ಕಾಚಾರವನ್ನು ...ರಾತ್ರಿ ತಲೆಕೆಳಗು ಮಾಡಿರುವುದು ಕೆಜೆಪಿಯ ಯೋಗಾ ... ನಿನ್ನೆ ಮೊನ್ನೆಯ ತನಕ ಪಕ್ಷೇತರನಾಗಿಯೇ ಪೈಪೋಟಿ ...ದ್ದ ರೈತನಾಯಕ ಯೋಗಾ ರಮೇಶ್ ಜಾತಿಯಲ್ಲಿ ...ಕ್ಕಲಿಗ. ಜೆಡಿಎಸ್ ಮತ್ತು ಕಾಂಗ್ರೆಸ್ ಬಿಟ್ಟರೆ ಬೇರೆ ...ೇ ಇಲ್ಲದಿದ್ದ ಅರಕಲಗೂಡಿನಂಥ ನಗಣ್ಯ ಕ್ಷೇತ್ರದಲ್ಲೂ ...ಗೆಗಿಳಿದಿದ್ದ ಪಕ್ಷೇತರ ರೈತ ನಾಯಕನೊಬ್ಬನಿಗೆ ಕೆಜೆಪಿ ...ಸಾಧ್ಯತೆಯೊಂದನ್ನು ಕಲ್ಪಿಸುತ್ತದೆ.

...ಮಧ್ಯ ಕರ್ನಾಟಕದ್ದೂ ಇದೇ ಸ್ಥಿತಿ. ದಾವಣಗೆರೆಯಿಂದ ...ದರೆ ಚನ್ನಗಿರಿ, ಹೊನ್ನಾಳಿ, ಮಾಯಕೊಂಡ, ಜಗಳೂರು, ...ಿ, ಹೊಸದುರ್ಗ, ಚಿತ್ರದುರ್ಗಗಳಲ್ಲಿ ಕೆಜೆಪಿಯ ...ಗಳಾಗಲು ಯಾಕಾಟ ಪೈಪೋಟಿಯಿದೆಯೋ ...ೂ ದೊಡ್ಡ ಜನಜಂಗುಳಿ ಕೆಜೆಪಿಯ ಸಂಭಾವ್ಯ ...ಗಳ ಮನೆ ಮುಂದಿದೆ.

..., ಶಿವಮೊಗ್ಗಕ್ಕೆ ಬಂದರೆ ಈ ಬಾರಿ ಈಶ್ವರಪ್ಪ ವಿರುದ್ಧ ...ಗಾದ ಯಡ್ಡಿ ಬಂಟ ರುದ್ರೇಗೌಡ ಗೆಲ್ಲುತ್ತಾರೆಂದೇ ಈತನಕ ಇದ್ದ ನಿರೀಕ್ಷೆ ಕೊನೇ ಗಳಿಗೆಯಲ್ಲಿ ಬದಲಾಗಿ ಯಡ್ಡಿ ಮಗ ರಾಘವೇಂದ್ರನೇ ಕಣಕ್ಕಿಳಿಯುವ ಸಾಧ್ಯತೆಯಿದೆ. ಅದು ಈಶ್ವರಪ್ಪ ವಿರುದ್ಧ ಕೆಜೆಪಿ ಪಾಲಿನ ಡಾರ್ಕ್ ಹಾರ್ಸ್. ಶಿಕಾರಿಪುರದಲ್ಲಿ ಯಡ್ಡಿಯೇ ಅಖಾಡಕ್ಕಿಳಿಯುವುದು ಶತಸ್ಸಿದ್ಧ. ಸೊರಬದಲ್ಲಿ ಹರತಾಳು ಹಾಲಪ್ಪ ತನ್ನ ಅಳಿವು ಉಳಿವಿನ ಹಣಾಹಣಿ ನಡೆಸಲೇಬೇಕು. ಮಿಕ್ಕಂಥೆ ಶಿವಮೊಗ್ಗ ಜಿಲ್ಲೆಯುದ್ದಕ್ಕೂ ಬಿಜೆಪಿಯನ್ನು ಹಣಿಯಲು ಏನೇನು ಬೇಕೋ ಅದೆಲ್ಲವನ್ನೂ ಕೆಜೆಪಿ ಮಾಡಿಯೇ ತೀರುತ್ತದೆ.

ಇದಕ್ಕಿಂತಲೂ ಅನುಕೂಲಕರ ವಾತಾವರಣ ಕೆಜೆಪಿಗೆ ಸೃಷ್ಟಿಯಾಗಿರುವುದು ತುಮಕೂರು ಜಿಲ್ಲೆಯಲ್ಲಿ. ತುಮಕೂರು ನಗರ, ಚಿಕ್ಕನಾಯಕನಹಳ್ಳಿ ಮತ್ತು ತಿಪಟೂರುಗಳು ಕೆಜೆಪಿ ಪಾಲಿನ ನಿಕ್ಕಿ ಕ್ಷೇತ್ರಗಳಾದರೆ ತುರುವೇಕೆರೆಯನ್ನು ಈಗಾಗಲೇ ಕೆಜೆಪಿ ಗೆದ್ದೇ ಬಿಟ್ಟಂಥ ಪರಿಸ್ಥಿತಿಯಿದೆ. ತುಮಕೂರು ನಗರಕ್ಕೆ ಮಂತ್ರಿ ಸೊಗಡು ಶಿವಣ್ಣನ ವಿರುದ್ಧ ಸಂಸದ ಬಸವರಾಜು ಪುತ್ರ ಜ್ಯೋತಿಗಣೇಶನೇ ಕೆಜೆಪಿ ಅಭ್ಯರ್ಥಿ. ಅದು ಸೊಗಡು ಪಾಪದ ಕೊಡ ತುಂಬಿದ ಶಕುನದಂತಿದೆ. ಚಿಕ್ಕನಾಯಕನ ಹಳ್ಳಿಗೆ ಮಾಧುಸ್ವಾಮಿಯಂಥ ಸಭ್ಯ ಮತ್ತು ಜನಪರ ಹೋರಾಟಗಾರನನ್ನು ಕೆಜೆಪಿ ಅಭ್ಯರ್ಥಿಯನ್ನಾಗಿಸಿದ್ದಕ್ಕೆ ಯಡ್ಡಿಗಲ್ಲದಿದ್ದರೂ ಮಾಧುಸ್ವಾಮಿಯ ವ್ಯಕ್ತಿತ್ವಕ್ಕಾದರೂ ಜನ ಕೆಜೆಪಿಗೆ ಓಟು ಕೊಡುತ್ತಾರೆ. ತಿಪಟೂರಿಗೆ ಪೊಲೀಸ್ ಅಧಿಕಾರಿ ಲೋಕೇಶ್ವರ್ ಈಗಾಗಲೇ ಗೆದ್ದೇ ಬಿಟ್ಟಂತೆ ಓಡಾಡುತ್ತಿರುವುದು ಹಾಲಿ ಶಾಸಕ ಮತ್ತು ಅನಂತಕುಮಾರ್ ಶಿಷ್ಯ ದಿನೇಶನ ಭವಿಷ್ಯಕ್ಕೆ ಬೆಂಕಿ ಬಿದ್ದಂತಾಗಿದೆ.

ಕಳೆದ ಉಪಚುನಾವಣೆಯಲ್ಲಿ ತುರುವೇಕೆರೆ ಜನ ಜೆಡಿಎಸ್‌ನ ಎಂ.ಟಿ. ಕೃಷ್ಣಪ್ಪನನ್ನು ಗೆಲ್ಲಿಸಿದ್ದಕ್ಕಾಗಿ ಈಗ ಪರಿತಪಿಸುವಂತಾಗಿದೆ. ಈಗಲ್ಲಿ ಪಟೇಲ್ ಜೈರಾಮ್ ಎಂಬ ಕೆಜೆಪಿ ಅಭ್ಯರ್ಥಿಯ ಗಾಳಿ ಬೀಸುತ್ತಿದೆ. ಕಾಂಗ್ರೆಸ್ಸಿನ ಚೌದುರಿ ರಂಗಪ್ಪ, ಬಿಜೆಪಿಯ ಕೊಂಡಜ್ಜಿ ವಿಶ್ವನಾಥ್ ಅಥವಾ ಬೋರೇಗೌಡರಿಗೆ ಹೋಲಿಸಿದರೆ ಕೆಜೆಪಿಯ ಪಟೇಲ್ ಜೈರಾಮ್ ನಿರುಪದ್ರವಿ ಮತ್ತು ಜನಾನುರಾಗಿ. ಗುಬ್ಬಿಯಲ್ಲೂ ಹಾಲಿ ಜೆಡಿಎಸ್ ಶಾಸಕ ವಾಸು ಪತ್ನಿಯ ದೌಲತ್ತಿನ ವಿರುದ್ಧ ಅಸಹನೆಯಿದೆ. ಗೊಲ್ಲರ ಬೆಟ್ಟಸ್ವಾಮಿ ಎಂಬ ಯುವಕನ ಬೆನ್ನಿಗೆ ಇಡೀ ಲಿಂಗಾಯತ ಸಮೂಹ ನಿಂತಿತೆಂದರೆ ಕೆಜೆಪಿ ಇಲ್ಲಿ ಪತಾಕೆ ಹಾರಿಸುವ ಸಾಧ್ಯತೆಯಿದೆ. ಕುಣಿಗಲ್‌ನಲ್ಲಿ ಮುದ್ದಹನುಮೇಗೌಡ ಜೆಡಿಎಸ್‌ಗಾಗಿ ತ್ಯಾಗ ಮಾಡದೇ ಹೋದರೆ ಮಾಜಿ ಶಾಸಕರಾದ ನಾಗರಾಜಯ್ಯ ಮತ್ತು ಲಿಂಗಪ್ಪ ಇಬ್ಬರೂ ಕೆಜೆಪಿಗೆ ಹಾರುವುದು ಶತಸ್ಸಿದ್ಧ. ಈ ಪೈಕಿ ಲಿಂಗಪ್ಪ ಏನಾದರೂ ತುಮಕೂರು ಗ್ರಾಮಾಂತರಕ್ಕೆ ಸುರೇಶ್‌ಗೌಡನ ವಿರುದ್ಧ ಕೆಜೆಪಿಯ ಹುರಿಯಾಳಾದರೆ ಗುರು ಯಡ್ಡಿಗೆ ಕೈಕೊಟ್ಟು ಬಿಜೆಪಿಯಲ್ಲೇ ಉಳಿದ ತಪ್ಪಿಗೆ ಸುರೇಶ್‌ಗೌಡ ಪಶ್ಚಾತ್ತಾಪ ಪಡಬೇಕಾಗುತ್ತದೆ.

ಇದು ಲಿಂಗಾಯತರ ಪ್ರಾಬಲ್ಯದ ತುಮಕೂರಿನಂಥ ಪ್ರದೇಶವೊಂದರಲ್ಲಿ ಕೆಜೆಪಿ ಸೃಷ್ಟಿಸಿದ ಅಬ್ಬರವಾದರೆ ಹೈದರಾಬಾದ್ ಕರ್ನಾಟಕದಲ್ಲಂತೂ ಬಿಜೆಪಿಯೇ ನಾಮಾವಶೇಷವಾಗುವ ಲಕ್ಷಣವಿದೆ. ಸದ್ಯದ ಪರಿಸ್ಥಿತಿಯಲ್ಲಿ ಕಾಂಗ್ರೆಸ್ಸಿಗಿಲ್ಲಿ ಪ್ರಬಲ ಎದುರಾಳಿ ಕೆಜೆಪಿಯೇ. ಆಳಂದ, ಅಫಜಲಪೂರ್, ಯಾದಗೀರ್, ಗುರುಮಿಠಕಲ್, ಔರಾದ್, ಬಸವಕಲ್ಯಾಣ, ಚಿಂಚೋಳಿ ಮತ್ತು ಕಮಲಾಪುರದಂಥ ಲಿಂಗಾಯತರ ಪ್ರಾಬಲ್ಯದ ಕ್ಷೇತ್ರಗಳಲ್ಲಾಗಲೇ ಬಿಜೆಪಿ ಖಾಲಿ ಹೊಡೆಯುತ್ತಿದೆ. ಬಳ್ಳಾರಿ ಭಾಗದಲ್ಲಷ್ಟೇ ಗಣಿಕಳ್ಳರ ಬಿಎಸ್‌ಆರ್ ಕಾಂಗ್ರೆಸ್ ಚೂರು ಪಾರು ಪೈಪೋಟಿಯೊಡ್ಡುವುದನ್ನು ಬಿಟ್ಟರೆ ಮಿಕ್ಕಂಥೆ ಕಾಂಗ್ರೆಸ್ಸಿಗೆ ಕೆಜೆಪಿ ಏಕೈಕ ಎದುರಾಳಿ.

ಹುಬ್ಬಳ್ಳಿ, ಧಾರವಾಡ, ಗದಗ, ಹಾವೇರಿಯಂಥ ಪ್ರದೇಶಗಳಲ್ಲಿ ಬಿಜೆಪಿ ಈಗಾಗಲೇ ನಿತ್ರಾಣ ಸ್ಥಿತಿ ತಲುಪುವುದಕ್ಕೂ ಕೆಜೆಪಿಯೇ ಕಾರಣ. ಮುಖ್ಯಮಂತ್ರಿ ಶೆಟ್ಟರ್ ವಿರುದ್ಧ ಜಬ್ಬಾರ್‌ಖಾನ್ ಹೊನ್ನಾಳಿಯನ್ನು ಕಣಕ್ಕಿಳಿಸಲು ಯಡ್ಡಿ ಎಲ್ಲಾ ಸಿದ್ಧತೆಗಳನ್ನೂ ಮುಗಿಸಿದ್ದಾಗಿದೆ. ಶೆಟ್ಟರ್‌ಗೀಗ ತನ್ನ ಸೋಲಿನದ್ದೇ ಚಿಂತೆ. ಇನ್ನು ಮೈಸೂರು ಭಾಗದಲ್ಲಿ ಚಾಮರಾಜನಗರ, ಗುಂಡ್ಲುಪೇಟೆ, ನಂಜನಗೂಡು, ವರುಣಾ ಕ್ಷೇತ್ರಗಳಲ್ಲೂ ಕೆಜೆಪಿಯದ್ದೇ ಭರಾಟೆ.

ಹೊಸ ಬಸ್ಸು ಹೊರಡಬೇಕಷ್ಟೆ. ಎಲ್ಲಿಗೆ ಹೋಗುತ್ತೋ, ಎಲ್ಲಿ ನಿಲ್ಲುತ್ತೋ ಗೊತ್ತಿಲ್ಲ. ಹಳೆಯ ಬಸ್ಸುಗಳ ಝುಂಜಾಟದಿಂದ ರೋಸತ್ತವರಿಗೆಲ್ಲ ಹೊಸದೊಂದು ಬಾಗಿಲಂತೂ ತೆರಕೊಂಡಿದೆ. ನೂಕುನುಗ್ಗಲೂ ವಿಪರೀತವಿದೆ. ಈಗಿನ ಲೆಕ್ಕಾಚಾರವೇ ನಿಜವಾಗುವುದಾದರೆ ಕನಿಷ್ಠ 20 ರಿಂದ 30 ಕ್ಷೇತ್ರಗಳಲ್ಲಿ ಕೆಜೆಪಿ ಗೆಲ್ಲುವ ಸಾಧ್ಯತೆ ಇದೆ. ಕನಿಷ್ಠ ನಲವತ್ತನ್ನಾದರೂ ಗೆದ್ದೇ ಗೆಲ್ತೀವಿ ಎಂಬುದು ಅದರ ವಾರಸುದಾರರ ನಿರೀಕ್ಷೆ.

ನಲವತ್ತನ್ನು ಕೆಜೆಪಿ ಗೆಲ್ಲುತ್ತೋ ಬಿಡುತ್ತೋ ಆದರೆ ಕನಿಷ್ಠ ಅರವತ್ತರಲ್ಲಾದರೂ ಬಿಜೆಪಿಯನ್ನು ಮಣ್ಣು ಮುಕ್ಕಿಸುವುದಂತೂ ಶತಸ್ಸಿದ್ಧ. ಅದೇ ಕೆಜೆಪಿಯ ತಾಕತ್ತು ಕೂಡ! ○

ಕಾಂಗ್ರೆಸ್: ಅನಾಯಾಸ ಅಧಿಕಾರದ ಕನಸು ಕಾಣುತ್ತ

ಯಾವುದೇ ಹೋರಾಟವಿಲ್ಲದೆ, ಶ್ರಮವನ್ನೇ ಹಾಕದೆ ಕೇವಲ ಪರಿಸ್ಥಿತಿಯ ಲಾಭದಿಂದ ಅನಾಯಾಸ ಅಧಿಕಾರ ಬಂತೆಂದರೆ ಏನಾಗುತ್ತದೆ?

ಸದ್ಯದ ಕಾಂಗ್ರೆಸ್ಸಿನ ಪಡಿಪಾಟಲೊಂದೇ ಸಾಕು, ಇಂಥ ಹಲವಾರು ಪ್ರಶ್ನೆಗಳಿಗೆ ಉತ್ತರವಾಗುತ್ತದೆ. ಇತ್ತೀಚಿನ ಒಂದೆರಡು ಸಮೀಕ್ಷೆಗಳು ಕಾಂಗ್ರೆಸ್ ಅಧಿಕಾರಕ್ಕೆ ಬರುವುದನ್ನು ಖಚಿತಪಡಿಸಿದ ಮೇಲಂತೂ ಬಿಜೆಪಿಯ ಭ್ರಷ್ಟ ಮಂತ್ರಿಗಳು, ಗೂಂಡಾ ಶಾಸಕರೆಲ್ಲ ಕಾಂಗ್ರೆಸ್ ಬಾಗಿಲಲ್ಲಿ ಸಾಲು ಗಟ್ಟಿ ನಿಂತಾಗಿದೆ. ಬರುವ ಖದೀಮರೆಲ್ಲರಿಗೂ ಬಾಗಿಲು ತೆರೆದೇ ಇದೆ!

ಸಿದ್ಧತೆಯಿಲ್ಲದೆ, ಪ್ರಯತ್ನವನ್ನೇ ಮಾಡದೆ, ಶಿಸ್ತು ಶ್ರದ್ಧೆ ಯಾವುದಕ್ಕೂ ಒಗ್ಗದೆ ನಿರಾಯಾಸ ಅಧಿಕಾರದ ಹೊಸ್ತಿಲಲ್ಲಿ ಕಾಂಗ್ರೆಸ್ ನಿಂತಿದೆ. ಅದು ಬಯಸದೇ ಬಂದ ಭಾಗ್ಯ. ಜನಕ್ಕೆ ಬಿಜೆಪಿ ದುರಾಡಳಿತ ಸಾಕಾಗಿದೆ. ಕರ್ನಾಟಕದ ಚರಿತ್ರೆಯಲ್ಲೇ ಕಂಡರಿಯದ ಅನಾಹುತಗಳೆಲ್ಲಕ್ಕೂ ಕಾರಣವಾದ ಬಿಜೆಪಿಯನ್ನು ಮತದಾರ ಕ್ಷಮಿಸುವುದು ಹಾಗಿರಲಿ ಕಣ್ಣೆತ್ತಿ ನೋಡುವುದಕ್ಕೂ ಅಸಹ್ಯಪಡುವಂತಾಗಿದೆ. ಇಂಥಾ ಸ್ಥಿತಿಯಲ್ಲಿ ಅಧಿಕಾರ ಹಿಡಿಯಲು ನಿಂತ ಕಾಂಗ್ರೆಸ್ ಹೇಗಿರಬೇಕು–

ಆಸ್ಕರ್ ಫರ್ನಾಂಡೀಸ್‌ರನ್ನು ಕಂಡರೆ ಕೃಷ್ಣರಿಗೆ ಅಷ್ಟಕ್ಕಷ್ಟೆ. ಶತಗತಾಯ ಖರ್ಗೆಯನ್ನು ಮುಖ್ಯಮಂತ್ರಿ ಮಾಡಿಯೇ ತೀರುತ್ತೇನೆನ್ನುವ ಆಸ್ಕರ್‌ಗೆ ಜಾಫರ್ ಷರೀಫರನ್ನು ಕಂಡರಾಗದು. ಮೊಯ್ಲಿಗೆ ಮುನಿಯಪ್ಪ ಅಪಥ್ಯ. ಶಾಮನೂರು ಖರ್ಗೆಗೆ ಅಲರ್ಜಿ. ಪರಮೇಶ್ವರ್ ವಿರುದ್ಧ ಸಿದ್ದುಗೆ ಅಸಹನೆ. ಸಿದ್ದು ಕಂಡರೆ ಹರಿಪ್ರಸಾದ್‌ಗೆ ಅಷ್ಟಕ್ಕಷ್ಟೆ. ಇನ್ನು ದೇಶಪಾಂಡೆ, ಧರಂಸಿಂಗ್, ಪೂಜಾರಿ, ಕಾಗೋಡು, ಉಗ್ರಪ್ಪ ಇತ್ಯಾದಿಗಳದ್ದು ಅವರವರದ್ದೇ ಪ್ರತ್ಯೇಕ ದಾರಿ.

ಬಿಜೆಪಿಯ ಪಾಪದ ಫಲವೇ ಕಾಂಗ್ರೆಸ್ ಪಾಲಿಗೆ ರೊಟ್ಟಿಯಾಗಿ ಅಧಿಕಾರದ ತುಪ್ಪದೊಳಕ್ಕೆ ಜಾರಿಬೀಳುತ್ತಿದೆ. ಜನಕ್ಕೆ ಬೇರೆ ದಾರಿಯೇ ಇಲ್ಲ. ಬಿಜೆಪಿಯ ಕರಾಳ ಪ್ರಭುತ್ವ ಕೊನೆಗಾಣಬೇಕೆಂದರೆ ಕಾಂಗ್ರೆಸ್ಸಿನ ಹೊರತಾಗಿ ಬೇರೆ ಗತಿಯಿಲ್ಲ. ಹಾಗಿರುವಾಗ ಯಾವ ಮಟ್ಟದ ಸಿದ್ಧತೆ, ಶಿಸ್ತು ಜನ ಕಾಳಜಿ ಕಾಂಗ್ರೆಸ್ಸಿನಿರಬೇಕಿತ್ತೋ ಅದು ವ್ಯಕ್ತವಾಗುತ್ತಿಲ್ಲವೆಂದರೆ ಆ ನಿಟ್ಟಿನಲ್ಲಿ ಸಣ್ಣದೊಂದು ಪ್ರಯತ್ನವಾದರೂ ಇರಬೇಕಲ್ಲವೆ?

ಕಾಂಗ್ರೆಸ್ಸಿಗೆ ಅಧಿಕಾರ ಭಾರ ಮತ್ತು ಮೈಬಗ್ಗದ ಆಲಸ್ಯ. ಸದ್ಯ ಸೋನಿಯಾ ಮೇಡಮ್ ಕರ್ನಾಟಕದ ಕಾಂಗ್ರೆಸ್ಸಿಗರ ಮಟ್ಟಿಗೆ ಪ್ರಕಟವಾಗುವುದೇ ಆಸ್ಕರ್ ಮೂಲಕ. ದೆಹಲಿ ದೊರೆಸಾನಿಯ ಗರ್ಭಗುಡಿಯ ಪೂಜಾರಿಯಂತೆ ಪ್ರತಿಯೊಂದನ್ನೂ ತನ್ನ ಮೂಗಿನ ನೇರಕ್ಕೇ ರೂಪಿಸುವ ನಿಟ್ಟಿನಲ್ಲಿ ಆಸ್ಕರ್ ಬೆಂಬಲಿಸುತ್ತಿರುವುದು ಖರ್ಗೆಯನ್ನು!

ಸಮಸ್ಯೆಯೆಂದರೆ ಖರ್ಗೆ ಮಾಸ್ ಲೀಡರಲ್ಲ. ಕೆಲಸಗಾರ ನಿಜ. ಕೇಂದ್ರ ಕಾರ್ಮಿಕ ಮಂತ್ರಿಯಾಗಿ ಹಿಂದೆಂದೂ ಮಾಡದ ಯೋಜನೆಗಳನ್ನು ತಂದಿರುವುದೂ ಸತ್ಯ. ಆದರೆ ಅದಷ್ಟೇ ಸರ್ಕಾರವೊಂದರ ಸ್ಥಾಪನೆಗೆ ಸಾಲುವುದಿಲ್ಲ. ಬಲಗೈ ದಲಿತರೆಲ್ಲ ಸಾರಾಸಗಟಾಗಿ ಖರ್ಗೆಯನ್ನು ಬೆಂಬಲಿಸುತ್ತಾರಾದರೂ ಎಡಗೈ ಮಾದಿಗ ಸಮೂಹಕ್ಕೆ ಖರ್ಗೆ ವಿರುದ್ಧ ಆಜನ್ಮ ಅಸಹನೆಯಿದೆ. ಇನ್ನು ಬೋವಿ, ಲಂಬಾಣಿ, ಕೊರಮ, ಕೊರಚರಂಥ ಸ್ಪೃಷ್ಯ ಸಮೂಹಗಳಿಂದೂ ಖರ್ಗೆಯತ್ತ ಅಕ್ಕರೆ ಬೀರಿದ್ದಿಲ್ಲ. ದಲಿತ ಸಮೂಹದಲ್ಲೇ ಸಮ್ಮತಿಯಿಲವೆಂದ ಮೇಲೆ ಇನ್ನು ಮೇಲ್ಜಾತಿಗಳ ಪಾಲಿಗೆ ಖರ್ಗೆ ಸಹ್ಯವಾಗುವುದುಂಟೆ?

ಕೇಂದ್ರದ ರಾಜಕಾರಣಕ್ಕೆ ಒಗ್ಗದೆ ರಾಜ್ಯ ಕಾಂಗ್ರೆಸ್ ಉದ್ಧಾರಗೈಯುತ್ತೇನೆಂದು ಭಾರೀ ನಿರೀಕ್ಷೆ–ಪ್ರಚಾರದ ಮೂಲಕವೇ ಬಂದವರು ಎಸ್.ಎಂ. ಕೃಷ್ಣ. ಕೃಷ್ಣ ಮಹಾನ್ ಒಕ್ಕಲಿಗರ ನಾಯಕನೆಂದೂ ಅವರನ್ನು ಮುಂದಿಟ್ಟುಕೊಂಡರೆ ರಾಜ್ಯದಲ್ಲಿ ಕಾಂಗ್ರೆಸ್ ಗೆದ್ದೇಬಿಡುತ್ತದೆಯೆಂದೂ ಅವರ ಅನುಯಾಯಿಗಳು ನಂಬಿರಬಹುದು. ತನ್ನ ತವರು ನೆಲದಲ್ಲೇ ಗೆಲ್ಲಲಾಗದ, ತವರು ಜಿಲ್ಲೆಯನ್ನೇ ಜೆಡಿಎಸ್ [illegible] ಮಾಡಿದ, ಮುಖ್ಯಮಂತ್ರಿಯಾಗಿದ್ದೂ ಕಾಂಗ್ರೆಸ್ಸನ್ನು ಅಧಿಕಾರಕ್ಕೆ ತರಲಾಗದ ಕೃಷ್ಣ ಓರ್ವ ಕಾಗದದ ಹುಲಿಯಾಗಬಹುದೇ ಹೊರತು ಒಕ್ಕಲಿಗರ ಪಾಲಿಗೆ ನಾಯಕ ಅಲ್ಲ. ಕೃಷ್ಣರಿಂದ ಕಾಂಗ್ರೆಸ್‌ಗೆ ನಯಾ ಪೈಸೆಯ ಲಾಭವಿಲ್ಲ.

ಎಸ್.ಎಂ. ಕೃಷ್ಣರ ದಲಿತ ಆವೃತ್ತಿಯಂತಿರುವ ಪರಮೇಶ್ವರ್ ಈ ಬಾರಿ ಸ್ವಕ್ಷೇತ್ರ ಮಧುಗಿರಿಯಲ್ಲೇ ಮೂರನೇ ಸ್ಥಾನಕ್ಕಿಳಿಯುವ ಸಾಧ್ಯತೆಯಿರುವಾಗ ಇನ್ನು ಮುಖ್ಯಮಂತ್ರಿ ಅಭ್ಯರ್ಥಿಯೆಂದರೆ ಜನ ಹಾಕುವ ಓಟನ್ನೂ ಹಾಕಲಾರದ ದುರ್ಗತಿಯಿದೆ.

ಇಂಥ ಪರಿಸ್ಥಿತಿಯಲ್ಲಿ ಕಾಂಗ್ರೆಸ್ ಪಾಲಿಗೆ ಮಾಸ್ ಲೀಡರ್ ಮತ್ತು ಅನಿವಾರ್ಯ ಆಯ್ಕೆಯಂತಿದ್ದರೆ ಅದು ಸಿದ್ದರಾಮಯ್ಯ! ಬಿಜೆಪಿ ಅಧಿಕಾರದುದ್ದಕ್ಕೂ ವಿರೋಧಿ ನಾಯಕನಾಗಿ ನಿರೀಕ್ಷೆಯಷ್ಟಲ್ಲದಿದ್ದರೂ ಮಿಕ್ಕೆಲ್ಲರಿಗೂ ಭಿನ್ನವಾಗಿ ಪ್ರತಿಭಟನಾ ರಾಜಕಾರಣ ನಡೆಸಿದ್ದೇ ಸಿದ್ದು. ಗಣಿ ಲೂಟಿಯ ವಿರುದ್ಧ ಬಳ್ಳಾರಿಗೆ ಕಾಂಗ್ರೆಸ್ ಪಾದಯಾತ್ರೆಗೆ ನೇತೃತ್ವ ವಹಿಸಿದ್ದ ಸಿದ್ದು ಹೋರಾಟದ ಫಲವಾಗೇ ಗಾಲಿ ರೆಡ್ಡಿ ಗ್ಯಾಂಗ್ ಜೈಲು ಪಾಲಾಗುವಂತಾಯ್ತು. ಇವತ್ತಿಗೂ ಕರ್ನಾಟಕದ ಪ್ರಜ್ಞಾವಂತ ಜನಸಮೂಹದ ಪಾಲಿಗೆ ಸಿದ್ದುವೇ ಭರವಸೆಯ ನಾಯಕನಂತೆ ಕಾಣಿಸುತ್ತಾರೆ. ಆದರೆ ಕಾಂಗ್ರೆಸ್



ಸಂಸ್ಕೃತಿಯೇ ಬೇರೆ!

ಅದಕ್ಕೇ 'ಜೀ ಹುಜೂರ್' ಟೈಪಿನ ಮುಖ್ಯಮಂತ್ರಿ ಬೇಕು. ಸ್ವಂತ ಬುದ್ಧಿ ಸ್ವಂತ ವ್ಯಕ್ತಿತ್ವ ಇರಕೂಡದು. ಜನಪ್ರಿಯತೆ, ಸ್ವಂತ ಸ್ವಾಮರ್ಥ್ಯಗಳೆಲ್ಲವೂ ಇಲ್ಲಿ ಅಪಥ್ಯ. ಹೀಗಿರುವಾಗ ಸಿದ್ದು ಎಂಬ ಸಾಮೂಹಿಕ ವ್ಯಕ್ತಿತ್ವವೊಂದು ಕಾಂಗ್ರೆಸ್ ಸಂಸ್ಕೃತಿಗೆ ಸುಲಭಕ್ಕೆ ಒಗ್ಗುವಂಥದ್ದಲ್ಲ. ಮುಖ್ಯಮಂತ್ರಿ ಅಭ್ಯರ್ಥಿಯಾಗಿ ಸಿದ್ದರಾಮಯ್ಯನವರನ್ನು ಈ ಹೊತ್ತಿಗಾಗಲೇ ಕಾಂಗ್ರೆಸ್ ಬಿಂಬಿಸಿದ್ದರೆ ಬೇರೆಯದೇ ಸಾಧ್ಯತೆಯೊಂದು ತೆರೆದುಕೊಳ್ಳುತ್ತಿತ್ತಾದರೂ ಆ ರೀತಿ ಮಾಡುವಷ್ಟು ಔದಾರ್ಯ ಅದಕ್ಕಿಲ್ಲ.

ಇಷ್ಟಾಗ್ಯೂ ಕಾಂಗ್ರೆಸ್ ಕರ್ನಾಟಕದ ಪಾಲಿಗೆ ಅನಿವಾರ್ಯವಾಗುವುದು ಎರಡು ಕಾರಣಕ್ಕೆ. ಒಂದು ಬಿಜೆಪಿಯ ದುರುಳತನ ಮತ್ತೊಂದು ಕಾಂಗ್ರೆಸ್ ಹೊರತಾಗಿ ಬೇರಾವ ಪಕ್ಷಗಳಿಗೂ ರಾಜ್ಯವ್ಯಾಪ್ತಿಯ ಇಲ್ಲದಿರುವುದು. ಕಳೆದ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಗಿಟ್ಟಿಸಿದ ಒಟ್ಟೂ ಮತಗಳ ಪ್ರಮಾಣ ಶೇ. 34.5 ರಷ್ಟು. ಕಾಂಗ್ರೆಸ್ಸಿಗಿಂತ ಕಮ್ಮಿ ಅಂದರೆ ಶೇ. 33.3 ರಷ್ಟು–ಓಟು ಪಡೆದ ಬಿಜೆಪಿಯೇ ಅಧಿಕಾರ ಹಿಡಿಯುವಂತಾಯ್ತು. ಆದರೆ ಮೂವತ್ತೋ ಮೂವತ್ತೆರಡೋ ಕ್ಷೇತ್ರಗಳಲ್ಲಿ ಬಿಜೆಪಿ ವಿರುದ್ಧ ಸೋತ ಕಾಂಗ್ರೆಸ್ ಅಭ್ಯರ್ಥಿಗಳ ಸೋಲಿನ ಅಂತರವಿದ್ದದ್ದು ಒಂದೂ ಒಂದೂವರೆ ಸಾವಿರದಷ್ಟು ಮಾತ್ರ.

ಈಗ ಬಳ್ಳಾರಿ ಭಾಗದಲ್ಲಿ ಬಿಎಸ್‌ಆರ್ ಕಾಂಗ್ರೆಸ್‌ನ ಪ್ರತಿ ಅಭ್ಯರ್ಥಿ ಕನಿಷ್ಠ ಎರಡು ಸಾವಿರದಷ್ಟು ಮತ ಕಿತ್ತರೂ ಸಾಕು ಕಾಂಗ್ರೆಸ್ ಅಲ್ಲಿ ನಿರಾಯಾಸವಾಗಿ ಗೆಲ್ಲುತ್ತದೆ. ಕೆಜೆಪಿ ಅಭ್ಯರ್ಥಿಗಳು ಗೆಲ್ಲುವುದಿರಲಿ ಕನಿಷ್ಠ ನಲವತ್ತು ಕ್ಷೇತ್ರಗಳಲ್ಲಿ ತಲಾ ಸಾವಿರವೋ ಸಾವಿರದೈನೂರೋ ಮತಗಳಿಸಿದರೂ ಸಾಕು ಕಾಂಗ್ರೆಸ್ ಸಲೀಸಾಗಿ ಗೆದ್ದು ಬರುತ್ತದೆ. ಗಣಿ ಲೂಟಿಯ ವಿರುದ್ಧ ಸಿಬಿಐ ಕಟು ನಿರ್ಧಾರ ತಾಳದೇ ಹೋಗಿದ್ದರೆ, ಗಾಲಿ ರೆಡ್ಡಿಯನ್ನು ಜೈಲಿಗೆ ದಬ್ಬದೇ ಹೋಗಿದ್ದರೆ ಇದು ಸಾಧ್ಯವಾಗುತ್ತಿತ್ತೆ?

ಇನ್ನು ಯಡ್ಡಿಯ ವಿರುದ್ಧ ಸಿಇಸಿ ಗಣಿ ಅಕ್ರಮದ ಆರೋಪ ಹೊರಿಸಿ ಅದನ್ನು ಸಿಬಿಐ ಕೈಗೆತ್ತಿಕೊಳ್ಳದಿದ್ದರೆ ಯಡಿಯೂರಪ್ಪ ಎಲ್ಲಿ ಕೆಜೆಪಿ ಕಟ್ಟುತ್ತಿದ್ದರು? ಬಿಜೆಪಿ ಬಿಟ್ಟು ಹೇಗೆ ಹೊರಬರುತ್ತಿದ್ದರು? ಸಿಬಿಐ ತನ್ನನ್ನು ಜೈಲಿಗೆ ದಬ್ಬಬಾರದೆಂದರೆ ಯಡ್ಡಿ ಬಿಜೆಪಿಯಿಂದ ದೂರವಿರಬೇಕು ಮತ್ತು ಪ್ರತ್ಯೇಕ ಪಕ್ಷ ಕಟ್ಟಿ ಕಾಂಗ್ರೆಸ್ಸಿಗೆ ನೆರವಾಗಬೇಕು. ಗಣಿ ರೆಡ್ಡಿಗಳೂ ಅಷ್ಟೇ. ಗಾಲಿ ರೆಡ್ಡಿಯ ಹೊರತಾಗಿ ಬೇರೆಲ್ಲರೂ ಜೈಲುಪಾಲಾಗಬಾರದೆಂದರೆ ಅವರೂ ಪ್ರತ್ಯೇಕ ಪಕ್ಷ ಕಟ್ಟಬೇಕು. ಕಾಂಗ್ರೆಸ್ಸಿಗೆ ನೆರವಾಗಲೇಬೇಕು.

ಬಿಜೆಪಿಯ ಪಾಪದ ಫಲದ ಹೊರತಾಗಿ ಕಾಂಗ್ರೆಸ್ಸಿನ ಯಾವ ಶ್ರಮಕ್ಕೆಂದು ಇಂಥ ಅನುಕೂಲ [illegible] ಬಂದಿದೆ? ಕೈಗೆ ಸುಲಿದ ಬಾಳೆಹಣ್ಣನ್ನೋ ಸಿಕ್ಕಿದೆ. ಆದರೆ ಕಾಲ ಬಳಿಯೇ ಸಿಪ್ಪೆ ಬಿದ್ದಿದೆ. ಎಚ್ಚರ ತಪ್ಪಿದರೆ ಅನಾಹುತವೂ ತಪ್ಪಿದ್ದಲ್ಲ. ○

ಅನುಭಾವಿ ಪರಂಪರೆ ಹಾಗೂ ಕೆಳ ಸಮುದಾಯಗಳು



ಕರ್ನಾಟಕದಲ್ಲಿ ಅನುಭಾವಿ ಪರಂಪರೆಯು ಬಹಳ ದೊಡ್ಡ ಚರಿತ್ರೆಯಿದೆ. ಬಹಳ ಸಲ ಅನುಭಾವಿಗಳನ್ನು ಭಕ್ತಿ ಪರಂಪರೆಯ ಅಂಗವಾಗಿ ನೋಡಲಾಗಿದ್ದು ಅದು ಒಂದು ಮಟ್ಟಿಗೆ ಸರಿಯಾದುದೂ ಆಗಿದೆ. ಅನುಭಾವಿ ಪರಂಪರೆಯೆನ್ನುವುದು ಜ್ಞಾನಕ್ಕಿಂತ ಅರಿವನ್ನು ಹೆಚ್ಚು ಮಾನ್ಯ ಮಾಡುತ್ತದೆ. ಪಂಡಿತನಿಕ್ಕಿಂತ ಹಿರಿದಾಗಿ ಪ್ರಾಂಜಲತೆಯನ್ನು ಮಾನ್ಯ ಮಾಡುತ್ತದೆ. ಅಂತರಂಗ ಶುದ್ಧಿ ನಿರ್ಮಲ ಶ್ರದ್ಧೆಗಳು ಅನುಭಾವಿ ಪರಂಪರೆಯಲ್ಲಿ ಬಹಳ ಮೌಲ್ಯಯುತ ಅಂಶಗಳಾಗಿ ಪರಿಗಣಿತವಾಗುತ್ತವೆ.

ಇದನ್ನು ನಿದರ್ಶಿಸಲು ಹಲವು ಬಗೆಯ ದೃಷ್ಟಾಂತ ಕತೆಗಳು ಪ್ರಚಲಿತದಲ್ಲಿವೆ. ಅಂತಹ ಒಂದು ಕತೆ ಹೀಗಿದೆ. ಒಂದು ಸಲ ನಿರ್ಜನವಾದ ನದಿ ತೀರದ ಗುಂಟ ಸಾಧುವೊಬ್ಬ ಸಾಗುತ್ತಿದ್ದ. ನದಿಯನ್ನು ದಾಟಲು ಆತ ದೋಣಿಯೊಂದನ್ನು ಹುಡುಕುತ್ತಿದ್ದ ಹೀಗೆ ನಡೆಯುತ್ತಿರುವಾಗ ನದಿ ತೀರದ ಹತ್ತಿರದಲ್ಲಿರುವ ಮರದ ತೋಪಿನಿಂದ 'ಯಾ ಹೂ ಹೋ' ಎಂಬ ಮಂತ್ರ ಪಠಣ ಕೇಳಿಬಂತು. ಸಾಧುವಿಗೆ ಕುತೂಹಲವುಂಟಾಯಿತು. ಮರದ ತೋಪಿನಿಂದ ಕೇಳಿ ಬರುತ್ತಿದ್ದ ಮಂತ್ರ ಬಹಳ ಮಹತ್ವಪೂರ್ಣದ್ದಾಗಿತ್ತು, ಅದು ಸಿದ್ಧಿಸಿತೆಂದರೆ ಅದರ ಸಾಧಕ ನೆಲದ ಮೇಲೆ ನಡೆಯುವಂತೆಯೇ ನೀರಿನ ಮೇಲೂ ನಡೆಯಬಲ್ಲ ಶಕ್ತಿಯನ್ನು ಪಡೆಯುತ್ತಿದ್ದ. ಪ್ರಸ್ತುತ ಸಾಧುವಿಗೆ ಅದಿನ್ನೂ ಸಿದ್ಧಿಸಿರಲಿಲ್ಲ. ಮರದ ತೋಪಿನ ಬಳಿಗೆ ಬಂದ ಆ ಸಾಧುವಿಗೆ ಗುಡಿಸಿಲೊಂದರಿಂದ ಮಂತ್ರ ಪಠಣ ನಡೆಯುತ್ತಿರುವುದು ತಿಳಿಯಿತು. ಹಾಗೆಯೇ ಆ ಮಂತ್ರವನ್ನು 'ಹೋ ಹೂ ಯಾ' ಎನ್ನುವ ಬದಲು 'ಯಾ ಹೂ ಹೋ' ಎಂದು ತಿರುವು ಮುರುವಾಗಿ ಉಚ್ಚರಿಸುತ್ತಿರುವುದೂ ತಿಳಿಯಿತು. ಆ ಗುಡಿಸಲಿನಲ್ಲಿ ಸಾಮಾನ್ಯ ಹಳ್ಳಿಗನೊಬ್ಬ



ಮಂತ್ರ ಪಠಣ ಮಾಡುತ್ತಿರುವುದನ್ನು ಕಂಡ ಆ ಸಾಧು, ಅವನ ಬಗ್ಗೆ ಕರುಣೆ ಹುಟ್ಟಿ "ನೋಡಪ್ಪಾ ಇದು ಅಸಾಧಾರಣ ಶಕ್ತಿಯುಳ್ಳ ಮಂತ್ರ. ಅದನ್ನು 'ಯಾ ಹೂ ಹೋ' ಅನ್ನಬಾರದು 'ಹೋ ಹೂ ಯಾ' ಅನ್ನಬೇಕು. ಹಾಗೆ ಕ್ರಮವರಿತು ಧ್ಯಾನ ಮಾಡಿದರೆ ನಿನಗೆ ಆ ಮಂತ್ರದ ಪೂರ್ಣ ಶಕ್ತಿ ದೊರೆಯುತ್ತದೆ" ಎಂದು ವಿವರಿಸಿದ. ಸಾಧುವಿನ ಮಾತು ಕೇಳಿದ ಆ ಹಳ್ಳಿಗ 'ಹೋ ಹೂ ಯಾ' ಎಂದು ಧ್ಯಾನದಲ್ಲಿ ತೊಡಗಿದ. ಸರಿಯಾದ ಪದ್ಧತಿಯ ಬಗ್ಗೆ ಹಳ್ಳಿಗನಿಗೆ ತಿಳಿಹೇಳಿದ ಸಮಾಧಾನದಿಂದ ಸಾಧು ಮತ್ತೆ ತನ್ನ ದಾರಿ ಹಿಡಿದು ಹೊರಟ. ಮಂತ್ರ ಪಠಣದ ಸದ್ದು ಕೇಳಿಬರುತ್ತಿತ್ತು, ಆದರೆ ಆ ಹಳ್ಳಿಗ ಮತ್ತೆ 'ಯಾ ಹೂ ಹೋ' ಅನ್ನತೊಡಗಿದ್ದ. ಸರಿಯಾದ ಕ್ರಮ ಅನುಸರಿಸದೆ ಅವನು ವ್ಯರ್ಥ ಪ್ರಯತ್ನ ಮಾಡುತ್ತಿದ್ದಾನೆ ಎಂದು ಬೇಸರಿಸಿಕೊಂಡ ಸಾಧು ದಡದಲ್ಲಿ ಚಿಕ್ಕ ದೋಣಿಯೊಂದನ್ನು ಹತ್ತಿ ನದಿ ದಾಟತೊಡಗಿದ. ಹೀಗೆ ಸ್ವಲ್ಪ ದೂರ ಸಾಗುವಷ್ಟರಲ್ಲಿ 'ಸ್ವಾಮೀ, ಸ್ವಾಮಿಗಳೇ' ಎಂಬ ಕೂಗು ದಡದಿಂದ ಕೇಳಿಬಂತು. ಗುಡಿಸಿಲಲ್ಲಿ ಕುಳಿತು ಮಂತ್ರಪಠಣ ಮಾಡುತ್ತಿದ್ದ ಅದೇ ಹಳ್ಳಿಗ ದಡದಲ್ಲಿ ನಿಂತು ಏನನ್ನೋ ಹೇಳುತ್ತಿದ್ದಾನೆ. ಅವನು ಏನು ಹೇಳುತ್ತಿದ್ದಾನೆ ಎಂಬುದು ಸಾಧುವಿಗೆ ಸರಿಯಾಗಿ ಕೇಳಿಸುತ್ತಿರಲಿಲ್ಲ, ದೋಣಿ ಮುಂದೆ ಸಾಗುತ್ತಲೇ ಇತ್ತು. ಅಷ್ಟರಲ್ಲಿ ಸಾಧುವಿಗೆ ಆಶ್ಚರ್ಯವಾಗುವಂತೆ ಆ ಹಳ್ಳಿಗ ನದಿ ನೀರಿನ ಮೇಲೆ ಸಲೀಸಾಗಿ ಓಡಿಬರತೊಡಗಿದ. ಅವನಿಗೆ ಮಂತ್ರಶಕ್ತಿ ಸಿದ್ಧಿಯಾಗಿರುವುದು ಕಂಡು ಸಾಧುವಿಗೆ ಬಹಳ ಆಶ್ಚರ್ಯವಾಯಿತು. ನೀರಿನ ಮೇಲೆ ಓಡುತ್ತಾ ಬಂದು "ಸ್ವಾಮಿಗಳೇ, ಸ್ವಲ್ಪ ಸಹಾಯ ಮಾಡಿ, 'ಯಾ ಹೂ ಹೋ' ಅನ್ನುವುದು ಸರಿಯಾದ ಕ್ರಮವೋ 'ಹೋ ಹೂ ಯಾ' ಅನ್ನುವುದು ಸರಿಯಾದ ಕ್ರಮವೋ ಎನ್ನುವುದು ನನಗೆ ಗೊಂದಲವಾಗಿ ಬಿಟ್ಟಿತು. ಹಾಗಾಗಿ ಮಂತ್ರ ಪಠಣದ ಸರಿಯಾದ ಕ್ರಮ ಯಾವುದು ಇನ್ನೊಂದು ಸಲ ಹೇಳಿಕೊಡಿ" ಎಂದು ಕೇಳಿದ. ಅಷ್ಟು ವರ್ಷ ತಾನು ಸಾಧನೆ ನಡೆಸಿದರೂ ಸಿದ್ಧಿಸಿರದ ಮಂತ್ರಶಕ್ತಿ ಆ ಹಳ್ಳಿಗನಿಗೆ ತಪ್ಪು ಕ್ರಮದಲ್ಲಿ ಉಚ್ಚಾರ ಮಾಡಿದರೂ ಸಿದ್ಧಿಸಿಬಿಟ್ಟಿರುವುದನ್ನು ಕಂಡ ಸಾಧು ಆ ಹಳ್ಳಿಗನಿಗೆ ಪ್ರಣಾಮ ಮಾಡಿ ತನ್ನ ಪ್ರಯಾಣ ಮುಂದುವರಿಸಿದ.

ಸಾಧುವಿಗೆ ಮಂತ್ರ ಪಠಣದ ಕ್ರಮ ಗೊತ್ತಿದೆ. ಆದರೆ ಅದರಿಂದ ಅವನಿಗೆ ಮಂತ್ರಶಕ್ತಿ ಇನ್ನೂ ಸಿದ್ಧಿಸಿಲ್ಲ, ಹಳ್ಳಿಗನಿಗೆ ಮಂತ್ರ ಪಠಣದ ಸೂಕ್ತ ಕ್ರಮ ಗೊತ್ತಿಲ್ಲ, ಆದರೆ ಆ ಮಂತ್ರಶಕ್ತಿಯನ್ನು ಬೋಧಿಸಿದ ಗುರುವಿನ ಬಗ್ಗೆ ಅಪಾರ ಭಕ್ತಿ ಹಾಗೂ ತನ್ನ ಸಾಧನೆಯಲ್ಲಿ ಅತೀವ ಶ್ರದ್ಧೆ ಹಳ್ಳಿಗನಿಗೆ ಇರುವುದರಿಂದ ಅದು ಅವನಿಗೆ ಒಲಿದಿದೆ. ಅನುಭಾವಿ ಪಂಥ ಸಾಮಾನ್ಯರ ಅಸಾಮಾನ್ಯತೆಯ ಬಗ್ಗೆ ವಿಶ್ವಾಸವಿರಿಸಿದ ಹಾಗೂ ದೈವ ಕೃಪೆ ಯಾರಿಗಾದರೂ ಯಾವ ರೂಪದಲ್ಲಾದರೂ ದಕ್ಕಬಹುದು, ಆ ಶಕ್ತಿಪಾತಕ್ಕೆ ಶಾಸ್ತ್ರಾಚಾರಗಳ ಹಂಗಿಲ್ಲ ಎನ್ನುವ ತನ್ನ ನಿಲುವನ್ನು ಇಂತಹ ದೃಷ್ಟಾಂತ ಕತೆಗಳ ಮೂಲಕ ಅಭಿವ್ಯಕ್ತಿಸುತ್ತಿದೆ.

ಅನುಭಾವಿ ಪರಂಪರೆ ಶಾಸ್ತ್ರಗ್ರಂಥಗಳ ಅಧ್ಯಯನದಿಂದ ಪಾಂಡಿತ್ಯ ದೊರೆಯಬಹುದೇ ಹೊರತು ಜ್ಞಾನವಲ್ಲ ಎಂಬ ನಿಲುವನ್ನು ಹೊಂದಿದೆ. "ವೇದವ ಕಲಿತೊಡೆ ಪಾಠಕನಲ್ಲದೆ ಜ್ಞಾನಿಯಲ್ಲ ನಿಲ್ಲು" ಎನ್ನುತ್ತದೆ ಒಂದು ವಚನ. ಅನುಭಾವಿ ಪರಂಪರೆ ತನ್ನೊಳಗನ್ನು ಅರಿಯುವ ಸಂಬುದ್ಧತ್ವವನ್ನು ಪ್ರತಿಪಾದಿಸುತ್ತದೆ. ಆ ಬಗೆಯ ಅರಿವು ಹಾಗೂ ದೈವಾನುಗ್ರಹ ಗುರುಕೃಪೆಯ ಮೂಲಕ ಸಂಭವಿಸುತ್ತದೆ. ಹಾಗಾಗಿ ಗುರುವೇ ಬ್ರಹ್ಮ, ಗುರುವೇ ವಿಷ್ಣು ಗುರುವೇ ಮಹೇಶ್ವರ, ಗುರುವೇ ಸಾಕ್ಷಾತ್ ಪರಬ್ರಹ್ಮ ಎಂಬ ಶ್ರದ್ಧೆಯನ್ನು ಅನುಭಾವಿ ಪರಂಪರೆ ಪ್ರತಿಪಾದಿಸುತ್ತದೆ.

ಗುರುವಿನ ಕಾರುಣ್ಯದಿಂದಲೇ ದೈವಕೃಪೆ ಒದಗುತ್ತದೆ ಎಂದ ಮಾತ್ರಕ್ಕೆ ಅನುಭಾವಿ ಪರಂಪರೆಯ ವೈಶಿಷ್ಟ್ಯ ಸಾಬೀತಾಗುವುದಿಲ್ಲ, ಆ ಗುರು ಯಾವುದೇ ಜಾತಿಯವನಾಗಿರಬಹುದು, ಯಾವುದೇ ಕಸುಬಿನವನಾಗಿರಬಹುದು ಹಾಗೂ ಹೆಣ್ಣು ಅಥವಾ ಗಂಡು ಯಾರೇ ಆಗಿರಬಹುದು ಎಂಬುದು ಅದರ ನಂಬಿಕೆ. ಹಾಗಾಗಿಯೇ ಅನುಭಾವಿ ಪರಂಪರೆಯ ಬಹುಪಾಲು ಗುರುಗಳು ಕೆಳ ಸಮುದಾಯಗಳಿಂದಲೇ ಮೂಡಿಬಂದಿದ್ದಾರೆ. ಜನ್ಮಜಾತವಾದ ಜಾತಿಯ ಮೂಲಕ ಮನುಷ್ಯರ ನಡುವೆ ಭೇದಗಳನ್ನು ಪ್ರತಿಪಾದಿಸುವ ವರ್ಣಾಶ್ರಮವಾದಿ ಧರ್ಮಕ್ಕೂ ಅನುಭಾವಿ ಪರಂಪರೆಗೂ ಇದರಿಂದಾಗಿ ವೈರುಧ್ಯವೇರ್ಪಟ್ಟಿದೆ. ವೇದ, ಬ್ರಾಹ್ಮಣಗಳು, ಶಾಸ್ತ್ರಸ್ಮೃತಿಗಳು ಮುಂತಾದವುಗಳಿಂದ ವರ್ಣಾಶ್ರಮ ಧರ್ಮ ತನ್ನ ಸಮರ್ಥನೆಗಳನ್ನು ಹುಡುಕಿಕೊಂಡರೆ, ಅನುಭಾವಿ ಪರಂಪರೆ ಇದಾವುದರ ಗೊಡವೆಯೂ ಇರದೆ ಸಾಧನೆ ಹಾಗೂ ಸಾಕ್ಷಾತ್ಕಾರಗಳ ಮೂಲಕ 'ಗುರು'ತ್ವವನ್ನು ಪಡೆದುಕೊಳ್ಳುತ್ತದೆ. ಈ ಮೊದಲು ವಿವರಿಸಿದ ಕತೆಯ ಹಾಗೆ ಯಾರಿಗೆ ಯಾವಾಗಲಾದರೂ 'ಸಿದ್ಧಿ'ಯೊದಗಬಹುದು. ಅದಕ್ಕೆ ತರ್ಕ, ಪಾಂಡಿತ್ಯ ಶಾಸ್ತ್ರಾಚಾರಗಳ ಗೊಡವೆಯಿಲ್ಲ.

ಅನುಭಾವಿ ಪರಂಪರೆ ಆತ್ಮನಿಗೂ ಪರಮಾತ್ಮನಿಗೂ ಅಭೇದವನ್ನು ಕಲ್ಪಿಸುತ್ತದೆ. ಈ ವಿಷಯದಲ್ಲಿ ಅದು ಪರಿಪೂರ್ಣ ಅದ್ವಯವಾದಿ. ಪ್ರಪಂಚದಲ್ಲಿರುವ ವಸ್ತುಗಳಲ್ಲೂ ಅದು ಪವಿತ್ರ ಹಾಗೂ ಅಪವಿತ್ರ ಎಂಬ ವಿಂಗಡಣೆ ಮಾಡುವುದಿಲ್ಲ, ಮನುಷ್ಯರ ನಡುವೆಯೂ ಶ್ರೇಷ್ಠ ಕನಿಷ್ಠ ಎಂಬ ವಿಂಗಡಣೆ ಮಾಡುವುದಿಲ್ಲ, ಆಹಾರ ಪಾನೀಯಗಳ ವಿಷಯದಲ್ಲೂ ಅದಕ್ಕೆ ಮಡಿ ಮೈಲಿಗೆಯಿಲ್ಲ, ದೇವರನ್ನು ದೇವಾಲಯಗಳಲ್ಲಿ ಹುಡುಕುವ ಮೌಢ್ಯವನ್ನು ಅನುಭಾವಿ ಪರಂಪರೆ ನಿರಾಕರಿಸುತ್ತದೆ. ದೇವರ ಸ್ವರೂಪ ಇದೇ ರೀತಿಯಲ್ಲಿರುತ್ತದೆ ಎಂಬುದನ್ನೂ ಅದು ನಿರಾಕರಿಸುತ್ತದೆ. ಈ ಹಾದಿಯಲ್ಲಿ ಮತ ಪಂಥಗಳ ಗಡಿರೇಖೆಗಳನ್ನು ಅದು ಮೀರುತ್ತದೆ. ನಾಮ, ರೂಪ ಭೇದಗಳ ಮರೆಯಲ್ಲಿ ಇರುವುದೆಲ್ಲವೂ ಭಗವತ್ ಸ್ವರೂಪ ಎನ್ನುವುದು ಅನುಭಾವಿ ಪರಂಪರೆಯ ನಿಲುವು. ಮಾತಿನ ತರ್ಕಕ್ಕೆ ಬದಲಾಗಿ ಮೌನದನುಭವವನ್ನು ಅದು ಮಾನ್ಯ ಮಾಡುತ್ತದೆ. ಕಲ್ಪನೆಯ ವಿವರಣೆಗಳ ಬದಲಿಗೆ ಮನದೊಳಗಿನ ಅನುಭೂತಿಯನ್ನು ಅದು 'ಪ್ರಮಾಣ'ವಾಗಿ ಸ್ವೀಕರಿಸುತ್ತದೆ. ವ್ರತ, ಪೂಜೆಗಳ ಬದಲು ಶ್ರದ್ಧೆ ಮತ್ತು ಲೋಕಕಾರುಣ್ಯವನ್ನು ಆದರಿಸುತ್ತದೆ.

ಈ ಬಗೆಯ ತಾತ್ವಿಕತೆಯಿಂದಾಗಿ ಅನುಭಾವಿ ಪರಂಪರೆ ಭಾರತೀಯ ಸಮಾಜದಲ್ಲಿ ಕೆಳ ಸಮುದಾಯಗಳ ಆಧ್ಯಾತ್ಮಿಕ ಹಸಿವನ್ನು ಹಿಂಗಿಸುವ ಹಾಗೂ ಲೋಕಕಲ್ಯಾಣದಲ್ಲಿ ಅವರೆಲ್ಲರನ್ನು ಒಂದುಗೂಡಿಸುವ ಮಹತ್ತರ ಜವಾಬ್ದಾರಿಯನ್ನು ನಿರ್ವಹಿಸಿತು.

ಕರ್ನಾಟಕದಲ್ಲಿ ಕ್ರಿ.ಶ. 9ರ ನಂತರದಲ್ಲಿ ಕಂಡುಬರುವ ಹಲವಾರು ಪಂಥಗಳು ಈ ಬಗೆಯ ಅನುಭಾವಿ ಪರಂಪರೆಯ ಕವಲುಗಳಾಗಿದ್ದವು. ಭಕ್ತಿಪಂಥಗಳೆಂದು ಕರೆಯಲ್ಪಡುವ ವಚನಕಾರ ಮತ್ತು ಹರಿದಾಸ ಚಳವಳಿಗಳಲ್ಲಿ ಅನುಭಾವಿ ಪಂಥದ ಚಹರೆಗಳಿವೆ. ಅದಕ್ಕಿಂತ ಪೂರ್ವದಲ್ಲಿದ್ದ ನಾಥ-ಸಿದ್ಧ ಪಂಥಗಳಲ್ಲಿ, ಆರೂಢ, ಅವಧೂತ, ದತ್ತ ಪಂಥಗಳಲ್ಲಿ, ಸೂಫಿ ಸಂತ ಪಂಥಗಳಲ್ಲೂ ಅನುಭಾವಿ ಪಂಥದ ಚಹರೆಗಳಿವೆ. ಮೂಲದಲ್ಲಿ ಅನುಭಾವಿ ಪಂಥಗಳಾಗಿದ್ದು, ನಂತರದಲ್ಲಿ ಯಾವುದಾದರೊಂದು ಭಕ್ತಿ



2013

■ ಡಾ.ಬಂಜಗೆರೆ ಜಯಪ್ರಕಾಶ

ಪಂಥದ ಚೌಕಟ್ಟಿನೊಳಗೆ ವಿಭಾವಿಸಲ್ಪಟ್ಟ ಹಲವಾರು ಮಹಾನುಭಾವರಲ್ಲಿ ಈ ಅನುಭಾವಿ ಪರಂಪರೆಯ ಸೆಳಹುಗಳಿವೆ. ಸಂತರಾಗಿ ಪವಾಡ ಪುರುಷರಾಗಿ ಜನಮನ್ನಣೆ ಪಡೆದ ಹಲವಾರು ಸಾಧಕರು ಕರ್ನಾಟಕದಲ್ಲಿ ಅನುಭಾವಿ ಪರಂಪರೆಯ ಪ್ರತೀಕಗಳಾಗಿ ಇಂದಿಗೂ ಜನಸಮುದಾಯಗಳ ಭಕ್ತಿ ಗೌರವಕ್ಕೆ ಪಾತ್ರರಾಗಿದ್ದಾರೆ.

ಈ ಬಗೆಯ ಅವೈದಿಕ ಪಂಥಗಳಿಗೆ ಮೂಲಪುರುಷರಾಗಿ ಸಾಮಾನ್ಯವಾಗಿ ಕೆಳ ಸಮುದಾಯಗಳ ವ್ಯಕ್ತಿಗಳಿರುವುದು ಬಹಳ ಆಸಕ್ತಿದಾಯಕವಾದ ಅಂಶ. ಪಶುಪಾಲಕ ವೃತ್ತಿ ಮೂಲವನ್ನು ಸೂಚಿಸುವ ಗೋರಕ್ಷನಾಥ ಹಾಗೂ ಮೀನುಗಾರ ವೃತ್ತಿ ಮೂಲವನ್ನು ಸೂಚಿಸುವ ಮತ್ಸ್ಯೇಂದ್ರನಾಥ ಕರ್ನಾಟಕ ಮೂಲದವರಲ್ಲದಿರಬಹುದು. ಆದರೆ ಅವರ ಪಂಥದ ಮೂಲಕ ಪ್ರೇರಣೆ ಹೊಂದಿದ ನಾಥ-ಸಿದ್ಧ ಪಂಥಗಳು ಕರ್ನಾಟಕದಲ್ಲಿ ಕೆಳ ಸಮುದಾಯಗಳನ್ನು ಬಹಳ ಪ್ರಬಲವಾಗಿ ಪ್ರಭಾವಿಸಿವೆ. ಸಿದ್ಧ ಪರಂಪರೆಯ ಮೂಲ ಪುರುಷರಲ್ಲೊಬ್ಬನಾಗಿ ಪರಿಗಣಿತವಾಗಿರುವ ರೇವಣಸಿದ್ಧ ತನ್ನ ಮೂಲದಲ್ಲಿ ಕುರುಬ ಜಾತಿಗೆ ಸೇರಿದವನೆಂಬ ಮಾಹಿತಿಯಿದೆ. ರೇವಣಸಿದ್ಧನ ಶಿಷ್ಯನಾದ ಮರುಳಸಿದ್ಧ ಮೂಲದಲ್ಲಿ ಮಾದಾರ ಜಾತಿಯವನೆಂಬ ಮಾಹಿತಿ ಇದೆ. ಶಿವಶರಣರಲ್ಲಿ ಅವರ ಕಾಯಕನಾಮಗಳು ಸೂಚಿಸಿರುವಂತೆ ಹಲವಾರು ವಚನಕಾರರು ಕೆಳಸಮುದಾಯಗಳಿಗೆ ಸೇರಿದವರೆಂಬುದು ಲೋಕಪ್ರಸಿದ್ಧವಾದ ವಿಷಯ. ಶಿವಶರಣರ ನಡುವೆ ಅನುಭಾವಿ ಪರಂಪರೆಯ ಚಹರೆಗಳನ್ನು ದಟ್ಟವಾಗಿ ಬಿಂಬಿಸುವ ಅಲ್ಲಮಪ್ರಭು ಹಾಗೂ ಅಕ್ಕಮಹಾದೇವಿ ಶರಣರಿಂದಲೇ ಪುರಾತನರೆಂದು ಕೀರ್ತಿಸಲ್ಪಟ್ಟಿರುವ ಮಾದಾರಚೆನ್ನಯ್ಯ, ಬೇಡರ ದಾಸಿಮಯ್ಯ, ಭಕ್ತ ಸಿರಿಯಾಳ ಮುಂತಾದವರಲ್ಲಿ ಅನುಭಾವಿ ಪರಂಪರೆಯ ಲಕ್ಷಣಗಳನ್ನು ಸ್ಪಷ್ಟವಾಗಿ ಗುರುತಿಸಬಹುದು. ಪುರಾತನೆಂದು ಕೀರ್ತಿಸಲ್ಪಡುವ ಶಿವಭಕ್ತ ಬೇಡರ ಕಣ್ಣಪ್ಪನ ಕಥೆಯಲ್ಲಿ ಅನುಭಾವಿ ಪರಂಪರೆಯ ಲಕ್ಷಣಗಳು ನಿಚ್ಚಳವಾಗಿ ಕಾಣುತ್ತವೆ. ಆಹಾರದಲ್ಲಿ ಮಡಿ ಮೈಲಿಗೆಯೆಂದು ಭೇದ ಎಣಿಸದೆ ಕಣ್ಣಪ್ಪ ಶಿವನಿಗೆ ನೈವೇದ್ಯ ಮಾಡುವುದು ಬೇಟೆಯ ಮಾಂಸವನ್ನು, ಶಿವನ ಕಣ್ಣಲ್ಲಿ ರಕ್ತಬರುತ್ತಿದೆಯೆಂದು ತನ್ನ ಕಣ್ಣನ್ನೇ ಕಿತ್ತು ಅಂಟಿಸುವ, ಶಿವಲಿಂಗದ ಹಣೆಯ ಮೇಲೆ ತನ್ನ ಕಾಲಿಟ್ಟು ಇನ್ನೊಂದು ಕಣ್ಣನ್ನು ಅರ್ಪಿಸುವ ಲೀಲಾಜಾಲ ಕೂಡ ಅನುಭಾವಿ ಪರಂಪರೆಯ ಸುಳುಹುಗಳನ್ನು, ಉನ್ಮತ್ತ ಭಕ್ತಿಯ ಸ್ವರೂಪವನ್ನು ನಿದರ್ಶಿಸುತ್ತಿದೆ.

ಅನುಭಾವಿ ಪರಂಪರೆಯ ಮುಖ್ಯ ಗುಣವೆಂದರೆ ಭಗವಂತನನ್ನು ನಿರಾಕಾರ ಎಂದು ಭಾವಿಸುವುದು. ಸಗುಣೋಪಾಸನೆ ಮಾಡುವ ಅನುಭಾವಿ ಪಂಥವಾದರೆ ದೇವರನ್ನು ಸಖ, ಬಂಧು, ಪ್ರಿಯತಮ, ಸ್ನೇಹಿತ ಎಂದು ಭಾವಿಸಿ ವ್ಯವಹರಿಸುವುದು, ಆ ಬಗೆಯ ವ್ಯವಹಾರದಲ್ಲಿ ದೇವರ ಬಳಿ ಮಡಿಮೈಲಿಗೆಯ ಭೇದವಿಲ್ಲದೆ ವ್ಯವಹರಿಸುವುದು; ಕಾಲು, ಮುಖವೆಂದು ಭೇದವೆಣಿಸದೆ ವರ್ತಿಸುವುದು ಕೂಡ ಸಾಮಾನ್ಯ. ಬೇಡರ ಕಣ್ಣಪ್ಪ ಶಿವಲಿಂಗದ ನೆತ್ತಿಯ ಮೇಲೆ ತನ್ನ ಕಾಲಿರಿಸಿದ್ದು ಕೇವಲ ಮುಗ್ಧತನದಿಂದ ಎಂದು ಹೇಳಲಾಗುತ್ತದೆ. ದೇವರಿಗೆ ಕಣ್ಣುಗಳನ್ನೇ ಕಿತ್ತು ಅರ್ಪಿಸುವ ಕಣ್ಣಪ್ಪ ಮುಗ್ಧನೆಂದು ಹೇಳಿ ಸಮಾಧಾನ ಮಾಡಲಾಗುತ್ತದೆ. ಅದು ಅನುಭಾವಿ ಮುಗ್ಧತೆಯೂ ಇರಬಹುದು. ಅರಿತು ಮೆರೆದ ಅನುಭಾವಿಯ ವರ್ತನೆಯೂ ಇರಬಹುದು. ಬೇಟೆ ಬಲಿ, ಕೊರಳ ಬಲಿ, ಕಣ್ಣು ಬಲಿ ನೀಡುವ ಉಗ್ರ ಭಕ್ತಿಯಾಚರಣೆಯೂ ಇರಬಹುದು. ಉನ್ಮತ್ತ ಭಕ್ತಿಯಾವೇಶ ಹಾಗೂ ಮರುಳತನದಂತೆ ಕಾಣುವ ಭೇದವರಿಯದ ನಡವಳಿಕೆಗಳೆರಡೂ ಅನುಭಾವಿ ಪಂಥದಲ್ಲಿ ಸಾಮಾನ್ಯವೆಂಬುದನ್ನು ನಾವಿಲ್ಲಿ ಗಮನಿಸಬೇಕು.

ಬುದ್ಧ ದೇವನ ಮರದ ಮೂರ್ತಿಯನ್ನೇ ಬೆಂಕಿಗೆ ಹಾಕಿ ಮೈ ಕಾಯಿಸಿಕೊಳ್ಳುವ 'ಜೆನ್' ಗುರುವೊಬ್ಬನ ಕತೆ ಇದೆ. ಶಿವಲಿಂಗದ ಮೇಲೆ ಕಾಲು ಚಾಚಿ ಮಲಗುವ ಮರುಳ ವರ್ತನೆಯ ಶಿವಯೋಗಿಗಳೂ ಆಗಿಹೋಗಿದ್ದಾರೆ. ಶಿಶುನಾಳ ಶರೀಫನ ಪ್ರಸಂಗದಲ್ಲೂ ದ್ಯಾಮವ್ವನ ಮೂರ್ತಿಯನ್ನು ಬೆಂಕಿಗೆ ಹಾಕಿ ಮೈಕಾಯಿಸಿಕೊಂಡ ಪ್ರತೀತಿಗಳು ಹಬ್ಬಿಕೊಂಡಿವೆ. ಮನದೊಳಗಿನ ಭಾವ ಮುಖ್ಯವೇ ಹೊರತು ಮೂರ್ತಿಯಲ್ಲ ಎಂಬುದು ಇವರ ನೀತಿ. ಅಂತರಂಗ ಶುದ್ಧಿಯನ್ನು ಅನುಭಾವಿ ಪರಂಪರೆ ಬಹಳ ಮಹತ್ವದ್ದಾಗಿ ಪರಿಗಣಿಸುತ್ತವೆ. ಭಕ್ತಿಯ ಲಾಂಛನಗಳಿಗಿಂತ ಭಕ್ತಿಯ ಆಚರಣೆ ಮುಖ್ಯವೆಂದು ಭಾವಿಸುವ ಅನುಭಾವಿ ಪರಂಪರೆಗೆ ಕೆಳಸಮುದಾಯಗಳು ತೀರಾ ಹತ್ತಿರದವಾಗಿವೆ.

ಕೆಳ ಸಮುದಾಯಗಳ ಆಹಾರ-ವಿಹಾರ ಪದ್ಧತಿಗಳನ್ನು ನಿಷೇಧಾತ್ಮಕವಾಗಿ ಅನುಭಾವಿ ಪರಂಪರೆ ನೋಡದಿರುವುದರಿಂದ, ಪೂಜಾ ವಿಧಾನಗಳಿಗಿಂತ ಕ್ರಿಯಾಶುದ್ಧಿಯೇ ಮುಖ್ಯವೆಂದು ಅದು ಪರಿಗಣಿಸುವುದರಿಂದ, ಕೆಳ ಸಮುದಾಯಗಳಿಗೆ ಅದು ಅತ್ಯಾಪ್ತವಾಗಿ ಕಂಡಿರಬೇಕು. ಊರಮ್ಮ-ಮಾರಮ್ಮಗಳನ್ನು ಬಿಟ್ಟರೆ ಕರ್ನಾಟಕದ ಜನಪದವು ಅನುಭಾವಿ ಪರಂಪರೆಯ ನೂರಾರು ಪವಾಡ ಪುರುಷರನ್ನು ದೈವತ್ವಕ್ಕೇರಿಸಿ ಪೂಜಿಸುತ್ತಿರುವುದನ್ನು ಈಗಲೂ ನಾವು ಕಾಣಬಹುದು. ಕರ್ನಾಟಕದ ಗ್ರಾಮೀಣ ಭಾಗದಲ್ಲಿ ಬೇರೆ ಬೇರೆ ಪ್ರದೇಶಗಳಲ್ಲಿ ಈ ಅನುಭೂತಿ ಸಂತರು ಜನರ ಮನದಲ್ಲಿ ನೆಲೆಗೊಂಡಿದ್ದಾರೆ. ರೇವಣಸಿದ್ಧ, ಮರುಳಸಿದ್ಧ, ಸಿದ್ಧರಾಮ,



...ಅನ್ನುವಂತಹ ಹೆಸರುಗಳು ಬಹುಸಂಖ್ಯೆಯಲ್ಲಿ ...ಜವಾಗಿ ಕಂಡುಬರುತ್ತಿರುವುದು ಅನುಭಾವಿ ...ಯ ಪ್ರಭಾವಕ್ಕೊಂದು ನಿದರ್ಶನ. 'ಸಿದ್ಧ' ಎನ್ನುವ ...ತೆಯೇ, ತಿಪ್ಪೇಸ್ವಾಮಿ ಎಂಬ ಹೆಸರು, ...ೂರಪ್ಪ ಮುಷ್ಟೂರಪ್ಪ ಯರಿಸ್ವಾಮಿ, ಅಜ್ಜಯ್ಯ ...ಮಂಟೇಸ್ವಾಮಿ, ಮಾದಪ್ಪ ಮುಂತಾದವುಗಳ ಜೊತೆಗೆ ... ಎಂಬ ನಾಮಕರಣಗಳು ತುಂಬಾ ಹೇರಳವಾಗಿ ...ಯುತ್ತವೆ. ಈ ಬಸವಣ್ಣ 12ನೇ ಶತಮಾನದ ... ಬಸವಣ್ಣನ ನೆನಪನ್ನು ಕೆಲವು ಕಡೆ ಹೊಂದಿದ್ದರೆ ...ಲವು ಪ್ರದೇಶಗಳಲ್ಲಿ ಕರಿಬಸವ, ಶರಣಬಸವ, ...ಸವ, ಕೂಲಳ್ಳಿ ಬಸವ, ಕೊಡೇಕಲ್ ಬಸವ ಎಂಬ ...ದರ ಕಾಲಾನಂತರದ ಸಂತರ ಸ್ಮರಣೆಯನ್ನು ...ತ್ತವೆ. ಈ ಹೆಸರುಗಳೆಲ್ಲ ಪುಲ್ಲಿಂಗ ನಾಮಗಳಾಗಿ ... ಬಳಕೆಯಾಗುತ್ತವೆ ಎಂದಿಲ್ಲ, ಹೆಣ್ಣುಗಂಡುಗಳಿಬ್ಬರೂ ...ಮಗಳನ್ನು ಅಯ್ಯ-ಅಮ್ಮ ಜೋಡಣೆಯೊಂದಿಗೆ ...ತ್ತಾರೆ.

... ಸಮುದಾಯಗಳು ಅನುಭಾವಿ ಪರಂಪರೆಯ ...ಾಂದಿರುವ ಈ ಗಾಢ ಅನುಭೂತಿಗೆ ಇವು ...ಜನೀಕರಣವನ್ನು ಧಿಕ್ಕರಿಸುತ್ತಿದ್ದುದು ಮುಖ್ಯವಾದ ...ಗಿರುವಂತೆಯೇ, ಹೆಚ್ಚು ಶಿಷ್ಟಾಚಾರಗಳಿಲ್ಲದ ...ಪದ್ಧತಿಗಳನ್ನು ಅಳವಡಿಸಿಕೊಂಡಿದ್ದುದು ಹಾಗೂ ...ಧಾರಿತ ತಾಂತ್ರಿಕ ಸಂಬಂಗೆಗಳನ್ನು ...ುತ್ತಿದ್ದುದು ಅವು ಗ್ರಾಮೀಣ ಜನತೆಯ ಫಲವಂತಿಕೆ ...ಮ ಆಚರಣೆಯೊಂದಿಗೆ ಸಾಮ್ಯತೆ ಹೊಂದಿದ್ದುದೂ ...ಾರಣವಾಗಿರಬಹುದು.

...0-11ನೇ ಶತಮಾನದಲ್ಲಿ ಚಾಲ್ತಿಯಲ್ಲಿದ್ದ ...ಖ ಶೈವರು, ನಾಥಸಿದ್ಧರು, ಭೈರವೋಪಾಸಕ ...ರು, ಶಾಕ್ತರು ಮುಂತಾದವರು ಫಲವಂತಿಕೆ ...ಗಳ ಪರಿಷ್ಕೃತ ಆರಾಧನಾ ಪದ್ಧತಿಗಳನ್ನು ತಾಂತ್ರಿಕ ...ಳಾಗಿ ಅಳವಡಿಸಿಕೊಂಡಿರುವುದಕ್ಕೆ ನಿದರ್ಶನಗಳು ...ುತ್ತವೆ. ಕಾಳಾಮುಖ ಹಾಗೂ ಶಾಕ್ತ ತಾಂತ್ರಿಕ ...ಗೆ ಕರ್ನಾಟಕದಲ್ಲಿ ಪಶುಪಾಲಕ ಸಮುದಾಯಗಳು, ...ಾರ ಸಮುದಾಯಗಳು ಹಾಗೂ ಕೃಷಿನಿರತ ...ತದ ಸಮುದಾಯಗಳು ಮುಖ್ಯ ...ೂಡಗಿಸಿರುವುದಕ್ಕೆ ಬೇಕಾದಷ್ಟು ನಿದರ್ಶನಗಳು ...ುತ್ತವೆ.

...ಪಾಲಕ ಜನಾಂಗಗಳು ಅರೆ ಅಲೆಮಾರಿ ...ಯಗಳಾಗಿದ್ದ ಸಂದರ್ಭದಲ್ಲಿ ಅವು ಗ್ರಾಮ ...ದ 'ಕುಳ'ಗಳಲ್ಲವಾದ್ದರಿಂದ ಬೆಟ್ಟ, ಮೈದಾನ, ... ಅಂಚಿನಲ್ಲಿ ಸಂಚರಿಸುತ್ತಾ ತಾತ್ಕಾಲಿಕವಾಗಿ ...ದ್ದುದರಿಂದ ಅವರನ್ನು ವರ್ಣಾಶ್ರಮದ ವಿಭಜನೆ ...ರಲಿಲ್ಲವೆಂದು ಹೇಳಬಹುದಾಗಿದೆ. ಕೃಷಿನಿರತ ತಳ ...ಯಗಳು ಜಾತಿಬಾಹಿರರಾಗಿ ಗ್ರಾಮದ ಹೊರಗಡೆ ...ೇರಿ, ಹಟ್ಟಿಗಳಲ್ಲಿ ವಾಸಿಸುತ್ತಿದ್ದುದರಿಂದ ಅವರಿಗೂ ...ಮವಾದಿ ಧರ್ಮ ಮತ್ತು ಕ್ರಿಯಾಧಿಗಳ ಕಟ್ಟಳೆಗಳು ...ವಾಗುತ್ತಿರಲಿಲ್ಲ ಅಥವಾ ಅವರು ಆ ಕಟ್ಟಳೆಗೆ ...ು ಒಪ್ಪದಿದ್ದುದರಿಂದಲೇ ಬಹಿಷ್ಕೃತರಾಗಿರುವುದೂ ... ಕಸುಬುದಾರ ಗುಂಪುಗಳು ತಮ್ಮ ವೃತ್ತಿಯ ... ಪ್ರತ್ಯಯದಿಂದಾಗಿ ಜಾತಿ ವ್ಯವಸ್ಥೆಯ ...ಣವನ್ನು ನಿರಾಕರಿಸಿದ್ದನ್ನು ವಚನಕಾರ ಚಳವಳಿಯ ...ದಲ್ಲಿ ನಾವು ನೋಡಿದ್ದೇವೆ.

...ಟ್ಟಿನ ನೆಲೆಯಿಂದ ಕೀಳಾಗಿ ಕಾಣದ, ...ಂಬರಗಳ ಆಗತ್ಯವಿಲ್ಲದೆ ತಮ್ಮ ಜೀವನದ ...ಗಳಿಗೆ ಪೂರಕವಾಗಿದ್ದ ಪ್ರತಿಸಂಸ್ಕೃತಿಯನ್ನು ...ಸುತ್ತಿದ್ದ ಅನುಭಾವಿ ಪರಂಪರೆಯ ಬೇರೆ ಬೇರೆ ...ೊಂದಿಗೆ ಏಕೋಭಾವ ಬೆಳೆಸಿಕೊಂಡಿದ್ದು ...ಕವಾಗಿ ಸಂಭವಿಸಿದೆ. ಈ ತಾದಾತ್ಮದಲ್ಲಿ ತಮ್ಮ ... ಹಸಿವನ್ನು ತೀರಿಸಿಕೊಳ್ಳುವ ಸರಳ ಮಾರ್ಗದ ...ನಿಸರ್ಗ ಚೇತನಗಳನ್ನು ಆರಾಧಿಸುವ ಮೂಲಕ ... ಶಕ್ತಿ ಸಂಚಯನ ಹಾಗೂ ತಮ್ಮನ್ನು ಕೀಳಾಗಿ ...ೊಳ್ಳಬೇಕಾದ ಕೀಳರಿಮೆಯ ವಿರುದ್ಧ ತಾತ್ವಿಕ ...ಜೆಯೂ ಸೇರಿಕೊಂಡಿತ್ತೆಂದು ಭಾವಿಸಬಹುದಾಗಿದೆ. ...ಯೇ ಗೋರಖ, ಮತ್ಸ್ಯೇಂದ್ರನಿಂದ ಹಿಡಿದು ...ನಿನಾಥ, ಕಬೀರನವರೆಗೆ; ರೇವಣಸಿದ್ಧ ಮರುಳಸಿದ್ಧ ... ಪ್ರಭುವಿನಿಂದ ಹಿಡಿದು ಕನಕ, ಮಂಟೇಸ್ವಾಮಿ, ...ಸವರೆಗೆ ಕೆಳಸಮುದಾಯಗಳಿಗೆ ಸೇರಿದ ಅಸಂಖ್ಯಾತ ...ಗಳು ಯೋಗಿಗಳಾಗಿ, ದಾರ್ಶನಿಕರಾಗಿ ...ೂಮ್ಮಿದರು.

...ರ್ಣಾಶ್ರಮವಾದಿ ದೇವರು ಮತ್ತು ದೇವಾಲಯಗಳಿಗೆ ... ಕೆಳಸಮುದಾಯಗಳು ಹೀಗೆ ತಮ್ಮ ನಡುವೆ ...ಡಿದ ಅನುಭಾವಿ ಸಂತರನ್ನೇ ...ಸಂಭೂತರನ್ನಾಗಿ, ಅವತಾರ ಪುರುಷರನ್ನಾಗಿ ಭಾವಿಸಿ ...ಸಮಾಧಿ-ದರ್ಗಾಗಳನ್ನು ನಿರ್ಮಿಸಿಕೊಂಡರು. ಈ ... ನಿರ್ಮಿತಿಗಳು ಕೆಳಸಮುದಾಯಗಳ ಜೀವನ ... ಹಾಗೂ ಸಮುದಾಯ ವಿವೇಕಗಳ ...ಗಳಾಗಿದ್ದುದು ಮಾತ್ರವಲ್ಲದೆ ಧಾರ್ಮಿಕ ಪ್ರಭುತ್ವದ ಪ್ರತೀಕಗಳಂತೆಯೂ ಭಾವಿಸಬಹುದಾಗಿದೆ. ○

20ನೇ ಶತಮಾನದ ಆರಂಭದಲ್ಲಿ ಟರ್ಕಿ ದೇಶದಲ್ಲಿ ಜನಿಸಿದ ನಾಜಿಮ್ ಹಿಕ್ಮೆತ್ ಖ್ಯಾತ ಕವಿ, ನಾಟಕಕಾರ ಮತ್ತು ಕಾದಂಬರಿಕಾರರಾಗಿದ್ದರು. 'ರೊಮ್ಯಾಂಟಿಕ್ ಕಮ್ಯುನಿಸ್ಟ್' ಮತ್ತು 'ರೊಮ್ಯಾಂಟಿಕ್ ರೆವಲ್ಯೂಶನರಿ' ಎಂದೇ ಕರೆಯಲ್ಪಡುತ್ತಿದ್ದ ಹಿಕ್ಮೆತ್ ತಮ್ಮ ರಾಜಕೀಯ ಧೋರಣೆಗಳಿಂದಾಗಿ ತಮ್ಮ ಜೀವಿತಾವಧಿಯ ಹೆಚ್ಚಿನ ಭಾಗವನ್ನು ಜೈಲಿನಲ್ಲೋ ಅಥವಾ ಗಡಿಪಾರಾಗಿಯೋ ಕಳೆದರು. ಹಿಕ್ಮೆತ್ ಅವರು ಬರೆದಿದ್ದ ಹಲವು ಕವನಗಳ ಅನುವಾದ ಇಲ್ಲಿದೆ.





2013

ಕನ್ನಡಕ್ಕೆ: ಬಾಗೇಶ್ರೀ

ಬೆಟ್ಟ ಮತ್ತು ನಾನು

ಉಲುದಾ ಬೆಟ್ಟ ಮತ್ತು ನಾನು
ಒಬ್ಬರನ್ನೊಬ್ಬರು ದಿಟ್ಟಿಸಿ ನೋಡುತ್ತಾ
ಏಳು ವರ್ಷ ಕಳೆದಿದ್ದೇವೆ.
ನಾನು ಒಂದಿಂಚೂ ಕದಲಿಲ್ಲ,
ಅದೂ ಕದಲಿಲ್ಲ,
ಆದರೂ ಒಬ್ಬರನ್ನೊಬ್ಬರು ಚೆನ್ನಾಗಿ ಬಲ್ಲೆವು.
ಎಲ್ಲ ಜೀವಗಳಿಗೂ ಬಂದಂತೆ ಅದಕ್ಕೂ
ಕೆಟ್ಟ ಕೋಪ ಬರುವುದುಂಟು, ಹುಚ್ಚು ಖುಷಿ
ಆಗುವುದುಂಟು.

ಒಮ್ಮೊಮ್ಮೆ ಚಳಿಗಾಲದ ರಾತ್ರಿ
ದಕ್ಷಿಣ ದಿಕ್ಕಿನ ಹಿಮ ಮುಸುಕಿದ
ಪೈನ್ ಮರಗಳ, ಮೈದಾನಗಳ, ಕೆರೆಗಳ ಮೇಲಿಂದ
ಹಾದು ಬರುವ ಕೊರೆವ ಗಾಳಿಗೆ ನಡುಗಿ
ಅದು ಮಗ್ಗುಲು ತಿರುಗುವುದುಂಟು.
ಆಗ ಬೆಟ್ಟದ ನೆತ್ತಿಯ ಮೇಲಿನ ಮನೆಯ ಉದ್ದ
ಗಡ್ಡದ ಅಜ್ಜ ಹೌಹಾರಿ
ಹುಯಿಲಿಡುವ ಗಾಳಿಯನೇರಿ ಕೆಳ ಕಣಿವೆಗೆ
ಧಾವಿಸುವುದುಂಟು.

ಒಮ್ಮೆಮ್ಮೆ ಮೇ ತಿಂಗಳ ಬೆಳ್ಳಂಬೆಳಗ್ಗೆ
ಹೊಸ ಪ್ರಪಂಚ ಎಚ್ಚರಗೊಂಡಂತೆ ಅದು
ಚೆಂದ, ಅಗಾಧ, ಸ್ವತಂತ್ರ, ನೀಲಿ
ಪುಳಕದಲ್ಲಿ ಮೆರೆವುದುಂಟು.

ಇನ್ನೂ ಒಮ್ಮೊಮ್ಮೆ ಅದರ ಇರುವು
ತಂಪು ಪಾನೀಯದ ಬಾಟಲಿಯ ಮೇಲಿನ
ಚಿತ್ರದಂತಿರುವುದುಂಟು.
ನನ್ನ ಕಣ್ಣಿಗೆ ಕಾಣದಷ್ಟು ಎತ್ತರದ ಹೋಟೆಲ್ಲಿನಲ್ಲಿ
ಕೊನ್ಯಾಕ್ ಕುಡಿಯುವ ಸಿರಿವಂತ ಚೆಲುವೆಯರು
ಹಿಮದಾಟ ಆಡುವ ಸಿರಿವಂತ ಚೆಲುವರೊಡನೆ
ಲಲ್ಲೆ ಹೊಡೆಯುತ್ತ ಕಾಲ ಕಳೆವುದುಂಟು.

ಕಡೆಗೊಮ್ಮೆ
ದುಂಬಿ ಸಾಲಂತ ಹುಬ್ಬಿನ ಬೆಟ್ಟದ ಜನರಲ್ಲೊಬ್ಬ
ಆಸ್ತಿ ಜಗಳವೆಂಬ ಪವಿತ್ರ ಕಾರ್ಯಕ್ಕೆ
ನೆರೆಮನೆಯವನ ಕಡಿದು ಬಲಿಕೊಟ್ಟು
ಮನೆಗೆ ಬರುವ ಅತಿಥಿಯಂತೆ
ಹಳದಿ ಪ್ಯಾಂಟು ತೊಟ್ಟು
ಜೈಲಿನ ಎಪ್ಪತ್ತೊಂದನೆ ನಂಬರ್ ಸೆಲ್ಲಿನಲ್ಲಿ
ಹದಿನೈದು ವರ್ಷ ವಾಸಕ್ಕೆ ಬರುವುದುಂಟು.

ನೀರ್ಗಲ್ಲು

ಮುಂದೆ ಓಡುತ್ತಿದೆ ನೀರ್ಗಲ್ಲುಗಳ ಭೇದಿಸಿ
ದಾರಿ ಕೊರೆಯುವ ಯಂತ್ರ.
ಹಿಂದೆ ನಡುಗುತ್ತ ಸಾಗಿದೆ ನಮ್ಮ ಹಡಗು.
ನನ್ನ ಕ್ಯಾಬಿನ್ನಿನ ಕಿಟಕಿಯಿಂದ ನೋಡುತ್ತಿದ್ದೇನೆ
ಹೆಪ್ಪುಗಟ್ಟಿ ಬಿಳಚಿಕೊಂಡ ಅಗಾಧ ಸಾಗರ.

ನನ್ನ ತವರೂರು ಇಸ್ತಾನ್ಬುಲ್.
ನಾನು ಆಡಿ ಬೆಳೆದದ್ದು
ಬೆಚ್ಚನ ಉಪ್ಪುಪ್ಪು ಸಾಗರದ ತಡಿಯಲ್ಲಿ,
ನಮಗೆ ಬಣ್ಣ, ಬೆಳಕು ಇಷ್ಟ,
ಜೀವಂತ ಲಕಲಕಿಸುವ ಎಲ್ಲವೂ ಇಷ್ಟ.
ನಮ್ಮಲ್ಲುಂಟು ಗಸಗಸೆಯ ಹೊಲ,
ಬಡುಬೀಸು ಬೀದಿ, ದೊಡ್ಡ ಬಾಜಾರು,
ಪಾರಿವಾಳಗಳು...
ಆದರೆ ಎಲ್ಲಕ್ಕಿಂತ ನಮಗಿಷ್ಟ

ನಮ್ಮ ಲವಲವಿಕೆಯ ಸಾಗರ
ಉತ್ತರದ ಗಾಳಿಗಿಂತ ಚಂಚಲ,
ಡಾಲ್ಫಿನ್ನುಗಳಿಗಿಂತ ಚುರುಕು
ಹಸಿರು-ನೀಲಿ ಬಣ್ಣದ ನಮ್ಮ ಸಾಗರ.
ನನ್ನ ನಾಡಲ್ಲಿ
ಎಲೆಯೂ ಅಲುಗಾಡದ
ಬಿರು ಬೇಸಿಗೆಯ ಸ್ತಬ್ಧ ಮಧ್ಯಾಹ್ನದ ಹೊತ್ತಲ್ಲೂ
ಅದು ಮಾತ್ರ
ಎಡೆಬಿಡದೆ ಅಲೆಯಾಡುತ್ತಲೇ ಇರುತ್ತದೆ.
ಗಾಳಿಯಲ್ಲಿ ಅದರ ಗಂಧ ನಿರಂತರ...

ನನ್ನ ಕ್ಯಾಬಿನ್ನಿನ ಕಿಟಕಿಯಿಂದ ನೋಡುತ್ತಿದ್ದೇನೆ
ಹೆಪ್ಪುಗಟ್ಟಿ ಬಿಳಚಿಕೊಂಡ ಅಗಾಧ ಸಾಗರ.
ನೋಡುತ್ತಿದ್ದೇನೆ... ಅವಡುಗಚ್ಚಿ.



ಕೊನೆಯ ಬಸ್ಸು

ನಡು ರಾತ್ರಿ. ಕೊನೆಯ ಬಸ್ಸು.
ಕಂಡಕ್ಟರ್ ಟಿಕೇಟು ಹರಿಯುತ್ತಿದ್ದಾನೆ.
ಮನೆಯಲ್ಲಿ ಕೆಟ್ಟ ಸುದ್ದಿಯಾಗಲಿ
ಭಾರಿ ಔತಣವಾಗಲಿ
ನನಗಾಗಿ ಕಾಯುತ್ತಿಲ್ಲ.
ಕಾಯುತ್ತಿರುವುದು ಬರೀ ಖಾಲಿತನ.
ಸಂಧಿಸುತ್ತೇನದನ್ನು
ಅಳುಕು ಅಂಜಿಕೆ ಇಲ್ಲದೆ

ಅಗಾಧ ಕತ್ತಲು ಕವಿಯುತ್ತಿದೆ.
ನಾನೀಗ ಮೌನ ಸಾವಧಾನದಲ್ಲಿ
ಲೋಕವ ನೋಡಬಲ್ಲೆ.
ನನಗೀಗ ಸ್ನೇಹಿತನ ದಗಲ್ಬಾಜಿ,
ಕುಲುಕುತ್ತಿರುವ ಕೈಯ್ಯಲ್ಲಡಗಿದ ಚಾಕು
ದಿಗ್ಭ್ರಮೆಗೊಳಿಸುವುದಿಲ್ಲ.
ವೈರಿಯ ಚುಚ್ಚು ಮಾತು
ಕೆರಳಿಸುವುದಿಲ್ಲ.

ಭವ್ಯ ಪ್ರತಿಮೆಗಳ ಕಾಡಿನೊಳಗೆ
ಕೊಡಲಿ ಹಿಡಿದು ಹೊಕ್ಕಿದ್ದೇ ತಡ
ಅದೆಷ್ಟು ಸುಲಭಕ್ಕೆ
ಎಲ್ಲ ಕೆಳಗುರುಳಿಬಿಟ್ಟವು!
ನನ್ನ ನಂಬಿಕೆಗಳನೆಲ್ಲ ಒಂದೊಂದಾಗಿ
ಮತ್ತೆ ಒರೆ ಹಚ್ಚಿ ನೋಡುತ್ತಿದ್ದೇನೆ
ಸದ್ಯ ಬಹುತೇಕ ಎಲ್ಲ ಪರಿಶುದ್ಧ!

ಹಿಂದೆಂದೂ ಇರಲಿಲ್ಲ
ಈ ಬಗೆಯ ಸ್ವಚ್ಛ ಸ್ವಾತಂತ್ರ್ಯ

ಅಗಾಧ ಕತ್ತಲು ಕವಿಯುತ್ತಿದೆ.
ನಾನೀಗ ಮೌನ ಸಾವಧಾನದಲ್ಲಿ
ಲೋಕವ ನೋಡಬಲ್ಲೆ.
ಇದ್ದಕ್ಕಿದ್ದಂತೆ ಧುತ್ತನೆಗರುತ್ತದೆ ಭೂತದಿಂದ
ಆ ಒಂದು ಪದ, ಒಂದು ಗಂಧ,
ಒಂದು ಕೈಯ್ಯ ಸನ್ನೆ.
ಆ ಪದವೆಷ್ಟು ಅಪ್ಯಾಯಮಾನ,
ವಾಸನೆಯೆಷ್ಟು ಮಧುರ,
ಎಷ್ಟು ಚೆಂದ ಬೆರಳುಗಳ ಬೆಸೆದ ಪ್ರೀತಿ.

ನೆನಪಿನ ಕರೆ ನನಗೀಗ
ದುಃಖ ತರುವುದಿಲ್ಲ
ನೆನಪುಗಳ ಜೊತೆ ತಕರಾರೇ ಇಲ್ಲ
ನಿಜ ಹೇಳಬೇಕೆಂದರೆ
ನನಗೀಗ ಯಾವುದರ ಜೊತೆಯೂ ಜಗಳವಿಲ್ಲ
ಹುಳುಕು ಹಲ್ಲಿನ ಹಾಗೆ ಸತತ ನೋಯ್ಯುವ
ಈ ಹೃದಯದ ಜೊತೆಗೂ ನಾನೀಗ ರಾಜಿ.

ಅಗಾಧ ಕತ್ತಲು ಕವಿಯುತ್ತಿದೆ
ನನಗೀಗ ಸಕಲ ಬಲ್ಲ ಸರ್ವಜ್ಞನ ಗರ್ವವಿಲ್ಲ
ಕಾರಕೂನನ ಅತಿ ವಿನಯವೂ ಇಲ್ಲ
ತಲೆಯ ಮೇಲೆ ಒಂದು ಡಬರಿ
ಬೆಳಕು ಸುರಿದುಕೊಂಡಿದ್ದೇನೆ.
ಈಗ ಸೂರ್ಯನ ಕಣ್ಣಲ್ಲಿ ಕಣ್ಣಿಟ್ಟರೂ
ಕುರುಡು ಆವರಿಸುವುದಿಲ್ಲ,
ವಿಷಾದದ ಸಂಗತಿಯೆಂದರೆ
ಲೋಕದ ಅತಿ ಸುಂದರ ಸುಳ್ಳು ಕೂಡ
ನನ್ನನ್ನೀಗ ಮರುಳು ಮಾಡುವುದಿಲ್ಲ
ನಾನಾಡಿದ, ಮಂದಿಯಾಡಿದ
ಮಾತ್ಯಾವುದೂ ಮತ್ತೇರಿಸುವುದಿಲ್ಲ,

ಹೀಗಿದೆ ನೋಡು ಪರಿಸ್ಥಿತಿ, ನನ್ನ ಪುಟ್ಟ ಗುಲಾಬಿ.
ಸಾವೀಗ ತುಂಬ ಸನಿಹ ಬಂದಿದೆ.
ಪ್ರಪಂಚ ಹಿಂದೆಂದಿಗಿಂತ ಸುಂದರ ಕಾಣಹತ್ತಿದೆ.
ಈ ಲೋಕ ತೊಟ್ಟ ಬಟ್ಟೆಯಂತಿತ್ತು,
ಈಗ ಕಳಚಲು ಶುರು ಮಾಡಿದ್ದೇನೆ.
ರೈಲಿನಲ್ಲಿ ಕಿಟಕಿಯ ಬಳಿ ಇದ್ದೆ
ಈಗ ಸ್ಟೇಷನ್ನು ತಲುಪಿದ್ದೇನೆ.
ಆಗ ಮನೆಯೊಳಗಿದ್ದೆ
ಈಗ ಬಾಗಿಲ ಬಳಿ ಇದ್ದೇನೆ
ಚಿಲಕ ತೆರೆದಿದೆ.
ಮನೆಗೆ ಬರುವ ಅತಿಥಿಗಳು
ನನಗೀಗ ದುಪ್ಪಟ್ಟು ಇಷ್ಟ.
ಬಿಸಿಲಿಂದು ಎಂದಿಗಿಂತ ಹೊಳಪು
ಹಿಮವಿಂದು ಎಂದಿಗಿಂತ ಬಿಳುಪು

ಸತ್ಯದ ಝಲಕು

ನಿನ್ನ ಕಣ್ಣಲ್ಲಿ ಕಣ್ಣಿಟ್ಟು ನೋಡುವುದು
ಗೋಧಿ ಹೊಲದ ಹುಲ್ಲಿನ ನಡುವೆ ಕಳೆದು ಹೋಗಿ
ಬೆಚ್ಚನ ನೆಲದ ವಾಸನೆ ಮೈದುಂಬಿ ಅಮಲೇರಿದಂತೆ.
ನಿನ್ನ ಕಣ್ಣುಗಳು
ನಿತ್ಯ ಬದಲಾಗುವ ನಿರಂತರ ದೃಶ್ಯ
ಹಸಿರು ಹೊಳೆಯುವ ತಳವಿರದ ಆಳ.
ಬನವೂ ತೋರುವುದಲ್ಲಿ ಸತ್ಯದ ಸಣ್ಣ ಝಲಕು
ಸಂಪೂರ್ಣ ಶರಣಾಗತಿಯ ಪಸ್ಸೆಯೇ ಇಲ್ಲ.


ಕುಮಟಾ: ಬಲ್ಲಿರೇನಯ್ಯಾ, ಟಿಕೆಟ್ ಕುಸ್ತಿಯ ಕಲಿಗಳ್ಯಾರೆಂದು!

ಕರಾವಳಿಯ ಕುಮಟಾ ವಿಧಾನಸಭಾ ಕ್ಷೇತ್ರ ಇದೆಯಲ್ಲ, ಅದು ಮೀನ್‌ಪಳಿ ಮತ್ತು ಮಳ್ಗೆ ತಂಬ್ಳ ಮೇಲಾಟದ ಅಖಾಡ! ದಿವಂಗತ ಹೆಗಡೇಜಿ ಮತ್ತು ದಿವಂಗತ 'ಬಂ'ರ ಭಂಡಾಟದ ಪರ್ವದಲ್ಲಂತೂ ಇಲ್ಲಿ ಮೀನ್‌ಪಳ್ಳಿ (ದೀವರು) -ಮಳ್ಗೆ ತಂಬ್ಳ (ಹೈಗರು) ಮಧ್ಯೆ ರಂಗುಬಿರಂಗಿ ಕಾಳಗವೇ ನಡೆಯುತ್ತಿತ್ತು. ಆದರೆ 1980ರ ದಶಕದ ಆರಂಭದಲ್ಲಿ ಸಮಾಜವಾದಿ ಹಿನ್ನೆಲೆಯ ಕಾಂಗ್ರೆಸಿಗ ಎಸ್.ವಿ. ನಾಯ್ಕ ಸೋತ ನಂತರ ಇಲ್ಲಿಂದ ದೀವರು (ಈಡಿಗರು) ಶಾಸಕ ಸ್ಥಾನ ಪಡೆಯಲು ಸಾಧ್ಯವೇ ಆಗಲಿಲ್ಲ; ಹಾಗೆಯೇ ಆರೆಸ್ಸೆಸ್ ವಿರೋಧಿ ಬಿಜೆಪಿಗೆ ಡಾ. ಎಂ.ಪಿ. ಕರ್ಕಿಯೇ ಹೈಗರ (ಬ್ರಾಹ್ಮಣ) ಕೊನೆಯ ಶಾಸಕ. ಈ ಹೈಗರ-ದೀವರ ಹೈಪೋಟಿಯಲ್ಲಿ ಮೈಕ್ರೋಸ್ಕೋಪಿಕ್ ಮೈನಾರಿಟಿ ಕಮ್ಯುನಿಟಿಯ ಮೋಹನ ಶೆಟ್ಟಿ, ದಿನಕರ ಶೆಟ್ಟಿಯಂಥವರು, ಬಹುಸಂಖ್ಯಾತ ಬುಡಕಟ್ಟು ಸಮುದಾಯ (ಹಾಲಕ್ಕಿ ಒಕ್ಕಲು)ದ ಎನ್.ಎಚ್. ಗೌಡ, ಕೆ.ಎಚ್.ಗೌಡರಿಗೆ ವಿಧಾನಸೌಧ ಕಾಣುವ ಭಾಗ್ಯ ಖುಲಾಯಿಸಿದ್ದು ವಿಚಿತ್ರವಾದರೂ ಸತ್ಯ. ಆದರೆ ಇವರ ಆಯ್ಕೆಯಲ್ಲೂ ಮೀನ್‌ಪಳ್ಳಿ-ಮಳ್ಗೆ ತಂಬ್ಳ ಮಸಲತ್ತು ಅಂತರ್ಗಾಮಿಯಾಗಿತ್ತು!


ಅಡಿಕೆ-ಮೀನು ಹದವಾಗಿ ಬೆರೆತಿರುವ ಕುಮಟಾ-ಹೊನ್ನಾವರದ ಅಷ್ಟೂ ಪಕ್ಷಗಳಲ್ಲಿ ಎಮ್ಮೆಲ್ಲೆ ಚಟದ ಪುಢಾರಿಗಳ ಬೆಳೆ ಹುಲುಸಾಗಿ ಬೆಳೆದಿದೆ. ಕಾಂಗ್ರೆಸ್‌ನಲ್ಲಿ ಬರೋಬ್ಬರಿ 19 ಜನ 'ಬುದ್ಧಿವಂತರು' ಟಿಕೆಟ್ ಬೇಕೆಂದು ಅರ್ಜಿ ಗುಜರಾಯಿಸಿದ್ದಾರೆ. ಅತ್ತ ಬಿಜೆಪಿಯಲ್ಲಿ ಒಂದರ್ಧ ಡಜನ್ ಆಸೆಬುರುಕರು ಲಾಬಿ ಮಾಡುತ್ತಿದ್ದಾರೆ. ಆದರೆ ಜೆಡಿಎಸ್ ಅಭ್ಯರ್ಥಿಯಾಗುವ ಉಮೇದು ಹಾಲಿ ಶಾಸಕ ದಿನಕರ ಶೆಟ್ಟಿ ಒಬ್ಬರ ಬಿಟ್ಟರೆ ಮತ್ತ್ಯಾರಿಗೂ ಇಲ್ಲ. ದೊಡ್ಡ ಮಟ್ಟದ ಕುತೂಹಲ ಕೆರಳಿಸಿರುವುದು ಕಾಂಗ್ರೆಸ್ ಮತ್ತು ಬಿಜೆಪಿ ಒಳಗಿನ ಟಿಕೆಟ್ ರೇಸ್ ಹಿಟ್ಸ್! ಆ ಎರಡೂ ಪಾರ್ಟಿಯ ಡಾರ್ಕ್ ಹಾರ್ಸ್ ತಯಾರಿಸುವ ಫೈನಲ್ ಪ್ರಹಸನ ಚಿತ್ರ ವಿಚಿತ್ರ ಚರ್ಚೆಯನ್ನೆಬ್ಬಿಸಿದೆ...



ಅನಂತ್‌ಕುಮಾರ್ ಹೆಗ್ಡೆ



ಕಾಗೇರಿ



ದಿನಕರ ಶೆಟ್ಟಿ

ಅದೆಷ್ಟೇ ತಿಪ್ಪರಲಾಗ ಹಾಕಿದರೂ ಜೆಡಿಎಸ್‌ಗೆ ಕುಮಟಾ-ಹೊನ್ನಾವರದಲ್ಲಿ ಇರುವುದು ಕೇವಲ ಶೇಕಡಾ 5 ಮತಬಲ ಮಾತ್ರ. ಹಾಗಾಗಿ ಕಾಂಗ್ರೆಸ್ ಕ್ಯಾಂಡಿಡೇಟಾಗುವ ಹುಕಿ ಆಗಾಗ ಆತನಿಗೆ ಈ ಒಂದು ವರ್ಷದಲ್ಲಿ ಬಂದದ್ದಿದೆ. ಸ್ಥಳೀಯ ಕಾಂಗ್ರೆಸ್‌ನೊಳಗಿನ ಗುಂಪುಗಾರಿಕೆ-ಟಿಕೆಟ್ ಆಕಾಂಕ್ಷಿಗಳ ದಂಡು ಕಂಡು ಕಂಗೆಟ್ಟಿರುವ 'ಡಾನ್' ದೇಶಪಾಂಡೆಗೂ ಪೂರ್ವಾಶ್ರಮದ (ಜನತಾ ಪರಿವಾರ) ಪರಿಚಾರಕ ದಿನಕರನನ್ನೇ ಏಕೆ ಕಾಂಗ್ರೆಸ್ ಎಲೆಕ್ಷನ್ ಪಂಟರ್ ಮಾಡಬಾರದೆಂಬ ಯೋಚನೆ ಕೊರೆಯುತ್ತಿದೆ. ಈಗ ನಡೆದಿರುವ ಪೌರ ಸಂಸ್ಥೆ ಎಲೆಕ್ಷನ್‌ನಲ್ಲಿ ಏನಾದರೂ ದಿನಕರನದೇ ಮೇಲ್ಗೈ ಆಗಿ, ಕಾಂಗ್ರೆಸ್ ಮಕಾಡೆ ಮಲಗಿದರೆ ಆಗ ಕುಮಟೆಯ ಟಿಕೆಟ್ ರಾಜಕಾರಣದ ದಿಕ್ಕು ಬದಲಾಗುವುದು ಗ್ಯಾರಂಟಿ.

ಅಂದರೆ ಜೆಡಿಎಸ್‌ನ ಶಾಸಕ ದಿನಕರ ಶೆಟ್ಟಿ ಕಾಂಗ್ರೆಸ್ ಅಭ್ಯರ್ಥಿಯಾಗುವ ವಾತಾವರಣ ನಿರ್ಮಾಣ ಆಗುತ್ತದೆ. ಕಳೆದ ಬಾರಿ ಕೇವಲ 20 ಮತದಿಂದ ಗೆದ್ದಿರುವ ದಿನಕರ್‌ಗೆ ಜೆಡಿಎಸ್‌ನಿಂದ ಈ ಬಾರಿ ಗೆಲ್ಲುವ ಭರವಸೆಯೂ ಇಲ್ಲ. ಮೂರು ಬಿಲ್ಲಿ ಕಾಸಿಲ್ಲ, ಕಾಂಗ್ರೆಸ್ ಟಿಕೆಟ್‌ಗೆ ಕಸರತ್ತು ಮಾಡುತ್ತಿರುವ ಹಲವು ಅನಾಹುತಕಾರಿಗಳಿಗಿಂತ ಈ ಗೌಡ ಬೆಟರ್. ಟಿಕೆಟ್‌ದಾತನೆಂದೇ ಬಿಂಬಿತವಾಗಿರುವ ದೇಶಪಾಂಡೆ ಮುತುವರ್ಜಿ ವಹಿಸಿ ಕೆ.ಎಚ್. ಗೌಡರಿಂದ ಟಿಕೆಟ್ ಕೋರಿಕೆಯ ಅರ್ಜಿ ಕೆಪಿಸಿಸಿಗೆ ಕೊಡಿಸಿದ್ದಾರೆ. ದೇಶಪಾಂಡೆಯ ಆಪ್ತನಾದ -ಜಾತಿಬಂಧುವೂ ಆಗಿರುವ ಗೋಲ್‌ಮಾಲ್ ಕಂಟ್ರಾಕ್ಟರ್ ಒಬ್ಬ ಅರ್ಜಿ ಶುಲ್ಕ ತುಂಬಿ ಕೆ.ಎಚ್.ಗೆ ನೆರವಾಗಿದ್ದಾನೆ. ಒಳ್ಳೆಯದು ಮಾಡಲಾಗದಿದ್ದರೂ ಕೆಟ್ಟದ್ದೆಂದೂ ಮಾಡದ ಬುದ್ಧಿಯ ಕೆ.ಎಚ್.ಗೆ ಕಾಂಗ್ರೆಸ್ ಟಿಕೆಟ್ ಕೊಡಿಸಿ ಗೆಲ್ಲಿಸಿಕೊಂಡರೆ ದೇಶಪಾಂಡೆ ಇಷ್ಟು ವರ್ಷ ಹಿಂದುಳಿದವರಿಗೆ ಮಾಡಿದ ಅನ್ಯಾಯ-ಮೋಸ-ವಂಚನೆಯ ಪಾಪ ಪರಿಹಾರವಾದೀತು!

ಕೆ.ಎಚ್., ಶಾರದಾ ಶೆಟ್ಟಿ ಬೆನ್ನಿಗೇ ಇರುವ ಯಶೋಧರ ನಾಯ್ಕ ಶಾಸಕನಾಗುವ ದುರಾಸೆಯಿಂದ ಕುಮಟೆಯಲ್ಲಿ ಟೆಂಟು ಹಾಕಿರುವ ಬಿಸಿನೆಸ್‌ಮನ್. ಈತನ ಮೂಲ ಹೊನ್ನಾವರದ ಶರಾವತಿ ನದಿ ದಂಡೆಯ ಮೋಳ್ಕೋಡ್ ಎಂಬ ಹಳ್ಳಿ. ಆದರೆ ಈತ ಊರು ಬಿಟ್ಟು ಮೈಸೂರು

ಏಕಸಾಮ್ಯದ ದಾದಾಗಿರಿಯಿಂದ ಹೈರಾಣಾಗಿ ಅನಂತ್ಮಾಣಿಗೆ ತನ್ನಿಂದ ಶತ್ರುವಿಗೆ ... ತಪ್ಪಿಸಲಿಕ್ಕಾಗದೆಂಬುದು ಗೊತ್ತಿದೆ. ಆದರೆ ಕಾಗೇರಿಗ ... ಕೊಡುವ ಹಂತದಲ್ಲೇ ಕಿರಿಕಿರಿ ಮಾಡಿ ಶಿರಸಿ-ಸಿದ್ದಾಪ್ರ ... ಡ್ಯಾಮೇಜ್ ಮಾಡುವ ಹಿಡನ್ ಹಿಕಮತ್ತು ಅನಂತ ... ನಡೆಸಿದ್ದಾನೆ.

ಜಿಲ್ಲಾ ಬಿಜೆಪಿ ಮೇಲೆ ಯಜಮಾನಿಕೆ ಸ್ಥಾಪ... ಮೇಲಾಟ ಕಾಗೇರಿ-ಅನಂತ್ಮಾಣಿ ನಿರಂತರ ನಡೆಸು... ಇದ್ದಾರೆ. ಈಗ ತಮ್ಮ ಆಜ್ಞಾನುಧಾರಿಗಳಿಗೆ ... ಕೊಡಿಸುವ ಟ್ಯಾಕ್ಟಿಕ್ಸ್ ಮಾಡುತ್ತಿದ್ದಾರೆ. ಸೂರಜ್ ನ... ಸೋನಿ ಎಂಬ ದೀವರ ಪೆದ್ದು ಪೋರನ ಮೋ... ತುಪ್ಪ ಸವರಿ ಇಷ್ಟು ದಿನ ಆಟ ಆಡಿದ ಅನಂತ್ಮಾಣ ... ತಾನೇ ಏಕೆ ಕುಮಟೆಯಿಂದ ಸ್ಪರ್ಧಿಸಬಾರದ... ಆಲೋಚನೆಗೆ ಬಿದ್ದಿದ್ದಾನೆ. 'ಬಂ' ಕೃಪೆಯಿಂದ ಬೆಂಗಳೂ... ಮಾಡಿಕೊಂಡಿದ್ದ ಜಮೀನು ಮಾರಿ ಕೋಟಿಗಟ್ಟಲೆ ... ಮಾಡಿಕೊಂಡಿರುವ ಸೋನಿಗೆ ಆ ಹಣದ ... ಶಾಸಕನಾಗುವ ದುಸ್ಸಾಹಸಕ್ಕೆ ಇಳಿಸಿದೆ. ಅನಂತ್ಮಾಣಿ ... ಬಿಜೆಪಿ ಟಿಕೆಟ್ ಕೊಡಿಸುತ್ತಾನೆಂದು ಕನಸು ಕಾಣು... ಸೋನಿಗೆ ಈಗ ಭ್ರಮ ನಿರಸನ ಆಗಿದೆ. ಅನಂ... ಕುಮಟಾ ಟಿಕೆಟ್ ಕೇಳುತ್ತಿರುವುದು ಆತನ ಬಿಜೆಪಿಯೋ... ಬ್ರಾಹ್ಮಣಶಾಹಿಯ ದರ್ಶನ ಮಾಡಿಸಿಬಿಟ್ಟಿದೆ!

ಸೋನಿಯನ್ನು ನಡುನೀರಲ್ಲಿ ಕೈಬಿಟ್ಟಿರುವ ಅನಂತ್ಮಾ... ಕುಮಟೆಯಿಂದ ಗೆಲ್ಲುವ ಧೈರ್ಯವಿಲ್ಲ. ಸ್ವ-ಪಕ್ಷ... ಗೊಂದಲ ಮೂಡಿಸಿ ತನಗೆ ಬೇಕಾದವರಿಗೆ ಟಿ... ಕೊಡಿಸಲು ಆತ ತಾನೇ ಕುಮಟಾ ಟಿಕೆಟ್ ... ಶಿರಸಿ ಟಿಕೆಟ್ ಆಕಾಂಕ್ಷಿ ಎಂದು ಬಟ್ಟೆ ಹಾವು ಬಿಡುತ್ತಿ... ಕುಮಟೆಯ ಮಟ್ಟಿಗೆ ಆತನ ಮೊದಲ ಪ್ರಾಶಸ್ತ್ಯವೇನಿದ್ದ... ಅದು, ಪಕ್ಕಾ ಚೆಡ್ಡಿ-ಪಕ್ಕ ಟ್ರೇಡರ್ ಕೊಂಕಣಿ ವಿನೋ... ಪ್ರಭುಗೆ! ಅನಂತ್ಮಾಣಿಯನ್ನು ಏಕವಚನದಲ್ಲಿ ಸಂಬೋಧಿ... ವಿನೋದ್ ಪ್ರಭುಗೆ ಕೇಶವ ಕೃಪಾದಲ್ಲಿ ಆಶ್ರಯದಾತರಿ...



ಎಂ.ಪಿ.ಕರ್ಕಿ



ಯಶೋಧರ ನಾಯ್ಕ್



ಸೂರಜ್ ಸೋನಿ




ಕೃಷ್ಣ ಜೆ.ಭಟ್



ಶಾರದಾ ಶೆಟ್ಟಿ



ಕೆ.ಎಚ್.ಗೌಡ



ವಿನೋದ್ ಪ್ರಭು

ಕಳೆದ ಬಾರಿ ಈ ಕ್ಷೇತ್ರದಲ್ಲಿ 'ಅನಾಮಧೇಯ' ಜೆಡಿಎಸ್ ಗೆದ್ದಿದ್ದು ತೀರಾ ಅನಿರೀಕ್ಷಿತ. ಖುದ್ದು ದಿನಕರ ಶೆಟ್ಟಿಗೆ ತಾನು ಶಾಸಕನಾಗುವ ನಂಬಿಕೆ ಇರಲಿಲ್ಲ. ಒಂದು ಅವಧಿಯ ಶಾಸಕನಾಗಿ, ಸರ್ಕಾರಿ ಕಂಟ್ರಾಕ್ಟರಿಕೆಯಿಂದ ಭರ್ಜರಿ ದುಡ್ಡು ಮಾಡಿದ ಧನಾಢ್ಯನಾಗಿದ್ದ ಕಾಂಗ್ರೆಸ್‌ನ ಮೋಹನ ಶೆಟ್ಟಿ ಕ್ಷೇತ್ರದ ಮೇಲೆ ಪ್ರಬಲ ಹಿಡಿತ ಸಾಧಿಸಿದ್ದು ದಿನಕರ ಶೆಟ್ಟಿಯನ್ನು ಕಂಗೆಡಿಸಿತ್ತು. ಆದರೆ ಕಿಡ್ನಿ ವೈಫಲ್ಯದಿಂದ ಸರಿಯಾಗಿ ಪ್ರಚಾರ ಮಾಡಲಾಗದ ದಾಯಾದಿ ಅಣ್ಣ-ಮೋಹನ ಶೆಟ್ಟಿಯ ದೌರ್ಬಲ್ಯ ಸರಿಯಾಗಿ ಬಳಸಿಕೊಂಡಿದ್ದ ದಿನಕರ ಶೆಟ್ಟಿಗೆ ಬರೀ ಇಪ್ಪತ್ತೇ ಇಪ್ಪತ್ತು ಮತದಂತರದಿಂದ ಜಾಕ್‌ಪಾಟ್ ಒಲಿದಿತ್ತು! ಶಾಸಕನಾಗುತ್ತಲೇ ದಿನಕರ ಆಮೂಲಾಗ್ರವಾಗಿ ಬದಲಾಗಿ ಹೋದರು. ಮೊದಲಿನ ಪೊಗರು-ರಸಿಕತೆ-ರಗಳೆಯನ್ನೆಲ್ಲ ಕಡಿಮೆ ಮಾಡಿದ ಆತನಿಗೆ ಹಣದ ಮೋಹ ಮಾತ್ರ ಮೀತಿ ಮೀರಿ ಬೆಳೆದಿತ್ತು.

ಅಯಕಟ್ಟಿನ ಇಲಾಖೆಯ ಅಧಿಕಾರಿಗಳಿಂದ ಮಾಮೂಲಿ ಫಿಕ್ಸ್ ಮಾಡಿಕೊಂಡಿದ್ದ ಶಾಸಕ ಸಾಹೇಬರು ಮಾತಿನಲ್ಲಿ ಮಾತ್ರ ಜನಪರತೆ ರೂಢಿಸಿಕೊಂಡಿದ್ದರು. ಗ್ರಾಮ ವಾಸ್ತವ್ಯ ಹಳ್ಳಿ ಯಾತ್ರೆ ಮಾಡುತ್ತ ತನ್ನ ಖಾಸಗಿ ಟ್ರಸ್ಟ್‌ನಿಂದ ವಿದ್ಯಾರ್ಥಿಗಳಿಗೆ ಬಸ್‌ಪಾಸ್-ಪಟ್ಟಿ-ಪಾಟಿ ವಿತರಿಸುತ್ತ ಕ್ಷೇತ್ರದಾದ್ಯಂತ ಬೇರು-ಬಿಳಲು ಬಿಟ್ಟಿದ್ದರು ಶಾಸಕ ಶೆಟ್ರು. ಹಾಗಂತ ಹೇಳಿಕೊಳ್ಳುವಂಥ ಅಭಿವೃದ್ಧಿ ಕೆಲಸ ಆತನಿಂದ ಮಾಡಲು ಆಗಲಿಲ್ಲ; ಅಂಥ ದೂರದೃಷ್ಟಿಯ ನಾಯಕತ್ವವೂ ಈ ಒಣ ಪುಢಾರಿಯಲ್ಲಿ ಇಲ್ಲ. ಒಂದು ಹಂತದಲ್ಲಿ ಆಪರೇಷನ್ ಕ-ಮಲ ಮಾಡಿಸಿಕೊಳ್ಳಲು ಈತ ಸಜ್ಜೂ ಆಗಿದ್ದ. ಆದರೆ ಬಿಜೆಪಿಯಿಂದ ನಿರೀಕ್ಷಿಸಿದಷ್ಟು ಕಾಸು ಬರುವುದು ಖಾತ್ರಿಯಾಗಲಿಲ್ಲವೋ? ಮತ್ತೆ ಗೆಲ್ಲುವ ಧೈರ್ಯ ಇಲ್ಲದಾಯ್ತೋ? ಕುಮ್ಮಿ ಕರೆದು ಮಂಗಳಾರತಿ ಎತ್ತಿ ಬೆದರಿಸಿದರೋ? - ದಿನಕರ ಮಾತ್ರ ಜೆಡಿಎಸ್‌ನಲ್ಲೇ ಉಳಿದುಬಿಟ್ಟರು.

ಈ ದಿನಕರ ಶೆಟ್ಟಿ ಕಳೆದ ಒಂದು ವರ್ಷದಿಂದ ಚುನಾವಣೆ ಪ್ರಚಾರ ಶುರು ಹಚ್ಚಿಕೊಂಡಿದ್ದಾರೆ. ದಿನಕರ ಹಾಗೆಯೇ ಕಾಂಗ್ರೆಸ್‌ನಲ್ಲಿ ಜನರನ್ನು ಆಕರ್ಷಿಸುವ ಅರ್ಹರೂ ಇಲ್ಲ. ಇದು ದೇಶಪಾಂಡೆ-ದಿನಕರ ಶೆಟ್ಟರ ನಡುವೆ ನೈಟ್‌ಸ್ಕ್ರೀನು ಸಂಧಾನ ಮಾಡಿಸಿದರೆ ಅಚ್ಚರಿ ಪಡುವಂತಿಲ್ಲ. ಆದರೂ ಕಾಂಗ್ರೆಸ್‌ನಲ್ಲಿ ಟಿಕೆಟ್‌ಗೆ ನೂಕುನುಗ್ಗಲು ನಡೆದಿದೆ. ಈ ದಟ್ಟಣೆಯಲ್ಲಿ ಎದ್ದು ಕಾಣುವುದು ದಿವಂಗತ ಮೋಹನ ಶೆಟ್ಟಿ ಪತ್ನಿ ಶಾರದಾ ಶೆಟ್ಟಿ, ಮಾಜಿ ಶಾಸಕ ಕೆ.ಎಚ್. ಗೌಡ, ಮೈಸೂರಲ್ಲಿ ಟ್ರಾನ್ಸ್‌ಪೋರ್ಟ್ ಮತ್ತಿತರ ರಂಗೀಲಾ ದಂಧೆ ಮಾಡುವ ಯಶೋಧರ ನಾಯ್ಕ ಮಾತ್ರ.

ಶಾರದಾ ಶೆಟ್ಟಿಗೆ ಆಕೆಯ ಪತಿ ಮೋಹನ ಶೆಟ್ಟಿ ಬಗ್ಗೆ ಜನರಿಗಿದ್ದ ಸದಭಿಪ್ರಾಯ ಮತ್ತು ಹಣ ಕಾಂಗ್ರೆಸ್‌ನ ಪ್ರಬಲ ಹುರಿಯಾಳಾಗಿ ರೂಪಿಸಿದೆ. ದಿನಕರ ಶೆಟ್ಟಿಗೆ ಸೆಡ್ಡು ಹೊಡೆವ ತಾಕತ್ತಿದ್ದರೆ ಅದು ಶಾರದಾ ಶೆಟ್ಟಿಗೆ ಮಾತ್ರ ಎಂಬ ಅಭಿಪ್ರಾಯ ಕ್ಷೇತ್ರದಾದ್ಯಂತ ಇದೆ. ಹಮ್ಮು-ಬಿಮ್ಮು ಇಲ್ಲದೆ ಪೆದ್ದು-ಪೆದ್ದು ಮಾತಾಡುತ್ತ ಜನರೊಂದಿಗೆ "ಒಡೆಯಾ... ಒಡೆಯಾ..." ಎನ್ನುತ್ತ ಬೆರೆಯುತ್ತಿದ್ದ ಮೋಹನ ಶೆಟ್ಟಿಯ 'ಮೋಡಿ' ಇನ್ನೂ ಕ್ಷೇತ್ರದಲ್ಲಿದೆ. ಹಾಗೆಯೇ ಶಾರದಾ ಶೆಟ್ಟಿ ಸ್ಪರ್ಧಿಸಿದರೆ ಆಕೆಗೆ ಸಿಂಪಥಿಯೂ ಸಿಗುತ್ತದೆ. ಆದರೆ ಶಾರದಾಗೆ ಇರುವ ಒಂದೇ ಒಂದು ತೊಂದರೆಯೆಂದರೆ, ಆಕೆಯ ಮಗ ರವಿಕುಮಾರ್ ಎಂಬ ಅಧಿಕ ಪ್ರಸಂಗಿ. ತನಗೂ ಕಾಂಗ್ರೆಸ್ ಟಿಕೆಟ್ ಬೇಕೆಂದು ಬೊಬ್ಬೆ ಹೊಡೆಯುತ್ತಿರುವ ಈತ 'ಕುಮಟಾ ಉತ್ಸವ'ದಂಥ ಹುಚ್ಚಾಟ ನಡೆಸಿ ಅಪ್ಪ ಮಾಡಿಟ್ಟ ಹಣ ಕಳೆಯುತ್ತಿದ್ದಾನೆ. ತಿಕ್ಕಲು ಸ್ವಭಾವದ ರವಿ ಕಂಡರೆ ಹಿರಿ ತಲೆಗಳಿಗೆ ಆಗದು. ಆತ 'ಲಿಗಾಡಿ' ಬಿಟ್ಟರೆ ಶಾರದಾಗೆ ಗೆಲುವು ಸಲೀಸು.

ಕಾಂಗ್ರೆಸ್‌ನ ಇನ್ನೊಬ್ಬ ಶಕ್ತಿಶಾಲಿ ಹುರಿಯಾಳೆಂದರೆ ಮಾಜಿ ಶಾಸಕ ಕೆ.ಎಚ್. ಗೌಡ. 'ಬಂ'ರ ಕಟ್ಟಾ ಅನುಯಾಯಿ ಆಗಿದ್ದ ಈತನನ್ನು ಅಂಕೋಲೆಯಿಂದ ಆಮದು ಮಾಡಿ ಕುಮಟೆಗೆ ಬಂದು ಶಾಸಕನಾಗಿಸಿದ್ದು 'ಬಂ'. ಕೆ.ಎಚ್. ಗೌಡರ ಹಾಲಕ್ಕಿ ಒಕ್ಕಲು ಸಮುದಾಯವೇ ಕುಮಟಾ ಕ್ಷೇತ್ರದಲ್ಲಿ ದೊಡ್ಡದು. ಜಾತಿಬಲ ಬಿಟ್ಟರೆ ಈತನಲ್ಲಿ ಇನ್ನೇನಿಲ್ಲಾ. ಮಾಜಿ ಶಾಸಕನಾದರೂ ನಿವೃತ್ತಿ ವೇತನ ಬಿಟ್ಟರೆ ಸೇರಿ ಮೂರ್ನಾಲ್ಕು ದಶಕವೇ ಕಳೆದಿದೆ. ಅಲ್ಲಿ ತರತರದ ದಂಧೆ ಮಾಡಿ ದುಡ್ಡು ಮಾಡಿರುವ ಈತ ತಮಿಳುನಾಡು ಸಿಎಂ ಜಯಲಲಿತಾ, ನರಸಿಂಹದತ್ತ ಒಡೆಯರ್, ಸಿದ್ದರಾಮಯ್ಯ ತನಗೆ ಕ್ಲೋಸ್ ಎಂದು ಪೋಸ್ ಕೊಡುತ್ತಾನೆ. ಹಣ ನೀರಂತೆ ಹರಿಸುತ್ತಿದ್ದಾನೆ. ತನ್ನ ಖಾಸಗಿ ಟ್ರಸ್ಟ್ ಮೂಲಕ ದಾನ-ಧರ್ಮ-ಗೋಕರ್ಣ ಉತ್ಸವ ಮಾಡುತ್ತ ಹಾರಾಡುತ್ತಿದ್ದಾನೆ. ಆಗಾಗ ಸಿದ್ದರಾಮಯ್ಯ, ಸಿ.ಎಂ. ಇಬ್ರಾಹಿಂರನ್ನು ಕರೆಸಿ ವರ್ಚಸ್ಸು ಪ್ರದರ್ಶಿಸುತ್ತಿದ್ದಾನೆ. ಸಿದ್ದು ತನಗೆ ಟಿಕೆಟ್ ಖಂಡಿತ ಕೊಡಿಸುತ್ತಾರೆಂದು ಕ್ಷೇತ್ರದಲ್ಲಿ ಅಂಡಲೆಯುತ್ತಿದ್ದಾನೆ. ಆದರೆ ಅದ್ಯಾಕೋ ಈ ಯಶೋಧರ ನಾಯ್ಕ ಬಗ್ಗೆ ಜನರಿಗೆ ಭರವಸೆ ಮೂಡುತ್ತಿಲ್ಲ. ಪಕ್ಷದ ಛಟ್ಟಿಳದಲ್ಲಿ ಒಮ್ಮೆ ಜೆಡಿಎಸ್, ಮತ್ತೊಮ್ಮೆ 'ಬಂ' ಪಾರ್ಟಿಯಿಂದ ಸ್ಪರ್ಧಿಸಿ ಠೇವಣಿ ಕಳಕೊಂಡಿರುವ ಯಶೋಧರ ನಾಯ್ಕ ಕುಮಟೆಯಲ್ಲಿ ಬೆಲ್ಲ ಕೊಟ್ಟರೂ ಗೆಲ್ಲುವುದಿಲ್ಲ. ಈ ಜಾತಿ ಬಲ-ಹಣ ಬಲದವರ ಟಿಕೆಟ್ ಗುದ್ದಾಟದಲ್ಲಿ ತಮ್ಮ ಅದೃಷ್ಟ ಖುಲಾಯಿಸಬಹುದೆಂದು ಸಿಜರಿನ್ ಡಾಕ್ಟರ್ ಜಿ.ಜಿ. ಹೆಗಡೆ, ಜಿ.ಪಂ. ಮಾಜಿ ಅಧ್ಯಕ್ಷೆ ಗಾಯತ್ರಿ ಗೌಡ, ಜಿ.ಪಂ. ಮಾಜಿ ಸದಸ್ಯೆ ಸುಧಾ ಗೌಡ ಬಾಯಿ ತೆರೆದುಕೊಂಡು ಕೂತಿದ್ದಾರೆ. ಆದರೆ ಇವರೆಲ್ಲ ಜನ ಬಳಕೆ ಇಲ್ಲದ ದಂಡ-ಪಿಂಡಗಳು.

ಬಿಜೆಪಿಯಲ್ಲಿ ಬಡಿದಾಟ

ಸೊಗಲಾಡಿ ಸಂಸದ ಅನಂತ್ಮಾಣಿ ಯಾನೆ ಅನಂತಕುಮಾರ್ ಹೆಗಡೆ ಎಂಟ್ರಿಯಾಗಿದ್ದೇ ತಡ, ಕುಮಟಾ ಬಿಜೆಪಿಯ ಟಿಕೆಟ್ ರೇಸ್‌ಗೆ ಬಿರುಸು ಬಂದು ಬಿಟ್ಟಿದೆ! ಮತ್ತೆ ಎಂಪಿಯಾಗುವುದು ಸಾಧ್ಯವೇ ಇಲ್ಲವೆಂಬ ತೀರ್ಮಾನಕ್ಕೆ ಬಂದಿರುವ ಈ ಆರೆಸ್ಸೆಸ್‌ನ ಮಾಜಿ ಬುತ್ತಿ ಮಾಣಿಗೆ ಎಮ್ಮೆಲ್ಲೆ ಆಗುವ ತಲಬು ಕಾಡಲಾರಂಭಿಸಿದೆ. ಈತನ ಹೆಡ್‌ಕ್ವಾರ್ಟರ್ಸ್ ಶಿರಸಿ. "ಶಿರಸಿಯಿಂದಲೇ ನನಗೆ ಟಿಕೆಟ್ ಕೊಡಿ. ಆ ಕಾಗೇರಿಗೆ ಈ ಬಾರಿ ಟಿಕೆಟ್ ಕಟ್ ಮಾಡಿ..." ಎಂದು ಬೆಂಗಳೂರು-ದಿಲ್ಲಿ ಒಂದುಮಾಡಿ ತುಂಡುಗುಪ್ಪಳ ಹೊಡೆಯುತ್ತಿದ್ದಾನೆ ಅನಂತ್ಮಾಣಿ. ಮಂತ್ರಿ ಕಾಗೇರಿಯ

ಹೀಗಾಗಿ ಫಿಲ್ಟರ್ ಆಗಿರುವ ಬಿಜೆಪಿ ಲಿಸ್ಟ್‌ನಲ್ಲಿ ವಿನೋ... ಹೆಸರು ನಂಬರ್ ಒನ್ ಸ್ಥಾನದಲ್ಲಿದೆ.


ಹೇಗೆ ಚೆಡ್ಡಿ ಟ್ರಂಪ್ ಕಾರ್ಡ್ ಬಳಸಿ ಗೇರು ಅಭಿವ... ನಿಗವುದ ಗೂಟದ ಕಾರು ವಿನೋದ... ಹೊಡೆದುಕೊಂಡಿದ್ದನೋ, ಹಾಗೇ ಕುಮಟಾ ಅಸೆ... ಕ್ಷೇತ್ರದ ಬಿಜೆಪಿ ಟಿಕೆಟ್ ಲಪಟಾಯಿಸುವ ಮಸಲ... ಮಾಡಿದ್ದಾನೆ. ಹಾಗಂತ ಈ ಮುಖೇದಿಗೆ ಗೆಲ್ಲ... ಧೈರ್ಯವಿಲ್ಲ. ಕಳೆದ ವಿಧಾನ ಪರಿಷತ್ (ಸ್ಥಳೀಯ ಸಂಸ್ಥೆ... ಕ್ಷೇತ್ರ) ಎಲೆಕ್ಷನ್‌ಗೆ ಆಳುವ ಬಿಜೆಪಿ ಹುರಿಯಾಳಾಗಿ ನಿಂ... ಈತ ಠೇವಣಿ ಕಳೆದುಕೊಂಡಿದ್ದ. ಬಂಡಾಯ ಬಿಜೆ... ಅಭ್ಯರ್ಥಿ ನಂಬರ್ ಟು ಪಡೆದುಕೊಂಡಿದ್ದರೆ ಆಗ ಗೆದ್ದಿದ್ದ... ಕಾಂಗ್ರೆಸ್. ಹಾಗೆಯೇ ಈ ವಿನೋದ್‌ಗೆ ತನ್ನ ತವ... ಹಳ್ಳಿ ಹೆಗಡೆಯಲ್ಲೇ ನೆಲೆ-ಬೆಲೆಯಿಲ್ಲ. ಆತನ ಸ್ವಂ... ಮನೆಯಿರುವ ಭೂತಲ್ಲಿ ಬಿಜೆಪಿ ಮತವೇ ಬರುವುದಿ... ಜಿಲ್ಲಾ ಬಿಜೆಪಿ ಅಧ್ಯಕ್ಷನಾಗಿದ್ದ ಪ್ರಭು ಪಾರ್ಟಿ ಬೆಳೆಸಿದ್ದಕ್ಕಿ... ತನ್ನ ಸಾಲ-ಸೂಲ ತೀರಿಸಿಕೊಂಡು ಜೀರ್ಣೋದ್ಧಾ... ಮಾಡಿಕೊಂಡಿದ್ದೇ ಹೆಚ್ಚು. ಇಂಥ ನಾಮರ್ಥನಿಗೆ ಟಿಕೆ... ಕೊಡುವುದಕ್ಕೆ ಬಿಜೆಪಿಯಲ್ಲಿ ದೊಡ್ಡ ವಿರೋಧ ವ್ಯಕ್ತವಾಗಿ...

ಕಾಗೇರಿ ಈ ಅಪಸ್ವರ ಬಳಸಿಕೊಂಡು ಮಾಜಿ ಶಾಸ... ವಯೋವೃದ್ಧ 'ನೇತಾರ' ಡಾ. ಎಂ.ಪಿ. ಕರ್ಕಿಗೆ ತಾಲೀ... ಮಾಡುತ್ತಿದ್ದಾರೆ. ಇವತ್ತು ಕರ್ಕಿ ಬಿಜೆಪಿಯಲ್ಲಿ ಮೂ... ಗುಂಪಾಗಿದ್ದರೆ ಅದಕ್ಕೆ ಕಾರಣ ಇದೇ ಕಾಗೇ... ಕುಮಟೆಯಿಂದ ಎರಡು ಬಾರಿ ಶಾಸಕನಾಗಿದ್ದ ಡಾ. ಕ... ಬಿಜೆಪಿಯನ್ನು ಕಟ್ಟಿದ ಸೀನಿಯರ್ ಮೋಸ್ಟ್. ಇಂಥ... ಮತ್ತೆ ಶಾಸಕನಾದರೆ ತನ್ನ ಮಂತ್ರಿಗಿರಿ ಕನಸು ನನಸಾಗದೆಂ... ದೂ(ದು)ರಾಲೋಚನೆಯಿಂದ ಕಾಗೇರಿ ಆರೆಸ್ಸೆಸ್ ವಲಯದ... ಕರ್ಕಿ ಬಗ್ಗೆ ಇಲ್ಲಸಲ್ಲದ ಚಾಡಿ ಹೇಳಿ ಆತನಿಗೆ ಟಿಕೆ... ಕಟ್ ಮಾಡಿಸಿದ್ದರು. ಈಗ ಅನಂತ್ಮಾಣಿಯ ಹಣಿಯ... ಕರ್ಕಿಯನ್ನು ದಾಳ ಮಾಡಿಕೊಂಡಿದ್ದಾರೆ ಕಾಗೇರಿ. ಆಕಸ್ಮಾ... ಕರ್ಕಿ ಶಾಸಕನಾದರೂ ಮಂತ್ರಿಯಾಗೋ ಛಾನ್ಸ್ ...

▶▶ 15

ಅಪ್ಪನ ನೆನಪುಗಳು

ನಮ್ಮ ಬಳಗದ ವರದಿಗಾರ ದೊಡ್ಡಿಪಾಳ್ಯ ನರಸಿಂಹಮೂರ್ತಿ ತಮ್ಮ ಬಾಲ್ಯ ಹಾಗೂ ತಂದೆಯ ನೆನಪುಗಳನ್ನು ಇಲ್ಲಿ ನಿರೂಪಿಸಿದ್ದಾರೆ. ನಾಲ್ಕಾರು ದಶಕಗಳ ಹಿಂದಿನ ಬೆಂಗಳೂರು ಸುತ್ತಮುತ್ತಲಿನ ಹಳ್ಳಿಗರ ಬದುಕಿನ ಚಿತ್ರಣವನ್ನು ಈ ಬರಹ ನೀಡುವಂತಿದೆ...



ಮುನಿನರಸಪ್ಪ

...ಗಳೂರು ದಕ್ಷಿಣ ತಾಲೂಕಿನಲ್ಲಿರುವ ದೊಡ್ಡಿಪಾಳ್ಯ ...ಾಮ ನಾನು ಹುಟ್ಟಿ ಬೆಳೆದ ಊರು. ಮೂಲತಃ ...ನಲ್ಲಿದ್ದದ್ದು ಗೊಲ್ಲರ ಜಾತಿಯೊಂದೇ. ನಮ್ಮ ...ರಸಪ್ಪನ ಹಿರಿಯ ಮಗನೇ ನಮ್ಮಪ್ಪ ಮುನ್ನರಸಪ್ಪ ...ರ್ಭಿಕ್ಷದಲ್ಲಿದ್ದ ನಮ್ಮ ಕುಗ್ರಾಮದಲ್ಲಿ ಆ ಕಾಲಕ್ಕೆ ...ಗೂ ಬರ. ಹೀಗಾಗಿ ನಮ್ಮೂರಿನಲ್ಲಿ ಮಾರಪ್ಪನ ...ಾರಪ್ಪ ನರಸಿಂಹಯ್ಯನ ಮಗ ನರಸಿಂಹಯ್ಯ ... ಹತ್ತಾರು ಜೋಡಿಗಳಿದ್ದವು.

... ಬಡತನದಿಂದ ಕೂಡಿದ್ದ ನನ್ನ ಬಾಲ್ಯದ ಹತ್ತು ...ವರ್ಷಗಳು ಕಳೆದದ್ದು ಇದೇ ಊರಿನಲ್ಲಿ. ಆಗ ... ಸುಮಾರು 20 ಜನರಿದ್ದ ಒಂದು ಅವಿಭಕ್ತ ... ಹಿರಿಯನಾದ ನಮ್ಮಪ್ಪನೇ ಮನೆ ಯಜಮಾನ. ...ನೂರು ಒಂದೂವರೆ ವರ್ಷದವನಿದ್ದಾಗ ನಮ್ಮಮ್ಮ



ದೊಡ್ಡಿಪಾಳ್ಯ ನರಸಿಂಹಮೂರ್ತಿ

...ಡಳಂತೆ. ಹೀಗಾಗಿ ನನಗೆ ಅಮ್ಮನ ಯಾವೊಂದು ... ಉಳಿದಿಲ್ಲ. ಮರುಮದುವೆಯ ಪ್ರಸ್ತಾಪವನ್ನು ...ದ್ದ ನಮ್ಮಪ್ಪ ತನ್ನ ಮಕ್ಕಳಿಗೆ ಮಲತಾಯಿ ...ಬೇಡ ಎಂದುಬಿಟ್ಟನಂತೆ. ಹೀಗೆ ನನ್ನ ಪಾಲಿಗೆ ...ದರೂ ಅಮ್ಮ ಎಂದರೂ ಒಂದೇ ವ್ಯಕ್ತಿ. ಅದೇ ... ಮುನ್ನರಸಪ್ಪ.

ಬಾಲ್ಯಕ್ಕಿಂತ ನಮ್ಮಪ್ಪನ ಬಾಲ್ಯದಲ್ಲಿ ಅವರು ...ುಸಿದ ಕಷ್ಟ ಕೋಟಲೆಗಳು ದುಪ್ಪಟ್ಟಾಗಿದ್ದವು. ...ಬೋ ಕಾಯಿಲೆಗೆ ತುತ್ತಾಗಿದ್ದ ನಮ್ಮ ತಾತ ಸಣ್ಣ ... ಬಿಟ್ಟು ಕಣ್ಣುಮುಚ್ಚಿಕೊಂಡನಂತೆ. ಅಪ್ಪನಿಗೆ ಒಬ್ಬಳು ...ುತರ ಮೂರು ಮಂದಿ ತಮ್ಮಂದಿರು. ನಮ್ಮಜ್ಜಿ ...ತಿಳಿಯದ ಮುಗ್ಧೆಯಂತೆ. ಬೊಗಸೆಗೆ ಬೆಂಕಿ ...ೂ ಹರಾಶಿವಾ ಅಂತಿರಲಿಲ್ಲ ಅಂತ ನಮ್ಮೂರಿನ ...ು ಹೇಳೋರು. ಇಂಥಾ ಸನ್ನಿವೇಶದಲ್ಲಿ ಕುಟುಂಬ ...ೆಯ ಜವಾಬ್ದಾರಿ ಹುಡುಗನಾಗಿದ್ದಾಗಲೇ ಅಪ್ಪನ ... ಬಿದ್ದಿತ್ತು.

...ಾಲಕ್ಕೆ ನೀರಾವರಿ ಇಲ್ಲದಿದ್ದರೂ ಯಥೇಚ್ಛ ಮಳೆ ...ಂದ ನಮ್ಮಪ್ಪ ತರಕಾರಿ ಬೆಳೆಯೋಕೆ ಶುರು ...ವನಂತೆ. ಎರಡೆರಡು ತರಕಾರಿ ಬುಟ್ಟಿಗಳನ್ನು ...ಲೆ ಹೊತ್ತುಕೊಂಡು ಅಮ್ಮ ಮಗ ಇಬ್ಬರೂ ...ತನಕ ಹೋಗ್ತಿದ್ದರಂತೆ. ದಂಡು ಎಂದರೆ ಈಗಿನ ...ಾರಿನ ಕಂಟೋನ್ಮೆಂಟ್ ಏರಿಯಾದಲ್ಲಿ ಆಗ ಪರಂಗಿ ...ಇರ್ತಿತ್ತಂತೆ. ಬೆಂಗಳೂರಿನ ಸುತ್ತಮುತ್ತಲ ಹತ್ತಾರು ...ಮೀಟರ್ ದೂರದ ರೈತರು ಬೆಳೆದ ತರಕಾರಿಗೆ ...ಕಟ್ಟೆ ಇದ್ದದ್ದೇ ಅಲ್ಲಿ. ನಮ್ಮೂರಿನಿಂದ ಆ ದಂಡಿಗೆ ...ಗೆ ದಾರಿಯಲ್ಲಿ ಏನಿಲ್ಲವೆಂದರೂ 25 ...ಮೀಟರ್‌ಗೆ ಕಮ್ಮಿ ಇರಲಿಲ್ಲ. ಮೂರು ಕಾಸೋ ... ಕಾಸೋ ಇರಲಿ, ನಮ್ಮಪ್ಪ ಕಾಸಿನ ಮುಖ ...ುದ್ದದ್ದು ಆಗಲೇ ಅಂತೆ.

...ಗ ಅವರು ಪಟ್ಟ ಕಷ್ಟಗಳನ್ನು ನೆನಸಿಕೊಂಡರೆ ನಾವು ...ಎಂಥಾ ಸೋಂಬೇರಿ-ಸುಖದಲ್ಲಿದ್ದೀವಿ ಎಂಬುದು ...ಾಗುತ್ತೆ.

...ೃಷ್ಣವ ಜಾತಿಗೆ ಸೇರಿದ ಆಗರ ಗ್ರಾಮದ ಸಿಂಗಯ್ಯನೋರು ಆ ಕಾಲದಲ್ಲಿ ನಮ್ಮೂರಿನ ಆಂಜನೇಯನ ಗುಡಿಯ ಪೂಜಾರಿ. ಈಗಲೂ ಅವರ ವಂಶದವರೇ- ಬಹುಶಃ ಅವರ ಮೊಮ್ಮಗ ಇರಬಹುದು- ಪೂಜಾಕಾರ್ಯ ನಡೆಸುತ್ತಿದ್ದಾರೆ. ಆದರೆ ಈ ಮೊಮ್ಮಗನ ಸ್ಟೈಲ್ ಹೇಗೆಂದರೆ ಭಕ್ತಾದಿಗಳು ಅವರ ಮನೆಬಾಗಿಲಿಗೆ ಹೋಗಿ 200 ರೂಪಾಯಿ ಅಡ್ವಾನ್ಸ್ ಪೇಮೆಂಟ್ ಕೊಟ್ಟರೇನೆ ಅವರ ಗಾಡಿ ಸ್ಟಾರ್ಟ್ ಆಗೋದು. "200 ರೂಪಾಯಿ ಬಾಟಾ ಇಲ್ಲಾಂದರೆ ನಮಗೇನು ವರ್ಕ್‌ಔಟ್ ಆಗುತ್ತೆ ಹೇಳಿ?" ಅಂತಾ ಪ್ರಶ್ನಿಸುವ ಈ ಭೂಪನಿಗೆ ಯಾವ ಮುಚ್ಚುಮರೆಯೂ ಇದ್ದಂತಿಲ್ಲ. ಆಂಜನೇಯನ ಕಲ್ಲು ವಿಗ್ರಹ ಮಾತ್ರ ಯಾವ ಮಾರ್ಪಾಡೂ ಇಲ್ಲದೆ ಭಕ್ತರಿಗೆ ದರ್ಶನ ಕೊಡುತ್ತಲೇ ಇದೆ.

ಸಿಂಗಯ್ಯನೋರು ತಾವು ಕಲಿತ ವಿದ್ಯೆಯನ್ನು ಹತ್ತಾರು ಜನರಿಗೆ ಕಲಿಸಿ ಪುಣ್ಯ ಕಟ್ಟಿಕೊಂಡ ಮಹಾನುಭಾವ. ಅಂದಹಾಗೆ ಆಗಿನ ಕಾಲದಲ್ಲಿ ಪೆನ್ನು ಪುಸ್ತಕ ಹಾಗಿರಲಿ, ಸ್ಲೇಟು ಬಳಪಕ್ಕೂ ಗತಿ ಇರಲಿಲ್ಲವಂತೆ. ಆದ್ದರಿಂದ ಹಳ್ಳದಿಂದ ನುಣುಪಾದ ಮರಳು ತರಿಸಿ, ಯಾವುದಾದರೂ ಮರದ ನೆರಳಲ್ಲಿ ಹರಡಿ ಬೆರಳಿನಿಂದ ಅಕ್ಷರ ತಿದ್ದಿಸಿ ಕಲಿಸುತ್ತಿದ್ದರಂತೆ. ಸಿಂಗಯ್ಯನೋರ ಕೃಪೆಯಿಲ್ಲದೆ ಹೋಗಿದ್ದರೆ ನಮ್ಮಪ್ಪ ವಿದ್ಯೆ ಕಲಿಯೋದು ಕನಸಿನ ಮಾತು.

ಈ ಗುರು-ಶಿಷ್ಯರ ಅನುಬಂಧದಿಂದ ಗುರುಗಳಿಗೆ ಏನು ಲಾಭವಾಯಿತೊ ಗೊತ್ತಿಲ್ಲ. ಹೆಚ್ಚೆಂದರೆ ಕುಂಬಳಕಾಯಿ, ಮಾವಿನಕಾಯಿಗಳ ದಕ್ಷಿಣೆ ಸಿಕ್ಕಿರಬಹುದು. ಆದರೆ ಶಿಷ್ಯನಿಗಂತೂ ಭಾರೀ ಲಾಭವೇ ಆಗಿತ್ತು. ಸಿಂಗಯ್ಯನೋರ ಆಶೀರ್ವಾದ ಬಲದಿಂದ ಅಪ್ಪ ಸುಮಾರು ಹತ್ತು ಎಕರೆ ಜಮೀನು ಸಂಪಾದಿಸಿದ್ದ. ಊರೆಲ್ಲಾ ಊಟಕ್ಕೆ ಪರದಾಡುತ್ತಿದ್ದ ಕಾಲದಲ್ಲಿ ಅಷ್ಟೊಂದು ಆಸ್ತಿ ಸಂಪಾದನೆ ಮಾಡೋದು ಅಂದರೆ ಅದೇನು ಹುಡುಗಾಟದ ಮಾತೇ? ಅದು ಬರೀ ಹಣಕಾಸಿನ ಸಮಸ್ಯೆ ಮಾತ್ರ ಆಗಿರಲಿಲ್ಲ. ಆ ಜಮೀನಿನ ಮೇಲೆ ದೊಡ್ಡದೊಡ್ಡೋರ ಕಣ್ಣು ಬಿದ್ದಿತ್ತಂತೆ. ಆದರೆ ಸಿಂಗಯ್ಯನೋರು ಮಾತ್ರ ತಮ್ಮ ಶಿಷ್ಯನಿಗೇ ಜಮೀನು ದಕ್ಕುವಂತೆ ಮಾಡಿದ್ದರು.

ನಮ್ಮಪ್ಪ ಮಹಾನ್ ಛಲಗಾರ. ಹಿಡಿದ ಕೆಲಸವನ್ನು ಅರ್ಧಕ್ಕೆ ಕೈಬಿಡುವ ಪೈಕಿಯಲ್ಲ. ನಮ್ಮೂರಿಗೆ ಕನಿಷ್ಠ ಪಕ್ಷ ಒಂದು ಬಂಡಿ ಜಾಡೂ ಗತಿ ಇರದಿದ್ದ ದುಸ್ಥಿತಿಯಲ್ಲಿ ರಸ್ತೆ ಮಾಡಿಸಲು ಹೋರಾಡಿದ್ದೊಂದು ಮಿನಿ ಮಹಾಭಾರತ. ಇಲ್ಲಿಗೆ ಸುಮಾರು ನಾಲ್ಕೈದು ದಶಕಗಳ ಹಿಂದೆ ಸರ್ಕಾರದಿಂದ ನಮ್ಮೂರಿಗೊಂದು ರಸ್ತೆ ಮಾಡಿಸಲು ಹೋಗಿ ನಮ್ಮಪ್ಪ ದೇವಗೆರೆಯ ಪಟೇಲರನ್ನು ಎದುರು ಹಾಕಿಕೊಂಡ. ರಸ್ತೆಗೆ ತಮ್ಮ ಜಮೀನು ಬಿಟ್ಟುಕೊಡಲು ಒಪ್ಪದ ನಮ್ಮೂರಿನ ಒಂದು ಕುಟುಂಬ ಪಟೇಲರನ್ನು ಆಶ್ರಯಿಸಿತು. ದೇವಗೆರೆಯ ಪಟೇಲರೆಂದರೆ ಸುತ್ತಲ ಹದಿನಾರು ಹಳ್ಳಿಯ ಜನರು ಥರಗುಟ್ಟುತ್ತಿದ್ದ ಕಾಲ ಅದು. ಹೀಗಾಗಿ ನಮ್ಮಪ್ಪ ಅದೆಷ್ಟು ಬಾರಿ ಹೊಡೆತ ತಿಂದನೋ, ಅದೆಷ್ಟು ಬೈಗುಳ ಅನುಭವಿಸಿದನೋ ನಮ್ಮೂರು ಮಾರಮ್ಮನಿಗೇ ಗೊತ್ತು. ಪೊಲೀಸು, ಕೋರ್ಟು-ಕಚೇರಿ ತಿರುಗಿ ಸಾಲಸೋಲಕ್ಕೆ ಸಿಲುಕಿ ನಮ್ಮಪ್ಪ ಅಕ್ಷರಶಃ ಅರೆಹುಚ್ಚನಂತಾದ. ಆದರೆ ಆತ ಎಂಥಾ ಹಠಮಾರಿ ಅಂದರೆ ಒಮ್ಮೆ ಅನ್ಯಾಯದ ವಿರುದ್ಧ ಸೆಟೆದು ನಿಂತನೆಂದರೆ ಅದೇನೇ ಬಂದರೂ ತಲೆಬಾಗೋ ಆಸಾಮಿಯಲ್ಲ.

ರಸ್ತೆಗೆ ಅಡ್ಡಿಪಡಿಸಿದವರ ವಾದವೇನೆಂದರೆ ಊರಿಂದಾಚೆ ಎಲ್ಲೋ ಇದ್ದ ನಕಾಶೆ ಪ್ರಕಾರವೇ ರಸ್ತೆ ಆಗಬೇಕು ಎಂಬುದು. ನಮ್ಮಪ್ಪ ಭಗೀರಥ ಪ್ರಯತ್ನ ಮಾಡಿ ಸ್ಥಳ ಪರಿಶಿಲನೆಗಾಗಿ ಡಿಸಿ ಸಾಹೇಬರನ್ನು ಊರಿಗೆ ಕರೆತಂದಾಗ "ಸ್ವಾಮಿ, ಊರಿರುವ ಕಡೆ ರೋಡು ಆಗಬೇಕೋ ಅಥವಾ ನಕಾಶೆ ಇರೋಕಡೆಗೆ ಊರು ಹೋಗಬೇಕೋ ಎರಡರಲ್ಲೊಂದು ಹೇಳಿ?" ಅಂತಾ ಪ್ರಶ್ನಿಸಿದ್ದ. ಅಂತಿಮವಾಗಿ ಊರು ಇರುವಲ್ಲೇ ರಸ್ತೆಯಾಗಲಿ ಅಂತ ಸಾಹೇಬರು ಆದೇಶಿಸಿದ ಪರಿಣಾಮವಾಗಿ ದೊಡ್ಡಿಪಾಳ್ಯ ಎಂಬ ಕುಗ್ರಾಮಕ್ಕೂ ಒಂದು ರಸ್ತೆ ಆಯ್ತು.

ಇಂಥಾ ಕುಗ್ರಾಮದಲ್ಲಿ ಶಾಲೆ ಶುರುವಾಗಿದ್ದು ಅರವತ್ತರ ದಶಕದಲ್ಲಿರಬಹುದು. ಅದಕ್ಕೆ ಶಾಲೆಯೆನ್ನಬೇಕೋ ಬೇಡವೋ ಅನ್ನೋದರ ಬಗ್ಗೆ ನನಗೆ ಈಗಲೂ ಗೊಂದಲವಿದೆ. ಯಾಕೆಂದರೆ ಶಾಲೆಗೆ ಕಟ್ಟಡವಂತೂ ದೂರದ ಮಾತು, ಒಂದು ನಿಗದಿತ ಜಾಗವೂ ಇರಲಿಲ್ಲ. ಯಾವುದಾದರೂ ಒಂದು ಜಗಲಿ ಖಾಲಿಯಿದ್ದರೆ ಅದೇ ಮಹಾ ಪುಣ್ಯ. ಇಂಥಾ ಶಾಲೆಗೆ ನಾನು ಪ್ರವೇಶ ಮಾಡಿದ್ದು 1975 ರಲ್ಲಿ. ಅದರ ಮುಂದಿನ ವರ್ಷ ನಮ್ಮೂರ ಮಂದಿ ಸಾಮೂಹಿಕ ಶ್ರಮದಾನ ಮಾಡಿ ಶಾಲೆಗಾಗಿ ಒಂದು ಮನೆ ಕಟ್ಟಿದರು.

ಈ ನೂತನ ಶಾಲೆಗೆ ನಾರಾಯಣಸ್ವಾಮಿ ಅನ್ನೋ ಮೇಷ್ಟ್ರು ಬಂದರು. ಅವರನ್ನು ಮೇಷ್ಟ್ರು ಅಂತಾ ಕರೆಯಬೇಕಾದರೆ ಯಾವ ಮಾನದಂಡ ಅಳವಡಿಸಬೇಕು ಅನ್ನೋದು ಅಷ್ಟು ಸುಲಭಕ್ಕೆ ಬಗೆಹರಿಯುವುದಿಲ್ಲ. ಯಾಕೆಂದರೆ ಮೂರುಹೊತ್ತೂ ಹೆಂಡ ಕುಡಿದಿರುತ್ತಿದ್ದ ಕಣ್ಣೇ ಬಿಡ್ತಿರಲಿಲ್ಲ. ಒಂದು ವೇಳೆ ಅಪ್ಪಿತಪ್ಪಿ ಎದ್ದು ಓಡಾಡೋ ಸ್ಥಿತಿಯಿದ್ದರೆ ಆತ ಮೀನು ಹಿಡೀಲಿಕ್ಕೋ ಅಥವಾ ಹಕ್ಕಿ ಬೇಟೆಗೋ ಹೋಗಿಬಿಡುತ್ತಿದ್ದ. ಇಂಥಾ ಸನ್ನಿವೇಶದಲ್ಲಿ ನಿಜವಾದ ಅರ್ಥದಲ್ಲಿ ನನ್ನ ಪಾಲಿನ ಮೇಷ್ಟ್ರು ಆದವರು ಸ್ವತಃ ನಮ್ಮಪ್ಪನೇ. ಕೋಳಿ ಕೂಗೋ ಹೊತ್ತಿಗೆ ನಮ್ಮನ್ನು ಎಬ್ಬಿಸಿ ನಮ್ಮಪ್ಪ ನಮಗೆ ಓದುಬರಹ ಕಲಿಸದೇ ಹೋಗಿದ್ದರೆ ನಮ್ಮ ಬದುಕು ಯಾವ ದಾರಿ ಹಿಡೀತಿತ್ತೋ ದೇವರೇ ಬಲ್ಲ.

ನಮ್ಮಪ್ಪನ ಮೇಲೆ ಸಿಂಗಯ್ಯನೋರ ಪ್ರಭಾವ ಬಹಳವೇ ಇತ್ತು ಅಂತ ಕಾಣುತ್ತೆ. ವಾರಕ್ಕೊಮ್ಮೆ ಸ್ನಾನ ಮಾಡೋದೇ ದೊಡ್ಡಿಪಾಳ್ಯದ ಅಂದಿನ ಪದ್ಧತಿ. ಹೀಗಿದ್ದಾಗ ನಸುಕಿನಲ್ಲೇ ಎದ್ದು ಅಚ್ಚುಕಟ್ಟಾಗಿ ಸ್ನಾನ ಮುಗಿಸಿ, ಅಯ್ಯಂಗಾರಿಗಳಂತೆ ಹಣೆಗೆ ಒಂದು ಸಿಂಗಲ್‌ನಾಮ ಬಳಿದು, ಸುಮಾರು ನಾಲ್ಕಡಿ ಎತ್ತರದ ಕೃಷ್ಣನ ಫೋಟೊಗೆ ಪೂಜೆ ಮಾಡಿ ಮುಗಿಸುವವರೆಗೆ ನಮ್ಮಪ್ಪ ಬಾಯಿಗೆ ನೀರೂ ಬಿಡುತ್ತಿರಲಿಲ್ಲ. ಇದು ಅಪ್ಪನ ಇಡೀ ಜೀವಮಾನದ ದಿನಚರಿಯ ಭಾಗವಾಗಿತ್ತು.

ರಾಮಾಯಣ, ಮಹಾಭಾರತ, ಭಗವದ್ಗೀತೆ, ಮಹಾಭಾಗವತ, ಭಕ್ತವಿಜಯ ಮುಂತಾದ ಉದ್ಗ್ರಂಥಗಳನ್ನು ಸಂಪಾದಿಸಿಟ್ಟುಕೊಂಡಿದ್ದ ನಮ್ಮಪ್ಪ ನಿತ್ಯ ಪಾರಾಯಣ ತಪ್ಪಿಸುತ್ತಿರಲಿಲ್ಲ. ಮನಸ್ಸಿನಲ್ಲೇ ಪಠಣ ಮಾಡುವುದೆಂದರೆ ನಮ್ಮಪ್ಪನಿಗೆ ಸುತರಾಂ ಇಷ್ಟವಿರಲಿಲ್ಲ. ಹರಿಕತೆ ದಾಸರ ಶೈಲಿಯಲ್ಲಿ ಎತ್ತರದ ದನಿಯಲ್ಲಿ ಈ ದಾಸರು ಓದಲು ಶುರುವಿಟ್ಟುಕೊಂಡರೆ ಮುಗೀತು. ಅರ್ಧ ಊರಿನ ಜನ ಅನಿವಾರ್ಯವಾಗಿ ಶ್ರೋತೃಗಳಾಗಬೇಕಿತ್ತು. ಇಂಥಾ ಅತಿಯಾದ ಧರ್ಮಗ್ರಂಥ ಪ್ರೇಮದ ಪರಿಣಾಮವಾಗಿ ನಾನು ಮೂರನೇ ಕ್ಲಾಸಿನಿಂದಲೇ ಅವುಗಳನ್ನು ಓದುವ ಸದವಕಾಶ ಪ್ರಾಪ್ತಿಯಾಯ್ತು. ಅವುಗಳನ್ನು ಓದುವುದು ತುಂಬಾ ಆಸಕ್ತಿಕರವಾಗಿರುತ್ತಿತ್ತೆಂಬುದೇನೋ ನಿಜ. ಆದರೆ ಕ್ರಮೇಣ ಅವುಗಳಲ್ಲಿನ ವೈರುಧ್ಯಗಳು, ಅತಾರ್ಕಿಕ, ಅಮಾನವೀಯವೆನ್ನಬಹುದಾದ ಅಂಶಗಳು ನನ್ನಲ್ಲಿ ತೀವ್ರ ಗೊಂದಲವನ್ನು-ಪ್ರಶ್ನೆಗಳನ್ನು ಹುಟ್ಟುಹಾಕಿದವು. ಬಹುಶಃ ಹೈಸ್ಕೂಲ್ ಮುಗಿಯುವ ಹೊತ್ತಿಗೆ ನಾನು ವೈಜ್ಞಾನಿಕತೆ, ನಾಸ್ತಿಕತೆಯೆಡೆಗೆ ಮುಖ ಮಾಡಿದ್ದೆ. ಈ ವಿಷಯದಲ್ಲಿ ನಮ್ಮಪ್ಪನ ಪ್ರಯತ್ನ ತದ್ವಿರುದ್ಧ ಫಲಿತಾಂಶವನ್ನು ನೀಡಿತ್ತು. ಅಪ್ಪನ ಮಾತುಗಳಲ್ಲೇ ಹೇಳುವುದಾದರೆ "ಹೀರೇ ಹಾಕಿ ಸೋರೆ ಬೆಳೆದಂತೆ" ಆಗಿತ್ತು.

ನಾನು ಕಿರಿಯ ಮಗನಾಗಿದ್ದರಿಂದ ನಮ್ಮಪ್ಪನಿಗೆ ನನ್ನ ಮೇಲೆ ಹುಚ್ಚು ಪ್ರೀತಿ. ನನ್ನನ್ನು ಬಹಳ ಓದಿಸಿ "ದೊಡ್ಡ ವ್ಯಕ್ತಿ" ಮಾಡಬೇಕೆಂದು ತುಂಬಾ ಕನಸು ಕಂಡಿದ್ದ ನಮ್ಮಪ್ಪ ಯಾರದೋ ಮಾತು ಕೇಳಿ ನನ್ನನ್ನು ಪಿಯುಸಿ ಸೈನ್ಸ್‌ಗೆ ಸೇರಿಸಿದ್ದ. ದೊಡ್ಡಿಪಾಳ್ಯ ಎಂಬ ಕುಗ್ರಾಮದಿಂದ ಬಂದ ಹುಡುಗನಿಗೆ ಹನುಮಂತನಗರದ ಪೀಇಎಸ್ ಕಾಲೇಜಿನಲ್ಲಿ ಇಂಗ್ಲಿಷ್ ಮೀಡಿಯಮ್ಮು. ಅಲ್ಲಂತೂ ಕನ್ನಡದ ಶಬ್ದ ಕಿವಿ ಮೇಲೆ ಬೀಳೋದೇ ದುರ್ಲಭವಾಗಿತ್ತು. ಪ್ರಾಯಶಃ ಅದೇ ದೊಡ್ಡ ಎಡವಟ್ಟಾಗಿ ನನ್ನನ್ನು ಶಿಕ್ಷಣದಿಂದಲೇ ಹೊರಕ್ಕೆ ದಬ್ಬಿಬಿಟ್ಟಿತು. ನಾನು ಕಾಲೇಜು ತ್ಯಜಿಸಿದಾಗ ನಮ್ಮಪ್ಪನ ಕನಸು ಛಿದ್ರಗೊಂಡಿತು. ನನ್ನ ಎರಡೂ ಕೈಗಳನ್ನು ಹಿಡಿದುಕೊಂಡ ನಮ್ಮಪ್ಪ ಕಾಲೇಜು ಮುಂದುವರೆಸುವಂತೆ ಕಣ್ಣೀರು ಹಾಕುತ್ತಾ ಗೋಳಾಡಿದ ಆ ಯಾತನಾಮಯ ದೃಶ್ಯವನ್ನು ಮರೆಯಲು ಹೇಗೆ ಸಾಧ್ಯ?

ಜಾತಿ-ಮತ, ಆಚಾರ-ವಿಚಾರಗಳಲ್ಲಿ ನಮ್ಮಪ್ಪ ಪಕ್ಕಾ ಫ್ಯೂಡಲ್. ಹೀಗಿರುವಾಗ ನಾನು ಅಂತರ್‌ಜಾತೀಯ ಮದುವೆ ಮಾಡಿಕೊಂಡಿದ್ದು ನಮ್ಮಪ್ಪನಿಗೆ ಮತ್ತೊಂದು ದೊಡ್ಡ ಆಘಾತವಾಗಿತ್ತು. ಈ ಘಟನೆಯಿಂದ ನಮ್ಮ ಇಡೀ ಕುಟುಂಬದ ಮೇಲೆ ತರಹೇವಾರಿ ಸಾಮಾಜಿಕ ಒತ್ತಡ ಬಿತ್ತು. ನಾನಾ ದೂಷಣೆಗಳಿಗೆ ಗುರಿಯಾಗಬೇಕಾಯಿತು. ಆ ಸಂದರ್ಭದಲ್ಲಿ ನಮ್ಮಪ್ಪ ನನ್ನಿಂದ ದೂರ ಆಗ್ತಾನೆ ಅಂತ ಭಾವಿಸಿದ್ದೆ. ಆದರೆ ತದ್ವಿರುದ್ಧವಾಗಿ ನನಗೆ ಒತ್ತಾಸೆಯಾಗಿ ನಮ್ಮಪ್ಪ ನಿಂತುಬಿಟ್ಟ. ನನ್ನ ಮೇಲಿನ ಆತನ ವ್ಯಾಮೋಹ ಕಿಂಚಿತ್ತೂ ಕಡಿಮೆಯಾಗಿರಲಿಲ್ಲ.

ನಮ್ಮಪ್ಪನ ಪಾಲಿಗೆ ಎಲ್ಲಕ್ಕಿಂತಲೂ ದೊಡ್ಡ ಆಘಾತ ನಾನು ಮನೆಯಿಂದಲೇ ದೂರ ಹೋಗಿಬಿಟ್ಟದ್ದು. ತನ್ನ ಜೊತೆಯಲ್ಲೇ ಉಳಿಯುವಂತೆ ಪರಿಪರಿಯಾಗಿ ಕೇಳಿಕೊಂಡ ಅಪ್ಪನ ಮಾತಿಗೆ ಮನ್ನಣೆ ಕೊಡದೆ ಸಾಮಾಜಿಕ ಚಟುವಟಿಕೆಗಳಲ್ಲಿ ತೊಡಗಲು ಮನೆಯಿಂದ ದೂರವಾಗಬೇಕಾಯ್ತು. ಪದೇಪದೇ ನನ್ನಿಂದ ವಿನಾಕಾರಣ ದುಃಖವನ್ನೇ ಉಂಡಿದ್ದರೂ ನನ್ನ ಮೇಲೆ ನಮ್ಮಪ್ಪನ ಪಿತೃ ಪ್ರೇಮ ಕಿಂಚಿತ್ತೂ ಮುಕ್ಕಾಗಲಿಲ್ಲವೆಂದರೆ ಅದು ಹುಚ್ಚು ಪ್ರೀತಿಯಲ್ಲದೆ ಮತ್ತೇನು?

ಇಂತಹ ನಮ್ಮಪ್ಪ ಒಂದು ದಿನ ಇದ್ದಕ್ಕಿದ್ದಂತೆ ನಮ್ಮೆಲ್ಲರನ್ನೂ ತ್ಯಜಿಸಿ ನಿರ್ದಾಕ್ಷಿಣ್ಯವಾಗಿ ಹೊರಟುಹೋಗುತ್ತಾನೆಂದರೆ...? ಸಾಯುವಂಥ ಯಾವ ಕಾಯಿಲೆಯೂ ಇಲ್ಲದೆ ಪುಣ್ಯಕ್ಷೇತ್ರಗಳ ತೀರ್ಥಯಾತ್ರೆ ಮಾಡಬೇಕೆಂದು ಬಯಸಿದ್ದ ಅಪ್ಪ ಹಿಂದಿರುಗಿ ಬರಲಾಗದಂಥ ಯಾತ್ರೆಗೆ ಹೊರಟು ಇಲ್ಲಿಗೆ ಹದಿಮೂರು ವರ್ಷವಾಯ್ತು.

ಆದರೆ ನಾನು...? ಎಂದಿಗೂ ತೀರಿಸಲಾಗದ ಅಪ್ಪನ ಋಣಭಾರದಲ್ಲಿ ಸಿಲುಕಿ ಪರಿತಪಿಸುತ್ತಿದ್ದೇನೆ. ಅಪ್ಪನ ಪ್ರೀತಿಯ ನೆನಪು ನನ್ನೆದೆಯಲ್ಲಿ ಶೂಲದಂತೆ ನಾಟಿಕೊಂಡಿದೆ. ನಮ್ಮಪ್ಪನಿಗೆ ಕೊಟ್ಟ ಎಲ್ಲಾ ನೋವುಗಳಿಗೆ ಕೇವಲ ಪಶ್ಚಾತ್ತಾಪದ ಕಣ್ಣೀರು ಮಾತ್ರವೇ ಪ್ರಾಯಶ್ಚಿತ್ತವೆನಿಸಿಕೊಳ್ಳುವುದು ಹೇಗೆ ಸಾಧ್ಯ? ನನ್ನ ಜೀವಿತಾವಧಿಯಲ್ಲಿ ಈ ಋಣಬಾಧೆಯಿಂದ ಮುಕ್ತನಾಗಲು ಏನಾದರೂ ಮಾರ್ಗವಿದೆಯೆ? ○

ಕುಮಟಾ...

...ದರೆ ಬಿಜೆಪಿ ಮತ್ತೆ ಅಧಿಕಾರಕ್ಕೆ ಬರುವುದಿಲ್ಲ ಎಂಬ ...ಾರ ಕಾಗೇರಿಯದು. ಆತನ ಸದ್ಯದ ಜರೂರತ್ತು ...ುನ್ನು ಎತ್ತಿಕಟ್ಟಿ ಅನಂತ್ಮಾಣಿ ಮಣಿಸುವುದಷ್ಟೇ. ...ಗಿ ಅನಂತ್ಮಾಣಿಯ ಕ್ಯಾಂಡಿಡೇಟ್‌ಗಳಿಗೆ ಅವಕಾಶ ...ು ಕರ್ಕಿಯ ಹಿರಿತನವನ್ನು ಈತ ಹೈಲೈಟ್ ...ತ್ತಿದ್ದಾನೆ ಪಾರ್ಟಿ ಮತ್ತು ಚೆಡ್ಡಿ ಬಿಡಾರದಲ್ಲಿ.


...ಾಗೆ ನೋಡಿದರೆ ಬಿಜೆಪಿಯಲ್ಲಿ ಕುಮಟಾ ಟಿಕೆಟ್ ...ುವ 'ಹಕ್ಕು' ಇರುವುದು ಕೆ.ಜಿ. ಭಟ್ಟ ಎಂಬ ...ಬಡಕನಿಗೆ ಮಾತ್ರ! ಈತ 2002 ರಲ್ಲಿ ಸ್ಥಳೀಯ ...ಳಿಂದ ಮೇಲ್ಮನೆಗೆ ನಡೆದಿದ್ದ ಚುನಾವಣೆಯಲ್ಲಿ ಬಿಜೆಪಿ ...ದೇಟಾಗಿ ಸೆಣಸಾಡಿದಾತ. ಆಗ ಬಿಜೆಪಿ ಅಧಿಕಾರದಲ್ಲಿ ...ದ್ದರೂ ನಂಬರ್ ಟು ಸ್ಥಾನದಲ್ಲಿದ್ದು ಠೇವಣಿ ...ಡಿಕೊಂಡಿದ್ದವ. ವಿನೋದ್ ಪ್ರಭು ಆಳುವ ಪಾರ್ಟಿ ...ಯಾಳಾಗಿಯೂ ವಿಧಾನ ಪರಿಷತ್ ಎಲೆಕ್ಷನ್‌ನಲ್ಲಿ ...ಟ್ಟು ಜಪ್ತು ಮಾಡಿಸಿಕೊಂಡಿದ್ದವ. ಹಾಗೆಯೇ ಡಾ. ...ಕುಮಟಾ ಟಿಕೆಟ್ ಹೆಗ್ಡೇಜೀ ಮೊಮ್ಮಗ ಶಶಿಭೂಷಣ ... ಪಾಲಾದಾಗ ಬಂಡಾಯ ಎದ್ದು ಸ್ಪರ್ಧೆಗಿಳಿದಾತ. ವಿನೋದ್ ಪ್ರಭು-ಡಾ. ಕರ್ಕಿ-ಸೂರಜ್ ಸೋನಿಗಿಂತಲೂ ಕೆ.ಜಿ. ಭಟ್ಟನೇ ಬೆಟರ್ ಎಂಬುದು ಅಸಲಿ ಚೆಡ್ಡಿ ಬ್ರಾಹ್ಮಣರ ವಾದ.

ಸ್ಥಳೀಯ ಪಕ್ಷದಲ್ಲಿ ಕೆ.ಜಿ. ಭಟ್ಟನಿಗೆ ಕಾರ್ಯಕರ್ತರ ವಿರೋಧವಿಲ್ಲ. ಆದರೆ ಎದುರಾಡುವ 'ಉದ್ಧಟ' ಭಟ್ಟನ ಕಂಡರೆ ಕಾಗೇರಿ, ಅನಂತ್ಮಾಣಿ ಇಬ್ಬರಿಗೂ ಆಗದು. ಆದರೂ ಆತ 'ದೊಡ್ಡ ಲೀಡರ್' ಅನಂತಕುಮಾರ್ (ಶಾಸ್ತ್ರಿ) ಹಿಡಿದುಕೊಂಡು ಶತಪ್ರಯತ್ನ ನಡೆಸಿದ್ದಾರೆ. ಬಿಜೆಪಿಯೊಳಗಿನ ಟಿಕೆಟ್ ತರಲೆ-ತಗಾದೆ ಏನೇ ಇರಲಿ, ಆ ಪಕ್ಷದಿಂದ ಕುಮಟೆಯಲ್ಲಿ ಯಾರು ನಿಂತರೂ ಗೆಲ್ಲುವುದು ಸಾಧ್ಯವೇ ಇಲ್ಲ. ಹೀಗಾಗಿ ಕ್ಷೇತ್ರದಲ್ಲಿ ಕುತೂಹಲವಿರುವುದು ಹಾಲಿ ಶಾಸಕ ದಿನಕರ ಶೆಟ್ಟಿ ಜೆಡಿಎಸ್ ಕ್ಯಾಂಡಿಡೇಟಾ? ಕಾಂಗ್ರೆಸ್ ಅಭ್ಯರ್ಥಿಯಾ? ದಿನಕರ ಶೆಟ್ಟಿಗೆ ಜೆಡಿಎಸ್ ಅನಿವಾರ್ಯವಾದರೆ ಆತನ ಎದುರು ದಾಯಾದಿ ಅತ್ತಿಗೆ ಶಾರದಾ ಶೆಟ್ಟಿ ನಿಂತರೆ ಏನಾದೀತು? ಎಂಬುದಷ್ಟೇ!

ಒಂದಂತೂ ಖರೆ. ಈ ಬಾರಿ ಕುಮಟೆ-ಹೊನ್ನಾವರ ಕ್ಷೇತ್ರದಲ್ಲಿ ಹಣದ ಹರಾಹಣೆಯೇ ಆಗುತ್ತದೆ!

■ ನಹುಷ

ಎಲ್ಲವನ್ನೂ ಮೀರಿ ನಿಲ್ಲಲು ಮನಸ್ಸೊಂದಿದೆ, ಮರೆಯದಿರಿ!



■ ಗಿರೀಶ್ ತಾಳಿಕಟ್ಟೆ

Quadriplegia

ದೇಹದ ಎರಡೂ ಕೈ ಮತ್ತು ಎರಡೂ ಕಾಲುಗಳು ನಿಷ್ಕ್ರಿಯವಾಗಿಬಿಡುವ ಸ್ಥಿತಿಗೆ ವೈದ್ಯಕೀಯ ಕ್ಷೇತ್ರ ಹೀಗೆ ನಾಮಕರಣ ಮಾಡುತ್ತೆ, ನಾವೇನು ಬೆನ್ನುಹುರಿ ಅಥವಾ spinal cord ಎನ್ನುತ್ತೇವಲ್ಲ ಅದು ಹಲವು ನರವ್ಯೂಹದ ಸೆಗ್ಮೆಂಟ್‌ಗಳ ಸರಣಿ ಜೋಡಣೆಯಾಗಿದ್ದು ಮೂವತ್ತೊಂದು ನರಗಂಟಿನಿಂದ ವಿಂಗಡಿಸಲ್ಪಡುತ್ತೆ ದೇಹದ ವಿವಿಧ ಭಾಗಕ್ಕೆ ವಿವಿಧ ನರಗಂಟುಗಳ ಸಮೂಹ ಸಂವೇದನೆಯನ್ನು ಒದಗಿಸುವುದರಿಂದಲೇ ನಾವು ದೇಹವನ್ನು ನಿಯಂತ್ರಿಸಿಕೊಳ್ಳುವಷ್ಟು ಸಮರ್ಥರಾಗಿರುವುದು. ಈ ಸರಣಿಯಲ್ಲಿ ಐದು ಮತ್ತು ಆರನೇ ನರಗಂಟುಗಳು ಕೈ ಕಾಲುಗಳನ್ನು ನಿಯಂತ್ರಿಸುವಲ್ಲಿ ತುಂಬಾ ಮುಖ್ಯ ಇವುಗಳಿಗೆ ಸ್ವಲ್ಪವೇ ಸ್ವಲ್ಪ ಡ್ಯಾಮೇಜ್ ಅಂತಾದರು ನಾವು ಊನರಾಗಿ ಮೂಲೆ ಸೇರಬೇಕಾಗುತ್ತೆ. ಈ quadriplegia ದಲ್ಲಿ ಆಗುವುದೂ ಇದೆ. ಹಾಗೊಮ್ಮೆ ಬೆನ್ನುಹುರಿಗೆ ಏನಾದರು ಆದಲ್ಲಿ ವೈದ್ಯರೂ helpless ಆಗಿಬಿಡುವ ಸಾಧ್ಯತೆಯೇ ಹೆಚ್ಚು, ಅಷ್ಟು ಗಂಭೀರ ಸ್ಥಿತಿ ಇದು.

ಇದೆಲ್ಲವನ್ನೂ ಇಲ್ಲಿ ಹೇಳುತ್ತಿರುವುದಕ್ಕೆ ಕಾರಣವಿದೆ. ಬದುಕು ನಮಗಿರಿಸುವ ಹೋರಾಟ, ಆತಂಕ, ಗೊಂದಲ, ಅಸಹಾಯಕತೆಗಳನ್ನು ಎದುರಿಸಿ ಗೆಲ್ಲುವಲ್ಲಿ ತಾಳ್ಮೆ ಮತ್ತು ಮಾನಸಿಕ ಛಲ ಅದೆಷ್ಟು ಪವರ್‌ಫುಲ್ ಎಂಬುದನ್ನು ಅರಿಯಬೇಕೆಂದರೆ ಜೋನಿ ಎರೆಕ್ಸನ್ ಟಾಡಾ ಎಂಬಾಕೆಯ ಜೀವನದಲ್ಲೊಮ್ಮೆ ಇಣುಕಿ ಬರಬೇಕು. ಅದಕ್ಕೂ ಮುನ್ನ ಇದು ತಿಳಿದಿದ್ದರೆ ಒಳಿತೆನ್ನುವ ಉದ್ದೇಶದಿಂದ ಕೊಂಚ explain ಮಾಡಿದ್ದೇನೆ ಅಷ್ಟೆ.

ಆಯ ತಪ್ಪಿದ ಆಕೆಯ ದೇಹ ತಳದಲ್ಲಿದ್ದ ಕಲ್ಲು ಬಂಡೆಗೆ ಬಡಿದಾಗ ಭೀಕರ ಏಟಾದದ್ದು ಬೆನ್ನುಹುರಿಯ ಅದೇ ಐದನೇ ನರಗಂಟಿಗೆ. ಪ್ರಜ್ಞಾಹೀನ ಸ್ಥಿತಿಯಲ್ಲಿದ್ದ ಆಕೆಯನ್ನು ತಪಾಸಣೆ ಮಾಡಿದ ವೈದ್ಯರು ಆಕೆಯದು ಇನ್ನು quadriplegia ಸ್ಥಿತಿ ಎಂದು ಘೋಷಿಸುವ ಹೊತ್ತಿಗೆ ಕೈ ಕಾಲುಗಳೆರಡು ನಿಷ್ಕ್ರಿಯವಾಗಿ ಬಿದ್ದಿದ್ದವು.

ನಡೆದಾಡುವುದಿರಲಿ ಎದ್ದು ಕೂರುವುದು, ತನ್ನಷ್ಟಕ್ಕೆ ತಾನು ಊಟಮಾಡುವುದೂ ಸಾಧ್ಯವಿರಲಿಲ್ಲ. ಕ್ಷಣ ಮಾತ್ರದಲ್ಲಿ ಪರಾವಲಂಬಿ ಜೀವಿಯಂತಾಗಿದ್ದಳು. ತನ್ನ ಸ್ಥಿತಿ ತಿಳಿದಿದ್ದೇ ತಡ ಭಾರೀ ಆಘಾತಕ್ಕೊಳಗಾಗಿದ್ದ ಆಕೆ ಚಿಕಿತ್ಸೆಯ ನೆಪದಲ್ಲಿ ಎರಡು ವರ್ಷಗಳ ಕಾಲ ಆಸ್ಪತ್ರೆಯ ಹಾಸಿಗೆ ಮೇಲೆ ಜೀವಚ್ಛವವಾಗಿ ಮಲಗಿದ್ದಳು. ಸುದೀರ್ಘ ಖಿನ್ನತೆಯ ನೆರಳಲ್ಲಿ ಕೊರಗಿದ ಅವಳು ಸಾವೇ ತನಗೆ ಸೂಕ್ತ ಪರಿಹಾರ ಎಂದುಕೊಂಡಿದ್ದಳು. ದುರಾದೃಷ್ಟವೆಂದರೆ ಜೋನಿ ಎರೆಕ್ಸನ್ ತನ್ನನ್ನು ತಾನು ಸಾಯಿಸಿಕೊಳ್ಳಲಿಕ್ಕೂ ಆಗದಷ್ಟು ಅಸಹಾಯಕಳಾಗಿದ್ದಳು. ಅಷ್ಟರ ಮಟ್ಟಿಗೆ ಬದುಕು ಭರವಸೆಯ ಸೆಲೆಯನ್ನೇ ಆಕೆಯಿಂದು ಕಸಿದು ಹೊಯ್ದಿತ್ತು.

ಆ ಎರಡು ವರ್ಷದ ಅವಧಿಯಲ್ಲಿ ಬದುಕಿನ ಬಗ್ಗೆ ಕಿಂಚಿತ್ತು ಆಸಕ್ತಿ ಅಂತೇನಾದರು ಮೂಡಿದ್ದರೆ ಅದು ಆಕೆಯ ಪಕ್ಕದ ಬೆಡ್‌ನಲ್ಲೆ ಆಕೆಗಿಂತಲೂ ಹೀನ ಸ್ಥಿತಿಯಲ್ಲಿ ಬಿದ್ದಿದ್ದ ಸ್ಟೀವ್ ಎಂಬ ವ್ಯಕ್ತಿಯಿಂದ. ಒಂದು ದಿನ ಆತನ ಬಳಿ ಗಂಭೀರ ಮಾತಿಗಿಳಿದ ಜೋನಿ ಅವನ ನಿರಾಂತಕತೆಯ ಕಾರಣವನ್ನು ಕೇಳಿದ್ದಳು. ಮಲಗಿದ್ದಲ್ಲಿಂದಲೇ 'ಎಲ್ಲವೂ ಮುಗಿಯಿತೆಂದುಕೊಂಡು ನೀನು ಸಾಯಲು

ಎಲ್ಲವನ್ನು ಕಿತ್ತುಕೊಂಡ ನಂತರವೂ ದೇವರು ನನ್ನಲ್ಲಿ ಜೀವವನ್ನು ಉಳಿಸಿದ್ದಾನೆ. ಜೀವಕ್ಕಿಂತ ಸಾಮರ್ಥ್ಯ ಬೇಕೇ' ಎಂದು ಸುಮ್ಮನಾಗಿದ್ದ.

ಆತನ ಆ ಮಾತು ಆಕೆಯ ಮೇಲೆ ಗಂಭೀರ ಪರಿಣಾಮವನ್ನೇ ಉಂಟು ಮಾಡಿತ್ತು. ತಾನಿನ್ನು ವ್ಯಥಿಸುವುದರಲ್ಲಿ ಅರ್ಥವೇ ಇಲ್ಲ, ಇರುವುದರಲ್ಲೆ ಸಾಧಿಸಿ ಬದುಕಬೇಕೆಂಬ ಗಟ್ಟಿ ಮನಸ್ಸು ಮಾಡಿದ್ದಳು. ತಾನು ಕೈ ಕಾಲು ಕಳೆದುಕೊಂಡರೇನು ಬಾಯಿ ಇನ್ನೂ ಕೆಲಸ ಮಾಡುವಂತಿದೆಯಲ್ಲ, ಅದರಿಂದಲೇ ಬದುಕು ಬದಲಾಯಿಸಿಕೊಳ್ಳೇನೆ ಎಂದು ನಿರ್ಧರಿಸಿಕೊಂಡ ಆಕೆ ಕೂತದ್ದು ರೇಡಿಯೋ ಮೈಕ್‌ನ ಮುಂದೆ. ತನ್ನ ಮನೋಜ್ಞ ಮಾತುಗಾರಿಕೆ, ಅರ್ಥಗರ್ಭಿತ ವಿಶ್ಲೇಷಣೆಯಿಂದ ಸ್ವಲ್ಪೇ ದಿನದಲ್ಲಿ ಜನಪ್ರಿಯ ರೇಡಿಯೋ ನಿರೂಪಕಿಯಾದಳು. ಅಷ್ಟಕ್ಕೇ ಸಮಾಧಾನವಾಗದೆ ಬಾಯಿಯಲ್ಲೇ ಬ್ರಶ್ ಹಿಡಿದು ಚಿತ್ರ ಬಿಡಿಸುವುದನ್ನು ರೂಢಿಸಿಕೊಂಡವಳು ಅದ್ಭುತ ಚಿತ್ರಗಾರ್ತಿಯಾಗಿಯೂ ಹೆಸರು ಮಾಡಿದಳು. ಈ ಎಲ್ಲಾ



ಈ ಜೋನಿ ಎರೆಕ್ಸನ್ ಮೂಲತಃ ಅಮೆರಿಕಾದ ಮೇರಿಲ್ಯಾಂಡ್‌ನವಳು. ಆಕೆಗೆ ವಯಸ್ಸು ಹತ್ತೊಂಬತ್ತಾಗುವವರೆಗೆ ಬದುಕು ಸುಂದರವಾಗಿತ್ತು. ಓರಗೆಯ ಮಕ್ಕಳಂತೆ ಕುದುರೆ ಸವಾರಿ, ಈಜು, ಟೆನಿಸ್ ಆಟ, ಟ್ರೆಕ್ಕಿಂಗ್ ಅಂತ ಚೆಂದದ ಜೀವನದಲ್ಲಿ ಕಳೆದು ಹೋಗಿದ್ದಳಾಕೆ.

ಬದುಕಿನ ಸವಾಲುಗಳು ಮೊದಲ ಬಾರಿ ಆಕೆಯ ಜೀವನ ಪ್ರವೇಶಿಸಿದ್ದು 1967ರಲ್ಲಿ. ಕುಟುಂಬದೊಟ್ಟಿಗೆ ವಿಹಾರಕ್ಕೆಂದು ಹೋಧವಳು ಚೆಸಪೀಕ್ ಬೇ ಎಂಬಲ್ಲಿ ತುಂಬಾ ಆಳವಿರಬಹುದೆಂದುಕೊಂಡು ಕೆಲವೇ ಮೀಟರ್ ಕೆಳಗೆ ಬಂಡೆಗಲ್ಲುಗಳಿಂದ ತುಂಬಿದ್ದ ನೀರಿಗೆ ಧುಮುಕಿದ್ದಳು.


ಕಾತರಿಸುತ್ತಿದ್ದೀಯ, ಆದರೆ ಇಷ್ಟೆಲ್ಲ ಕಳೆದುಕೊಂಡ ನಂತರವೂ ನನ್ನಲ್ಲಿ ಅದ್ಭುತ ಸಾಮರ್ಥ್ಯವನ್ನು ದೇವರು ಹಾಗೇ ಉಳಿಸಿರುವುದು ನೋಡಿದರೆ ಅದು ಮುಂದಿರುವ ಒಳ್ಳೆಯ ಕಾಲಕ್ಕೇ ಎಂಬ ಭರವಸೆ ನನಗಿದೆ. ಅದಕ್ಕಾಗೇ ನಾನು ನಿರಾತಂಕವಾಗಿದ್ದೇನೆ' ಎಂದುತ್ತರಿಸಿದ್ದ.'

ಎತ್ತ ಕಡೆಯಿಂದ ನೋಡಿದರೂ ಆತನಲ್ಲಿ ಗುರುತಿಸುವಂತಹ ಯಾವ ಸಾಮರ್ಥ್ಯವೂ ಆಕೆಗೆ ಕಾಣಿಸಲಿಲ್ಲ. 'ಮಾತನಾಡುವ ಶವದಂತಾಗಿರುವ ನಿಮ್ಮಲ್ಲಿ ಅದಿನ್ನೆಂತ ಸಾಮರ್ಥ್ಯ ಉಳಿದಿದೆ' ಎಂದು ಕೇಳಿದ್ದಳು. 'ನಿನ್ನದು ನಿರಾಶವಾದಿ ನೋಟ ಅದಕ್ಕೇ ಏನೂ ಕಂಡಿಲ್ಲ.

ಸಕಾರಾತ್ಮಕ ಬೆಳವಣಿಗೆಗಳ ಕಾರಣಗಳಿಂದಾಗಿ ಸ್ವಲ್ಪ ಮಟ್ಟಿಗೆ ಕೈ ಆಡಿಸುವಂತಾದ ಆಕೆ ಪುಸ್ತಕ ಬರವಣಿಗೆಗೆ ಮುಂದಾಗಿ ಬಹುಮಾರಾಟವಾಗುವ ಹತ್ತಾರು ಪುಸ್ತಕಗಳನ್ನೂ ರಚಿಸಿದ್ದಾಳೆ. ಹಾಗೇ ಓದು ಮುಂದುವರೆಸಿಕೊಂಡು ಈಗ ಅಂಗವಿಕಲರ ಪರವಾಗಿ ಕೆಲಸಮಾಡುವ ವಿಶೇಷ ಅಡ್ವೊಕೇಟ್ ಆಗಿಯೂ ಸೇವೆಯಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದಾಳೆ. ಮನಸ್ಸು ಮಾಡುವ ಪರಿಪಾಠ ರೂಢಿಸಿಕೊಂಡವರಿಗೆ ತಡೆಗಳನ್ನು ಮೀರಿ ನಿಲ್ಲುವುದು ಅಸಾಧ್ಯವೇನಲ್ಲ ಎಂಬುದಕ್ಕೆ ಈಕೆಯೇ ಸಾಕ್ಷಿ.

ಅಂಜುವುದೇಕೆ?'

(ಗಝಲ್)



■ ವಿವೇಕಾನಂದ ತಾಂಡೇಲ



ಗುಡಿಸಲಲಿ ಉರಿವ ಹಸಿದ ಜೀವವೆ
ಮಿಣುಕು ಲಾಟೀನು ಹೊತ್ತಿಸಿದ್ದೇಕೆ?
ನೋವಿನ ಹೂವು ಬಾಡಿಲ್ಲ
ಕಹಿ ಕನಸುಗಳ ಕೆರಳಿಸಿದ್ದೇಕೆ?

ತಾರೆಗಳ ಜೊತೆ ರಾತ್ರಿ ಚಕ್ಕಂದವಾಡಿದ ಚಂದ್ರನೆ
ಸತ್ತ ಹೃದಯದ ದುಂಬಿಗೆ ಕರೆ ಕಳಿಸಿದ್ದೇಕೆ?
ಈ ಹಳ್ಳಿಯ ಉದಾಸೀನ ಬೀದಿಗಳಲ್ಲಿ, ಮನವೆ
ಕಾಣೆಯಾದವನ ಕಾವ್ಯ ಹುಡುಕಿದ್ದೇಕೆ?

ಇದ್ದರೆ ತಾನೆ ಇಬ್ಬನಿಯಲಿ ಇಂಚರ
ವಾಸ್ತವದ ಹಲ್ಲೆಗೆ ಹಳಹಳಿಸಿದ್ದೇಕೆ?
ನಿನ್ನ ಚಂದದ ಸೀರೆಯ ನೆರಿಕೆಗಳು ನಲುಗಿಲ್ಲ

ಮಸೀದಿಗೆ ಹಸಿರು; ಗುಡಿಗೆ ಕಾವಿ
ಧರ್ಮಕ್ಕೆ ಬಣ್ಣ ಬಳಿದಿದ್ದೇಕೆ?
ರಂಗೋಲಿ ಕಾಣದ ಅಂಗಳವೆ
ರಾಗ ತೆಗೆದಿದ್ದೇಕೆ?


ಒಡೆದ ಬದುಕಿನ ಚೂರು ಹೆಕ್ಕುವುದೇಕೆ?
ಕಡಲ ತಡಿಯಲಿ ಜೋಡಿ ಹೆಸರು
ಬರೆದವರ್ಯಾರು?
ಹಚ್ಚಿಟ್ಟ ದೀಪ ನಂದಿಸಲು ಗಾಳಿ ಕಳಿಸಿದ್ದೇಕೆ?
ಮುಖವಾಡದಲಿ ಅವಿತಿರುವ ಪ್ರೇತವೆ
ನೆರಳಿಗೆ ನೀ ಅಂಜುವುದೇಕೆ?

ಸರೋದ್ ಕಲಿಸಿದ...

08 ◀◀

ವಸ್ತುಗಳನ್ನು ಕಾರಿನಿಂದ ತೆಗೆದು ಅವರಿಗೊಪ್ಪಿಸಿ ಅವರಿಬ್ಬರಿಗೂ ನಮಸ್ಕರಿಸಿ ಮನೆಗೆ ಹಿಂದಿರುಗಿ ಕಾರನ್ನು ಜೋಪಾನವಾಗಿ ಅದರ ಸ್ವಸ್ಥಾನದಲ್ಲಿ ನಿಲ್ಲಿಸಿದೆ. ಅವರು ಸ್ವಲ್ಪದರಲ್ಲೇ ತಪ್ಪಿದ್ದ ಅನಾಹುತದ ಬಗ್ಗೆ ಮಾತಾಜಿಯವರಲ್ಲಿ ಉಸಿರೆತ್ತದೆ ಕಾರಿನ ಬೀಗ ಅವರ ಹತ್ತಿರ ಕೊಟ್ಟು ಕೈಕಾಲು ಮುಖ ತೊಳೆದುಕೊಂಡು ಸುಮ್ಮನೇ ಕುಳಿತು ಬಿಟ್ಟೆ.

1960ರಲ್ಲಿ ನಾನು ಖಾನ್ ಸಾಹೇಬರ ಮನೆಯಲ್ಲಿ ಉಳಿದುಕೊಂಡು ಸರೋದ್ ಕಲಿಯುತ್ತಿದ್ದಾಗ ಒಂದು



ದಿನ ಗುರುಗಳು ತಮ್ಮ ಚಿಕ್ಕ ಮಗ ದಿನೇಶ್ ಮತ್ತು ನನ್ನನ್ನು ತಮ್ಮ ಕಾರಿನಲ್ಲಿ ಕೂರಿಸಿಕೊಂಡು ತಮ್ಮ ತಂಗಿ ಅನ್ನಪೂರ್ಣಾದೇವಿಯವರ ಮನೆಗೆ ಕರೆದುಕೊಂಡು ಹೋದರು. ಸ್ವತಃ ಖ್ಯಾತ ಸಂಗೀತ ಕಲಾವಿದೆಯಾಗಿದ್ದ ಅನ್ನಪೂರ್ಣಾದೇವಿಯವರು ಆಗ ಪಂಡಿತ್ ರವಿಶಂಕರ್ ಅವರನ್ನು ಮದುವೆ ಆಗಿದ್ದರು. ತಮ್ಮ ಅಣ್ಣನ ದಕ್ಷಿಣ ಭಾರತದ ಶಿಷ್ಯ 'ಸರಿಗಮ'ವ ಬಗ್ಗೆ ತಿಳಿದಿದ್ದ ಅನ್ನಪೂರ್ಣಾದೇವಿಯವರು ನಗುನಗುತ್ತ ನನ್ನನ್ನು ಉಪಚರಿಸಿ "ನನ್ನ ಅಣ್ಣ ಯಾವಾಗಲೂ ಕಾರ್ಯಕ್ರಮ ಕೊಡುವ ಕೆಲಸದಲ್ಲಿರುತ್ತಾರೆ. ಆದ್ದರಿಂದ ಅವರು ಕೊಟ್ಟ ಪಾಠವನ್ನು ಅಭ್ಯಾಸ ಮಾಡಬೇಕೆನಿಸಿದರೆ ನೀನು ನಮ್ಮ ಮನೆಗೆ ಬಂದು ನನ್ನ ಮುಂದೆ ಒಪ್ಪಿಸು. ಜೊತೆಗೆ ಮುಂದಿನ ಪಾಠವನ್ನು ತೆಗೆದುಕೊಂಡು ಹೋಗು" ಎಂದು ಹೇಳಿದರು.


ಗುರುಗಳು ಕೂಡ ತಾವು ಮುಂಬೈಯಲ್ಲಿ ಇಲ್ಲದಿದ್ದಾಗ ನಾನು ಅನ್ನಪೂರ್ಣಾದೇವಿಯವರಿಂದ ಪಾಠ ಕಲಿಯಲು ಒಪ್ಪಿದರು. ಆದರೆ ಮುಂಬೈ ನಗರ ನನಗೆ ಹೊಸದಾಗಿತ್ತಲ್ಲದೆ ಗುರುಗಳ ಮನೆ ಅನ್ನಪೂರ್ಣಾದೇವಿಯವರ ಮನೆಯಿಂದ ತುಂಬಾ ದೂರ ಇತ್ತು. ಅಷ್ಟೇ ಅಲ್ಲದೆ ದೊಡ್ಡ ಗಾಯಕಿ ಆಗಿದ್ದ ಗುರುಗಳ ಪತ್ನಿ ರಾಜ್ ದುಲಾರಿ ಅವರೇ ನನಗೆ ಸಂಗೀತದ ಪಾಠ ಹೇಳಿಕೊಡುತ್ತಿದ್ದರಿಂದ ಅನ್ನಪೂರ್ಣಾದೇವಿಯವರಿಂದ ಪಾಠ ಕಲಿಯುವ ಅವಕಾಶ ನನಗೆ ಸಿಗಲಿಲ್ಲ.

ಅವತ್ತು ಅನ್ನಪೂರ್ಣಾದೇವಿ ಅವರ ಮನೆಯಿಂದ ಹೊರಟು ಮಧ್ಯಾಹ್ನದ ಊಟಕ್ಕೆ ಹತ್ತಿರದಲ್ಲೇ ಇದ್ದ ಝುರೀನ್ ದಾರೂವಾಲ ಎಂಬ ಶಿಷ್ಯೆಯ ಮನೆಗೆ ನಮ್ಮನ್ನು ಕರೆದುಕೊಂಡು ಹೋದರು. ಝುರೀನ್ ತಾನು ಕಲಿತಿದ್ದ ಸರೋದ್ ಪಾಠವನ್ನು ಗುರುಗಳಿಗೆ ಒಪ್ಪಿಸಿ ಹೊಸ ಪಾಠವನ್ನು ತೆಗೆದುಕೊಂಡರು. ದಾರೂವಾಲ ಅವರ ಬಳಿ ಇದ್ದ ಸರೋದನ್ನು ನನಗೆ ತೋರಿಸಿದ ಗುರುಗಳು "ನಿನಗೂ ಕೊಲ್ಕತ್ತಾದಿಂದ ಇದೇ ರೀತಿಯ ಸರೋದನ್ನು ಹೆಮನ್ ಕಂಪನಿ ಅವರಿಂದ ಮಾಡಿಸಿ ತರಿಸಿಕೊಡುತ್ತೇನೆ" ಎಂದು ಹೇಳಿದಾಗ ನನಗಾದ ಸಂತೋಷ ಹೇಳತೀರದು. ಇತ್ತೀಚೆಗೆ ಟಿ.ವಿಯಲ್ಲಿ ಆಕಸ್ಮಾತಾಗಿ ಐವತ್ತು ವರ್ಷಗಳ ಹಿಂದೆ ಭೇಟಿ ಆಗಿದ್ದ ಝುರೀನ್ ದಾರೂವಾಲ ಅವರ ಸರೋದ್ ವಾದನ ಕೇಳಿ ದಂಗಾಗಿ ಹೋದೆ. ಈಗ ಅವರಿಗೆ ವಯಸ್ಸಾಗಿದ್ದರೂ ತುಂಬಾ ಒಳ್ಳೆಯ ಸರೋದ್ ವಾದಕರಾಗಿದ್ದಾರೆ.

ಅವರನ್ನು ನೋಡಿ ನನಗೆ ಹೊಟ್ಟೆಕಿಚ್ಚಾಯಿತು. ಏಕೆಂದರೆ ಈಗ ನನ್ನ ಸಂಗೀತ ಸಿಂತು ಗೊರಕೆ ಹೊಡೆಯುತ್ತಿದೆ. ಅನುಭವದಿಂದ ಉತ್ತಮವಾದ ಸಂಗೀತವನ್ನು ಕೇಳುವುದನ್ನು ಮಾತ್ರ ನಾನು ಕಲಿತುಕೊಂಡಿದ್ದೇನೆ.

ಅಲಿ ಅಕ್ಬರ್ ಖಾನ್ ಅವರಿಂದ ಸರೋದ್ ಕಲಿಯಲು ನನಗೆ ಸಹಾಯ ಮಾಡಿದ್ದ ಪಂಡಿತ್ ರವಿಶಂಕರ್ ಅವರು ಇತ್ತೀಚೆಗೆ ಅಮೆರಿಕಾದಲ್ಲಿ ವಿಧಿವಶರಾದರು. ನನ್ನ ಗುರುಗಳಾಗಿದ್ದ ಉಸ್ತಾದ್ ಅಲಿ ಅಕ್ಬರ್ ಖಾನ್ ಅವರೂ ಮೂರು ವರ್ಷಗಳ ಹಿಂದೆ ನಮ್ಮನ್ನು ಅಗಲಿದರು. ಇತ್ತೀಚೆಗೆ ಗೌರಿ ಲಂಕೇಶ್ ರವಿಶಂಕರ್ ಅವರ ಮಾಜಿ ಪತ್ನಿ ಅನ್ನಪೂರ್ಣಾದೇವಿ ಅವರು ಈಗ ಜಗತ್ತಿನಿಂದಲೇ ವಿಮುಖರಾಗಿರುವ ಬಗ್ಗೆ ಬರೆದಾಗ ಈ ಎಲ್ಲ ನೆನಪುಗಳು ಮರುಕಳಿಸಿದವು...

...ಸಮಾಜವಾದಕ್ಕೆ ಸಾಣೆ



ಬರ್ಟೋಲ್ಟ್ ಬ್ರೆಕ್ಟ್

ಒಬ್ಬ ಕವಿಯನ್ನು ಸಮಾಜವಾದಿ ಹೌದೋ? ಅಲ್ಲವೋ? ಅಂತ ಹ್ಯಾಗೆ ಗುರ್ತ ಹಿಡಿಯೋದು! ಕವಿ ಬದುಕಿದ ಕಾಲ, ದೇಶ, ಸಿದ್ಧಾಂತ ನಿಷ್ಠೆ, ಪಕ್ಷ ಬದ್ಧತೆಗಳಿಂದಲೋ? ಅಥವಾ ಪದ್ಯಗಳ ವಸ್ತು-ವಿನ್ಯಾಸ-ಧ್ವನಿಗಳಿಂದಲೋ? ಅಥವಾ ಇವೆಲ್ಲಾ ಹೆಣೆದುಕೊಂಡು ಸಮಾಜವಾದಿ ಕವಿ ರೂಪ ಪಡೆಯುತ್ತಾನೋ? ಈ ಚರ್ಚೆಗಳು ಇಂದೂ ಕೂಡ ಮುಂದುವರೆಯಬೇಕಾದ್ದೇ. ಆದರೆ ಕವಿ ಎಂದ ಮೇಲೆ ಸಮಾಜವಾದ ಕಾವ್ಯದ ವಸ್ತು-ವಿನ್ಯಾಸ-ಧ್ವನಿಗಳಲ್ಲಿ ಸಾಕಾರವಾಗದಿದ್ದಲ್ಲಿ 'ಸಮಾಜವಾದಿ' ಎಂಬ ವಿಶೇಷಣದ ಪ್ರಯೋಜನವಾದರೂ ಏನು ಎಂಬುದು ಸಂಗತವಾದ ಮಾತೇ ಅಲ್ಲವೇ! ಬರ್ಟೋಲ್ಟ್ ಬ್ರೆಕ್ಟ್ (1898-1956)ನ ಬದುಕು-ಬರಹಗಳು ಈ ಎಲ್ಲಾ ಚರ್ಚೆಗಳಿಗೂ ಸಮೃದ್ಧವಾದ ಪಠ್ಯಗಳಾಗಿವೆ. ಎರಡು ಮಹಾಯುದ್ಧಗಳು, ಇಟಾಲಿ ಹಾಗೂ ಜರ್ಮನಿಯ ಫ್ಯಾಸಿಸ್ಟ್ ಪ್ರಯೋಗಗಳಿಗೆ ಈಡಾದ ಬ್ರೆಕ್ಟನ 58 ವರ್ಷಗಳ ಬದುಕಿನಲ್ಲಿ, ವೈಯಕ್ತಿಕ ಅಂತ ಆತ ಬದುಕಿದ್ದು ಮೊದಲ 16 ವರ್ಷಗಳನ್ನು ಮಾತ್ರ. ಉಳಿದದ್ದೆಲ್ಲಾ, ಬಂಡವಾಳಶಾಹಿ ಇಪ್ಪತ್ತನೇ ಶತಮಾನದಲ್ಲಿ ಸೃಷ್ಟಿಸಿರುವ ಕೇಡನ್ನು ಭಾಷೆಯಲ್ಲಿ ಹಿಡಿದಿಡುವುದು ಹೇಗೆ? ಅದಕ್ಕೆ ಈಡಾಗಿ ಸೆಟೆದು ನಿಲ್ಲುತ್ತಿರುವ ಮನುಷ್ಯರ ಸಂಕಲ್ಪವನ್ನು ನಿರೂಪಿಸುವುದು ಹೇಗೆ? ಎಂಬ ಅವಿರತ ಹುಡುಕಾಟದಲ್ಲೇ ಅವನ ಜೀವನ ನಡೆಯಿತು. ಇದಕ್ಕಾಗಿ ಅವನು 'ಎಕ್ಸ್ ಪ್ರೆಷನಿಸಂ', 'ಡಾಡಯಿಸಂ'ನಂಥ ಕಲಾಪ್ರಕಾರಗಳಿಗೆ ತನ್ನನ್ನು ಒಡ್ಡಿಕೊಂಡ. ಅದು ಸಾಲದು, ಮಾರ್ಕ್ಸ್ ವಾದದಲ್ಲಿ ಉತ್ತರವಿದೆ ಎನಿಸಿದಾಗ ಭಿನ್ನಮತೀಯ ಮಾರ್ಕ್ಸ್ ವಾದಿ ಕಾರ್ಲ್ ಕೋರ್ಷನ ಶಿಷ್ಯತ್ವ ಸ್ವೀಕರಿಸಿದ. ಗುರುವಿನ ಏಕಾಂತ ಪ್ರತಿರೋಧ ಸಾಲದೆನಿಸಿ ಫ್ಯಾಸಿಸ್ಟ್ ವಿರೋಧಿ ಚಳವಳಿಯಲ್ಲಿ ಸಕ್ರಿಯನಾದ. ಲೆನಿನ್-ಸ್ಟಾಲಿನರ ಅಧಿಕಾರ ದಬ್ಬಾಳಿಕೆಯದು ಎನಿಸಿದಾಗ ಟೀಕಿಸಿದ, ಆದರೆ ತುಳಿತಕ್ಕೆ ಒಳಗಾದ ಜನ ಲೆನಿನನ್ನು ಅರ್ಥೈಸಿಕೊಂಡ ರೀತಿಯ ಬಗ್ಗೆ ಅಪಾರ ಪ್ರೀತಿ ಬೆಳೆಸಿಕೊಂಡ. ಕಮ್ಯುನಿಸ್ಟ್ ಪಕ್ಷ ಹಾಗೂ ತುಳಿತಕ್ಕೆ ತುತ್ತಾದ ಜನರ ಕಮ್ಯುನಿಸಂಗಳ ನಡುವೆ ಇರುವ ಸಂಘರ್ಷಮಯ ಸಂಬಂಧಗಳನ್ನು ಅರಿತು ನಿರೂಪಿಸುವ ಅತಿ ಕಠಿಣ ಮಾರ್ಗಕ್ಕೆ ತನ್ನ ಕಲಾಪ್ರಯೋಗಗಳನ್ನು ತಂದು ನಿಲ್ಲಿಸಿದ. ಸಮಾಜವಾದವನ್ನು ಕಲೆಯಲ್ಲಿ ನಿರೂಪಿಸಲು ಸೆಣೆಸಿದ 20ನೇ ಶತಮಾನದ ಸಾಹಿತಿಗಳಲ್ಲಿ ಬ್ರೆಕ್ಟ್ ಅಗ್ರಗಣ್ಯ ಎಂಬ ನಂಬಿಕೆಯಲ್ಲೇ, ಕಳೆದ ಮೂವತ್ತು ವರ್ಷಗಳಿಂದ ಚಳವಳಿಗಳ ಸಖನಾದ ನಾನು, ಅವನ ಸಾಹಿತ್ಯವನ್ನು ಸಮತಾವಾದಿ ಚಳವಳಿಗಳ ಅವಿಭಾಜ್ಯ ಅಂಗವೆಂದು ಭಾವಿಸಿಕೊಂಡು ಬಂದಿರುವೆ. ಅವನ ಪದ್ಯಗಳಲ್ಲಿ ನಿರೂಪಿತವಾದ ಸಮಾಜವಾದದ ಸ್ವರೂಪ, 1990ರ ಉತ್ತರದ ಸಮಾಜವಾದದ ಪತನ-ಪುನರುಜ್ಜೀವನಗಳಿಗೆ ಹೊಸ ಬಗೆಯ ಅರಿವಿನ ಸಂಚಯವಾಗಿದೆ ಎಂಬ ನಂಬಿಕೆಯಲ್ಲಿ ಅವನ ಪದ್ಯಗಳನ್ನು ಮತ್ತೇ ಓದಿಕೊಂಡು, ನನ್ನ ತಿಳಿವಿನ ಕನ್ನಡ ಭಾಷೆಯಲ್ಲಿ ನಾನೇ ನಿರೂಪಿಸಿಕೊಳ್ಳುತ್ತಿರುವೆ. ಅವುಗಳಲ್ಲಿ ಕೆಲವನ್ನಿಲ್ಲಿ ಸಾರ್ವಜನಿಕ ಓದಿಗೆ ಒಪ್ಪಿಸುತ್ತಿರುವೆ. ಗೆಳೆಯರೊಡನೆ ಅನುವಾದಗಳನ್ನು ಹಂಚಿಕೊಂಡಿದ್ದೇನೆ, ಅವರೂ ಸೂಚನೆಗಳನ್ನಿತ್ತು ತಿದ್ದಿದ್ದಾರೆ: ಹಂಚಿಕೊಳ್ಳುವ ಸುಖವಿಲ್ಲದೆ ಬರೆಯಬೇಕಾದರೂ ಏಕೆ! ಅವರನ್ನು ನೆನೆಯುವೆ.



■ ಕೆ.ಫಣಿರಾಜ್

...ಬಿಷ್ಟ ಮಾಡಿದ ಎಲ್ಲ ವಸ್ತುಗಳಲ್ಲಿ

...ಮಾಡಿದ ಎಲ್ಲ ವಸ್ತುಗಳಲ್ಲಿ
...ಸ್ವರು ಉಪಯೋಗಿಸಿದ ವಸ್ತುಗಳು
...ತುಂಬಾ ಇಷ್ಟ.
...ತ್ತಾಗಿ, ಅಂಚು ಡೊಂಕಾದ ತಾಮ್ರದ ಪಾತ್ರ ಪಡಗಗಳು
...ಸವೆದು ಹೋದ ಚಾಕು, ಸೌಟುಗಳು
...ಸ್ವರ ಕೈಯಲಾಡಿ ಸವೆದು ಹೋದ
...ಡ್ಲಾ ಆಕೃತಿಗಳು
...ಬಲು ಗೌರವಾರ್ಹವಾಗಿ ತೋರುತ್ತವೆ.

...ಮನೆಯ ಸುತ್ತಲಿನ ಕಲ್ಲು ಹಾಸುಗಳು
...ದವರ ಪಾದಗಳು ತಿಕ್ಕಿ ಸವೆದು ಹೋಗಿವೆ,
...ನ ಸಂದಿಯಲ್ಲಿ ಹುಲ್ಲು ಗರಿಗಳು ಬೆಳೆದಿವೆ
...ನನಗೆ ಮುದ ನೀಡುವ ಕೃತಿಗಳಾಗಿವೆ.

...ಉಪಯೋಗಕ್ಕೆ ಸದಾ ತೆರೆದುಕೊಂಡು
...ಗಳಿಗೆಗೆ ತಮ್ಮ ರೂಪುರೇಷೆ ಬದಲಾಯಿಸಿಕೊಳ್ಳುವ
...ಗಳು ಜನ ನೆಚ್ಚಿರುವ ಕಾರಣಕ್ಕೇ
...ಮೌಲ್ಯವಾದುವು.
...ಉರುಳಿದುಕೊಂಡು ಮುಕ್ಕಾದ ಶಿಲ್ಪಗಳು
...ನನಗೆ ಅಚ್ಚುಮೆಚ್ಚು
...ಇನ್ನೂ ಜೀವಂತವಾಗಿವೆ.
...ಮುಸಾಡಿದವುಗಳನ್ನೂ ಜನ ಎತ್ತಿ ಕೊಂಡೊಯ್ಯುತ್ತಾರೆ.
... ಉರುಳಿದವೂ ನಿಲುಕಲಾರದಷ್ಟು ಎತ್ತರದವಾಗಿರಲಿಲ್ಲ.

...ಪಾಳುಬಿದ್ದ ಕಟ್ಟಡಗಳೂ
...ವಾಗಲು ಕಾಯುತ್ತಿರುವ ಕಟ್ಟಡಗಳಂತೆ ಕಾಣುತ್ತವೆ.
...ಳ ಜಾಗೆಯಲ್ಲಿದ್ದ ಸೂಕ್ಷ್ಮ ಸಮತೋಲದ ರಚನೆಯನ್ನು
... ಈಗಲೂ ಕಣ್ಣೊಳಗೆ ಕಟ್ಟಿಕೊಳ್ಳಬಲ್ಲೆವಾದರೂ
... ಹೆಚ್ಚಿನದನ್ನು ನಾವು ಅವುಗಳಲ್ಲಿ ಕಾಣಬೇಕು:
...ಯೋಗಿಸುವಷ್ಟು ಉಪಯೋಗವಾಗಿದೆ,
... ಉಪಯೋಗಿಸಬಹುದಾಗಿದೆ.
... ನನಗೆ ತುಂಬಾ ಖುಷಿ ಕೊಡುತ್ತವೆ.

ಕೂತುಂಬುವವರು

...ತುಂಬುವವರು
...ಗೆ ಇದ್ದಷ್ಟು ಕಾಲು ಚಾಚೆಂದು ಬೋಧನೆ ಮಾಡುವರು.
...ಮೇಲೆಯುಂದಂದಿ ಯಾರಿಗೆ ದೇಣಿಗೆ ಹರಿದು
...ವುದೋ
...ದು ಇತರರಿಂದ ತ್ಯಾಗವನ್ನು ಬಯಸುವರು.
...ಟ್ಟೆ ತುಂಬಿದವರು ಹಸಿದವರಿಗೆ
...ಮುಬರಲಿರುವ ಸುದಿನಗಳ ಬಗ್ಗೆ ಕೊರೆಯುವರು.
...ದೇಶವನ್ನು ಅಧೋಗತಿಗೆ ತಳ್ಳುವ ಮುಂದಾಳುಗಳು
...ಬು ಭಾರ ಹಾಮಾರಿಗೆ
... ಘೋರವೆಂಬರು.

ತೂತಾದ ಇಲ್ಯಿಚನ* ಬೂಟು

ಕಾರ್ಮಿಕರ ಸಂಘದ ಅರಮನೆಯಲ್ಲಿ
ಇಪ್ಪತ್ತು ಮೀಟರ್ ಎತ್ತರದ ಇಲ್ಯಿಚನ ಮೂರ್ತಿಯನ್ನು
ಕೆತ್ತುತ್ತಿರುವ ಶಿಲ್ಪಿಯೇ
ಅವನು ತೂತಾದ ಬೂಟು ಧರಿಸುತ್ತಿದ್ದ
ಅನ್ನೋದನ್ನು ಮರೆಯಬೇಡ.
ಬಡತನದ ಸಂಕೇತವಾಗಿ ಅವನ ಬೂಟಲ್ಲಿ ತೂತು
ಇದ್ದದ್ದು ನಿಜವೆಂದು ಬಹಳಷ್ಟು ಜನ ಬಲ್ಲರು.
ಮತ್ತೆ, ಮೂರ್ತಿ ಪಶ್ಚಿಮಕ್ಕೆ ಮುಖಮಾಡಿ
ನಿಲ್ಲೋದು ಖಾತ್ರಿಯಂತೆ.
ಹಾಗಿದ್ದಲ್ಲಿ ಅವನ ಬೂಟಲ್ಲಿ ತೂತು
ಖಂಡಿತ ಇರಲಿ. ಅಲ್ಲಿ ಪಶ್ಚಿಮದಲ್ಲಿ
ತೂತಾದ ಬೂಟೇ ಗತಿಯಾದ ಅಸಂಖ್ಯ ಜನ
ಇವನು ನಮ್ಮವನು ಎಂದು ತಕ್ಷಣ
ಗುರುತು ಹಿಡಿಯುತ್ತಾರೆ.

(* ಇಲ್ಯಿಚ್- ವ್ಲಾದಿಮಿರ್ ಇಲ್ಯಿಚ್ ಲೆನಿನ್)

ನನಗೆ ಯಾವಾಗಲೂ ಅನಿಸ್ತದೆ

ನನಗೆ ಯಾವಾಗಲೂ ಅನಿಸ್ತದೆ:
ಹೇಳೋದನ್ನ ಅತಿ ಸರಳವಾಗಿ ಹೇಳಿಬಿಡಬೇಕು.
ಅಷ್ಟೇ ಸಾಕು.
ಪರಿಸ್ಥಿತಿ ಹೀಗಿದೆ ನೋಡಿ ಅಂತ ಹೇಳಿದರೆ
ಎಲ್ಲರ ಎದೆ ಚಿಂದಿ ಚಿಕಣ ಆಗಬೇಕು.
ಅಥವಾ
ಛಾತಿ ಮುಂದೊತ್ತಿ ಎದ್ದು ನಿಲ್ಲು
ಇಲ್ಲಾಂದ್ರೆ ತುಳಿದುಬಿಡ್ತಾರೆ
ಅಂತ ಹೇಳಿ ನೋಡಿ
ಜನ ಎದ್ದು ನಿಂತೇ ನಿಲ್ತಾರೆ

ನಿಮ್ಮ ಮಾತು ನಿಮಗೂ ಕೇಳಲಿ!

ಯಾವಾಗಲೂ ನೀವೇ ಸರಿ ಎನ್ನದಿರಿ ಗುರುವೇ,
ಶಿಷ್ಯಂದಿರಿಗೆ ಅದು ಅರಿವಾಗಲಿ ಬಿಡಿ.
ಸತ್ಯವನ್ನು ಒತ್ತಿ ತುರುಕುತ್ತೀರೇಕೆ:
ಅದರಿಂದ್ಯಾರಿಗೂ ಒಳಿತಿಲ್ಲ,
ನಿಮ್ಮ ಮಾತುಗಳು ನಿಮಗೂ ಕೇಳಲಿ ಗುರುವೇ!

ನಾನು ಉಳಿಯೋನು

ಈ ನಗರದಲ್ಲಿ ಚಳಿಯಿಂದ ನಡುಗುತ್ತಿರುವ
ಜನರಿಗೆ ಏನು ಸಹಾಯ ಮಾಡಬಹುದು? ಅಂತ
ರಾಜ್ಯಪಾಲಕ ಕೇಳಿದ.
ನಾನಂದೆ: ಅಯ್ಯೋ, ಅದೇನು ಮಹಾ!
ನಗರ ಪೂರ್ತಿ ಮುಚ್ಚೋ ಹಾಗೆ
ಹತ್ತು ಸಾವಿರ ಚದುರಡಿ
ಸೂರು ಹಾಕಿಬಿಡಿ.

ಪ್ರೇಮ ಗೀತೆ

ಮನದಲ್ಲೆ ಎಸಗೊಂದು ಕೊಂಬೆ ಕೊಟ್ಟಳು
ಅದರಲ್ಲಿ ಹಳ್ದಾನ ಎಲೆಗಳು.
ವರ್ಷ ಕೊನೆಯಾಗುತ್ತಿದೆ
ಪ್ರೀತಿ ಚಿಗುರುತ್ತಿದೆ.

ಪ್ರಯಾಣಿಕ

ವರ್ಷಾಂತರಗಳ ಹಿಂದೆ ನಾನು
ಕಾರು ಬಿಡಲು ಕಲಿಯುತ್ತಿದ್ದೆ.
ಕಲಿಸುತ್ತಿದ್ದ ಗುರುಗಳು
ಚುಟ್ಟಾ ಸೇದ್ಕೊಂಡೆ ಕಾರು ಬಿಡಬೋದು ಅನ್ನೋರು.
ಗಿಜಿಗುಡುವ ರಸ್ತೆ ಕಡಿದಾದ ತಿರುವುಗಳಲ್ಲಿ
ಚುಟ್ಟ ಆಯ ತಪ್ಪಿದರೆ
ತಾವೇ ಖುದ್ದಾಗಿ ಸಾರಥ್ಯ ವಹಿಸೋರು.
ನಾನು ಕಾರು ಚಲಾಯಿಸುವಾಗ
ಜೋಕುಗಳ ಹೇಳೋರು
ನಗದೆ ಚಾಲನೆಯ ಕಡೆ ಮಾತ್ರ ಗಮನವಿಟ್ಟಾಗ
'ನನ್ನ ಜೀವ ಉಳಿಬೇಕಯ್ಯ' ಅಂತ
ತಾವೇ ಕಾರು ನಡೆಸೋರು.
ನಾನು, ಪ್ರಯಾಣಿಕನಾಗಿದ್ದು
ಚಾಲಕ ಚಲಾಯಿಸುವ ಕಡೆ ಮಾತ್ರ ಗಮನವಿಟ್ಟಾಗ
ನನಗೆ ತುಂಬ ಗಾಬರಿಯಾಗುತ್ತದೆ.

ಅಂದಿನಿಂದ, ಹಿಡಿದ ಕೆಲಸದಲ್ಲಿ ಮಾತ್ರವೇ
ಪೂರ ಮುಳುಗದಂತೆ
ನಾನು ಜಾಗ್ರತೆ ವಹಿಸುತ್ತಿದ್ದೇನೆ.
ನನ್ನ ಸುತ್ತಮುತ್ತ ನಡೆಯುವುದನ್ನೆಲ್ಲ ಗಮನಿಸುತ್ತೇನೆ
ಮತ್ತೊಬ್ಬರ ಜೊತೆ ಮಾತನಾಡುವುದಕ್ಕಾಗಿಯೇ
ಕೆಲಸ ನಿಲ್ಲಿಸುತ್ತೇನೆ.
ಗುರಿ ತಲುಪಿ, ನಂತರ ಸಿಗಾರ್ ಸೇದುವ
ಅವಸರದಲ್ಲಿ ವೇಗದಲ್ಲಿ ಕಾರು ಚಲಾಯಿಸುವ
ಪರಿಪಾಠ ಬಿಟ್ಟಾಕಿದ್ದೇನೆ.
ಯಾವಾಗಲು ಜೊತೆಗಿರುವ ಪ್ರಯಾಣಿಕರ
ಬಗ್ಗೆ ಮಾತ್ರವೇ,
ನನ್ನ ಗಮನ.

ಕವಲು

ನಾವು ಅಪ್ಪುತ್ತೇವೆ.
ನನ್ನ ಬೆರಳಡಿ ಉಳ್ಳವರ ಪೋಷಾಕು
ನಿನ್ನ ಬೆರಳುಗಳಿಗೆ ಬಡವರ ಬಟ್ಟೆಯ ಸೋಕು.
ಆತುರದ ಅಪ್ಪುಗೆ
ನಿನಗೆ ಭೋಜನಕೂಟಕ್ಕೆ ಹೊರಡುವುದಕ್ಕಿದೆ
ಪೋಲಿಸು ಪಾದೆಗಳು ನನ್ನ ಬೆನ್ನು ಹತ್ತಿದ್ದಾರೆ.
ಹವಮಾನ ಮತ್ತು ನಮ್ಮ ಅಮರ ಗೆಳೆತನದ
ಮಾತನಾಡುತ್ತೇವೆ.
ಬಾಕಿ ಯಾವ ಮಾತನಾಡಿದರೂ
ಅವು ವಿಪರೀತ ಕಹಿಯಾಗಿರುತ್ತವೆ.

ಕಲಿಯುವವನು


ಮೊದಲು ಮರುಳ ಅಡಿಪಾಯದ ಮೇಲೆ ಕಟ್ಟಿದೆ,
ನಂತರ ಕಲ್ಲಿನ ಅಡಿಪಾಯದ ಮೇಲೆ ಕಟ್ಟಿದೆ.
ಕಲ್ಲಿನ ಅಡಿಪಾಯವೂ ಕುಸಿದ ನಂತರ
ತುಂಬಾ ಸಮಯ ನಾನು ಏನನ್ನೂ ಕಟ್ಟಲಿಲ್ಲ,
ನಂತರ ಮರುಳು, ಕಲ್ಲನ್ನದೆ ದೊರಕಿದ ಜಾಗದಲ್ಲಿ
ಕಟ್ಟಿದೆ
ಈಗ ನಾನು ಕಟ್ಟುವುದ ಕಲಿತಿದ್ದೆ.

ಯಾರಿಗೆ ನಾನು ಅಧಿಕಾರ ಪತ್ರ ನೀಡಿದ್ದೆನೊ
ಅವರು ಅದನ್ನು ಬಿಸಾಡಿದರು.
ಆದರೆ ನಾನು ಅಸಡ್ಡೆ ಮಾಡಿದವರು
ಅದನ್ನು ನನಗೆ ವಾಪಾಸು ತಂದು ಕೊಟ್ಟರು.
ಅದರಿಂದ ನಾನು ಕಲಿತೆ.

ನಾನಿತ್ತ ಆಜ್ಞೆ ಜಾರಿಯಾಗಲಿಲ್ಲ,
ಖುದ್ದಾಗಿ ಹೋಗಿ ಕಂಡೆ
ಆಜ್ಞೆ ತಪ್ಪಾಗಿತ್ತು
ಸರಿಯಾದುದ್ದನ್ನು ಮಾಡಲಾಗಿತ್ತು.
ಅದರಿಂದಲೂ ನಾನು ಕಲಿತೆ.

ಗಾಯದ ಕಲೆಗಳು ಸುಖದಾಯಕವಲ್ಲ
ಇದೀಗ ಥಂಡಿ ಬೇರೆ.
ನಾನು ಯಾವತ್ತೂ ಹೇಳುತ್ತಿರುತ್ತೇನೆ:
ಗೋರಿಗಳು ಮಾತ್ರ
ಏನನ್ನೂ ಕಲಿಸುವುದಿಲ್ಲ.

ದೆವ್ವಗಳು ಮಾಂಸದ ಸಾರಿನ ವಾಸನೆಗೆ ಬೇಗ ಬರುತ್ತವಂತೆ. ಪಿತೃಪಕ್ಷದಲ್ಲಿ ಹಿರಿಯರಿಗೆಂದು ಇಕ್ಕುವ ಎಡೆ ಊಟ ಯಾಕೆ ಸಪ್ಪೆಯಾಗಿರುತ್ತದೆಂದರೆ, ಸ್ವರ್ಗದಿಂದ ಬಂದ ಹಿರಿಯರು ಅದರ ಸ್ವಾರವನ್ನು ಹೀರಿಕೊಂಡು ಹೋಗಿರುತ್ತಾರಂತೆ. ಈ ಕತೆಯನ್ನು ಯಾರೂ ಅಲ್ಲಗಳೆಯುವುದಿಲ್ಲ. ನಮ್ಮ ಮಕ್ಕಳು ಬಾಲ್ಯದಲ್ಲಿಯೇ ಇಷ್ಟೊಂದು ಗಾಢವಾಗಿ ದೆವ್ವ ಭೂತ ಪಿಶಾಚಿಗಳನ್ನು ನಂಬಬೇಕಾದರೆ ಅದಕ್ಕೆ ಕಾರಣ ನಮ್ಮ ಹಿರಿಯರು ಹೇಳಿದ ಕತೆಗಳು. ನಾನು ಮಕ್ಕಳಿಗೆ ದೆವ್ವದ ಅಸ್ತಿತ್ವವನ್ನು ಅಲ್ಲಗಳೆದು ಒಂದು ಉಪನ್ಯಾಸ ಕೊಟ್ಟೆ. ಆದರೆ ನನ್ನ ಉಪನ್ಯಾಸ ದೆವ್ವದ ಕತೆಯಷ್ಟು ಥ್ರಿಲ್ಲಾಗಿರಲಿಲ್ಲ. ಮಕ್ಕಳು ಕಾಟಾಚಾರಕ್ಕೆ ಹೂಗುಟ್ಟಿ, ಆದಷ್ಟು ಬೇಗ ನನ್ನ ನಿರ್ಗಮನವನ್ನು ಬಯಸಿದಂತೆ ಕಂಡವು.



ನಮ್ಮೂರ ದೆವ್ವಗಳು

ವಿಶೇಷಾಂಕ 2013



■ ಬಿ.ಚಂದ್ರೇಗೌಡ

ನಾನು ಊರಿಗೆ ಹೋದಾಗಲೆಲ್ಲ ನಮ್ಮ ಮನೆಯ ಮುಂದಿರುವ ಸ್ಕೂಲಿಗೆ ಹೋಗಿ ಅಲ್ಲಿನ ಮಕ್ಕಳಿಗೆ ಪಾಠ ಮಾಡುತ್ತೇನೆ. ಒಮ್ಮೆ ಒಂದನೇ ತರಗತಿ ಮಕ್ಕಳಿಗೆ ಪಾಠ ಮಾಡುವುದಕ್ಕಿಂತ ಕತೆ ಹೇಳಿದರೆ ಹೇಗೆ ಎಂದು ಆರಂಭಿಸಿದೆ. ಕೂಡಲೇ ಅವರು ನಿಶಬ್ಧಗೊಂಡು ಹೂಗುಟ್ಟಲು ತಯಾರಾಗಿದ್ದು ನೋಡಿ ಆಶ್ಚರ್ಯವಾಯ್ತು. ಕತೆಯ ಪಾತ್ರಗಳು ಅವರ ಲೋಕದೊಳಗೆ ಪ್ರವೇಶ ಪಡೆದಾಗ ಅವರುಗಳ ಮುಖ, ಬೆದರುಗಣ್ಣು ನೋಡುವುದೇ ಚೆಂದ. ಇಂತಹದ್ದೇ ಒಂದು ಸಂದರ್ಭದಲ್ಲಿ "ನಿಮ್ಮಲ್ಲಿ ಯಾರ್‍ಯಾರು ದೆವ್ವವನ್ನು ನೋಡಿದ್ದೀರಿ ಕೈ ಎತ್ತಿ" ಎಂದು ಹೇಳಿದೆ. ಒಂದಿಬ್ಬರನ್ನು ಬಿಟ್ಟು ಉಳಿದವರೆಲ್ಲಾ ಕೈ ಎತ್ತಿದರು. ನನಗೆ ಆಶ್ಚರ್ಯವಾಯ್ತು. ಹುಡುಗನೊಬ್ಬನನ್ನು ಎದ್ದು ನಿಲ್ಲಿಸಿ "ಎಲ್ಲಿ ನೋಡಿದಪ್ಪಾ?" ಎಂದೆ. ದೆವ್ವದ ವಿಷಯ ಹೇಳುವುದು ಸಾಮಾನ್ಯವೆ? ಹುಡುಗ ಅದಕ್ಕಾಗಿಯೇ ಬೆದರುಗಣ್ಣು ಮಾಡಿಕೊಂಡು "ನಮ್ಮ ಹುಲ್ಲುಕೊಪ್ಲತ್ರ ನೋಡಿದೆ" ಎಂದ. "ಹ್ಯಂಗಿತ್ತು?" ಎಂದೆ. "ಒಂಥರಾ ಬ್ಯಳ್ಳಗೆ ಆ ಕಡೆ ಹಲಸಿನ ಮರದ ಕಡೆಗೆ ಹೋಯ್ತು" ಎಂದ. ಇದು ಅವನ ಮನೆಯಲ್ಲಿ ಯಾರೋ ಹೇಳಿದ ಕತೆ ಇರಬೇಕು.

ಸ್ವತಃ ನಮ್ಮಣ್ಣನೇ ಒಮ್ಮೆ ಹುಲ್ಲು ಹಿರಿದುಕೊಂಡು ಬರಲು ಹೋಗಿದ್ದವನು ಗಾಬರಿ ಬಿದ್ದು ಓಡಿ ಬಂದಿದ್ದ. "ಇದ್ಯಾಕೊ? ಏನಾಯ್ತು?" ಎಂದು ಕೇಳಿದ್ದಕ್ಕೆ "ಹುಲ್ಲು ಕೊಪ್ಲತ್ರ ಗಾಳಿ ಮೈಮ್ಯಾಲೆ ಬತ್ತಿತ್ತು, ಓಡಿಬಂದೆ" ಎಂದ. ಅವನಿನ್ನೂ ನಡುಗುತ್ತಿದ್ದ. "ನೋಡನ ನಡಿ" ಎಂದು ಹೋದೆವು. ಮುಸ್ಸಂಜೆಯಾದ್ದರಿಂದ ಇವನು ಅಳುಕುತ್ತಲೇ ಮೆದೆಯಿಂದ ಹುಲ್ಲು ಹರಿಯುವಾಗ ಹಲಸಿನ ಮರದಿಂದ ಹಣ್ಣುಬಿದ್ದಿದೆ. ಬಿದ್ದ ಕೂಡಲೇ ಅದು ತನ್ನ ಮುಳ್ಳು ಮೈಗೆ ಒಣಗಿದ ಎಲೆ ಅಂಟಿಸಿಕೊಂಡು ಉರುಳುತ್ತಾ ಆಕಾರ ಕಳೆದುಕೊಂಡು ಬೇಲಿ ಸಂದಿಯಲ್ಲಿ ಮಾಯವಾಗಿದೆ. ನಮ್ಮಣ್ಣ ಮೊದಲೇ ಗಾಳಿ ಗಡಾವು ನಂಬುವವನು. ಅಲ್ಲಿಂದ ಒಂದೇ ನೆಗೆತಕ್ಕೆ ಪರಾರಿಯಾಗಿದ್ದ. ಅವನಿಗಾದ ಅನುಭವವನ್ನು ನಾವು ಅನುಮಾನಿಸಿ ಮಾತನಾಡಿದಾಗ, "ಏ, ಜೂಲು ನಾಯಿತರ ಮ್ಯಾಲೇ ಬತ್ತು ಕಣಯ್ಯ" ಎಂದು ಭಯಂಕರ ಸುಳ್ಳು ಹೇಳಿದ್ದ.

ಇಂತಹವನೇ ಹೀಗೆ ಹೇಳಬೇಕಾದರೆ ಇನ್ನು ಇವರ ಮಕ್ಕಳು ಕೇಳಬೇಕೆ. ತರತರಹದ ಕತೆಗಳನ್ನು ಹೇಳಿದರು. ಅವೆಲ್ಲಾ ಅವರಪ್ಪ, ಅವರವ್ವ ಹೇಳಿದ ಕತೆಗಳಾಗಿದ್ದವು. ಒಂದೆರಡು ಮಕ್ಕಳು ಮಾತ್ರ ಸ್ವತಃ ತಾವೇ ಕತೆ ಬೆಳೆಸಿದರು. ಒಬ್ಬ ಹುಡುಗ ಹೊಲದ ಹತ್ತಿರ ನೋಡಿದನಂತೆ. ಮೋಟುಮರದಂತಿದ್ದ ದೆವ್ವ ಹೋಯ್ತಾ ಹೋಯ್ತಾ ಒಂದು ತೆಂಗಿನ ಮರದುದ್ದ ಬೆಳೆದು ಆಕಾಶದಲ್ಲಿ ಮಾಯವಾಯ್ತಂತೆ. ಮತ್ತೊಬ್ಬ ಹುಡುಗ ಅವರಪ್ಪನ ಜೊತೆ ತೋಟಕ್ಕೆ ಹೋಗಿದ್ದನಂತೆ. ಅವರಪ್ಪನಿಗೊಂದು ಕುರಿಮರಿ ಸಿಕ್ಕಿತಂತೆ. ಅದನ್ನು ಹೊತ್ತುಕೊಂಡು ಬರುವಾಗ ದೊಡ್ಡ ಟಗರಿನಷ್ಟು ಬೆಳೆದು ಹೊರಲಾರದಷ್ಟು ಭಾರ ಕೊಟ್ಟಿತಂತೆ. ಅವರಪ್ಪ ಅದನ್ನು ನೆಲಕ್ಕೆ ಹಾಕಿದ ಕೂಡಲೇ ಅದು ಮಾಯವಾಯ್ತಂತೆ. ಹೋಗುವಾಗ "ಬದಿಕ್ಕಂಡೆ ಹೋಗು" ಎಂದು ಹೇಳಿ ಹೋಯ್ತಂತೆ. ಈ ಮಕ್ಕಳು ತಮ್ಮ ಅನುಭವಗಳನ್ನು ಹೇಳಿ ಮುಗಿಸಿದ ಮೇಲೆ ನಾನು ಮಕ್ಕಳಿಗೆ ದೆವ್ವದ ಅಸ್ತಿತ್ವವನ್ನು ಅಲ್ಲಗಳೆದು ಒಂದು ಉಪನ್ಯಾಸ ಕೊಟ್ಟೆ. ಆದರೆ ನನ್ನ ಉಪನ್ಯಾಸ ದೆವ್ವದ ಕತೆಯಷ್ಟು ಥ್ರಿಲ್ಲಾಗಿರಲಿಲ್ಲ. ಮಕ್ಕಳು ಕಾಟಾಚಾರಕ್ಕೆ ಹೂಗುಟ್ಟಿ, ಆದಷ್ಟು ಬೇಗ ನನ್ನ ನಿರ್ಗಮನವನ್ನು ಬಯಸಿದಂತೆ ಕಂಡವು.

ನಮ್ಮ ಮಕ್ಕಳು ಬಾಲ್ಯದಲ್ಲಿಯೇ ಇಷ್ಟೊಂದು ಗಾಢವಾಗಿ ದೆವ್ವ ಭೂತ ಪಿಶಾಚಿಗಳನ್ನು ನಂಬಬೇಕಾದರೆ ಅದಕ್ಕೆ ಕಾರಣ ನಮ್ಮ ಹಿರಿಯರು ಹೇಳಿದ ಕತೆಗಳು. ಅಂತಹ ಒಂದು ಕತೆ ಹೀಗಿದೆ: ಒಮ್ಮೆ ಊರ ಯಜಮಾನ ತಂದಿದ್ದ ಕತ್ತೆಗಿಂತಲೂ ಎತ್ತರವಿದ್ದ ಕುದುರೆ ತಪ್ಪಿಸಿಕೊಂಡಿತಂತೆ. ಅದನ್ನು ಹುಡುಕಲು ಹೋದಾಗ ಕೆರೆ ಹಿಂದೆ ಕೆನೆಯಿತಂತೆ. ಹಿಡಿಯಲು ಹೋದಾಗ ಇಡೀ ತೋಟದಲ್ಲೆಲ್ಲಾ ರೇಸಿನ ಕುದುರೆಯಂತೆ ಓಡಾತಿತಂತೆ. ಅನುಮಾನಗೊಂಡು ನೆಲ ನೋಡಿದರೆ ಒಂದೇ ಒಂದು ಹೆಜ್ಜೆ ಗುರುತೂ ಇರಲಿಲ್ಲವಂತೆ. ಎಲಾ ಇದರ, ದೆವ್ವ ಕಂಕ್ರೊ ಓಡಿ ಓಡಿ ಎಂದು ಎಲ್ಲರೂ ಮನೆ ಕಡೆ ಪೇರಿಕಿತ್ತರಂತೆ. ಊರ ಯಜಮಾನ ಹೇಳಿದ ಈ ಕತೆಯನ್ನು ಯಾರೂ ಅಲ್ಲಗಳೆಯಲಿಲ್ಲ. ಬದಲಿಗೆ ಈತನ ಅಧೀನಕೊಳ್ಳಪಟ್ಟವರು ಹೇಳಿದ ಕತೆಗಳು ಇನ್ನೂ ರೋಚಕವಾಗಿವೆ.

ದೆವ್ವಗಳು ಮಾಂಸದ ಸಾರಿನ ವಾಸನೆಗೆ ಬೇಗ ಬರುತ್ತವಂತೆ. ಪಿತೃಪಕ್ಷದಲ್ಲಿ ಹಿರಿಯರಿಗೆಂದು ಇಕ್ಕುವ ಎಡೆ ಊಟ ಯಾಕೆ ಸಪ್ಪೆಯಾಗಿರುತ್ತದೆಂದರೆ, ಸ್ವರ್ಗದಿಂದ ಬಂದ ಹಿರಿಯರು ಅದರ ಸ್ವಾರವನ್ನು ಹೀರಿಕೊಂಡು ಹೋಗಿರುತ್ತಾರಂತೆ. ಈ ಕತೆಯನ್ನು ಯಾರೂ ಅಲ್ಲಗಳೆಯುವುದಿಲ್ಲ.

ನಾನು "ಕಣ್ಣಾರೆ ಕಂಡ ದೆವ್ವದ ಕತೆ" ಹೀಗಿದೆ: ಕೊಪ್ಪಲ ಹುಚ್ಚಮ್ಮ ಎಂಬುವವಳು ತನ್ನ ಮಗನಿಗೆ ಅದೇ ಊರಿನಿಂದ ಹೆಣ್ಣು ತಂದಿದ್ದಳು. ಹೆಣ್ಣು ಕೊಟ್ಟವರು ಸ್ಥಿತಿವಂತರಾಗಿದ್ದ ಬೋರೇಗೌಡರು. ಅವರು ತನ್ನ ಮನೆಯಲ್ಲಿ ಯಜಮಾನಿಕೆ ಮಾಡುವುದನ್ನು ನೋಡಿ ಹುಚ್ಚಮ್ಮ ಬೇಸರಗೊಂಡಿದ್ದಳು. ಹುಚ್ಚಮ್ಮ ಸತ್ತಾಗ ಬೋರೇಗೌಡರೇ ನಿಂತು ಹುಚ್ಚಮ್ಮನ ತಿಥಿ ಮಾಡಿದರು. ತಿಥಿಯ ದಿವಸ ಬೋರೇಗೌಡರ ಕುರಿಯೊಂದು ಸತ್ತು ಹೋಯಿತು. ಅದರ ಬಗ್ಗೆ ತಲೆ ಕೆಡಿಸಿಕೊಳ್ಳದ ಬೋರೇಗೌಡರು ಮಣ್ಣು ಮಾಡಿದರು. ಎರಡು ದಿವಸ ಬಿಟ್ಟು ಇನ್ನೆರಡು ಕುರಿ ಸತ್ತವು. ಆಗ ಒಂದಿಷ್ಟು ಅನುಮಾನ ಬಂದರೂ, ಏನನ್ನೋ ತಿಂದಿರಬೇಕೆಂದು ಅವಕ್ಕೂ ಸಂಸ್ಕಾರ ಮಾಡಿದರು. ಅದಾದ ಮರುದಿನ ಸಾವಿರಾರು ರೂಪಾಯಿ ಬೆಲೆ ಬಾಳುವ ಹೋರಿಗರು ಸತ್ತು ಹೋಯಿತು. ಮನೆ ಮಗನೇ ಸತ್ತಂತೆ ಎಲ್ಲರೂ ಅಳುತ್ತ ಧಪನ್ ಮಾಡಿ, ಗುದ್ದಿನ ಮೇಲೆ ತೆಂಗಿನ ಸಸಿ ನೆಟ್ಟರು. ನಂತರ ಶಾಸ್ತ್ರ ಕೇಳಲಾಗಿ 'ಶಂಕೆ' ಎಂಬ ಉತ್ತರ ಬಂತು. ಶಂಕೆ ಎಂದರೆ ಗಾಳಿಕಾಟ. ಇನ್ನಾರು? ಕೊಪ್ಪಲ ಹುಚ್ಚಮ್ಮ ಎಂಬುದು ಖಾತ್ರಿಯಾಯಿತು.

ಇದಾದ ಹಲವು ದಿನಗಳ ನಂತರ ಹುಚ್ಚಮ್ಮನ ಮಗಳನ್ನು ಕೊಟ್ಟಿದ್ದ ಬಲ್ಲಾವಳ್ಳಿಯಲ್ಲಿ ಒಂದು ಹಸ ಉಳುಮೆ ಮಾಡುತ್ತಿದ್ದಾಗಲೇ ನೆಗೆದಾಡಿ ಸತ್ತು ಹೋಯಿತು. ಅಂತೂ ಹುಚ್ಚಮ್ಮ ನಮ್ಮೂರು ಬಿಟ್ಟು ಬಲ್ಲಾವಳ್ಳಿಗೆ ಹೋದಳೆಂದು ಜನ ಮಾತಾಡಿಕೊಂಡರು. ಆದರೆ ಮರುದಿನ ರಂಗಪ್ಪನ ಆಡು ಸತ್ತು ಹೋಯಿತು. ಈ ರಂಗಪ್ಪ ಬೋರೇಗೌಡನ ಅಳಿಯ. ಜನರ ತರ್ಕದ ಪ್ರಕಾರ, ಯಾರ್‍ಯಾರು ಹುಚ್ಚಮನ ಮಗನ ಮನೆಯಲ್ಲಿ ತಿಂದು ಉಂಡು ತೇಗಿದ್ದರೊ, ಅವರನ್ನೆಲ್ಲಾ ಹುಚ್ಚವ್ವ ವಿಚಾರಿಸಿಕೊಳ್ಳತೊಡಗಿದಳು. ಸಂಜೆಯಾಯ್ತೆಂದರೆ ಊರೇ ದೆವ್ವದ ಭಯದಿಂದ ನಡುಗತೊಡಗಿತು.

ಒಂದು ವಾರದ ನಂತರ ಮನುಷ್ಯರು ಪ್ರಜ್ಞೆತಪ್ಪಿ ಬಿದ್ದು ಕನವರಿಸತೊಡಗಿದರು. ಅಲ್ಲಿಯುವರೆಗೂ ಮೂಖಪ್ರಾಣಿಗಳನ್ನು ಬಲಿ ತೆಗೆದುಕೊಂಡಿದ್ದ ಹುಚ್ಚಮ್ಮ ಈಗ ಮನುಷ್ಯರ ಮೇಲೆ ತನ್ನ ಅಕ್ರಮಣ ನಡೆಸತೊಡಗಿದ್ದಳು. ಬೋರೇಗೌಡರ ಕುಟುಂಬದ ಏಳೆಂಟು ಜನ ಹೀಗೆ ಗಾಳಿ ಬಂತಂತಾಡಿ, ಮತ್ತೆ ಮಾಮೂಲಿನಂತಾಗಿ, "ಯಾಕೆ ನೀವೆಲ್ಲ ಇಲ್ಲಿ ಬಂದಿದ್ದಿರಿ? ನನಿಗೇನಾಗಿತ್ತು?" ಎಂದು ಕೇಳುತ್ತಿದ್ದರು.

ಇದೇ ಸಮಯದಲ್ಲಿ ಬೋರೇಗೌಡರ ಮಗ ಸೈಕಲ್ಲಿನಲ್ಲಿ ಹೋಗುತ್ತಿದ್ದಾಗ ಸೈಕಲ್ ಮರಳಿಗೆ ಸಿಕ್ಕಿ ಸ್ಕಿಡ್ಡಾಯಿತು. ಹಿಂದೆ ಹುಚ್ಚಮ್ಮ ಬಂದು ಕುಳಿತಿದ್ದಾಳೆಂದು ಹೆದರಿಕೊಂಡ ಹುಡುಗನಿಗೆ ಪ್ರಜ್ಞೆ ಹೋಯಿತು. ಹೀಗೆ ಸರಣಿ ರೂಪದಲ್ಲಿ ನಡೆದ ಘಟನೆಗಳಿಂದ ಪಾರಾಗಲು ಬೋರೇಗೌಡರು ಸದರಿ ಹುಚ್ಚು ಗಾಳಿಯನ್ನು ಹಿಡಿದು ಹನುಮಂತರಾಯನಿಗೆ ಒಪ್ಪಿಸಲು ತಮ್ಮ ಪರಿವಾರದ ಸಮೇತ ಹದ್ದಿನಕಲ್ಲಿಗೆ ಹೋದರು. ಅಲ್ಲಿನ ಪೂಜಾ ಕ್ರಮವೇನೆಂದರೆ, ದೆವ್ವದ ಸಂಬಂಧಿಕರು ಪೂರ್ವಾಭಿಮುಖವಾಗಿ ನಿಲ್ಲುತ್ತಾರೆ, ಪಶ್ಚಿಮದಲ್ಲಿನ ಸೂರ್ಯನ ಬೆಳಕು ಅವರ ಮೇಲೆ ಬಿದ್ದು ಅವರ ನೆರಳಿನ ಜಾಗದಲ್ಲಿ ದೆವ್ವನನ್ನು ಕಡೆದು ಎಡೆ ಮಾಡಿ ಬರುತ್ತಾರೆ. ಅಲ್ಲಿಗೆ ದೆವ್ವವನ್ನ ಆಂಜನೇಯನ ಸುಪರ್ದಿಗೆ ವಹಿಸಿದಂತಾಗುತ್ತದೆ. ಹೀಗೆ ಕೊನೆಗೂ ಹುಚ್ಚಮ್ಮನನ್ನು ಹದ್ದಿನಕಲ್ಲಿಗೆ ಸೇರಿಸಲಾಯ್ತು.

ಇದಾದ ನಂತರ ಬೋರೇಗೌಡರ ಕುಟುಂಬದ ಬೋಜೇಗೌಡನಿಗೆ ಮದುವೆಯಾಯ್ತು. ನಮ್ಮಲ್ಲಿ ಜೂನ್ ತಿಂಗಳಿಗೆ ಮದುವೆಯಾದರೆ ಗೌರಿ ಹಬ್ಬಕ್ಕೆ ಸೋಬನ ಮಾಡುತ್ತಾರೆ. ಸೋಬನ ಮಾಡಿಕೊಳ್ಳಲು ಹೋಗಿದ್ದ ಬೋಜೇಗೌಡನನ್ನು ಹುಡುಗಿಯ ಕಡೆಯವರು ಗಾಡಿಯಲ್ಲಿ ಹೇರಿಕೊಂಡು ಅರ್ಧರಾತ್ರಿಯಲ್ಲಿ ಊರಿಗೆ ವಾಪಸ್ ತಂದಿದ್ದರು. ವಿಷಯ ಕೇಳಲಾಗಿ ಸೋಬನದ ಕೋಣೆಗೆ ಹೋದ ಬೋಜ 'ನಾನಿನ್ನ ಬಿಡಲಾರೆ' ಸಿನಿಮಾದಲ್ಲಿ ಅನಂತ್‌ನಾಗ್ ಲಕ್ಷ್ಮಿಯನ್ನು ಕರೆದಂತೆ ಹುಡುಗಿಯನ್ನು ಗದರಿಸಿದನಂತೆ. ಇದನ್ನು ಕೇಳಿ ಹೆದರಿದ ಹುಡುಗಿ ಕಡೆಯವರು ನೇಗಿಲು ಬಿಗಿಯುವ ಹಗ್ಗದಲ್ಲಿ ಆತನನ್ನು ಬಿಗಿದು ಗಾಡಿಗೆ ಹಾಕಿಕೊಂಡು ತಂದಿದ್ದರು. ಸುದ್ದಿ ಕೇಳಿ ಹೆದರಿದ ಊರವರು ಬೋಜನನ್ನು ಹಗ್ಗದ ಜೊತೆಗೆ ಸರಪಳಿಗಳಲ್ಲೂ ಬಿಗಿದು ಊರ ದೇವಸ್ಥಾನದೊಳಗೆ ಆತನನ್ನು ಬಂಧಿಸಿಟ್ಟರು.

ಬೆಳಗ್ಗೆ ಹಗ್ಗ ಮತ್ತು ಸರಪಳಿಗಳನ್ನು ಬಿಡಿಸಿದ ಕೂಡಲೇ ಬೋಜೇಗೌಡ ಸೀಟಿಯ ಸದ್ದು ಕೇಳಿದ ಒಲಂಪಿಕ್ ಓಟಗಾರನಂತೆ ಓಟ ಕಿತ್ತವನು ಹತ್ತು ಕಿಲೋಮೀಟರ್ ದೂರದಲ್ಲಿರುವ ಬೀರೇದೇವರ ಗುಡಿ ತಲುಪುವವರೆಗೂ ಓಡಿದ. ನಾವೂ ಆತನ ಹಿಂದೆ ಓಡಿದರೂ ಕೇವಲ ನಲವತ್ತು ನಿಮಿಷದಲ್ಲಾತ ಹತ್ತು ಕಿ.ಮೀ. ಓಡಿದ್ದ. ಆದರೆ ಗುರಿಮುಟ್ಟಿದ ಮೇಲೆ ಆತ ಮಾಮೂಲು ಸ್ಥಿತಿಗೆ ಬಂದಿದ್ದ.

ಬೋರೇಗೌಡರು ಮತ್ತೆ ಶಾಸ್ತ್ರ ಕೇಳಲಾಗಿ, ಹದ್ದಿನಕಲ್ಲು ಹನುಮಂತರಾಯ ಹುಚ್ಚಮ್ಮನನ್ನು ಅರೆಸ್ಟು ಮಾಡಲು ಹೋದಾಗ ಆಕೆ ಮುಟ್ಟಿನ ಸೀರೆ ಮೇಲೆ ಕುಳಿತು ತಪ್ಪಿಸಿಕೊಳ್ಳುತ್ತಿದ್ದಾಳೆ. ಬ್ರಹ್ಮಚಾರಿಯಾದ ಆಂಜನೇಯ ಹೆಂಗಸರ ಮುಟ್ಟಿನ ಸೀರೆ ಬಳಿ ಸುಳಿಯುವುದಿಲ್ಲವೆಂದು ಶಾಸ್ತ್ರದಲ್ಲಿ ಹುಟ್ಟಿತು. ಪರಿಹಾರವೆಂದರೆ ಶನಿಮಹಾತ್ಮನ ನಾಟಕ ಮಾಡಿಸಿದರೆ ಶನಿಪ್ರಭಾವಕ್ಕೆ ತುತ್ತಾದ ಕುಟುಂಬದ ಬಳಿ ಗಾಳಿ ಸುಳಿಯುವುದಿಲ್ಲವೆಂಬ ಅಭಿಪ್ರಾಯ ಶಾಸ್ತ್ರಗಾರನಿಂದ ಸಿಕ್ಕಿತು. ಇದರಿಂದಾಗಿ ನೇರಲಕೆರೆಯಲ್ಲಿ ಅದ್ಭುತವಾಗಿ ಶನಿ ಕತೆ ಮಾಡುತ್ತಿದ್ದವರನ್ನು ಕರೆಸಿ ನಾಟಕ ಮಾಡಿಸುವ ತೀರ್ಮಾನಕ್ಕೆ ಬೋರೇಗೌಡರು ಬಂದರು.

ಒಂದು ದಿನ ಬೋರೇಗೌಡರ ಮನೆಯವರೆಲ್ಲರೂ ಶನಿವಾರ ಸಂತೆಗೆ ಹೋಗಿದ್ದರು. ಬೋಜೇಗೌಡ ಮಾತ್ರ ಮನೆಯಲ್ಲೇ ಇದ್ದು ವಡೆ ಹಿಟ್ಟು ರುಬ್ಬುತ್ತಿದ್ದ ನೆಂಟರ ಹುಡುಗಿಯ ಜೊತೆ ಮಾತನಾಡುತ್ತ ಅಂಗಾತ ಮಲಗಿದ್ದ. ಆತ ಇದ್ದಕ್ಕಿದ್ದಂತೆ ಮಾತು ನಿಲ್ಲಿಸಿ ಕೊರಗುವುದಕ್ಕೆ ಶುರು ಮಾಡಿದ. ಅದನ್ನು ನೋಡಿ ಹೆದರಿದ ಹುಡುಗಿ ಬೀದಿಗೆ ಬಂದು ಕೂಗಿದಳು. ನಿರುದ್ಯೋಗಿಗಳಾಗಿ ಊರಲ್ಲಿ ಅಲೆಯುತ್ತಿದ್ದ ನನ್ನಂತವರೆಲ್ಲಾ ಅವರ ಮನೆಯತ್ತ ಓಡಿದೆವು. ನಾವು ಬಾಗಿಲಿಗೆ ಹೋಗಿದ್ದೇ ತಡ ಬೋಜೇಗೌಡ ರುಬ್ಬುಗುಂಡನ್ನು ಎತ್ತಿ ಬೀಸಿ ಒಗೆದ. ಅದು ಯಾರ ಮೇಲಾದರು ಬಿದ್ದಿದ್ದರೆ ಸತ್ತೆ ಹೋಗುತ್ತಿದ್ದರು. ಸದ್ಯ ಗುರಿ ತಪ್ಪಿತು. ನಾವೆಲ್ಲ ಅದೆಷ್ಟು ಬೇಸಿಯಿಂದ ಆ ಮನೆಯಿಂದ ಓಡಿದೆವೆಂದರೆ ನಾನು ಎದುರು ಸಿಕ್ಕ ಮನೆಯೊಂದಕ್ಕೆ ನುಗ್ಗಿದೆ. ಆ ಮನೆಯಲ್ಲಿ ದೊಡ್ಡವಳಾಗಿ ನೆರಕೆಯೊಳಗಿದ್ದ ಸರೋಜ ಎಂಬ ಹುಡುಗಿ ಹೆದರಿ ಗಧಗಾಪುರಿಸಿ ಕೂಗಿಕೊಂಡಳು. ನಾನು ಬಂದಷ್ಟೇ ಬೇಸಿಯಿಂದ ಮತ್ತೆ ಓಡಿದೆ. ಆದರೆ ಬೋಜ ನಮ್ಮ ಹಿಂದೆ ಬಂದಿರಲಿಲ್ಲ. ನಮ್ಮ ಜೊತೆಯಿದ್ದ ಕಲ್ಲುಒಡ್ಡರ ಬಾಬು ಎಂಬುವವನು ಸೀಳುನಾಯಿಯಂತೆ ನೆಗೆದು ಬೋಜೇಗೌಡನ ಸೊಂಟ ಹಿಡಿದುಬಿಟ್ಟಿದ್ದ. ಅದು ಎಂತಹ ಉಡದ ಹಿಡಿತ ಎಂದರೆ ಬೋಜೇಗೌಡನ ದೆವ್ವ ಶಕ್ತಿಗೂ ಏನನ್ನೂ ಮಾಡಲಾಗಲಿಲ್ಲ. ಅವನ ಕೈಗೂ ಸಿಗದೆ ಹಿಂದೆ ಅವುಚಾಡುತ್ತ ಬಾಬು ಸುಸ್ತು ಮಾಡಿದ್ದ. ಅಷ್ಟರಲ್ಲಿ ನಾವೆಲ್ಲಾ ಪುನಃ ಸೇರಿಕೊಂಡು ಬೋಜನನ್ನು ಹಗ್ಗದಲ್ಲಿ ಕಟ್ಟಿ, ದೇವಸ್ಥಾನದ ಕಂಬಗಳಿಗೆ ಬಿಗಿಯಲು ಆತನನ್ನು ಹೊತ್ತುಕೊಂಡು ಹೊರಟೆವು. ಸರೋಜಗೆ ಸತ್ಯ ಸಂಗತಿ ಗೊತ್ತಾದ ನಂತರ ನನ್ನ ಫಜೀತಿ ನೆನೆದು ಬಿದ್ದುಬಿದ್ದು ನಕ್ಕಳು!

ಬೋಜನನ್ನು ದೇವಸ್ಥಾನದ ಕಂಬಕ್ಕೆ ಕಟ್ಟಿದ ನಂತರ ಅವನ ಅವ್ವ ಬಂದು ಅಳತೊಡಗಿದಳು. ನಿಧಾನಕ್ಕೆ ನಾಲಿಗೆ ಸವರಿದ ಬೋಜ "ನಾನ್ಯಾರು ಗೊತ್ತ?" ಎಂದ. "ಯಾರು ಹೇಳವ್ವ?" ಎಂದಾಗ ಸುಮಾರು ವರ್ಷದ ಹಿಂದೆ ಸತ್ತ ಸಭ್ಯ ಗೃಹಿಣಿಯೊಬ್ಬಳ ಹೆಸರೇಳಿದ. ನಾವು ಅಚ್ಚರಿಗೊಂಡು ಸುಧಾರಿಸಿಕೊಳ್ಳುವಾಗ "ನಾನು ಇವ್ನನ್ನ ಬುಟ್ಕೋಗದಿಲ್ಲ ತಗಂಡೆ ಹೋಯ್ತಿನಿ" ಎಂದ. ಅವನ ಅವ್ವ ಮಗ ಸತ್ತಷ್ಟು ಜೋರಾಗಿ ಅಳತೊಡಗಿದಳು. ಆಗ ಸಂಬಂಧಿಯೊಬ್ಬ ಬೋಜನಿಗೆ ಮುಖಮುಸುಡಿಗೆ ಚಚ್ಚಿದ. "ಹೊಡಿ, ಇನ್ನೂ ಹೊಡಿ, ನನಿಗೇನಾರ ಏಟಾದತೆ" ಎಂದು ಬೋಜ ಕೆಕ್ಕರಿಸಿಕೊಂಡು ನೋಡಿದ. ಆ ದಿನ ಶನಿಮಹಾತ್ಮನ ನಾಟಕ ನಡೆಯಿತು. ಪೂಜಾ ಪ್ರಸಾದವನ್ನು ತಂದು ಬೋಜನಿಗೆ ಮೆತ್ತಿದರು. ಬೋಜ ಕ್ರಮೇಣ ಸರಿ ಹೋಗತೊಡಗಿದ.

ಅಷ್ಟರಲ್ಲಿ ಆಚಾರ್ಯರ ಕೇರಿಯಲ್ಲಿ ಸುಂದರವಾದ ಗಾಳಿಯೊಂದು ಕಾಣಿಸಿಕೊಂಡಿತು. ನಾಗಣ್ಣ ಚೆಲುವೆಯೊಬ್ಬಳನ್ನು ಮದುವೆಯಾಗಿದ್ದ. ಇತರ ಯಾವ ಹೆಂಗಸರನ್ನೂ ಸಹಿಸದ ಅವನ ಅವ್ವ ಕ್ರಮೇಣ ತನ್ನ ಮಗ ಮತ್ತು ಸೊಸೆಯನ್ನು ಮಾತನಾಡಿಸುವುದನ್ನೇ ಬಿಟ್ಟಳು. ಉಳಿದ ಮಕ್ಕಳಿಗೂ ಹಾಗೇ ಹೇಳಿದಳು. ಕ್ರಮೇಣ ಏಕಾಂಗಿಯಾದ ನಾಗಣ್ಣನ ಮೇಲೆ ದೆವ್ವ ಬರತೊಡಗಿತು. ಗಾಳಿ ಬರುವ ಮುನ್ನ ಕಣ್ಣುಮುಚ್ಚಿ ಕೊರಗುತ್ತಿದ್ದ. ಒಂದು ದಿನ ಹೀಗೆ ಮನೆಯಲ್ಲಿ ಮಲಗಿದ್ದ ನಾಗಣ್ಣನ ಮೈಮೇಲೆ ದೆವ್ವ ಬರತೊಡಗಿತು. ನಾನು ಓಡಿಹೋಗಿ ಆತ

ಳುವ ಮೊದಲೇ ಕೈಕಾಲಿಗೆ ಹಗ್ಗ ಕಟ್ಟಿ ಬಂಧಿಸಿದೆ. ಆತ ಸಾಹಸದಿಂದ ಎದ್ದು ಗೋಡೆಗೆ ಒರಗಿ ಅವನ ಮುಖಕ್ಕೆ ಒಂದು ಕಳೆಬಂದಿತ್ತು. ತುಂಬ ಯಿಂದ ಮಾತನಾಡಿಸಿ "ನೀನು ಯಾರು ಹೇಳವ್ವ?" ದೆವ್ವ ನಿಧಾನಕ್ಕೆ ಕತೆ ಶುರು ಮಾಡಿತು. ನಳಿನಿ ಹುಡುಗಿ ಊಟಿಯವಳು. ಸೇತುವೆ ಕೆಲಸಕ್ಕೆ ದ್ದಾಗ ಕಾಲುಜಾರಿ ನೀರಿಗೆ ಬಿದ್ದು ಸತ್ತು ಹೋದಳು. ಗೆಳತಿಯರು ಅಳುತ್ತಾ ವಾಪಸು ಹೋದರಂತೆ. ಗಳ ನಂತರ ನಾಗಣ್ಣ ಅಕ್ಕನ ಮನೆಗೆ ಹೋಗಿದ್ದಾಗ ಸತ್ತ ಜಾಗದಲ್ಲೇ ಕೈಕಾಲು ತೊಳೆದುಕೊಂಡನಂತೆ. ನ್ನ ನೋಡಿ ಹಿಂಬಾಲಿಸಿ ಬಂದಳಂತೆ. ಕೂಲಿಗೆ ಮುವ ಮುನ್ನ ಕೋಳಿ ಕುಯ್ದು ಅಡಿಗೆ ಮಾಡಿಟ್ಟು ದ್ದಳಂತೆ. ಆದರೆ ಉಣ್ಣಲಾಗಿರಲಿಲ್ಲ, ಆದ್ದರಿಂದ ತ್ತ ಸಂಜೆ ಕೋಳಿ ಕೂದು ಅಡಿಗೆ ಮಾಡಿ ಊಟ ರೆ ಹೋಗುತ್ತೇನೆ. ಇಲ್ಲವಾದರೆ ನಾಗಣ್ಣನನ್ನು ಪ್ರದಿಲ್ಲ, ತೆಗೆದುಕೊಂಡು ಹೋಗುತ್ತೇನೆ" ಎಂದಳು.

ವಾಪಸ್ಸು ಹ್ಯಂಗೋಯ್ತಿ?" ಎಂದೆ. "ಬಸ್ಸಿನಲ್ಲಿ ಗುತ್ತೇನೆ" ಎಂದಳು. "ಇಲ್ಲಿ ಎಲ್ಲಿರತೀ?" ಎಂದೆ. ೀ ನೋಡಲ್ಲಿ ಪಾಳವಾಣದ ಮರ ಇದಿಯಲ್ಲಾ ತಿನಿ" ಎಂದಳು. "ಸಾಯಂಕಾಲಕ್ಕೆ ಬರ್ತಿನಿ ಕೂದು ಅಡಿಗೆ ಮಾಡಿರಿ" ಎಂದು ಹೊರಟು ದಳು. ನಾಗಣ್ಣ ಆವೇಶ ಇಳಿದವನಂತೆ ಕಣ್ಣುಬಿಟ್ಟು ಕ್ಕ ಚಂದ್ರ ನನ್ನ ಕೈಕಾಲು ಕಟ್ಟದ್ದಿರಿ?" ಎಂದ. ಲೇ ಅವನನ್ನು ಬಿಡಿಸಿದ ನಾನು ನಳಿನಿ ಮೈಮೇಲೆ ಸುದ್ದಿ ಹೇಳಿದೆ. "ನಿಮಗೆಲ್ಲೊ ಬ್ರಾಂತು" ಕೊಂಡು ಎದ್ದು ಹೋದ.

ಳಿನಿ ಕೊಟ್ಟ ಎಚ್ಚರಿಕೆಯನ್ನು ಗಂಭೀರವಾಗಿ ಸಿದ ನಾವು ಕೋಳಿ ಕುಯ್ದು ಅಡಿಗೆ ಮಾಡಿ ಗಿ ಕಾಯ್ದೆವು. ಸಾಯಂಕಾಲವಾಗುತ್ತಿದ್ದಂತೆ ನಾಗಣ್ಣ ಬಂದ. ಊಟದ ಸಮಯಕ್ಕೆ ಸರಿಯಾಗಿ ನಳಿನಿ ಮೈಮೇಲೆ ಬಂದಳು. ತುಸು ಹೊತ್ತು ಕೊರಗಿದ ನಡುಮನೆಯಲ್ಲಿ ಕುಳಿತು ಎಲ್ಲರನ್ನು ಸಿಟ್ಟಿನಿಂದ ದ. "ಆಯ್ತು ಇರವ್ವ ಊಟ ಕೊಡ್ತಿವಿ. ನಮ್ಮ ನೇ ಬೇಕಿತ್ತೆ ನಿನಿಗೆ. ಇನ್ಯಾರೂ ಸಿಗಲಿಲ್ವೆ" ಎಂದೆ. ಣ್ಣ ಸುಂದರವಾಗಿದಾನೆ, ಒಳ್ಳೆ ಹಾಡೇಳ್ತನೆ, ಅದಕ್ಕೆ ಆಯ್ತು ಬಂದೆ" ಎಂದಳು. ನಂತರ ಊಟ ಇಕ್ಕಿದೆವು. ಅನ್ನ, ಸಾರಿನ ಜೊತೆಗೆ ಒಂದಿಡೀ ನಾಟಿಕೋಳಿಯನ್ನು ಬಿಸಾಡಿದಳು. ಉಂಡು ಗೋಡೆಗೆ ಒರಗಿ ಮಟ್ಟಸವಾಗಿ ನಂತರ "ನಾಗಣ್ಣನ್ನ ಸಾಯಸದಿದ್ರೆ ಅವತ್ತೆ ಸುತಿದ್ದೆ" ಎಂದಳು. "ಯಾವತ್ತು?" ಎಂದೆ. "ಅವತ್ತು ೀರು ಕೆಡಗಕ್ಕೆ ಅಂತ ದೊಡ್ಡ ತೆಂಗಿನ ಮರ ಹತ್ತಿದ್ದ. ದ್ಲೆ ನೂಕಣ ಅಂತ ಇದ್ದೆ. ಆದ್ರೆ ಅಂಗೆ ಮಾಡಲಿಲ್ಲ, ಒಂದು ದಿನ ಬಾವಿಗೆ ಹಾಕಿದ್ದೆ. ಅವತ್ತೂ ಸಾಯಿಸಲಿಲ್ಲ, ಮದುವೆಯಾಗಿದಾನೆ ಅಂತ ಬಿಟ್ಬುಿ ಯ್ತಾಯಿದ್ದಿನಿ" ಎಂದ ನಳಿನಿ ಕಣ್ಣನ್ನು ಮೇಲಕ್ಕೆ ದಳು. ಒಂದಿಷ್ಟು ಹೆದರಿಕೆಯಾಯ್ತು. ನಂತರ ನಾಗಣ್ಣ ಕ್ಕ ಚಂದ್ರ ಹಿಂಗೆ ಬಂದು ನನ್ನ ಮುಂದೆ ಕುಂತಿದ್ದಿ?" . ಒಂದು ಪ್ರಭೆಯಲ್ಲಿದ್ದ ಅವನ ಮುಖ ಕ್ಷಣದಲ್ಲಿ ಮೂಲಿಗಂತಾಯ್ತು, ಜೇಬಿಂದ ಬೀಡಿ ತೆಗೆದು ಹಚ್ಚಿದ. ಶಃ ಬೆಳಗ್ಗೆ ನಮ್ಮೂರ ಪಕ್ಕದಿಂದಲೇ ಊಟಿಗೆ ಗುವ ಎಸೆಲಿನ್ ಬಸ್ಸಿನಲ್ಲಿ ನಳಿನಿ ಹೋಗಿರಬಹುದು.

ಈ ತರದ ಇನ್ನೊಂದೆರಡು ದೆವ್ವಗಳ ಜೊತೆಗಿನ ನನ್ನ ಚಾರ ಮುಗಿದ ನಂತರ ನಾನು ವಿಚಾರಕ್ರಾಂತಿಗೆ ತುತ್ತಾದೆ. ರಂ ದೆವ್ವ ಮತ್ತು ದೇವರ ಬಗ್ಗೆ ನಂಬಿಕೆ ಕಳೆದುಕೊಂಡೆ. ಇರುವುದೇ ಆದರೆ ದೇವರೂ ಇರಬೇಕು ಎಂದೆ. ದಿದ್ದರೆ ಎರಡೂ ಇಲ್ಲ ಎಂಬ ವಿಚಿತ್ರ ತರ್ಕ ಆರಂಭಿಸಿದೆ. ದೆವ್ವ ಇಲ್ಲ ಎಂದು ವಾದಿಸಿದ ಕೂಡಲೇ ಊರವರು ಯ್ತು, ರಾತ್ರಿ ಹನ್ನೆರಡು ಗಂಟೆಲಿ ಊರ ಪೂರ್ವಕ್ಕಿರುವ ದ ಹತ್ತಿರ ಹೋಗಿ ಬಾ" ಎಂದರು. ಅದೂ ಬೇಡ, ಲ್ಲಾವಳ್ಳಿ ಹಳ್ಳದ ಶೆಡರನ್ನು ತಡಾಯ್ತು ಬಾ" ಎಂದರು. ಹ ಶರತ್ತುಗಳನ್ನು ಹಗಲು ಹೊತ್ತು ಒಪ್ಪಿಕೊಳ್ಳಬಹುದು. ರೆ ರಾತ್ರಿಯಾದರೆ ಅದು ಸಾಧ್ಯವೇ ಇಲ್ಲ ಎಂಬುದು ವರಿಕೆಯಾಯ್ತು, ಕಾರಣ ಬಾಲ್ಯದಿಂದಲೂ ದೆವ್ವಗಳ ಕೇಳಿ ಬೆಳೆದ ಮನಸ್ಸು ಯಾವಾಗ ರ್ಯಗೊಳ್ಳುತ್ತದೆಂದು ಹೇಳಲು ಬರುವುದಿಲ್ಲ.

ನಾನು ದೆವ್ವದ ಭೀತಿಯಿಂದ ಮುಕ್ತನಾಗಲು ಕಾರಣ ಕೆಯೊಟ್ಟಿಗೆ ನಡೆಸಿದ ತರ್ಕ. ನಾವು ನಿಜಕ್ಕೂ ಭಯ ತರಾಗುವುದೇಕೆಂದರೆ ಸಾವಿಗೆ ಅಂಜಿ. ಸಾವಿಗೆ ಜುವವನು ಜೀವನವೇನೆಂದು ಅರ್ಥ ಮಾಡಿಕೊಳ್ಳಲಾರ. ವನದ ಅರ್ಥ ತಿಳಿಯಬೇಕಾದರೆ ಸಾವಿನ ಭೀತಿ ರೆಯಬೇಕು. ಈ ಭೀತಿ ಬಿಟ್ಟ ಕ್ಷಣದಿಂದಲೇ ಆತನ ವಾದ ಬದುಕು ಆರಂಭವಾಗುತ್ತದೆ. ಅಲ್ಲಿ ಇಲ್ಲಿ ಕೊಂಡ ಇಂತಹ ಚಿಂತನೆಗಳು ಮನಸ್ಸನ್ನು ಸಿದ್ದರಿಂದ ಒಂದು ದಿನ ಬೆಂಗಳೂರಲ್ಲಿ ರಾತ್ರಿ ಹನ್ನೆರಡು ಗೆ ಬಸ್ಸು ಹತ್ತಿದವನು ರಾತ್ರಿ ಎರಡು ಗಂಟೆಗೆ ಬಹಳ್ಳಿ ಗೇಟಿನಲ್ಲಿ ಇಳಿದೆ. ಅಲ್ಲಿಂದ ಏಳು ೋಮೀಟರ್ ಕಾಲುದಾರಿಯಲ್ಲಿ ಊರಿಗೆ ನಡೆಯಬೇಕು.

ತಿಂಗಳ ಬೆಳಕು ಹಾಲು ಚೆಲ್ಲಿದಂತಿತ್ತು, ಸಾವಿನ ಭೀತಿ ಇಲ್ಲದಿದ್ದರಿಂದ ಬಿಸೆಯಿಂದ ಹೊರಟೆ. ಚಿಕ್ಕೇನಹಳ್ಳಿಪುರದ ಹಳ್ಳ ಬಂತು. ಆ ಹಳ್ಳ ಹುಲಿಹಣ್ಣಿನ ಗಿಡದಿಂದ ಆವೃತವಾಗಿದೆ. ರಾತ್ರಿ ದಾರಿ ಕಾಣುವುದಿಲ್ಲ, ಆದರೂ ಧೈರ್ಯದಿಂದ ಮೇಲೆ ಬಂದೆ. ಕೊಯ್ಲಿಗೆ ಬಂದ ಹೊಲ, ತೆಂಗಿನ ತೋಟ, ನಿಶಬ್ಧ ಗಾಳಿ, ಜೊತೆಗೆ ಬೇಂದ್ರೆಯವರು ವರ್ಣಿಸಿದ ತಿಂಗಳ ಬೆಳಕು. ನಿಸರ್ಗದ ಕಡೆ ಮನಸ್ಸು ನೆಟ್ಟಿದ್ದರಿಂದ ಭಯವಾಗಲಿಲ್ಲ, ಲಾಳನಕೆರೆ ಹಳ್ಳ ಬಂತು. ಈ ಹಳ್ಳದಲ್ಲೊಂದು ದೊಡ್ಡ ನಾಗರಹಾವು ನಿರ್ಭೀತಿಯಿಂದ ತಿರುಗುತ್ತಿರುತ್ತದೆ. ಅದು ದೇವರ ಹಾವಾದ್ದರಿಂದ ಯಾರೂ ಅದನ್ನು ಹೊಡೆದಿರಲಿಲ್ಲ, ನಿಜಕ್ಕೂ ಹೆದರಬೇಕಾದ್ದು ದೆವ್ವನಿಗಲ್ಲ ಹಾವಿಗೆ ಎಂದುಕೊಂಡು ಜಾಗರೂಕನಾಗಿ ಹೆಜ್ಜೆಯಿಡುತ್ತ ಸಾಗಿದ್ದರಿಂದ ದೆವ್ವನ ಭೀತಿ ಜಾಗಕ್ಕೆ ಹಾವು ಬಂದು ಕುಳಿತಿತು.

ಇನ್ನು ಮುಂದೆ ಊರಿನವರೆಗೂ ಹೊಲದ ಸಾಲಲ್ಲಿ ಹೋಗಬೇಕು. ರಾತ್ರಿ ತೆನೆಯನ್ನು ಕಟಾವು ಮಾಡಿ ಗೂಡಿಗೆ ಸಾಗಿಸುವ ಇಲಿಗಳನ್ನು ಹಿಡಿಯಲು ಹಾವು ತಿರುಗುತ್ತಿದ್ದರೆ ಕತೆಯೇನೂ ಎಂದು ಯೋಚನೆ ಆಯಿತು. ಆದ್ದರಿಂದ ತಿಂಗಳ ಬೆಳಕಲ್ಲಿ ತೋಯ್ದು ನಿಂತಿದ್ದ ಹೊಲ, ತೋಟ, ಗುಪ್ಪೆಕಲ್ಲು ಬೆಟ್ಟ ನೋಡುವುದನ್ನು ಬಿಟ್ಟ ದಾರಿ ನೋಡಿಕೊಂಡು ಹೋಗುವುದೇ ಆಯ್ತು. ಅಷ್ಟರಲ್ಲಿ ಬಲ್ಲಾವಳಿ ಬಂತು. ಯಾರೋ ಸಿಹಿಮೂತ್ರ ದೇಹಿ ಮೂತ್ರ ವಿಸರ್ಜನೆಗೆಂದು ಮನೆ ಬಾಗಿಲಲ್ಲಿ ಕುಳಿತಿದ್ದ, ನನ್ನ ಆಕೃತಿ ನೋಡಿ "ಧ್ಯಾರೂ" ಎಂದ. ಆ ಪದ ಮತ್ತು ಉಚ್ಚಾರಣೆಯಲ್ಲೇ ಭಯ ತುಂಬಿತ್ತು. ನನ್ನಿಂದ ಕೂಡಲೇ ಉತ್ತರ ಬರದಿದ್ದರೆ ಮನೆಯೊಳಕ್ಕೆ ನುಗ್ಗಿ ಬಾಗಿಲು ಹಾಕಿಕೊಳ್ಳುವ ದನಿ ಅದು. ಆದ್ದರಿಂದ "ನಾನು ಚಂದ್ರ ಕಣೊ" ಎಂದೆ. "ಏ ಏನಯ್ಯ ಇಷ್ಟೊತ್ತಿನಲ್ಲಿ?" ಎಂದ ಅಮಾಸೆ. ಈ ಅಮಾಸೆ ಹೈಸ್ಕೂಲಲ್ಲಿ ನಾವೆಲ್ಲ ನಾಟಕ ಕಲಿಯುತ್ತಿದ್ದಾಗ ರುಕ್ಮಿಣಿ ಪಾತ್ರ ಮಾಡಿದ್ದ. ನಾಗತಿಹಳ್ಳಿ ಚಂದ್ರಶೇಖರ ಕೃಷ್ಣನ ಪಾತ್ರ ಮಾಡಿದ್ದ. ಅಮಾಸೆಗೆ ಎಷ್ಟರಮಟ್ಟಿಗೆ ನಶ್ಯದ ಚಟವಿತ್ತೆಂದರೆ ಕೃಷ್ಣನ ಜೊತೆ ಕುಳಿತೇ ನಾಚಿಕೊಂಡವನಂತೆ ಮೂಗಿನ ಹತ್ತಿರ ಕೈ ತಂದು ಎರಡು ಬಾರಿ ನಶೆ ಮೂಸಿದ್ದ!


"ಚಂದ್ರಣ್ಣ ನಿನಿಗೆಷ್ಟಾರ ಧೈರ್ಯ ಇರ್ಲಿ ಇಷ್ಟೊತ್ತಲ್ಲಿ ಬರದಲ್ಲ, ಬಾ ಮನಿಗಿದ್ದು ವತ್ತರಿಕೋಗಿವೆ" ಎಂದ. "ಇಲ್ಲ ಕಣೊ ಹೋಯ್ತಿನಿ. ಹಳ್ಳ ಇಳದತ್ತಿದ್ರೆ ಊರಲ್ಲವೆ" ಎಂದು ಬಿಸೆಯಿಂದ ಹೊರಟೆ. "ಬರ್ಲ ಕಳಸಕ್ಕೆ?" ಎಂದ. "ತಿರಗ ನಿನ್ನ ಕಳಸಬೇಕಲ್ಲ ಹೇಳು" ಎಂದೆ. "ತಮಾಸಿ ಬುಟ್ಟೆಯಿಲ್ಲ ನೀನು" ಎಂದುಕೊಂಡು ಬಾಗಿಲು ಹಾಕಿಕೊಂಡ. ಈ ಬಲ್ಲಾವಳ್ಳಿ ಹಳ್ಳದ ದೆವ್ವ ಈ ಕಡೆಯಿಂದ ಹೋಗುವವರನ್ನು ನಿಲ್ಲಿಸಿ ಊರ ಮನೆಯವರ ಯೋಗಕ್ಷೇಮ ಕೇಳುತ್ತಂತೆ. ಬೀಡಿ ಇದ್ದರೆ ಕೊಡಿ ಎನ್ನುತ್ತದಂತೆ. ಮರದ ಕೊಂಬೆಯನ್ನು ಮುರಿದು ಎಸೆದು ಹೆದರಿಸುತ್ತದಂತೆ. ಹಟಾತ್ತನೆ ಈ ಸಂಗತಿಗಳು ನನ್ನ ಮನಸ್ಸನ್ನು ಮುತ್ತಿದವು. ಭಯ ನಿವಾರಣೆಗೆ ಹಾಡೇಳಬೇಕೆನಿಸಿತು. ಹೇಳಿದರೆ ಆಕಸ್ಮಾತ್ ದೂರದಲ್ಲಿದ್ದ ದೆವ್ವನನ್ನು ಹತ್ತಿರ ಕರೆದಂತಾಗುವುದಿಲ್ಲವೆ ಎಂದುಕೊಂಡು ಜೀವ ಕೈಯಲ್ಲಿ ಹಿಡಿದು ಹಳ್ಳ ಇಳಿಯತೊಡಗಿದೆ.

ಈ ಹಳ್ಳದಲ್ಲೊಬ್ಬ ಬಾವಿ ತೆಗೆದಿದ್ದಾನೆ. ಅದೂ ದಾರಿಯ ಪಕ್ಕದಲ್ಲಿ, ಎಡಗಾಲು ಆಯತಪ್ಪಿದರೆ ಬಾವಿಗೆ ಬಿದ್ದಂತೆಯೇ. ಇಂತಹ ಭಾವಿ ತೆಗೆದಿರುವ ಆ ಮೂರ್ಖನನ್ನು ಅಶ್ಲೀಲಭಾಷೆಯಿಂದ ಬೈದುಕೊಂಡು, ಮೇಲೆ ಬಂದು ಮರುಜೀವ ಪಡೆದಂತೆ ನಿಟ್ಟುಸಿರುಬಿಟ್ಟೆ. ಪೂರ್ವದಲ್ಲಿ ಹಳ್ಳಿ ಕಾಣಿಸಿತು. ಉತ್ಸಾಹದಿಂದ ಊರ ಕಡೆಗೆ ಹೆಜ್ಜೆ ಹಾಕಿದೆ. ಯಾರೊ ಮಾತನಾಡಿಕೊಂಡು ಬರುತ್ತಿರುವಂತೆ ಕಂಡಿತು. "ದ್ಯಾರೂ" ಎಂಬ ಮತ್ತದೇ ಪ್ರಶ್ನೆ. "ನಾನು ಕಂಣ್ರೋ ಚಂದ್ರ" ಎಂದೆ. "ಇದೇನಣ್ಣ ಈಟೊತ್ತಲ್ಲಿ ಬಂದೆ?" ಅಂದರು. "ಏನೋ ಅರ್ಜೆಂಟ್ ಕೆಲಸಿತ್ತು ಬಂದೆ. ಹುಷಾರಾಗೋಗ್ರಪ್ಪ ಆ ಹಳ್ಳದಲ್ಲಿ ದೆವ್ವ ಆಟ ಆಡಿಸಿಬುಡ್ತು" ಎಂದು ಬಿಸೆಯಿಂದ ಹೊರಟು ಮನೆಗೆ ಬಂದು ಕದ ತಟ್ಟಿದೆ. ಅವ್ವ ಕದ ತೆಗೆದು "ಇದೇನು ಈಟೊತ್ತಿನಲ್ಲಿ ಬತ್ತಿಯಲ್ಲೊ ನೀನು" ಎಂದು ಹೆದರಿಕೊಂಡು ಕೇಳಿದಳು. "ನಾನು ಬರುವಾಗ ಆ ಗಲ್ಲಿಲಿ ಯಾರೋ 'ಈಗ ಬಂದೇನೊ ಚಂದ್ರ' ಅಂದಂಗಾಯ್ತು ಕಣವ್ವ" ಎಂದೆ. "ಇನ್ಯಾರುಯಿಲ್ಲ, ನಿಮ್ಮ ದೊಡವ್ವನೆ ಬುಡು" ಎಂದಳು. ದೊಡವ್ವ ಸತ್ತು ವರ್ಷವಾಗಿತ್ತು. ಅವಳಿನ್ನೂ ಇಲ್ಲೇ ಇದ್ದಾಳೆಂದು ಅವ್ವ ಭಾವಿಸಿದ್ದಳು!

ತಿಂಗಳ ನಂತರ ತಿಳಿದಿದ್ದೇನೆಂದರೆ "ಹುಷಾರಾಗೋಗರಪ್ಪ ಹಳ್ಳದಲ್ಲಿ ದೆವ್ವ ಆಟ ಆಡುಸ್ತು" ಅಂದಿದ್ದೆನಲ್ಲಾ ಈ ಗಿರಾಕಿಗಳು ಅಲ್ಲೇ ನಿಂತು ಬೆಳಕು ಹರಿದ ನಂತರ ಹೋಗಿದ್ದರಂತೆ. "ನೀನು ಎಚ್ಚರಿಕೆ ಕೊಟ್ಟಿದ್ದು ಒಳ್ಳೆದೆ ಆಯ್ತು ಕಣಣ್ಣ" ಎಂದರು. "ಅಯ್ಯೋ ಬೀಡಿ ಕೊಡ್ತಿಯೋ ಇಲ್ವೊ ಅಂತ ಹಿಂದೆನೆ ಬತ್ತು ಕಣ್ರಪ್ಪ" ಎಂದು ಹೇಳಿದೆ.

ನನಗೆ ನಂಬಿಕೆ ಇಲ್ಲದಿದ್ದರೂ ದೆವ್ವವನ್ನು ನಂಬುವವರಿಗೆ ರಾತ್ರಿ ಹೊರಬರದಂತೆ ಕತೆ ಹೇಳುವುದೆ ಯಾಕೋ ಥ್ರಿಲ್ಲಾಗಿ ಕಾಣುತ್ತಿದೆ. ○

ಮುಳುಗೇಳುವ ಪ್ರಶ್ನೆಗಳು



ನಾನು ಎಲ್ಲಿ ಮುಳುಗಿ ಎಲ್ಲಿ ಏಳುತ್ತಿದ್ದೇನೆ?
ಎಲ್ಲಿ ಎದ್ದು ಎಲ್ಲಿ ಮುಳುಗುತ್ತಿದ್ದೇನೆ?
ವಿಷಯ ಗಂಭೀರವಾಗಿದೆ.
ಮುಳುಗಿದ್ದು ಎದ್ದಿದ್ದಾ?
ಎದ್ದಿದ್ದು ಮುಳುಗಿದ್ದಾ?
ನಾನು ಮುಳುಗಿದಾಗ ನಿಮಗೆ ಕಾಣುತ್ತೀನೋ
ಎದ್ದಾಗ ಕಾಣುತ್ತೀನೋ?




ಪ್ರಶ್ನೆಗಳೊಳಗೆ ಪ್ರಶ್ನೆಗಳು
ಸೂರ್ಯ ಮುಳುಗಿದ್ದು ಎಲ್ಲಿಗೆ? ಎದ್ದಿದ್ದು ಎಲ್ಲಿಗೆ?
ಮುಳುಗಿದಾಗ ನನಗೆ ಉಸಿರುಕಟ್ಟಲ್ಲ
ಆದರೆ ಬಿಡುಗಡೆಯಾಗಿದೆ
ಮುಳುಗಿದಾಗ ತೆರೆದುಕೊಂಡಿದ್ದೇನೆ
ಯಾವುದು ತಾತ್ಕಾಲಿಕ ಯಾವುದು ಖಾಯಂ?
ಎಷ್ಟೊಂದು ವಿಭಿನ್ನತೆಗಳಲ್ಲಿ ಚಂದ್ರ ಮುಳುಗುತ್ತಾನೆ-ಏಳುತ್ತಾನೆ!

ಭಾವನೆಗಳು, ಅಭಿಪ್ರಾಯಗಳು ಬಿಳಿಹಾಳೆ ಮೇಲೆ ಹರಡಿಕೋಬೇಕು
ಇದರಿಂದ ನನ್ನನ್ನು ಪ್ರತ್ಯೇಕಿಸಲು ಸಾಧ್ಯವಾ?
ಜೈಲುಗಳು ಏನು ಮಾಡಿಯಾವು?
ಭತ್ತದ ಗದ್ದೆಗಳಲ್ಲಿ ಭಸ್ಮಾಸುರನ ಹೆಜ್ಜೆ ಗುರುತಿದೆ
ಎಂದು ಭತ್ತ ತೂರುವವರ ಮಧ್ಯೆ ಹೇಳಬೇಕು
ಗುಂಡುಗಳು ಏನು ಮಾಡಿಯಾವು?
ಮುಳುಗದೆ ಏನು ಮಾಡಿಯೇನು?
ಏಳದೆ ಎಲ್ಲಿ ಹೋಗುವೆನು?



ಮುಳುಗುವುದು ಬದುಕುವುದಕ್ಕೆ
ಬಲಾತ್ಕಾರವಲ್ಲ-ಅನಿವಾರ್ಯವೆಂದು ಮಾತ್ರ ಅನ್ನಿಸುತ್ತಿದೆ.
ಬಲಾತ್ಕಾರ ಮಾಡಿದರೂ ಚೆಂಡು ಮುಳುಗುವುದಿಲ್ಲ,
ತಪಸ್ಸು ಮಾಡಿದರೂ ಕಲ್ಲು ತೇಲುವುದಿಲ್ಲ,
ಹಾರುವ ಮೀನು ಎಲ್ಲಿಗೆ ಹಾರುತ್ತದೆ.
ಯಾಕೆ ಮುಳುಗುತ್ತದೆ?
ತಿಳಿನೀರಿನಲ್ಲಿ ನಕ್ಷತ್ರಗಳು ಮುಳುಗುತ್ತಾವೋ?
ತೇಲುತ್ತವೋ? ಛಿದ್ರವಾಗುತ್ತವೋ? ಒಂದುಗೂಡುತ್ತವೋ?

ಅಯ್ಯೋ ಮುಳುಗಿಹೋಗಿದೆ ಎನಿಸುತ್ತದೆ ಕೆಲವೊಮ್ಮೆ
ಅಯ್ಯೋ ತೇಲಿಹೋದೆ ಎನ್ನಿಸುತ್ತದೆ ಇನ್ನೊಮ್ಮೆ!
ಹಲವೊಮ್ಮೆ ಕೊಚ್ಚಿಕೊಂಡು ಹೋದೆ ಎನ್ನಿಸುತ್ತದೆ.
ಎದ್ದರೆ ಮುಳುಗಬೇಕು ಎನ್ನಿಸುತ್ತದೆ
ಮುಳುಗಿ ಮುಳುಗಿ ಮುಳುಗಿ ಒಂದು ಕ್ಷಣ
ಏಳಬೇಕೆನಿಸುತ್ತದೆ.
ಕವನ ಬರೆದುಬಿಡುತ್ತದೆ.
ಮುಳುಗಿದ ಬೀಜ ಎದ್ದಿದ್ದು ಹೇಗೆ?
ಮುಳುಗಿದ ಸೋಲು ಕಂಡಿದ್ದು ಹೇಗೆ?



ಅಸಲಿ ಮುಳುಗುವುದು ಏಕೆ?
ಏನು ತಂದೆ ಎದ್ದಾಗ?
ಆಳಿಲು ನೀರಲ್ಲಿ ಮುಳುಗಿದ್ದು ಮರಳಲ್ಲಿ ಹೊರಳುವುದಕ್ಕೆ.....
ವರವಾ?

ಮುಳುಗುವುದು ಏಳುವುದು
ಏಳುವುದು ಮುಳುಗುವುದು
ಸತ್ಯ ಕಾಯಕ
ಮುಳುಗುವ ಕಾಯರೂಪ ಬೇರೆ
ಏಳುವ ಭಾವರೂಪ ಬೇರೆ.



■ ಬಿ.ಜೆ.ಕೆ., ಪಶ್ಚಿಮ ಘಟ್ಟ

ಪುನೀತ್‌ನ ಸ್ಟಾರ್ ಪವರ್



ಸಂದರ್ಶನ

● ಶೆಣೈ

ಪವರ್‌ಸ್ಟಾರ್ ಪುನೀತ್ ರಾಜ್‌ಕುಮಾರ್ ಇತ್ತ ಸಿನಿಮಾರಂಗದಲ್ಲಿ ಬ್ಯಾಂಕಬಲ್ ಸ್ಟಾರ್ ಆಗಿಯೂ, ಅತ್ತ ಕಿರುತೆರೆಯಲ್ಲಿ ಜನಪ್ರಿಯ ಕಾರ್ಯಕ್ರಮ ನಡೆಸಿಕೊಡುವ ಮೂಲಕ ಸುವರ್ಣ ಚಾನೆಲ್‌ಗೆ ನಂಬರ್ ಒನ್ ಸ್ಥಾನ ತಂದುಕೊಟ್ಟಿರುವ ಪವರ್ ಆಗಿಯೂ ಜನಪ್ರಿಯತೆ ಪಡೆದಿದ್ದಾರೆ. ಅವರು ಪತ್ರಿಕೆಯೊಂದಿಗೆ ನಡೆಸಿದ ಮಾತುಕತೆ ಇಲ್ಲಿದೆ.

ಪ್ರ: ಈ ಕಾರ್ಯಕ್ರಮದಲ್ಲಿ ಮತ್ತೆ ಭಾಗವಹಿಸುವ ಬಗ್ಗೆ ಏನನ್ನಿಸುತ್ತದೆ?

ಉ: ಹಿಂದಿನ ಬಾರಿ ಆರಂಭದ ಐದು ವಾರ ಸ್ವಲ್ಪ ಭಯ ಮತ್ತು ಆತಂಕ ಇತ್ತು, ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ನಂತರ ನನ್ನ ಸಾಮಾನ್ಯ ಜ್ಞಾನ ಅಭಿವೃದ್ಧಿ ಆಯಿತು. ಪುಸ್ತಕಗಳನ್ನು ಓದಲು ಆರಂಭಿಸಿದೆ. ಈಗ ಮತ್ತೆ ಪುಸ್ತಕ ಓದಲು ಆರಂಭಿಸಬೇಕಾಗಿದೆ. ನಿಜ ಹೇಳಬೇಕೆಂದರೆ ಈ ಕಾರ್ಯಕ್ರಮದಿಂದ ಜ್ಞಾನ ಅಭಿವೃದ್ಧಿಯೊಂದಿಗೆ ಅಭಿಮಾನಿ ದೇವರುಗಳನ್ನು ಹತ್ತಿರದಿಂದ ನೋಡಿ ಮಾತನಾಡಿಸುವ ಅವಕಾಶ ಸಿಕ್ಕಿತು.

ಪ್ರ: ದಕ್ಷಿಣ ಭಾರತದಲ್ಲಿ ನಿಮ್ಮ ಕಾರ್ಯಕ್ರಮಕ್ಕೆ ಅತ್ಯಂತ ಜಾಸ್ತಿ ಟಿ.ಆರ್.ಪಿ. ಬಂದಿದೆಯಂತಲ್ಲಾ?

ಉ: ನೋಡಿ, ನಾನು ಕಾಲೇಜು ಓದಿದವನಲ್ಲ, ನಾನು ಈ ಹಿಂದೆ ಹೇಳಿದಂತೆ ಇಲ್ಲಿ ನಾನು ಕಿವಿ ಮತ್ತು ಬಾಯಿ ಮಾತ್ರ. ಈ ಪ್ರೋಗ್ರಾಂನ ಸಂಪೂರ್ಣ ಕೀರ್ತಿ ಸಿದ್ಧಾರ್ಥ ಬಸು ಮತ್ತು ಅವರ 140 ಜನರ ತಂಡಕ್ಕೆ ಸಿಗಬೇಕು. ನಾನು ಈ ಕಾರ್ಯಕ್ರಮದ ನಿರೂಪಕ ಅಷ್ಟೇ.

ಪ್ರ: ಈ ಕಾರ್ಯಕ್ರಮಕ್ಕಾಗಿ ವಿಶೇಷವಾಗಿ ಏನಾದರೂ ತಯಾರಿ ಮಾಡುತ್ತೀರಾ?

ಉ: ನೋಡಿ, ಒಂದು ಎಪಿಸೋಡ್ ಮಾಡಲು ಸುಮಾರು ಮೂರು ಗಂಟೆ ತಗಲುತ್ತದೆ. ನಾನು ಮೊದಲೆ ಹೇಳಿದಂತೆ, ಸಿದ್ಧಾರ್ಥ ಬಸು ತಂಡ ಎಲ್ಲವನ್ನು ಮಾಡುತ್ತದೆ. ನಾನು ಶೂಟಿಂಗ್ ಮೊದಲು ಸುಮಾರು 45 ನಿಮಿಷ ತಯಾರಿ ನಡೆಸುತ್ತೇನೆ ಅಷ್ಟೇ.

ಪ್ರ: ಎಲ್ಲಾ ಉತ್ತರಗಳಿಗೆ ಕಂಪ್ಯೂಟರ್‌ನ್ನೇ ಅವಲಂಬಿಸುತ್ತೀರಾ?

ಉ: ಸಾಧಾರಣವಾಗಿ ಅದನ್ನು ಅವಲಂಬಿಸುತ್ತೇನೆ. ಆದರೆ ನಾನೂ ಸ್ವಲ್ಪ ಸೇರಿಸುತ್ತೇನೆ. ನನಗೆ ತಂತ್ರಜ್ಞಾನದ ಬಗ್ಗೆ ವಿಶೇಷ ಆಸಕ್ತಿ. ಹೀಗಾಗಿ ಅದರ ಬಗ್ಗೆ ಮಾತನಾಡುವಾಗ ವಿಶ್ವಾಸದಿಂದ ಮಾತನಾಡುತ್ತೇನೆ.

ಪ್ರ: ನಿಮ್ಮ ಮನೆಯವರು ಈ ಕಾರ್ಯಕ್ರಮವನ್ನು ನೋಡುತ್ತಾರಾ?

ಉ: ನಮ್ಮ ತಾಯಿ ಮತ್ತು ನಮ್ಮ ಪತ್ನಿ ತಪ್ಪದೇ ಈ ಕಾರ್ಯಕ್ರಮವನ್ನು ನೋಡುತ್ತಾರೆ. ಅಷ್ಟೇ ಅಲ್ಲ ನನ್ನ ಮಕ್ಕಳೂ ಈ ಕಾರ್ಯಕ್ರಮವನ್ನು ವೀಕ್ಷಿಸುತ್ತಾರೆ.

ಪ್ರ: ಸಿನಿಮಾ?

ಉ: ಅಯ್ಯೋ... ನನ್ನ ಪತ್ನಿ ನನ್ನ ಸಿನಿಮಾ ನೋಡಿದ್ದೇ ನನ್ನನ್ನು ಮದುವೆಯಾದ ನಂತರ. ಈಗಲೂ ಅವರು ನನ್ನ ಸಿನಿಮಾವನ್ನು ನೋಡುವುದಿಲ್ಲ, ಮಕ್ಕಳಿಗೂ ಅಷ್ಟೇ, ನನ್ನ ಸಿನಿಮಾವನ್ನು ನೋಡಲು ಅವರಿಗೆ ನಾಚಿಕೆ ಮತ್ತು ಮುಜುಗರ.

ಪ್ರ: ನೀವು ಇಷ್ಟೊಂದು ಸ್ಲಿಮ್ ಆಗಿ ಇರಲು ಹೇಗೆ ಸಾಧ್ಯ?

ಉ: ಇದು ಬಹಳ ಸುಲಭ. ಸ್ವಲ್ಪ ತಿನ್ನಬೇಕು. ಜಾಸ್ತಿ ವ್ಯಾಯಾಮ ಮಾಡಬೇಕು. ಈಗ ನನಗೆ ಮತ್ತು ಶಿವಣ್ಣನಿಗೆ ಒಬ್ಬರೇ ವ್ಯಾಯಾಮ ಮತ್ತು ಕಸರತ್ತುಗಳನ್ನು ಕಲಿಸುತ್ತಾರೆ.

ಪ್ರ: ನಿಮ್ಮ ಸೊಂಟದ ಸುತ್ತಳತೆ ಎಷ್ಟಿದೆ?

ಉ: ನನ್ನ ಸೊಂಟದ ಸುತ್ತಳತೆ 31 ಇಂಚು. ಅಪ್ಪಾಜಿ ಅವರದ್ದು ಎಷ್ಟೋ ವರ್ಷಗಳತನಕ 32 ಇತ್ತು, ಅವರ ಟೈಲರ್ ಅಪ್ಪಾಜಿಯ ಸೊಂಟದ ಸುತ್ತಳತೆಯನ್ನು ಲೆಕ್ಕಕ್ಕೇ ತೆಗೆದುಕೊಳ್ಳುತ್ತಲೇ ಇರಲಿಲ್ಲ, ಅಪ್ಪಾಜಿ ತರಹ ಮೈಕಟ್ಟನ್ನು ಉಳಿಸಿಕೊಳ್ಳುವುದು ಬಹಳ ಕಷ್ಟದ ಕೆಲಸ.

ಪ್ರ: ನೀವು ಬರೆದ ಅಪ್ಪಾಜಿ ಪುಸ್ತಕಕ್ಕೆ ಯಾವ ತರಹದ ಪ್ರತಿಕ್ರಿಯೆ ದೊರೆಯಿತು?

ಉ: ಅಪ್ಪಾಜಿ ಬಗ್ಗೆ ಬರೆದ ಇಂಗ್ಲಿಷ್ ಮತ್ತು ಕನ್ನಡ ಅವತರಣಿಕೆ ಪುಸ್ತಕಗಳ ಪ್ರತಿಗಳು ಮುಗಿದು ಹೋಗಿವೆ. ಸದ್ಯದಲ್ಲೇ ನಾವು ಎರಡನೇ ಮುದ್ರಣಕ್ಕೆ ಹೋಗುತ್ತಿದ್ದೇವೆ.

ಪ್ರ: ಈ ಪುಸ್ತಕದಿಂದ ಎಷ್ಟು ಹಣ ಬಂತು?

ಉ: ಸುಮಾರು 33 ಲಕ್ಷ ರೂಪಾಯಿಗಳು ನಮಗೆ ಸಿಕ್ಕಿದೆ. ಮೊದಲೇ ಹೇಳಿದಂತೆ ಆ ಹಣವನ್ನು ಜನಪರ ಕಾರ್ಯಗಳಿಗೆ ವಿನಿಯೋಗಿಸುತ್ತಿದ್ದೇವೆ.

ಪ್ರ: ಕಿರುತೆರೆಯಲ್ಲಿ ಜಾಸ್ತಿ ಕಾಣಿಸುವುದರಿಂದ ನಿಮ್ಮ ಸಿನಿಮಾ ಜೀವನಕ್ಕೆ ತೊಂದರೆಯಾಗುವುದಿಲ್ಲವೇ?

ಉ: **Who cares?** ಎಲ್ಲಿಯವರೆಗೆ ಜನ ಸಿನಿಮಾ ನೋಡುತ್ತಾರೋ ಅಥವಾ ಟಿ.ವಿ. ಕಾರ್ಯಕ್ರಮ ನೋಡುತ್ತಾರೋ ಅಲ್ಲಿಯವರೆಗೆ ಹೀಗೆ ಇರುತ್ತೇನೆ. ಜನರು ತಿರಸ್ಕರಿಸಿದ ನಂತರ ಆರಾಮವಾಗಿ ವಿಶ್ರಾಂತಿ ಜೀವನ ನಡೆಸುತ್ತೇನೆ. ನಾನು ಯಾವುದನ್ನೂ ಲೆಕ್ಕಾಚಾರ ಹಾಕಿ ಮಾಡುವುದಿಲ್ಲ, ಇಷ್ಟಾಗಿ ನಾನು ಸಿನಿಮಾ ಜೀವನಕ್ಕೆ ಗುಡ್‌ಬೈ ಹೇಳಿಲ್ಲ ತಾನೆ.

ಪ್ರ: ನಿಮ್ಮ ಮುಂದಿನ ಸಿನಿಮಾ ಯಾಕೆ ಇನ್ನೂ ಅನೌನ್ಸ್ ಆಗಿಲ್ಲ?

ಉ: ಮಾರ್ಚ್ 6 ನಂತರ ಖಂಡಿತವಾಗಿಯೂ ಅನೌನ್ಸ್ ಮಾಡುತ್ತೇನೆ.

ಪ್ರ: ಖ್ಯಾತ ನಿರ್ದೇಶಕ ಗೌತಮ್ ಮೆನನ್ ಅವರ ಚಿತ್ರದಲ್ಲಿ ನಟಿಸುವ ವಿಚಾರ ಏನಾಯಿತು? ನೀವು ಕೂಡ ಎರಡೆರಡು ಭಾಷೆಗಳಲ್ಲಿ ನಟಿಸಲು ರೆಡಿಯಾಗಿದ್ದೀರಾ?

ಉ: ನನ್ನ ಕಂಡೀಷನ್ ಇಷ್ಟೇ: ನಾನು ಯಾವುದೇ ಭಾಷೆ... ನಟಿಸಲು ಸಿದ್ಧ. ನನಗೆ ಯಾವುದೇ ಸಮಸ್ಯೆ ಇಲ್ಲ. ಆದರೆ ಆ ಭಾ... ಚಿತ್ರದ ಜೊತೆ ಕನ್ನಡದಲ್ಲೂ ಚಿತ್ರ ಬರಬೇಕು ಎಂಬುದು ನನ್ನ ಆ... ಗೌತಮ್ ಮೆನನ್ ಮತ್ತು ಸಮುದ್ರ ಕಣಿ ಇಬ್ಬರು ಎರಡು ಕಥೆಗ... ತಯಾರು ಮಾಡುತ್ತಿದ್ದಾರೆ. ಇನ್ನೂ ರೆಡಿಯಾಗಿಲ್ಲ.

ಪ್ರ: ನೀವು ಕೋಟ್ಯಾಧಿಪತಿ ಕಾರ್ಯಕ್ರಮದಲ್ಲಿ ಭಾಗವಹಿಸುವು... ಪ್ರತಿ ಬಾರಿಯೂ ಸೂಟ್ ಧರಿಸುವುದು ಯಾಕೆ?

ಉ: ಅದು ಅವರ ಕ್ರಮ. ನಿಜ ಹೇಳಬೇಕಾದರೆ ನನಗೆ ಸೂ... ಧರಿಸಲು ಇಷ್ಟವೇ ಇಲ್ಲ. **I hate suits.** ಕಳೆದ ಭಾರಿ ನಾನು ... ಬಗೆಯ ಸೂಟ್‌ಗಳನ್ನು ಈ ಕಾರ್ಯಕ್ರಮಕ್ಕಾಗಿ ಧರಿಸಿದ್ದೆ.

ಪ್ರ: ನೀವು ಈ ಕಾರ್ಯಕ್ರಮದಲ್ಲಿ ಭಾಗವಹಿಸುವ ಅಭ್ಯರ್ಥಿಗ... ನಿಮ್ಮ ಕೈಯಿಂದ ಸಾಧ್ಯವಾದಷ್ಟು ಸಹಾಯ ಮಾಡುತ್ತಿರಂತೆ ನಿಜವೇ...

ಉ: ಕೆಲವು ಅಭ್ಯರ್ಥಿಗಳ ಬಯೋಡೆಟಾ ಓದಿದಾಗಿ ಅವ... ಸಹಾಯ ಮಾಡಬೇಕು ಎಂದು ಅನಿಸುತ್ತದೆ. ಅದನ್ನ ನನ್ನ ಮ್ಯಾನೇ... ಕುಮಾರ್ ನೋಡಿಕೊಳ್ಳುತ್ತಾರೆ. ಆದರೆ ಆ ಅಭ್ಯರ್ಥಿಗಳು ಎಂ... ಸಹಾಯವನ್ನು ಕೇಳಿದವರಲ್ಲ, ನಾವಾಗಿಯೇ ನಮ್ಮ ಆತ್ಮತೃಪ್ತಿಗಾಗಿ ಸಹಾ... ಮಾಡಿರುವುದರಿಂದ ಇದರ ಬಗ್ಗೆ ನಾನು ಹೆಚ್ಚೇನು ಹೇಳುವುದಿಲ್ಲ.



ಹೀಗೆ ಪುನೀತ್ ರಾಜ್‌ಕುಮಾರ್ ತನ್ನ ನಟನೆ ಮತ್ತು ಕಿರುತೆರೆ... ಕ್ಹೋಟ್ಯಾಧಿಪತಿ ಕಾರ್ಯಕ್ರಮದ ಬಗ್ಗೆ ಮನಬಿಚ್ಚಿ ಮಾತನಾಡಿದರ... ಅಂದಹಾಗೆ ಈ ಕಾರ್ಯಕ್ರಮದಿಂದಾಗಿ ಸುವರ್ಣ ನಂ-1 ಚಾನಲ್ ಎ... ಹೆಗ್ಗಳಿಕೆಗೆ ಒಳಗಾಗಿರುವುದು ಪುನೀತ್ ರಾಜ್‌ಕುಮಾರ್‌ರ ಪವರ್... ತೋರಿಸುತ್ತದೆ. ಇದೇ ತರಹದ ಕಾರ್ಯಕ್ರಮ ತಮಿಳಿನಲ್ಲಿ ಸೂಯ... ತೆಲುಗಿನಲ್ಲಿ ಜಗಪತಿಬಾಬು, ಮಲಯಾಳಂನಲ್ಲಿ ಸುರೇಶ್ ಗೋಪಿ ನಡೆಸಿಕೊಟ್ಟ... ಆ ಯಾವ ಕಾರ್ಯಕ್ರಮಗಳೂ ಜನಪ್ರಿಯವಾಗಲಿಲ್ಲ.

ಆದರೆ ಪುನೀತ್ ನಡೆಸಿಕೊಡುವ ಕಾರ್ಯಕ್ರಮ ಜನಪ್ರಿಯವಾಯಿತ... ಸದ್ಯದಲ್ಲೇ ಎರಡನೆ ಸುತ್ತು ಪ್ರಾರಂಭವಾಗಲಿದೆ. "ಇದು ಪುನೀತ್ ಅ... ಪವರ್ ಸೂಚಿಸುತ್ತದೆ" ಎಂದು ಸುವರ್ಣ ಚಾನೆಲ್‌ನ ಮುಖ್ಯಸ್ಥ ಅನೂ... ಚಂದ್ರಶೇಖರ್ ಹೇಳಿರುವುದು ಅರ್ಥಪೂರ್ಣವಾಗಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com